
ಭಾನುವಾರ, ಜನವರಿ 8, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 8 | ಪುಟ 22
www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಸಂಕ್ರಾಂತಿ ಹೊತ್ತಿನಲ್ಲಿ ಉತ್ತರ ಕರ್ನಾಟಕದ ಗ್ರಾಮೀಣ ಸೊಗಡಿನ ಸದಗರದ ಜಾತ್ರೆಗಳ ವೈಭವದ ಝಲಕ್



ಸಚಿವ ಸಂಪುಟ ಶೀಘ್ರ ವಿಸ್ತರಣೆ: ಬೊಮ್ಮಾಯಿ 9
ಮಾತು-ಮಂಥನದಲ್ಲಿ ಸಮ್ಮೇಳನಾಧ್ಯಕ್ಷ ದೊಡ್ಡರಂಗೇಗೌಡ ಅಭಿಪ್ರಾಯ
ನಿರಾಣಿ-ಯತ್ನಾಳ ಮಧ್ಯೆ 'ಸಿ.ಡಿ' ಕಿತ್ತಾಟ 9
ಕ್ರಾಂತಿಯೇ ಸದ್ಯದ ಸಮಸ್ಯೆಗಳಿಗೆ ಪರಿಹಾರ 6

ಒಳ ಪುಟಗಳು

ಚಿನಕುರಳಿ

ಪ್ರಕಾಶ್ ಶೆಟ್ಟಿ



ವನ್ಯಜೀವಿ ಸಂಘರ್ಷ ನಿರಂತರ: ಗ್ರಾಮಗಳಲ್ಲಿ ಮೂಲಸೌಕರ್ಯಗಳ ಕೊರತೆ

ಕಾಡಂಚಿನ ಜನರ ಕಷ್ಟಕ್ಕಿಲ್ಲ ಎಣೆ

• ಸೂರ್ಯನಾರಾಯಣ ವಿ.

ಒಳನೋಟ

ಅರಣ್ಯರೋದನವಾದ ಬದುಕು

ಪ್ರತಿಕ್ರಿಯಿಸಿ: 9606038256
feedback@prajavani.co.in

ಚಾಮರಾಜನಗರ: ರಾಜ್ಯದ ಐದು ಹುಲಿಯೋಜನೆಗಳ ಕಾಡಂಚಿನ ಗ್ರಾಮಗಳ ನಿವಾಸಿಗಳು ವನ್ಯಪ್ರಾಣಿ-ಗಳ ಹಾವಳಿ, ಮೂಲಸೌಕರ್ಯಗಳ ಕೊರತೆ ಹಾಗೂ ಸರ್ಕಾರಿ ಸವಲತ್ತುಗಳು ಸೂಕ್ತವಾಗಿ ಸಿಗದೆ ಸಂಕಷ್ಟಮಯ ಬದುಕು ಸಾಗಿಸುತ್ತಿದ್ದಾರೆ. ಕಾಡಂಚಿನ ಗ್ರಾಮಗಳ ಅಭಿವೃದ್ಧಿಯ ಹೊಣೆ ಹೊತ್ತಿರುವ ಹಲವು ಇಲಾಖೆಗಳು ಈ ಗ್ರಾಮಗಳ ಬಗ್ಗೆ ನಿರ್ಲಕ್ಷ್ಯವಹಿಸಿವೆ. ನಗರ, ಪಟ್ಟಣ, ಹೋಬಳಿ ಕೇಂದ್ರಗಳಿಗೆ ಹತ್ತಿರವಿರುವ ಗ್ರಾಮಗಳಿಗೆ ಹೋಲಿಸಿದರೆ ಅರಣ್ಯಕ್ಕೆ ಹೊಂದಿಕೊಂಡಿರುವ ಹಳ್ಳಿಗಳಿಗೆ ಮೂಲ ಸೌಕರ್ಯ ಸೇರಿದಂತೆ ಸರ್ಕಾರಿ ಸವಲತ್ತುಗಳು ತಲುಪುವುದು ನಿಧಾನ. ಹೀಗಾಗಿ ಇವು ಪ್ರಗತಿಯ ನಡಿಗೆಯಲ್ಲಿ ಹಿಂದೆ ಬಿದ್ದಿವೆ.

ರಾಜ್ಯದಲ್ಲಿ ಬಂಡೀಪುರ, ನಾಗರಹೊಳೆ, ಬಿಳಿಗಿರಿರಂಗನಾಥ ಸ್ವಾಮಿ ದೇವಾಲಯ (ಬಿಆರ್‌ಟಿ), ಕಾಳಿ (ಕೆಟಿಆರ್) ಮತ್ತು ಭದ್ರಾ ಸೇರಿ ಐದು ಹುಲಿ ಸಂರಕ್ಷಿತ ಪ್ರದೇಶಗಳಿವೆ. ಬಂಡೀಪುರ, ಬಿಆರ್‌ಟಿ ಹಿಂದುಳಿದ ಚಾಮರಾಜನಗರ ಜಿಲ್ಲೆಯಲ್ಲಿದ್ದರೆ, ನಾಗರಹೊಳೆ ಮೈಸೂರು- ಕೊಡಗು, ಕಾಳಿ ಹುಲಿ ಯೋಜನೆ ಉತ್ತರ ಕನ್ನಡ ಹಾಗೂ ಭದ್ರಾ ಹುಲಿ ಯೋಜನೆ ಚಿಕ್ಕಮಗಳೂರು ಜಿಲ್ಲೆಯಲ್ಲಿವೆ.

ಐದು ಹುಲಿ ಸಂರಕ್ಷಿತ ಪ್ರದೇಶಗಳ ಅಂಚಿನಲ್ಲಿರುವ ಗ್ರಾಮಗಳ ಜನರ ಬವಣೆಗಳು ಹೆಚ್ಚುಕಮ್ಮಿ ಒಂದೇ ತೆರನಾಗಿವೆ. 'ಮಾದರಿ ಕಾಡಂಚಿನ ಗ್ರಾಮ' ಎಂದು ಗುರುತಿಸಬಹು-ದಾದ ಊರು ಎಲ್ಲೂ ಸಿಗುವುದಿಲ್ಲ! ಒಂದಿಲ್ಲೊಂದು ಸಮಸ್ಯೆ, ಬಿಕ್ಕಟ್ಟು ಜನರನ್ನು ಕಾಡುತ್ತಿರುತ್ತದೆ. ಕಷ್ಟಗಳ ನಡುವೆಯೇ, ಅಲ್ಲಿನ ನಿವಾಸಿಗಳು ತಾತ್ಕಾಲಿಕ ಪರಿಹಾರ ಕ್ರಮಗಳಿಗೆ ಅನಿವಾರ್ಯವಾಗಿ ಒಗ್ಗಿಕೊಂಡು ದಿನ ದೂಡುತ್ತಿದ್ದಾರೆ.

8ನೇ ಪುಟ ನೋಡಿ



ಕೊಡಗು ಜಿಲ್ಲೆಯ ಸಿದ್ದಾಪುರ ಸಮೀಪದ ಕಾಫಿ ಎಸ್ಟೇಟ್ ಬಳಿ ಕಾರ್ಮಿಕರೊಬ್ಬರು ಕಾಡಾನೆ ದಾಳಿಯಿಂದ ಪಾರಾದ ದೃಶ್ಯ

ಕಾಡಿನ ಗ್ರಾಮಗಳ ಸ್ಥಿತಿಯೂ ಚಿಂತಾಜನಕ

ಹುಲಿ ಯೋಜನೆ ವ್ಯಾಪ್ತಿಯ ಒಳಗಿರುವ ಗ್ರಾಮಗಳ ಸ್ಥಿತಿಯೂ ಭಿನ್ನವಾಗಿಲ್ಲ. ಒಕ್ಕಲೆಬ್ಬಿಸುವ ಆತಂಕದಲ್ಲೇ ಮತ್ತು ಸೌಲಭ್ಯಗಳಿಲ್ಲದೆ ಬದುಕು ದೂಡುತ್ತಿದ್ದಾರೆ.

ಬಿಆರ್‌ಟಿ ವ್ಯಾಪ್ತಿಯಲ್ಲಿ 10 ಜನವಸತಿ ಪ್ರದೇಶದಲ್ಲಿವೆ. ಸಂರಕ್ಷಿತ ಪ್ರದೇಶದಲ್ಲಿ ಕಾಲೊನಿಗಳು ಇರುವುದರಿಂದ ಮನೆ, ರಸ್ತೆ ನಿರ್ಮಾಣಕ್ಕೂ ಹರಸಾಹಸ ಪಡಬೇಕಾಗಿದೆ.

ಬಿಳಿಗಿರಿರಂಗಬೆಟ್ಟದ ಪುರಾಣಿ ಪೋಡಿನ ಸೋಲಿಗರು ಕನಿಷ್ಠ ಸೌಲಭ್ಯಗಳಿಲ್ಲದೆ ಜೀವನ ಸಾಗಿಸುತ್ತಿದ್ದಾರೆ. ಬಿಳಿಗಿರಿರಂಗನಬೆಟ್ಟದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪುರಾಣಿಪೋಡಿನಲ್ಲಿ 115 ಕುಟುಂಬಗಳಿವೆ. 540 ಜನಸಂಖ್ಯೆ ಇದೆ. ರಸ್ತೆ, ವಿದ್ಯುತ್ ಸಮಸ್ಯೆಗಳಿಂದ ಇಲ್ಲಿನ ಸೋಲಿಗರು ಇನ್ನೂ ಮುಕ್ತಿ ಪಡೆದಿಲ್ಲ.

8ನೇ ಪುಟ ನೋಡಿ

ಶ್ರೀರಾಮ ಸೇನೆ ಮುಖಂಡರಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಸಮೀಪದ ಹಿಂಡಲಗಾ ಗ್ರಾಮದಲ್ಲಿ ಶನಿವಾರ ರಾತ್ರಿ ವಿರಾಟ್ ಹಿಂದೂ ಸಮಾವೇಶದ ಸಿದ್ಧತೆಯಲ್ಲಿ ತೊಡಗಿದ್ದ ಶ್ರೀರಾಮ ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ರವಿ ಕೋಕಿತ್ಕರ್ ಹಾಗೂ ಹಿಂದೂ ರಾಷ್ಟ್ರ ಸೇನಾ ಮುಖಂಡ ಮನೋಜ್ ದೇಸೂರಕರ್ ಮೇಲೆ ಗುಂಡಿನ ದಾಳಿ ನಡೆದಿದ್ದು, ಇಬ್ಬರೂ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ರವಿ ಅವರ ಕುತ್ತಿಗೆ ಭಾಗಕ್ಕೆ ಗುಂಡು ತಗಲಿದ್ದು, ತೀವ್ರ ರಕ್ತಸ್ರಾವವಾಗಿದೆ. ಮನೋಜ್ ಅವರ ಕೈಯಲ್ಲಿ ಗುಂಡು ಹೊಕ್ಕಿದೆ. ಇಬ್ಬರನ್ನೂ ಇಲ್ಲಿನ ಕೆಎಲ್‌ಇ ಆಸ್ಪತ್ರೆಗೆ ದಾಖಲಿಸಲಾಗಿದೆ.

ನಗರದಲ್ಲಿ ಜ.8ರಂದು ಶ್ರೀರಾಮ ಸೇನೆಯಿಂದ ವಿರಾಟ್ ಹಿಂದೂ ಸಮಾವೇಶದ ಸಿದ್ಧತೆ ಮಾಡಲಾಗಿದೆ. ಇದರ ನೇತೃತ್ವ ವಹಿಸಿದ ರವಿ ಹಾಗೂ ಅವರ ಸಹವರ್ತಿ ಮನೋಜ್ ಸೇರಿಕೊಂಡು ರಾತ್ರಿ 8ರ ಸುಮಾರಿಗೆ ಕಾರಿನಲ್ಲಿ ಸ್ಥಳಕ್ಕೆ ಹೊರಟಿದ್ದರು. ಕಾರು ಹಿಂಡಲಗಾದ ಮರಾಠಿ ಸರ್ಕಾರಿ ಶಾಲೆಯ ಬಳಿ ಬಂದಾಗ, ಅಲ್ಲೇ ಕಾಯುತ್ತ ನಿಂತಿದ್ದ ಇಬ್ಬರು ದುಷ್ಕರ್ಮಿಗಳು ಏಕಾಏಕಿ ಗುಂಡಿನ ದಾಳಿ ನಡೆಸಿದರು.

ಮುಂದಿನ ಎಡಬದಿ ಸೀಟಿನಲ್ಲಿ ಕುಳಿತಿದ್ದ ರವಿ ಅವರ ಕುತ್ತಿಗೆಯ ಕೆಳ ಭಾಗಕ್ಕೆ ತಾಗಿ ದಾಟಿದ ಗುಂಡು, ಕಾರು ಚಲಾಯಿಸುತ್ತಿದ್ದ ಮನೋಜ್ ಅವರ ಕೈಗೆ ಸಿಕ್ಕಿಕೊಂಡಿದೆ ಎಂದು ಮೂಲಗಳು ತಿಳಿಸಿವೆ. ಗುಂಡೇಟು ಬಿದ್ದ ತಕ್ಷಣ ದುಷ್ಕರ್ಮಿಗಳು ಬೈಕ್ ಹತ್ತಿ ಪರಾರಿಯಾದರು. ಸ್ಥಳದಲ್ಲಿ ಸೇರಿದ ಜನ ಇಬ್ಬರನ್ನೂ ಆಸ್ಪತ್ರೆಗೆ ಕರೆದೊಯ್ಯಲು ನೆರವಾದರು. ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು, ಹೆಚ್ಚಿನ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.

2,500 ಪ್ರೌಢಶಾಲಾ ಶಿಕ್ಷಕರ ನೇಮಕಕ್ಕೆ ಕ್ರಮ: ಬಿ.ಸಿ. ನಾಗೇಶ್

ಶಿವಮೊಗ್ಗ: 'ರಾಜ್ಯದ ಪ್ರೌಢಶಾಲೆಗಳಿಗೆ 2,500 ಶಿಕ್ಷಕರ ನೇಮಕಕ್ಕೆ ನಿರ್ಧರಿಸಿದ್ದು, ಫೆಬ್ರುವರಿಯಲ್ಲಿ ಅಧಿಸೂಚನೆ ಹೊರಡಿಸಲಾಗುವುದು' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

'ಹೊಸ ಕಾಯ್ದೆ ಅನ್ವಯ ಪರಿಶಿಷ್ಟ ಜಾತಿ- ಪಂಗಡಕ್ಕೆ ನಿಗದಿಪಡಿಸಿರುವ ಮೀಸಲು ಆಧರಿಸಿ ಶಿಕ್ಷಕರ ನೇಮಕಾತಿ ನಡೆಯಲಿದೆ. ಇದರಲ್ಲಿ 250 ಮಂದಿ ದೈಹಿಕ ಶಿಕ್ಷಣ ಶಿಕ್ಷಕರ ನೇಮಕಾತಿ ಕೂಡ ಸೇರಿದೆ' ಎಂದರು.

'ರಾಜ್ಯದಲ್ಲಿ ಹೊಸ ಶಿಕ್ಷಣ ನೀತಿಯನ್ನು (ಎನ್‌ಇಪಿ) 300ರಿಂದ 400 ಆಯ್ದ ಶಾಲೆಗಳಲ್ಲಿ ಜನವರಿ 26ರಿಂದ ಜಾರಿಗೊಳಿಸಲು ಯೋಜಿಸಿದ್ದೇವೆ. ಅದಕ್ಕೆ ಅಗತ್ಯವಿರುವ ಪಠ್ಯಕ್ರಮ ಕೂಡ ರೂಪುಗೊಂಡಿದೆ. ಎನ್‌ಇಪಿ ಪಠ್ಯ ಆಧಾರಿತ ಅಲ್ಲ. ಚಟುವಟಿಕೆ ಆಧಾರಿತ ಶಿಕ್ಷಣವಾಗಿದೆ. ಇದಕ್ಕೆ ಶಿಕ್ಷಕರಿಗೆ ತರಬೇತಿ ನೀಡಿ ಅವರನ್ನು ಸಜ್ಜುಗೊಳಿಸಲಾಗುವುದು' ಎಂದು ಸುದ್ದಿಗಾರರಿಗೆ ತಿಳಿಸಿದರು.

ಸದಾಶಿವ ಆಯೋಗ ವರದಿ ಗುಪ್ತವಾಗಿ ಕೇಂದ್ರಕ್ಕೆ ಶಿಫಾರಸು– ಆರೋಪ

10ರಂದು ‘ಸಂಕಲ್ಪ ಸಮಾವೇಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಗುಪ್ತವಾಗಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ಹೊರಟಿರುವುದನ್ನು ವಿರೋಧಿಸಿ ಜ. 10ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ‘ಪರಿಶಿಷ್ಟ ಜಾತಿಗಳ ಸಂಕಲ್ಪ ಸಮಾವೇಶ’ವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ತಿಳಿಸಿದೆ.

‘ಎ.ಜೆ. ಸದಾಶಿವ ಆಯೋಗದ ವರದಿಯ ದೃಢೀಕೃತ ಪ್ರತಿಯನ್ನು 101 ಪರಿಶಿಷ್ಟ ಜಾತಿಗಳು, ಸಂಘಟನೆಗಳು ಮತ್ತು ಸಾರ್ವಜನಿಕರಿಗೆ ನೀಡಬೇಕು. ಬಾಧಿತ ಸಮುದಾಯಗಳ ಅಭಿಪ್ರಾಯ, ಲಿಖಿತ ಆಕ್ಷೇಪಣೆ, ತಕರಾರುಗಳನ್ನು ಸ್ವೀಕರಿಸಿ ಅಂತಹ ಸಮುದಾಯಗಳನ್ನು ವಿಚಾರಣೆಗೆ ಆಹ್ವಾನಿಸಬೇಕು’ ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಮುಖ್ಯಾಂಶಗಳು

- ಪರಿಶಿಷ್ಟರ ಶೈಕ್ಷಣಿಕ, ಔದ್ಯೋಗಿಕ ಸ್ಥಿತಿಗತಿ ಅಧ್ಯಯನಕ್ಕೆ ಒತ್ತಾಯ
- ವಸ್ತುನಿಷ್ಠ ಅಧ್ಯಯನಕ್ಕೆ ಸೂಕ್ತ ಕ್ರಮ ಕೈಗೊಳ್ಳಲು ಆಗ್ರಹ

‘ಪರಿಶಿಷ್ಟ ಜಾತಿಗಳ ಮೀಸಲಾತಿ ವರ್ಗೀಕರಣದ ಕುರಿತು ಸರ್ಕಾರ ಉಪಸಮಿತಿಯನ್ನು ರಚಿಸಿದೆ. ಆದರೆ ಈ ಜಾತಿಗಳನ್ನು ವರ್ಗೀಕರಿಸುವ ಅಧಿಕಾರ ರಾಜ್ಯ ಸರ್ಕಾರಕ್ಕಿಲ್ಲ ಎಂದು ಈ ಹಿಂದೆ ಸುಪ್ರೀಂ ಕೋರ್ಟ್ ತೀರ್ಪು ನೀಡಿರುವುದನ್ನು ಈ ಉಪಸಮಿತಿ ಗಮನಿಸಬೇಕು. ಸಂವಿಧಾನದಲ್ಲಿ ಪರಿಶಿಷ್ಟ ಜಾತಿಗಳ ವರ್ಗೀಕರಣಕ್ಕೆ ಅವಕಾಶವಿಲ್ಲ. ಪರಿಶಿಷ್ಟರ ಶೈಕ್ಷಣಿಕ, ಔದ್ಯೋಗಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಅಗತ್ಯ ಪ್ರಸ್ತಾವನೆ ರೂಪಿಸಬೇಕು’ ಎಂದು ಅವರು ಒತ್ತಾಯಿಸಿದರು. ‘ಪರಿಶಿಷ್ಟರ ಮನೆ ಮನೆಗೆ ತೆರಳಿ ಸಮೀಕ್ಷೆ, ಇಲಾಖಾವಾರು ಮಾಹಿತಿ ಮತ್ತು ಅವಲೋಕನದ ವಸ್ತುನಿಷ್ಠ ಅಧ್ಯಯನಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದರು.

‘ರಾಜ್ಯದಲ್ಲಿ ಸಾಮಾಜಿಕ, ಆರ್ಥಿಕ ಸ್ಥಿತಿಯ ವಾಸ್ತವವನ್ನು ಅರಿಯಲು ಕಾಂತರಾಜು ಆಯೋಗದ ಜಾತಿವಾರು ಜನಗಣತಿಯ ವರದಿಯನ್ನು ಈ ಕೂಡಲೇ ಪ್ರಕಟಿಸಬೇಕು. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ನಕಲಿ ಜಾತಿ ಪ್ರಮಾಣಪತ್ರ ಪಡೆದಿರುವವರ ವಿರುದ್ಧ ಕಾನೂನು ಕ್ರಮ ಕೈಗೊಂಡು, ಈ ಪ್ರಮಾಣಪತ್ರಗಳನ್ನು ನೀಡಿರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕು’ ಎಂದು ಒಕ್ಕೂಟದ ಅಧ್ಯಕ್ಷ ರವಿ. ಎಚ್. ಮಾಕಳಿ ಹೇಳಿದರು. ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘದ ಅಧ್ಯಕ್ಷೆ ಬಿ.ಟಿ. ಲಲಿತಾ ನಾಯಕ್, ‘ಭೋವಿ, ಲಂಬಾಣಿ, ಛಲವಾದಿ ಸೇರಿ ಅಲೆಮಾರಿ ಸಮುದಾಯಗಳು ಸ್ಪೃಶ್ಯ ಜಾತಿಗಳಾಗಿವೆ ಎಂದು ಕೆಲವರು ಅವುಗಳನ್ನು ಈ ಮೀಸಲಾತಿ ಸೌಲಭ್ಯದಿಂದ ತೆಗೆಯಬೇಕೆಂಬ ಮಾತುಗಳನ್ನಾಡುತ್ತಿದ್ದಾರೆ. ಆದರೆ, ಸರ್ಕಾರ 101 ಪರಿಶಿಷ್ಟ ಜಾತಿಗಳ ಜನಸಂಖ್ಯೆ ಆಧಾರಿತ ಅಂಕಿ–ಸಂಖ್ಯೆಗಳನ್ನು ನೀಡಬೇಕು. ನಂತರ ಒಳಮೀಸಲಾತಿಯ ನೀಡುವ ಕುರಿತು ಚರ್ಚಿಸಲಿ’ ಎಂದರು. ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎನ್. ಅನಂತನಾಯ್ಕ ಮಾತನಾಡಿದರು.

‘ಯಾದವರನ್ನು ಎಸ್‌ಟಿಗೆ ಸೇರಿಸಿ’

ಕೋಲಾರ: ‘ಯಾದವ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಪ್ರಸ್ತಾವವನ್ನು ರಾಜ್ಯ ಸರ್ಕಾರ ಕೇಂದ್ರಕ್ಕೆ ಕಳುಹಿಸಲು ಕ್ರಮವಹಿಸಬೇಕು. ಇಲ್ಲವಾದಲ್ಲಿ ಬೀದಿಗಿಳಿದು ಹೋರಾಟ ಹಮ್ಮಿಕೊಳ್ಳಲಾಗುವುದು. ಯಾದವ ಸಮುದಾಯದ ತಾಳ್ಮೆ ಪರೀಕ್ಷಿಸಬೇಡಿ’ ಎಂದು ವಿಧಾನ ಪರಿಷತ್ ಸದಸ್ಯ ನಾಗರಾಜ ಯಾದವ್ ಎಚ್ಚರಿಸಿದರು.

ಬಸವಣ್ಣ, ಕೆಂಪೇಗೌಡ ಪ್ರತಿಮೆ ಸ್ಥಾಪನೆಗೆ ಸ್ಥಳ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸೌಧದ ಮುಂಭಾಗದಲ್ಲಿ ಜಗಜ್ಯೋತಿ ಬಸವೇಶ್ವರರು ಮತ್ತು ನಾಡಪ್ರಭು ಕೆಂಪೇಗೌಡರ ಪ್ರತಿಮೆಗಳ ಸ್ಥಾಪನೆಗೆ ತಿಂಗಳಿನಲ್ಲಿಯೇ ಶಂಕುಸ್ಥಾಪನೆ ನೆರವೇರಿಸಲು ಸಾಧ್ಯವಾಗುವಂತೆ ಕ್ರಮ ಕೈಗೊಳ್ಳಬೇಕು’ ಎಂದು ಅಧಿಕಾರಿಗಳಿಗೆ ಕಂದಾಯ ಸಚಿವ ಆರ್. ಅಶೋಕ ಮತ್ತು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಸೂಚಿಸಿದರು.

‘ಈ ಎರಡೂ ಪ್ರತಿಮೆಗಳನ್ನು ತಲಾ ನಾಲ್ಕು ಮೀಟರ್ ಎತ್ತರದಲ್ಲಿ ಅಶ್ವಾರೂಢ ಭಂಗಿಗಳಲ್ಲಿ ಸ್ಥಾಪಿಸಬೇಕು. ಸುತ್ತಮುತ್ತ ಹಸಿರು ಸೂಸುವ ಪರಿಸರವನ್ನು ಕಾಪಾಡಿಕೊಳ್ಳಬೇಕು’ ಎಂದೂ ಸಚಿವರು ಸಲಹೆ ನೀಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ಸೂಚನೆಯಂತೆ ಸಚಿವರಿಬ್ಬರೂ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಶನಿವಾರ ಸಭೆ ನಡೆಸಿ, ಪ್ರತಿಮೆಗಳ ನೀಲನಕ್ಷೆ ಪರಿಶೀಲಿಸಿದರು. ಅಲ್ಲದೆ, ಪ್ರತಿಮೆಗಳನ್ನು ಸ್ಥಾಪಿಸಲು ನಿರ್ಧರಿಸಿದ ಸ್ಥಳಕ್ಕೆ ಭೇಟಿ ನೀಡಿದರು.

ಬಸವಣ್ಣ ಮತ್ತು ಕೆಂಪೇಗೌಡರ ಪ್ರತಿಮೆಗಳ ಮಾದರಿಯನ್ನು ಸಿದ್ಧಪಡಿಸಿ ವಿಧಾನಸೌಧದ ಮುಂಭಾಗದಲ್ಲಿ ಸೂಕ್ತ ಸ್ಥಳ ನಿಗದಿಪಡಿಸುವಂತೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಈ ಹಿಂದೆಯೇ ಸೂಚಿಸಲಾಗಿತ್ತು.

ಅದರಂತೆ, ಅವರು ಸಿದ್ಧಪಡಿಸಿಕೊಂಡು ತಂದಿರುವ ನೀಲನಕ್ಷೆ ಮತ್ತು ಪ್ರತಿಮೆಗಳ ಮಾದರಿಗಳನ್ನು ಸಚಿವರು ಪರಿಶೀಲಿಸಿ ಸಲಹೆ, ಸೂಚನೆಗಳನ್ನು ನೀಡಿದರು.

ಮುಖ್ಯಮಂತ್ರಿ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್, ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಕೃಷ್ಣಾರೆಡ್ಡಿ ಇದ್ದರು.



ನಾಟಕ ಪ್ರದರ್ಶನ

ತಳಸಮುದಾಯಗಳ ಕುಲ ಪುರಾಣಗಳನ್ನು ಕಥಾವಸ್ತುವನ್ನಾಗಿ ಹೊಂದಿದ ‘ದಕ್ಲ ಕಥಾ ದೇವಿ ಕಾವ್ಯ’ ಎಂಬ ವಿಶಿಷ್ಟ ನಾಟಕದ ಪ್ರದರ್ಶನ ದೊಮ್ಮಲೂರಿನ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಶನಿವಾರ ಸಂಜೆ ನಡೆಯಿತು. ಲಕ್ಷ್ಮಣ ಕೆ.ಪಿ. ಅವರು ರಚಿಸಿ, ನಿರ್ದೇಶಿಸಿದ ಈ ನಾಟಕದಲ್ಲಿ ಕಲಾವಿದರಾದ ಬಿಂದು ರಕ್ಷಿದಿ, ಸಂತೋಷ್ ದಿಂಡಗೂರು, ಭರತ್ ಡಿಂಗ್ರಿ, ನರಸಿಂಹರಾಜು ಬಿ.ಕೆ., ರಮಿಕ ಚೈತ್ರ ಅಭಿನಯಿಸಿದರು.

–ಪ್ರಜಾವಾಣಿ ಚಿತ್ರ

ಆರು ಮಂದಿಗೆ ಇನ್ಫೊಸಿಸ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಮಹೇಶ್ ಕಾಕಡೆ, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ಕುಲಪತಿ ಪ್ರೊ. ಸುಧೀರ್ ಕೃಷ್ಣಸ್ವಾಮಿ ಸೇರಿದಂತೆ ಆರು ಮಂದಿ ಸಾಧಕರಿಗೆ ಇನ್ಫೊಸಿಸ್ ಸೈನ್ಸ್ ಫೌಂಡೇಷನ್‌ನ 2022ನೇ ಸಾಲಿನ ಇನ್ಫೊಸಿಸ್ ಪ್ರಶಸ್ತಿಯನ್ನು ಶನಿವಾರ ಪ್ರದಾನ ಮಾಡಲಾಯಿತು.

ಮಹೇಶ್ ಕಾಕಡೆ ಅವರಿಗೆ ಬೀಜಗಣಿತ ಸಂಖ್ಯಾಸೂತ್ರಕ್ಕೆ ಸಂಬಂಧಿಸಿದ ಸಂಶೋಧನೆ ಹಾಗೂ ಸುಧೀರ್ ಅವರಿಗೆ ಸಂವಿಧಾನದ ಮೂಲ ಸ್ವರೂಪದ ತಾತ್ವಿಕತೆ ಕುರಿತ ಬರವಣಿಗೆಗಳಿಗಾಗಿ ಪ್ರಶಸ್ತಿ ನೀಡಲಾಯಿತು. ಎಂಜಿನಿಯರಿಂಗ್ ಮತ್ತು ಕಂಪ್ಯೂಟರ್ ವಿಜ್ಞಾನ ವಿಭಾಗದಲ್ಲಿ ಖರಗ್‌ಪುರ ಭಾರತೀಯ ತಂತ್ರಜ್ಞಾನ ಸಂಸ್ಥೆಯ (ಐಐಟಿ) ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಡೀನ್ ಸುಮನ್ ಚಕ್ರವರ್ತಿ, ಜೀವವಿಜ್ಞಾನ ವಿಭಾಗದಲ್ಲಿ ಮುಂಬೈನ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರೀಸರ್ಚ್‌ನ ನ್ಯೂರೋಬಯಾಲಜಿ ವಿಭಾಗದ ಪ್ರಾಧ್ಯಾಪಕಿ ವಿದಿತಾ ವೈದ್ಯ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಭೌತವಿಜ್ಞಾನ ವಿಭಾಗದಲ್ಲಿ ಪುಣೆಯ ನ್ಯಾಷನಲ್ ಸೆಂಟರ್ ಫಾರ್ ರೇಡಿಯೊ ಆಸ್ಟ್ರಾನಮಿಯ ಪ್ರಾಧ್ಯಾಪಕ ನಿಸ್ಸಿಂ ಕಾನೇಕರ್ ಹಾಗೂ ಸಮಾಜ ವಿಜ್ಞಾನ ವಿಭಾಗದಲ್ಲಿ ಯೇಲ್ ವಿಶ್ವವಿದ್ಯಾಲಯದ ಆರ್ಥಿಕ ಬೆಳವಣಿಗೆ ಕೇಂದ್ರದ ನಿರ್ದೇಶಕಿ ರೋಹಿಣಿ ಪಾಂಡೆ ಅವರಿಗೆ ಇನ್ಫೊಸಿಸ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಮೆರಿಕದ ಬರ್ಕ್ಲಿಯ ಸೈಮನ್ಸ್ ಇನ್‌ಸ್ಟಿಟ್ಯೂಟ್ ಫಾರ್ ದಿ ಥಿಯರಿ ಆಫ್ ಕಂಪ್ಯೂಟಿಂಗ್‌ನ ನಿರ್ದೇಶಕಿ ಪ್ರೊ. ಶಾಫಿ ಗೋಲ್ಡ್‌ವಾಸರ್ ಪ್ರಶಸ್ತಿ ಪ್ರದಾನ ಮಾಡಿದರು.

ಬಳಿಕ ‘ಕ್ರಿಪ್ಟೋಗ್ರಫಿ ಮತ್ತು ಮಷೀನ್ ಲರ್ನಿಂಗ್’ ಕುರಿತು ಉಪನ್ಯಾಸ ನೀಡಿದ ಶಾಫಿ, ‘ಈಗ ಖಾಸಗಿತನಕ್ಕೆ ಧಕ್ಕೆಯಾಗದಂತೆ ಮಾಹಿತಿಯನ್ನು ಸಂರಕ್ಷಿಸಿಟ್ಟುಕೊಳ್ಳುವುದೇ ದೊಡ್ಡ ಸವಾಲು. ವೈಯಕ್ತಿಕ ಮಾಹಿತಿಗಳ ಮೇಲೆ ನಾವು ಎಷ್ಟು ಹಿಡಿತ ಹೊಂದಿದ್ದೇವೆ ಎಂಬುದರ ಆಧಾರದಲ್ಲಿ ಇದು ನಿರ್ಧಾರವಾಗುತ್ತದೆ’ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಇನ್ಫೊಸಿಸ್ ಸೈನ್ಸ್ ಫೌಂಡೇಷನ್ ಅಧ್ಯಕ್ಷ ಎಸ್. ಗೋಪಾಲಕೃಷ್ಣನ್, ‘ಮನುಕುಲದ ಒಳಿತಿಗೆ ಪೂರಕವಾದ ಸಂಶೋಧನೆಗಳನ್ನು ಬೆಂಬಲಿಸುವುದು ನಮ್ಮ ಕರ್ತವ್ಯ. ಆ ಕೆಲಸವನ್ನು ಇನ್ಫೊಸಿಸ್ ಮಾಡುತ್ತಿದೆ’ ಎಂದು ಹೇಳಿದರು.

ಇನ್ಫೊಸಿಸ್ ಸೈನ್ಸ್ ಫೌಂಡೇಷನ್ ಟ್ರಸ್ಟಿ ಎನ್.ಆರ್. ನಾರಾಯಣಮೂರ್ತಿ ಅವರು ಪ್ರೊ. ಶಾಫಿ ಗೋಲ್ಡ್‌ವಾಸರ್ ಅವರನ್ನು ಪರಿಚಯಿಸಿದರು. ಫೌಂಡೇಷನ್‌ನ ಟ್ರಸ್ಟಿ ಮತ್ತು ಇನ್ಫೊಸಿಸ್ ಲಿಮಿಟೆಡ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಲೀಲ್ ಪಾರೇಖ್, ಆರು ವಿಭಾಗಗಳ ಪ್ರಶಸ್ತಿ ಆಯ್ಕೆ ಸಮಿತಿಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ಒಂದು ಲಕ್ಷ ಡಾಲರ್ ಮೊತ್ತ

ಇನ್ಫೊಸಿಸ್ ಪ್ರಶಸ್ತಿ ಪುರಸ್ಕೃತರಿಗೆ ಚಿನ್ನದ ಪದಕ, ಪ್ರಶಸ್ತಿ ಪತ್ರ ಮತ್ತು ಒಂದು ಲಕ್ಷ ಡಾಲರ್ ಮೊತ್ತವನ್ನು ನೀಡಿ ಗೌರವಿಸಲಾಯಿತು.



ಇನ್ಫೊಸಿಸ್ ಪ್ರಶಸ್ತಿ ಫಲಕದೊಂದಿಗೆ ಸುಮನ್ ಚಕ್ರವರ್ತಿ, ಸುಧೀರ್ ಕೃಷ್ಣಸ್ವಾಮಿ, ವಿದಿತಾ ವೈದ್ಯ, ರೋಹಿಣಿ ಪಾಂಡೆ, ನಿಸ್ಸಿಂ ಕಾನೇಕರ್ ಮತ್ತು ಮಹೇಶ್ ಕಾಕಡೆ

– ಪ್ರಜಾವಾಣಿ ಚಿತ್ರ

ಗಡಿಯಲ್ಲಿ ಕಟ್ಟೆಚ್ಚರ

ಗುಂಡ್ಲುಪೇಟೆ: ಕೇರಳದ ಕೋಟಯಂನಲ್ಲಿ ಹಕ್ಕಿ ಜ್ವರ ಕಾಣಿಸಿಕೊಂಡಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ತಾಲ್ಲೂಕಿನ ಗಡಿ ಭಾಗ ಮೂಲೆಹೊಳೆ ಚೆಕ್ ಪೋಸ್ಟ್‌ನಲ್ಲಿ ಪಶುಪಾಲನಾ ಇಲಾಖೆಯು ಕಟ್ಟೆಚ್ಚರ ವಹಿಸಿದೆ.

ಕೋಳಿಗಳ ಸಾಗಣೆಗೆ ನಿರ್ಬಂಧ ವಿಧಿಸಲಾಗಿದೆ. ಗೂಡ್ಸ್ ವಾಹನಗಳಿಗೆ ಸೋಂಕು ನಿವಾರಕ ದ್ರಾವಣ ಸಿಂಪಡಿಸಲಾಗುತ್ತಿದೆ.

ರಾಷ್ಟ್ರೀಯ ಯುವಜನೋತ್ಸವ: ಲಾಂಛನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹುಬ್ಬಳ್ಳಿ-ಧಾರವಾಡದಲ್ಲಿ ಇದೇ 12ರಿಂದ 16ರವರೆಗೆ ನಡೆಯಲಿರುವ ರಾಷ್ಟ್ರೀಯ ಯುವಜನೋತ್ಸವವನ್ನು ಯಶಸ್ವಿಯಾಗಿ ಆಯೋಜಿಸಲು ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಉತ್ಸವದ ಲಾಂಛನವನ್ನು ಮುಖ್ಯಮಂತ್ರಿ ಶನಿವಾರ ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ಕೇಂದ್ರ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಅನುರಾಗ್ ಸಿಂಗ್ ಠಾಕೂರ್ ವರ್ಚುವಲ್ ಮೂಲಕ ಭಾಗವಹಿಸಿದರು.

‘ವಿಕಸಿತ್ ಯುವ- ವಿಕಸಿತ್ ಭಾರತ್’ ಎಂಬ ವಿಷಯದಡಿ ನಡೆಯಲಿರುವ ಈ ಉತ್ಸವವನ್ನು ಸ್ವಾಮಿ ವಿವೇಕಾನಂದರ ಜನ್ಮದಿನವಾದ 12ರಂದು ಪ್ರಧಾನಿ ನರೇಂದ್ರ ಮೋದಿ ಹುಬ್ಬಳ್ಳಿಯಲ್ಲಿ ಉದ್ಘಾಟಿಸಲಿದ್ದಾರೆ. ದೇಶದ ವಿವಿಧೆಡೆಯಿಂದ ಸುಮಾರು 7,500 ಜನರು ಈ ಉತ್ಸವದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

ಲಾಂಛನ: ಉತ್ಸವಕ್ಕೆ ಒಡಿಶಾದ ಬನ್ಸಿಲಾಲ್ ಕೇತ್ಕಿ ರೂಪಿಸಿದ ಲಾಂಛನವನ್ನು ಆಯ್ಕೆ ಮಾಡಲಾಗಿದೆ. ಅವರಿಗೆ ₹ 50 ಸಾವಿರ ಬಹುಮಾನ ಸಿಗಲಿದೆ. ಈ ಲಾಂಛನ ದೇಶದ ರಾಷ್ಟ್ರೀಯ ಹೂವು ತಾವರೆಯಿಂದ ಪ್ರೇರೇಪಿತವಾಗಿದ್ದು, ರಾಷ್ಟ್ರೀಯತೆ, ನಿಸ್ವಾರ್ಥ ಸೇವೆ ಮತ್ತು ವೈವಿಧ್ಯದ ನಡುವೆಯೂ ಇರುವ ಏಕತೆ ಹಾಗೂ ಸಹಕಾರವನ್ನು ಪ್ರತಿನಿಧಿಸುತ್ತಿದೆ. ಜಾಗತಿಕ ಮಟ್ಟದಲ್ಲಿ ಆರ್ಥಿಕವಾಗಿ, ವಿದೇಶಾಂಗ ವ್ಯವಹಾರ ಹಾಗೂ ಸೇನಾಬಲದಲ್ಲಿ ದೇಶದ ಉನ್ನತಿಯನ್ನು ಬಿಂಬಿಸುವ ಜೊತೆಗೆ, ಜಿ20 ಹಾಗೂ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅಧ್ಯಕ್ಷತೆಯನ್ನೂ ಅಭಿವ್ಯಕ್ತಿಸುತ್ತದೆ.

‘ಚಂಪಿ ಚಿಕ್ಕ’: ಬೆಂಗಳೂರಿನ ಇನ್ಬಂ ಅವರು ರೂಪಿಸಿದ ‘ಚಂಪಿ ಚಿಕ್ಕ’ ಮ್ಯಾಸ್ಕಟ್ ಆಯ್ಕೆಯಾಗಿದ್ದು, ಅವರಿಗೂ ₹ 50 ಸಾವಿರ ಬಹುಮಾನ ದೊರೆಯಲಿದೆ. ಇದು ಆನೆಯ ವಿನ್ಯಾಸವನ್ನು ಹೊಂದಿದ್ದು, ಕರ್ನಾಟದಲ್ಲಿ ಅತಿ ಹೆಚ್ಚಿರುವ ಆನೆಗಳ ಸಂಖ್ಯೆಯನ್ನು ಪ್ರತಿನಿಧಿಸುತ್ತದೆ. ಜೊತೆಗೆ, ಜಾಗತಿಕ ಮಟ್ಟದಲ್ಲಿ ಹವಾಮಾನ ಬದಲಾವಣೆ, ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆ, ವಿಶ್ವ ಶಾಂತಿಯ ಜೊತೆಗೆ ಕ್ರೀಡೆ, ಸ್ಟಾರ್ಟ್‌ಅಪ್, ನಾವೀನ್ಯ, ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಮುನ್ನಡೆಯನ್ನು ಸಾಧಿಸಿರುವ ಯುವ ಮತ್ತು ಆಧುನಿಕ ಭಾರತವನ್ನು ಬಿಂಬಿಸುತ್ತದೆ.

ಲಾಂಛನ ಬಿಡುಗಡೆಯ ಬಳಿಕ ಅನುರಾಗ್ ಸಿಂಗ್ ಠಾಕೂರ್ ನೇತೃತ್ವದಲ್ಲಿ ಯುವಜನೋತ್ಸವ ಸಮಿತಿಯ ಸಭೆ ನಡೆಯಿತು. ಕಾರ್ಯ ಕ್ರಮದ ರೂಪುರೇಷೆಗಳ ಬಗ್ಗೆ ಚರ್ಚೆ ನಡೆಯಿತು. ಉತ್ಸವದಲ್ಲಿ ಯುವ ಶಾಸಕರು, ಸಂಸದರು ಹಾಗೂ ಇತರ ಜನಪ್ರತಿನಿಧಿಗಳ ಗೋಷ್ಠಿ ಆಯೋಜಿಸಲು ಕೂಡಾ ತೀರ್ಮಾನಿಸಲಾಯಿತು.

ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣ ಗೌಡ ಇದ್ದರು.



ರಾಷ್ಟ್ರೀಯ ಯುವಜನೋತ್ಸವದ ಲಾಂಛನ



‘ಡಿಎಚ್ ಬೆಂಗಳೂರು 2040 ಶೃಂಗ’ • ವಾರ್ಡ್‌ನ ಘನತ್ಯಾಜ್ಯವನ್ನು ಅಲ್ಲೇ ಸಂಸ್ಕರಿಸಲು ಯೋಜನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಭವಿಷ್ಯದ ಬೆಂಗಳೂರಿಗೆ ಬೇಕಿದೆ ಅಗಾಧ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೆಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು ಬೆಂಗಳೂರನ್ನು ಭವಿಷ್ಯದ ಅತ್ಯುತ್ತಮ ಅಂತರರಾಷ್ಟ್ರೀಯ ನಗರವಾಗಿ ಅಭಿವೃದ್ಧಿಪಡಿಸಲು, ಹೊಸ ಉಪನಗರಗಳನ್ನು ನಿರ್ಮಿಸಲು ಅಗಾಧ ಹೂಡಿಕೆಯ ಅಗತ್ಯವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಶನಿವಾರ ‘ಪ್ರಜಾವಾಣಿ’ಯ ಸಹೋದರ ಪತ್ರಿಕೆ ಡೆಕ್ಕನ್ ಹೆರಾಲ್ಡ್ ಆಯೋಜಿಸಿದ್ದ ‘ಡಿಎಚ್ ಬೆಂಗಳೂರು 2040 ಶೃಂಗ’ ಉದ್ಘಾಟಿಸಿ ಅವರು ಮಾತನಾಡಿದರು.

‘ತ್ಯಾಜ್ಯ ನಿರ್ವಹಣೆ, ಒಳಚರಂಡಿ, ರಾಜಕಾಲುವೆ, ರಸ್ತೆ, ಸಂಚಾರ ನಿರ್ವಹಣೆಯಲ್ಲೂ ಸುಧಾರಣೆಯಾಗಬೇಕಿದೆ. ಸಂಚಾರ ವ್ಯವಸ್ಥೆ ನಿರ್ವಹಣೆಗೆ ಪ್ರತ್ಯೇಕ ಆಯುಕ್ತಾಲಯ ರಚಿಸಿದ್ದರಿಂದ ಸಾಕಷ್ಟು ಬದಲಾವಣೆ ಸಾಧ್ಯವಾಗಿದೆ. ಸಿಗ್ನಲ್ ವ್ಯವಸ್ಥೆ ಸುಧಾರಣೆ, ಹೆಚ್ಚುವರಿ ರಸ್ತೆಗಳು, ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಚಾರ ದಟ್ಟಣೆ ತಪ್ಪಿಸಲು ಸೂಕ್ತ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ನಾಲ್ಕು ಸ್ಥಳಗಳಲ್ಲಿ ಉಪನಗರಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ’ ಎಂದರು.

ಘನತ್ಯಾಜ್ಯ ನಿರ್ವಹಣೆಗೆ ಆಧುನಿಕ ತಂತ್ರಜ್ಞಾನ: ಒಂದು ವಾರ್ಡ್‌ನ ಘನತ್ಯಾಜ್ಯವನ್ನು ಅಲ್ಲೇ ಸಂಸ್ಕರಿಸಲು ಯೋಜನೆ ರೂಪಿಸಲಾಗಿದೆ. ಇದರಿಂದ ಸಾರಿಗೆ, ಸ್ಥಳ ಉಳಿತಾಯದ ಜತೆಗೆ, ಪರಿಸರ ಮಾಲಿನ್ಯ ಕಡಿಮೆ ಮಾಡಬಹುದು. ವಾಣಿಜ್ಯ ಸಂಸ್ಥೆಗಳು, ಮಾಲ್, ಆಸ್ಪತ್ರೆ, ಮಾರುಕಟ್ಟೆ, ಹೋಟೆಲ್‌ಗಳಲ್ಲಿ ತ್ಯಾಜ್ಯ ನಿರ್ವಹಣೆಯಯಂತ್ರಗಳನ್ನುಅಳವಡಿಸಿಕೊಳ್ಳುವುದನ್ನು ಕಡ್ಡಾಯ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

‘ಜಾಗತಿಕ ಹೂಡಿಕೆದಾರರ ಸಮಾವೇಶದ ಫಲವಾಗಿ ₹ 8 ಲಕ್ಷ ಕೋಟಿ ಹೂಡಿಕೆಯಾಗುತ್ತಿದೆ. ₹ 3.50 ಲಕ್ಷ ಕೋಟಿ ಯೋಜನೆಗಳಿಗೆ ಉನ್ನತಮಟ್ಟದ ಸಮಿತಿಯಲ್ಲಿ ಮಂಜೂರಾತಿ ನೀಡಲಾಗಿದೆ. ₹ 26 ಸಾವಿರ ಕೋಟಿ ಮೆಟ್ರೊ ಮೂರನೇ ಹಂತದ ವಿಸ್ತರಣೆಗೆ ನೀಡಲಾಗಿದೆ. ಉಪನಗರ ರೈಲು ಯೋಜನೆ ಕಾಮಗಾರಿ ಪ್ರಾರಂಭವಾಗಿದೆ. ಇಂತಹ ಪ್ರಯತ್ನಗಳ ಫಲವಾಗಿ ಸಂಚಾರ ವ್ಯವಸ್ಥೆ ಸುಧಾರಿಸಲಿದೆ’ ಎಂದರು.

ಬಯೋಕಾನ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಟಿಪಿಎಂಎಲ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್‌ಕುಮಾರ್, ನಿರ್ದೇಶಕ ಕೆ.ಎನ್. ಶಾಂತಕುಮಾರ್, ಸಿಇಒ ಸೀತಾರಾಮನ್ ಶಂಕರ್ ಉಪಸ್ಥಿತರಿದ್ದರು.



ಬೆಂಗಳೂರಿನಲ್ಲಿ ಡೆಕ್ಕನ್ ಹೆರಾಲ್ಡ್ ಶನಿವಾರ ಆಯೋಜಿಸಿದ್ದ ‘ಡಿಎಚ್ ಬೆಂಗಳೂರು 2040 ಶೃಂಗ’ದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿದರು.

DH BENGALURU 2040 SUMMIT

ಪ್ರಜಾವಾಣಿ, ಡಿಎಚ್‌ಗೆ ಮುಖ್ಯಮಂತ್ರಿ ಶ್ಲಾಘನೆ

ರಾಜ್ಯದ ಬೆಳವಣಿಗೆಯಲ್ಲಿ ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ತಮ್ಮದೇ ಆದ ಕೊಡುಗೆ ನೀಡಿವೆ. ಏಳೂವರೆ ದಶಕಗಳಷ್ಟು ಸುದೀರ್ಘ ಅವಧಿಯಲ್ಲಿ ಸಾರ್ವಜನಿಕರು ಹಾಗೂ ನೀತಿ ನಿರೂಪಕರ ಮೇಲೆ ನಿರಂತರವಾಗಿ ಪ್ರಭಾವವನ್ನು ಬೀರಿವೆ ಎಂದು ಮುಖ್ಯಮಂತ್ರಿ ಶ್ಲಾಘಿಸಿದರು.

ಅಭಿವೃದ್ಧಿಯ ವೇಗ ತಗ್ಗಿಸಿದ ತಪ್ಪುಗಳು

ಹಿಂದೆ ತೆಗೆದುಕೊಂಡ ತಪ್ಪು ನೀತಿಗಳ ಫಲವಾಗಿ ಬೆಂಗಳೂರಿನ ಅಭಿವೃದ್ಧಿಯ ವೇಗ ತಗ್ಗಿದೆ. ಅಭಿವೃದ್ಧಿಪಡಿಸದೇ ಎಂಟು ನಗರಸಭೆ, 110 ಗ್ರಾಮಗಳನ್ನು ಸೇರಿಸಿಕೊಳ್ಳಲಾಗಿದೆ. ಈಗ ಬಿಬಿಎಂಪಿ ಒಳಗೆ ನಗರಸಭೆ, ಗ್ರಾಮ ಪಂಚಾಯಿತಿಗಳೂ ಇವೆ. ಇದೊಂದು ದೊಡ್ಡ ಸವಾಲು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬೆಂಗಳೂರಿನಲ್ಲಿ ಪ್ರತಿ ವರ್ಷ 2 ಲಕ್ಷ ಉದ್ಯೋಗಗಳು ಸೃಷ್ಟಿಯಾಗುತ್ತಿವೆ. ಇಲ್ಲಿನ ಸಂಪನ್ಮೂಲ ಬಳಸಿಕೊಂಡು ‘ಬ್ರ್ಯಾಂಡ್ ಬೆಂಗಳೂರು’ ಅಭಿವೃದ್ಧಿ ಪಡಿಸಬೇಕು. ಸರ್ಕಾರ, ಖಾಸಗಿ ವಲಯ, ಸಂಘ– ಸಂಸ್ಥೆಗಳು ಹಾಗೂ ಸಾರ್ವಜನಿಕರು ಒಟ್ಟಾಗಿ ಕೆಲಸ ಮಾಡಬೇಕು. ನಗರದಲ್ಲಿ ನಾಗರಿಕ ಸಂಸ್ಥೆಗಳಲ್ಲಿನ ಪ್ರಮುಖರ ಪ್ರತಿಭೆ ಬಳಸಿಕೊಳ್ಳಬೇಕು ಎಂದು ಹೇಳಿದರು.

‘ಸುಗಮ ಸಾರಿಗೆಗೆ ಬಹುಮಾದರಿ ಸಮನ್ವಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಾರಿಗೆ ಪಾಲುದಾರರು ಪರಸ್ಪರ ಕೈಜೋಡಿಸಿದರೆ ಸಮಗ್ರ ಸಾರಿಗೆ ವೇದಿಕೆಗಳನ್ನು ನಿರ್ಮಿಸಲು, ತಡೆರಹಿತ ಬಹುಮಾದರಿ ಸಂಚಾರವನ್ನು ಸುಗಮಗೊಳಿಸಲು ಸಾಧ್ಯವಾಗಲಿದೆ.

ಇದು ‘ಪ್ರಜಾವಾಣಿ’ಯ ಸೋದರ ಪತ್ರಿಕೆಯಾದ ಡೆಕ್ಕನ್ ಹೆರಾಲ್ಡ್ ಶನಿವಾರ ಆಯೋಜಿಸಿದ್ದ ‘ಡಿಎಚ್ ಬೆಂಗಳೂರು 2040 ಶೃಂಗ’ದಲ್ಲಿ ಹಸಿರಿ ನಿಂದ ಕಂಗೊಳಿಸುವ ಬೆಂಗಳೂರನ್ನು ಮರುರೂಪಿಸುವ ಕುರಿತು ನಡೆದ ಚರ್ಚೆ–ಸಂವಾದದಲ್ಲಿ ವ್ಯಕ್ತವಾದ ಅಭಿಪ್ರಾಯ.

‘ನಗರದ ವಾಹನ ದಟ್ಟಣೆ ಕಳವಳ ಮೂಡಿಸುತ್ತದೆ. ಸುಮಾರು 1.07 ಕೋಟಿ ವಾಹನಗಳು ಈಗಾಗಲೇ ಬೆಂಗಳೂರಿನ ರಸ್ತೆಗಳಲ್ಲಿ ಸಂಚರಿಸುತ್ತಿವೆ. ವರ್ಷಕ್ಕೆ ಶೇ 10ರಷ್ಟು ವಾಹನಗಳು ಹೆಚ್ಚಾಗುತ್ತಿವೆ. ಈಗಿರುವ ವೈಯಕ್ತಿಕ ವಾಹನಗಳ ಬಳಕೆ ಶೇ 40ರಿಂದ ಶೇ 20ಕ್ಕೆ ಇಳಿಸುವ ಹಾಗೂ ಸಾರ್ವಜನಿಕ ಸಾರಿಗೆಯ ಪಾಲನ್ನು ಶೇ 48ರಿಂದ ಶೇ 80ಕ್ಕೆ ಹೆಚ್ಚಿಸುವ ಅಗತ್ಯವಿದೆ’ ಎಂದು ಸಂಚಾರ ವಿಭಾಗದ ವಿಶೇಷ ಪೊಲೀಸ್ ಆಯುಕ್ತ ಎಂ.ಎ.ಸಲೀಂ ವಿವರಿಸಿದರು.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್, ‘ಮೆಟ್ರೊ ನಿಲ್ದಾಣಗಳು ಕೇವಲ ರೈಲುಗಳಲ್ಲಿ ಪ್ರಯಾಣಿಸುವ ಉದ್ದೇಶಕ್ಕೆ ಸೀಮಿತವಾಗಬಾರದು. ಕಚೇರಿ ಕೆಲಸ ಮುಗಿಸಿ, ಮನೆಗೆ ತೆರಳುವ ಜನರ ತರಕಾರಿ, ಕಿರಾಣಿ, ಶಾಪಿಂಗ್, ಇತರೆ ಉದ್ದೇಶಗಳನ್ನೂ ಅವು ಪೂರೈಸುವಂತಾಗಬೇಕು. ಇದರಿಂದ ರಸ್ತೆಗಳಲ್ಲಿ ಜನರ ಸಂಚಾರ ಕಡಿಮೆಯಾಗುವ ಜತೆಗೆ ವಾಹನ ದಟ್ಟಣೆಯನ್ನೂ ನಿಯಂತ್ರಿಸಬಹುದು’ ಎಂದು ಸಲಹೆ ನೀಡಿದರು.

‘ಮೂರನೇ ಹಂತದ ಮೆಟ್ರೊಗೆ ಪೂರಕವಾಗಿ ಹಲವೆಡೆ ಬಿಎಂಟಿಸಿ ಸಾರಿಗೆ ವ್ಯವಸ್ಥೆ ಇಲ್ಲ. ಅಂತಹ ಭಾಗಗಳಲ್ಲಿ ಖಾಸಗಿ ಬಸ್‌ಗಳ ಸಂಚಾರಕ್ಕೆ ಅವಕಾಶ ನೀಡಬೇಕು’ ಎಂದು ಸಲಹೆ ನೀಡಿದರು.

ಬಾಷ್ ಲಿಮಿಟೆಡ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ಗುರುಪ್ರಸಾದ್ ಮುದ್ಲಾಪುರ, ‘ತಡೆರಹಿತ ಸಾರಿಗೆ ಅನುಭವಕ್ಕೆ ಸಿಟಿ ಆಪರೇಟಿಂಗ್ ಸಿಸ್ಟಮ್ (ಸಿಟಿ ಓಎಸ್) ಮೂಲಕ ಡೇಟಾ ಹಂಚಿಕೆ ಮಾಡುವುದು ಪ್ರಮುಖ ಹೆಜ್ಜೆಯಾಗಿದೆ’ ಎಂದರು.

‘ಮುಂದಿನ 17 ವರ್ಷಗಳ ಸಂಚಾರ ವ್ಯವಸ್ಥೆ ಹೇಗಿರಬೇಕು ಎಂದು ಯೋಜಿಸುತ್ತಿದ್ದೇವೆ. ನಮ್ಮ ಮುಂದಿರುವ ಗುರಿಗಳನ್ನು ಪಾರದರ್ಶಕಗೊಳಿಸಬೇಕು’ ಎಂದು ಸನ್ ಮೊಬಿಲಿಟಿ ಸಹ ಸಂಸ್ಥಾಪಕ ಚೇತನ್ ಮೈನಿ ಸಲಹೆ ನೀಡಿದರು.



‘ಡಿಎಚ್ ಬೆಂಗಳೂರು 2040 ಶೃಂಗ’ದಲ್ಲಿ ಗುರುಪ್ರಸಾದ್ ಮುದ್ಲಾಪುರ, ಎಂ.ಎ.ಸಲೀಂ, ಅಂಜುಂ ಪರ್ವೇಜ್, ಚೇತನ್ ಮೈನಿ – –

–ಪ್ರಜಾವಾಣಿ ಚಿತ್ರ

‘ಸಂಖ್ಯಾ ಗೆಲುವು ನೆಲದ ಸಿನಿಮಾ ವಿಜಯ ಅಲ್ಲ’

‘ಕಾಂತಾರ, ಕೆಜಿಎಫ್2, ಚಾರ್ಲಿ 777 ಈ ಮೂರು ಸಿನಿಮಾಗಳ ಯಶಸ್ಸು ಗಳಿಕೆಯಿಂದಾಗಿ ಗೆಲುವನ್ನು ಸೂಚಿಸುತ್ತವೆ. ಹಾಗೆಂದ ಮಾತ್ರಕ್ಕೆ ಇದು ನೆಲದ ಸಿನಿಮಾ ಗೆಲುವು ಎಂದು ಭಾವಿಸಲಾಗದು. ಕರ್ನಾಟಕದಲ್ಲಿ ಆಗೀಗ ಒಳ್ಳೊಳ್ಳೆಯ ಸಿನಿಮಾ ಬಂದಿರಬಹುದು. ಆದರೆ, ಸಾಂಸ್ಕೃತಿಕವಾಗಿ ಯಶಸ್ವಿ ಮಾದರಿಯೊಂದನ್ನು ಸೃಷ್ಟಿಸುವುದರಲ್ಲಿ ನಾವೆಲ್ಲ ಸೋತಿದ್ದೇವೆ. ನಮ್ಮತನದ ವಿಷಯಗಳು ಗರ್ಭ ಕಟ್ಟದೆ, ಉತ್ತಮವಾದುದನ್ನು ಹೆರುವುದು ಅಸಾಧ್ಯ’ ಎಂದು ನಟ ಪ್ರಕಾಶ್ ರೈ ಪ್ರತಿಪಾದಿಸಿದರು. ‘ಬೆಂಗಳೂರು–ಇಂಡಿಯಾಸ್ ನೆಕ್ಸ್ಟ್ ಬಿಗ್ ಎಂಟರ್‌ಟೇನ್‌ಮೆಂಟ್ ಹಬ್’ ಎಂಬ ಸಂವಾದದಲ್ಲಿ ನಟಿ ಶೃತಿ ಹರಿಹರನ್ ಹಾಗೂ ಗಾಯಕ ವಿಜಯ್ ಪ್ರಕಾಶ್ ಅವರೊಡನೆ ಪ್ರಕಾಶ್ ರೈ ಮಾತನಾಡಿದರು. ವಿಜಯ್ ಪ್ರಕಾಶ್ ಅವರು ‘ಸಿಂಗಾರ ಸಿರಿಯೆ’ ಗೀತೆಯ ಕೆಲವು ಸಾಲುಗಳನ್ನು ಹಾಡಿದರು.


ವಿಜಯ್ ಪ್ರಕಾಶ್, ಪ್ರಕಾಶ್ ರೈ, ಶೃತಿ ಹರಿಹರನ್ ಭಾಗವಹಿಸಿದ್ದರು

ಬಿಬಿಎಂಪಿ ಚುನಾವಣೆ ವಿಳಂಬ; ವಾಗ್ವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಯ ವಿಳಂಬದ ಚರ್ಚೆ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಕಾಂಗ್ರೆಸ್ ಶಾಸಕಿ ಸೌಮ್ಯರೆಡ್ಡಿ ಪರಸ್ಪರ ವಾಗ್ವಾದಕ್ಕೆ ದಾರಿ ಮಾಡಿಕೊಟ್ಟಿತು.

‘ಡಿಎಚ್ ಬೆಂಗಳೂರು 2040 ಶೃಂಗ’ದಲ್ಲಿ ಬೆಂಗಳೂರಿಗೆ ಚುನಾವಣಾ ಪ್ರಣಾಳಿಕೆ ವಿಷಯ ಕುರಿತು ನಡೆದ ಚರ್ಚೆಯಲ್ಲಿ ಅವರು ಮಾತನಾಡಿದರು.

‘ಬೆಂಗಳೂರಿಗೆ ಪ್ರತ್ಯೇಕ ಕಾನೂನು ಜಾರಿಗೆ ತರಲು ಬಹು ದಿನಗಳಿಂದ ಬೇಡಿಕೆ ಇತ್ತು. ಕಾಯ್ದೆ ವಿರುದ್ಧ ಹಲವರು ನ್ಯಾಯಾಲಯದ ಮೊರೆ ಹೋದರು. ಕೆಲವರು 198 ವಾರ್ಡ್‌ಗಳಿಗೆ ‘ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್’ ಕಾಯ್ದೆಯ ಪ್ರಕಾರ ಚುನಾವಣೆ ನಡೆಸಬೇಕು ಎಂದು ಬಯಸಿದ್ದರು. ವಿಷಯ ನ್ಯಾಯಾಲಯದಲ್ಲಿದೆ. ಅದು ಇತ್ಯರ್ಥವಾದ ನಂತರ ಚುನಾವಣೆ ನಡೆಸುತ್ತೇವೆ. ಚುನಾಯಿತ ಸಂಸ್ಥೆಯ ಅನುಪಸ್ಥಿತಿಯಲ್ಲಿ ಸರ್ಕಾರ ನಾಗರಿಕ ಸಮಸ್ಯೆಗಳ ಬಗ್ಗೆ ಕಾಳಜಿ ವಹಿಸಿದೆ’ ಎಂದು ಅಶ್ವತ್ಥನಾರಾಯಣ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕಿ ಸೌಮ್ಯರೆಡ್ಡಿ, ‘ಶಾಸಕರು ಕಾನೂನು ರೂಪಿಸುವ ಕೆಲಸ ಮಾಡಬೇಕು. ಕಸ ಮತ್ತು ನೈರ್ಮಲ್ಯದ ಸಮಸ್ಯೆಗಳನ್ನು ಪರಿಹರಿಸುವುದಲ್ಲ. ಆರು ತಿಂಗಳವರೆಗೆ ಮಾತ್ರ ಆಡಳಿತಾಧಿಕಾರಿ ನೇಮಿಸಬಹುದು. ಆದರೆ, ಬಿಬಿಎಂಪಿ ಎರಡೂವರೆ ವರ್ಷಗಳಿಂದ ಚುನಾಯಿತ ಸಂಸ್ಥೆ ಹೊಂದಿಲ್ಲ. ಇದು ಪ್ರಜಾಪ್ರಭುತ್ವಕ್ಕೆ ವಿರುದ್ಧ’ ಎಂದರು.

ವಿಧಾನಸಭೆಯಲ್ಲಿ ಬೆಂಬಲಿಸಿದ ನಂತರವೂ ಹೊಸ ಕಾಯ್ದೆ ವಿರುದ್ಧ ನ್ಯಾಯಾಲಯದಲ್ಲಿ ಪ್ರಶ್ನಿಸಿ, ಚುನಾವಣೆ ವಿಳಂಬಗೊಳಿಸಿದ್ದು ಕಾಂಗ್ರೆಸ್ ಎಂದು ಅಶ್ವತ್ಥನಾರಾಯಣ ಕುಟುಕಿದರು.

‘ಮೀಸಲಾತಿ ಅವೈಜ್ಞಾನಿಕವಾಗಿವೆ ಎನ್ನುವುದು ಕಾಂಗ್ರೆಸ್ ಆಕ್ಷೇಪ. ಜಯನಗರ ಕ್ಷೇತ್ರದ ಬಹುತೇಕ ವಾರ್ಡ್‌ಗಳು ಮಹಿಳೆಯರಿಗೆ ಮೀಸಲಾಗಿವೆ. ಅದಕ್ಕಾಗಿ ನಾನು ನ್ಯಾಯಾಲಯದ ಮೊರೆ ಹೋಗಿದ್ದೆ. ನೀವು (ಸರ್ಕಾರ) ನಮ್ಮನ್ನು ಸಂಪರ್ಕಿಸಿಲ್ಲ. ಆರ್‌ಎಸ್‌ಎಸ್ ಮತ್ತು ಸಂಸದರ (ಬೆಂಗಳೂರು ದಕ್ಷಿಣ) ಕಚೇರಿಯಲ್ಲಿ ಈ ಮೀಸಲಾತಿ ನಿಗದಿಯಾಗಿದೆ’ ಎಂದು ಸೌಮ್ಯರೆಡ್ಡಿ ತಿರುಗೇಟು ನೀಡಿದರು.

ಚುನಾಯಿತ ಪ್ರತಿನಿಧಿಯಾಗಿ, ಪುರಾವೆಗಳಿಲ್ಲದೆ ಹೇಳಿಕೆ ನೀಡಬಾರದು. ಬೆಂಗಳೂರು ಜನರನ್ನು ನಿರಾಸೆಗೊಳಿಸಿದ್ದೇ ಕಾಂಗ್ರೆಸ್ ಎಂದು ಸಚಿವರು ದೂಷಿಸಿದರು.

ಜನರಿಂದ ನೇರ ಚುನಾವಣೆಯ ಮೂಲಕ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯಸ್ಥರಾದ ಮೇಯರ್ ಆಯ್ಕೆ ನಡೆಯಬೇಕು ಎಂದು ಆಮ್ ಆದ್ಮಿ ಪಕ್ಷದ ಮುಖಂಡ, ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಸಲಹೆ ನೀಡಿದರು.

‘ಗೇಟೆಡ್ ಲೇಔಟ್‌ಗಳಿಗಿಲ್ಲ ಮಾನ್ಯತೆ’

ಬೆಂಗಳೂರು: ‘ಸಾಮಾನ್ಯ ನಾಗರಿಕರನ್ನು ಪ್ರತ್ಯೇಕಿಸುವ ಗೇಟೆಡ್ ಲೇಔಟ್‌ಗಳನ್ನು ರೂಪಿಸಿ, ಪ್ರತ್ಯೇಕ ಸೌಲಭ್ಯಗಳನ್ನು ಕಲ್ಪಿಸಲು ಕಾನೂನಿನಲ್ಲಿ ಅವಕಾಶವಿಲ್ಲ. ಬೇಲಿ ಸಾಮಾಜಿಕ ಪ್ರತ್ಯೇಕತೆಯನ್ನು ಸೃಷ್ಟಿಸುತ್ತದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

‘ಬೆಂಗಳೂರಿನ ಸಾರ್ವಜನಿಕ ಸ್ಥಳಗಳ ಮರು ವ್ಯಾಖ್ಯಾನ’ ಕುರಿತು ಅವರು ಮಾತನಾಡಿದರು.

ಸಾರ್ವಜನಿಕ ಸ್ಥಳಗಳಲ್ಲಿ ಉತ್ತಮ ಕ್ರೀಡಾ ಸೌಲಭ್ಯಗಳು, ಮನರಂಜನಾ ಸಂಕೀರ್ಣಗಳನ್ನು ಅಭಿವೃದ್ಧಿಪಡಿಸುವ ಅವಶ್ಯಕತೆ ಇದೆ. ಆದಾಗ್ಯೂ, ಅವುಗಳ ನಿರ್ವಹಣೆ, ನಾಗರಿಕರ ಸುರಕ್ಷತೆ ಖಾತ್ರಿಪಡಿಸುವುದು ದೊಡ್ಡ ಸವಾಲು. ಜನರಲ್ಲಿ ಸಾರ್ವಜನಿಕ ಸ್ಥಳಗಳ ಕುರಿತು ಮಾಲೀಕತ್ವದ ಭಾವನೆ ಮೂಡಿಸಲು ಅಭಿಯಾನ ಕೈಗೊಳ್ಳಬೇಕು ಎಂದು ಪುರವಂಕರ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಆಶಿಶ್ ಪುರವಂಕರ ಹೇಳಿದರು.

ಡೆಲಾಯ್ಟ್ ಕನ್ಸಲ್ಟಿಂಗ್‌ನ ಸರ್ಕಾರ ಮತ್ತು ಸಾರ್ವಜನಿಕ ಸೇವೆಗಳ ಪಾಲುದಾರ ಎನ್.ಎಸ್.ಎನ್. ಮೂರ್ತಿ ಉಪಸ್ಥಿತರಿದ್ದರು.

8 ತಾಲ್ಲೂಕುಗಳಲ್ಲಿ ಉಪ ನೋಂದಣಿ ಕಚೇರಿಗೆ ಆದೇಶ

ಬೆಂಗಳೂರು: ಹೊಸದಾಗಿ ರಚಿಸಲಾಗಿರುವ 50 ತಾಲ್ಲೂಕುಗಳ ಪೈಕಿ ಐದು ಜಿಲ್ಲೆಗಳ ಎಂಟು ತಾಲ್ಲೂಕುಗಳಲ್ಲಿ ಉಪ ನೋಂದಣಿ ಕಚೇರಿ ಆರಂಭಿಸಲು ಒಟ್ಟು 32 ಹುದ್ದೆಗಳನ್ನು ಸೃಜಿಸಿ ಕಂದಾಯ ಇಲಾಖೆ ಶನಿವಾರ ಆದೇಶ ಹೊರಡಿಸಿದೆ.

ಬೆಳಗಾವಿ ಜಿಲ್ಲೆಯ ಕಾಗವಾಡ, ಕೊಪ್ಪಳ ಜಿಲ್ಲೆಯ ಕುಕನೂರು ಮತ್ತು ಕನಕಗಿರಿ, ರಾಯಚೂರು ಜಿಲ್ಲೆಯ ಸಿರಿವಾರ, ಉಡುಪಿ ಜಿಲ್ಲೆಯ ಕಾಪು, ವಿಜಯಪುರ ಜಿಲ್ಲೆಯ ಬಬಲೇಶ್ವರ, ತಿಕೋಟಾ ಮತ್ತು ತಾಳಿಕೋಟೆ ತಾಲ್ಲೂಕುಗಳಲ್ಲಿ ನೂತನವಾಗಿ ಉಪ ನೋಂದಣಿ ಕಚೇರಿ ಆರಂಭಿಸಲು ಇಲಾಖೆ ಒಪ್ಪಿಗೆ ನೀಡಲಾಗಿದೆ.

ಪ್ರತಿ ಕಚೇರಿಗೆ ತಲಾ ಒಬ್ಬ ಉಪ ನೋಂದಣಿ ಅಧಿಕಾರಿ, ಒಬ್ಬ ಪ್ರಥಮ ದರ್ಜೆ ಸಹಾಯಕ, ಒಬ್ಬ ಡೇಟಾ ಎಂಟ್ರಿ ಆಪರೇಟರ್ ಮತ್ತು ಹೊರಗುತ್ತಿಗೆ ಆಧಾರದಲ್ಲಿ ಒಬ್ಬ ‘ಡಿ’ ದರ್ಜೆ ನೌಕರ ಹುದ್ದೆಗೆ ಮಂಜೂರಾತಿ ನೀಡಲಾಗಿದೆ.

ಹೊಸದಾಗಿ ರಚಿಸಲಾಗಿರುವ 50 ತಾಲ್ಲೂಕುಗಳ ಪೈಕಿ 34 ತಾಲ್ಲೂಕುಗಳಲ್ಲಿ ಉಪ ನೋಂದಣಿ ಕಚೇರಿಗಳನ್ನು ಆರಂಭಿಸಲು ನಿರ್ಧರಿಸಲಾಗಿದೆ. ಮೊದಲ ಹಂತದಲ್ಲಿ ಎಂಟು ತಾಲ್ಲೂಕುಗಳಲ್ಲಿ ಉಪ ನೋಂದಣಿ ಕಚೇರಿ ಆರಂಭಿಸಲಾಗುತ್ತಿದೆ.

‘ಪ್ರಶ್ನಿಸಲು ಹಕ್ಕು ಇಲ್ಲವಾದರೆ ನಾಗರಿಕತ್ವವೂ ಬೇಡ’

ಕೊಪ್ಪಳ: ‘ಭಾರತದಲ್ಲಿ ಮತ ಹಾಕುವ ಹಕ್ಕು ಇಲ್ಲ ಎಂಬ ಕಾರಣಕ್ಕೆ ಇಲ್ಲಿನ ಸಮಸ್ಯೆಗಳನ್ನು ಪ್ರಶ್ನಿಸಬಾರದು ಎಂಬುದು ಸರಿಯಲ್ಲ. ನಾನು ಚುನಾವಣೆಗೆ ಸ್ಪರ್ಧಿಸುವುದಿಲ್ಲ. ಹೀಗಾಗಿ ಇಲ್ಲಿನ ನಾಗರಿಕತ್ವ ಬೇಕಿಲ್ಲ’ ಎಂದು ನಟ ಚೇತನ್ ತಿಳಿಸಿದರು.

‘ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಜಾತಿ, ಹಣದ ಪ್ರಭಾವವೇ ಮುಖ್ಯ ವಾಗಿದೆ. ರಾಜಕಾರಣಿಗಳು ರಾಜಕಾರಣವನ್ನು ಉದ್ಯಮವಾಗಿ ಮಾಡಿಕೊಂಡಿದ್ದಾರೆ’ ಎಂದು ಹೇಳಿದರು.







ಮಾತು–ಮಂಥನದಲ್ಲಿ ಸಮ್ಮೇಳನಾಧ್ಯಕ್ಷ ದೊಡ್ಡರಂಗೇಗೌಡ ಅಭಿಪ್ರಾಯ

ಕ್ರಾಂತಿಯೇ ಸದ್ಯದ ಸಮಸ್ಯೆಗಳಿಗೆ ಪರಿಹಾರ

● ಶಶಿಕಾಂತ ಎಸ್. ಶೆಂಬೆಳ್ಳಿ

ಹಾವೇರಿ (ಕನಕ-ಶರೀಫ-ಸರ್ವಜ್ಞ ಪ್ರಧಾನ ವೇದಿಕೆ): ಗೋಕಾಕ ಚಳವಳಿಯನ್ನೂ ಮೀರಿಸುವಂಥ ಚಳವಳಿ ನಡೆದರೆ ಮಾತ್ರ ಕನ್ನಡ ಉಳಿಯುತ್ತದೆ. ಆದರೆ, ದುರದೃಷ್ಟದಿಂದ ಅಂತಹ ಚಳವಳಿಗಳಿಗೆ ಪೋಷಕರು ದೊರೆಯುತ್ತಿಲ್ಲ ಎಂದು ಸಮ್ಮೇಳನಾಧ್ಯಕ್ಷ, ಕವಿ ದೊಡ್ಡರಂಗೇಗೌಡ ವಿಷಾದಿಸಿದರು.

86ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಎರಡನೆಯ ದಿನವಾದ ಶನಿವಾರ 'ಅಧ್ಯಕ್ಷರೊಡನೆ ಸಂವಾದ- ಮಾತು ಮಂಥನ' ಕಾರ್ಯಕ್ರಮದಲ್ಲಿ ಮಾಲತೇಶ ಅಂಗೂರ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ವೈಯಕ್ತಿಕ ವಿಷಯಕ್ಕೆ ಹೊರತಾಗಿ ಪ್ರಶ್ನೆಗಳನ್ನು ಕೇಳಿ ಎಂದು ನಿರೂಪಕರು ಮೊದಲೇ ಸೂಚಿಸಿದ್ದರು. ಸಂವಾದದಲ್ಲಿ ಪಾಲ್ಗೊಂಡವರು ಎರಡು ಪ್ರಶ್ನೆಗಳನ್ನು ಚುಟುಕಾಗಿ, ನೇರವಾಗಿ ಗರಿಷ್ಠ ನಾಲ್ಕು ನಿಮಿಷಗಳಲ್ಲಿ ಕೇಳಬೇಕು. ಅಧ್ಯಕ್ಷರ ಉತ್ತರಗಳಿಗೆ ಯಾವುದೇ ಸಮಯಮಿತಿ ಇಲ್ಲ ಎಂದು ಸ್ಪಷ್ಟಪಡಿಸಿದ್ದರು.

ಅಧ್ಯಕ್ಷರು ಕೆಲವು ಪ್ರಶ್ನೆಗಳಿಗೆ ಚುಟುಕಾಗಿಯೇ ಉತ್ತರಿಸಿದರು.

ಸಿನಿಮಾಗೀತೆ ಹಾಗೂ ಭಾವಗೀತೆಗಳ ನಡುವಿನ ವ್ಯತ್ಯಾಸ ಕೇಳಿದಾಗ ಸಂಯೋಜನೆ ಮತ್ತು ಸೃಷ್ಟಿಗಳ ನಡುವೆ, ಸಂಯೋಜನೆಯಲ್ಲಿ ಸಂಗೀತ ಕೈಕಟ್ಟಿಹಾಕುತ್ತದೆ. ಅಲ್ಲಿ ರಾಗ ಸಂಯೋಜನೆಗೆ ಅವಶ್ಯ ಇರುವ ಪದಗಳನ್ನೇ ಬರೆಯಬೇಕಾಗುತ್ತದೆ. ಕಾವ್ಯಸೃಷ್ಟಿಯಲ್ಲಿ ಸ್ವಾತಂತ್ರ್ಯ ಸಿಗುವುದರಿಂದ ಅದರ ಸೌಂದರ್ಯವೇ ಭಿನ್ನವಾಗಿರುತ್ತದೆ ಎಂದು ಹೇಳಿದರು.

'ಜನಪದ ಶೈಲಿಯಲ್ಲಿ ಗ್ರಾಮೀಣ ಸೊಗಡಿನಿಂದಲೇ ಮುನ್ನೆಲೆಗೆ ಬಂದ್ರಿ, ಅದ್ಯಾಕೆ ಗ್ರಾಮೀಣ ಭಾಷೆಯನ್ನು ಆಯ್ಕೆ ಮಾಡಿಕೊಂಡ್ರಿ' ಎಂಬ ಪ್ರಶ್ನೆಗೆ ತುಮಕೂರು ಗ್ರಾಮೀಣ ಭಾಗದ ಭಾಷೆ ಕಾವ್ಯದಲ್ಲಿ ಹಾಸುಹೊಕ್ಕಿದೆ. ನಾವಾಡುವ ಭಾಷೆ ಯಾವತ್ತಿಗೂ ಹೃದಯಕ್ಕೆ ಹತ್ತಿರವಾಗಿರುತ್ತದೆ. ಬದುಕು ಕಂಡಂತೆ ಕಾವ್ಯ ಕಟ್ಟಿದಷ್ಟೂ ಮನಸಿಗಿಳಿಯುತ್ತದೆ ಎಂದು ಸ್ಪಷ್ಟಪಡಿಸಿದರು.

ನಿಮ್ಮ ದೀರ್ಘಾಯಸ್ಸು ಹಾಗೂ ಆರೋಗ್ಯದ ಗುಟ್ಟೇನು ಎಂಬ ಪ್ರಶ್ನೆಗೆ, 'ಕವಿಯಾದವನು ತಾನು ಅನುಭವಿಸಿದ್ದೆಲ್ಲವನ್ನೂ ಬರೆಯುತ್ತಾನೆ. ಆನಂದ, ಆತಂಕ, ದುಗುಡ, ದುಃಖ ಎಲ್ಲವನ್ನೂ ಎಲ್ಲಿಯಾದರೂ, ಯಾವುದಾದರೂ ಸ್ವರೂಪದಲ್ಲಿ ಹೊರಹಾಕಿ, ಹಗುರ ಆಗ್ತಾನೆ. ಅದೇ ದೀರ್ಘಾಯುಷ್ಯದ ಗುಟ್ಟು' ಎಂದರು.

ಯಶಸ್ವಿ ಪುರುಷನ ಹಿಂದೆ ಅನ್ನಬಾರದು, ಮುಂದೆ ಒಬ್ಬ ಹೆಣ್ಣುಮಗಳಿದ್ದು, ಪ್ರೇರಣಾದಾಯಕವಾಗಿ ಬದುಕನ್ನು ಮುನ್ನಡೆಸುತ್ತಾಳೆ. ನಿಮ್ಮ ಮಡದಿ ರಾಜೇಶ್ವರಿ ಅವರು ಈ ಪಾತ್ರವನ್ನು ಹೇಗೆ ನಿರ್ವಹಿಸಿದರು ಎಂಬ ಪ್ರಶ್ನೆ ಎದುರಾದಾಗ, ಭಾವುಕರಾದ ದೊಡ್ಡರಂಗೇಗೌಡರು, 'ರಾಜೇಶ್ವರಿ ನನ್ನ ಬದುಕಿನ ಅಸೀಮ ಶಕ್ತಿಯಾಗಿದ್ದರು. ನೀವೇ ಹೇಳಿದಂತೆ ಪ್ರೇರಣಾಶಕ್ತಿಯಾಗಿಯೇ ನನ್ನನ್ನು ಮುನ್ನಡೆಸಿದರು' ಎಂದರು.

ಲೇಖಕ ಕನ್ನಡ ನಾಡಿನಾಚೆಗೂ ಬೆಳೆಯಬೇಕು. ಅವನ ಸಾಹಿತ್ಯ ಎಲ್ಲರಿಗೂ ತಲುಪಬೇಕು. ಅನುವಾದ ಸಾಹಿತ್ಯಕ್ಕೂ ಕವಿಭಾಷೆ ಇದೆ. ಬಹುಭಾಷಾ ಕವಿಗೋಷ್ಠಿಯಲ್ಲಿ ನಾನು ಮಂಡಿಸಿದ ಕವಿತೆಯೊಂದು 18 ಭಾಷೆಗಳಿಗೆ ತರ್ಜುಮೆಗೊಂಡಿದೆ. ಎಲ್ಲೆಗಳನ್ನು ಮೀರಿ ಸಾಹಿತ್ಯ ಬೆಳೆಯಬೇಕು. ಆಗಲೇ ಸಾರ್ಥಕ್ಯ ಮೂಡುತ್ತದೆ. ಲಂಡನ್ ಲೈಬ್ರರಿಯಲ್ಲಿ ವಚನ ಸಾಹಿತ್ಯದ ತರ್ಜುಮೆ ನೋಡಿದಾಗ ಅತುಲ್ಯ ಆನಂದ ಉಂಟಾಗಿತ್ತು ಎಂದು ಉಲ್ಲೇಖಿಸಿದರು.

ಆಧುನಿಕ ಕಾಲದ ಬರಹಗಾರ ನಿಂತ ನೀರಾಗಬಾರದು. ಹೊರಗಿನ ಸಂವೇದನೆಗಳಿಗೆ ಸ್ಪಂದಿಸಬೇಕು. ವೈಜ್ಞಾನಿಕ, ತಾಂತ್ರಿಕ ಬದಲಾವಣೆಗಳ ಜೊತೆಗೆ ಬದಲಾಗಬೇಕು. ಅದಕ್ಕೆ ತಕ್ಕಂತೆ ಕೆಲಸ ಮಾಡಬೇಕು. ಅಮೆರಿಕದಲ್ಲಿ 16 ಕನ್ನಡ ಸಂಘಟನೆಗಳು ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಂಡು ಕನ್ನಡ ಬೆಳೆಸುವ ಕೆಲಸ ಮಾಡುತ್ತಿವೆ. ಬಹುತೇಕ ವಚನಗಳು ಇಂಗ್ಲಿಷ್‌ಗೆ ತರ್ಜುಮೆಯಾಗಿವೆ. ವಿದೇಶಿಯರು ಕನ್ನಡದ ಕಡೆಗೆ ಅಭಿಮುಖಗೊಂಡಿದ್ದಾರೆ ಎಂದು ಅವರು ಹೇಳಿದರು.

ಸಾಹಿತ್ಯದಿಂದ ಪ್ರಭುತ್ವದತ್ತ ಪ್ರಶ್ನೆಗಳು ಹೊರಳಿದವು. ಸಂಸದೀಯ ಗುಣಮಟ್ಟ ಈಚೆಗೆ ಕುಸಿಯುತ್ತಿದೆಯೇ ಎಂಬ ಪ್ರಶ್ನೆಗೆ ಒಂದೆರಡು ಕ್ಷಣ ಸುಮ್ಮನಾದ ಅವರು, ಇದಕ್ಕೆ ಉತ್ತರಿಸುವುದು ಚೂರು ಸಂಕೀರ್ಣವಾಗಿದೆ. ಪ್ರಜಾಪ್ರಭುತ್ವ ತನ್ನ ಮೌಲ್ಯ ಕಳೆದುಕೊಳ್ಳುತ್ತಿರುವಾಗ ಸಂಸದೀಯ ವರ್ತನೆ, ಗುಣಮಟ್ಟ ಎಲ್ಲವೂ ತನ್ನ ಖದರನ್ನು ಕಳೆದುಕೊಳ್ಳುತ್ತಿದೆ. ಸದನದಲ್ಲಿ ಪಂಚೆಕಟ್ಟಿ, ತೊಡೆ ತಟ್ಟಿ ಮಾತನಾಡಿದರೆ ಹೇಗೆ? ಇಂಥದ್ದನ್ನೆಲ್ಲ ಕಂಡಾಗ ಬೇಸರವಾಗುತ್ತದೆ ಎಂದು ವಿಷಾದಿಸಿದರು.

ಪ್ರಾಮಾಣಿಕರ ಕೊರತೆ ಇದೆ. ಹೊಂದಾಣಿಕೆ ಮಾಡಿಕೊಂಡರೆ ಎಲ್ಲವೂ ಸಿಗಲಿದೆ ಎಂಬ ಮನೋಭಾವ ಬೆಳೆಯುತ್ತಿದೆ. ಇದು ಇಡೀ ಲೋಕಕ್ಕೆ ಅಂಟಿಕೊಂಡ ರೋಗವಾಗಿದೆ. ಇದೆಲ್ಲವನ್ನೂ ಸರಿಪಡಿಸಬೇಕೆಂದರೆ ಮತ್ತೊಂದು ಕ್ರಾಂತಿ ಆಗಬೇಕಿದೆ ಎಂದರು.

ಮಹಾಬಲಮೂರ್ತಿ ಕೊಡ್ಲಕೆರೆ, ಸಂಕಮ್ಮ ಜಿ. ಸಂಕಣ್ಣನವರ, ಮಾಲತೇಶ ಅಂಗೂರ, ವಿ. ಮನೋಹರ, ಡಾ. ಶೀಲಾದೇವಿ ಎಸ್. ಮಳಿಮಠ, ಬಾಪು ಪದ್ಮನಾಭ, ಶಾರದಾ ಮುಳ್ಳೂರು, ಬುಕ್ಕಾಪಟ್ಣ ವಾಸು, ರುದ್ರಣ್ಣ ಹರ್ತಿಕೋಟೆ, ಅಂಜನ್ ಶೆಟ್ಟಿ ಅವರು ಮಾತು ಮಂಥನದಲ್ಲಿ ಪಾಲ್ಗೊಂಡಿದ್ದರು.

ಹೊಸ ಬರಹಗಾರರಿಗೆ ಕಿವಿಮಾತು

'ಹೊಸ ಬರಹಗಾರರಿಗೆ ಅಧ್ಯಯನ ಅಂತರಂಗದ ಹಸಿವಾಗಬೇಕು. ಕವಿಯ ಕವಿತೆಗೆ ವಿಶಾಲ ವ್ಯಾಪ್ತಿ ಬರಬೇಕಾದರೆ ಓದು ಹೆಚ್ಚಾಗಬೇಕು' ಎಂದು ಯುವ ಲೇಖಕರಿಗೆ ಕಿವಿಮಾತು ಹೇಳಿದರು.

ಹೊಸ ಕವಿಗಳು ಹಳೆಯ ಕವಿತೆಗಳನ್ನು ಓದಬೇಕು. ಕುವೆಂಪು, ಬೇಂದ್ರೆ ಸೇರಿದಂತೆ ನಾಡಿನ ಹಿರಿಯ ಸಾಹಿತಿಗಳ ಸಾಹಿತ್ಯವನ್ನು ಓದಿ ಅರ್ಥೈಸಿಕೊಳ್ಳಬೇಕು. ಇದರಿಂದ ಭಾಷಾ ಕೋಶ ಬೆಳೆಯುತ್ತದೆ. ನೋಡುವ ನೋಟ, ಅರಿವಿನ ಪರಿಧಿ ವಿಸ್ತಾರವಾಗುತ್ತದೆ. ಕವಿತೆಗೂ ವಿಶಾಲ ವ್ಯಾಪ್ತಿ ಸಿಗುತ್ತದೆ ಎಂದು ತಿಳಿಸಿದರು.



ಸಂಕ್ಷಿಪ್ತ ಸುದ್ದಿ

ಸಂಸ್ಕೃತಕ್ಕೆ ಭೈರಪ್ಪ ಜೈ

ಸಮ್ಮೇಳನದಲ್ಲಿ ವಿಶೇಷ ಉಪನ್ಯಾಸ ನೀಡಬೇಕಾಗಿದ್ದ ಸಾಹಿತಿ ಎಸ್.ಎಲ್. ಭೈರಪ್ಪ ಅವರು ಅನಾರೋಗ್ಯದ ಕಾರಣ ಗೈರಾಗಿದ್ದರು. ಪ್ರಧಾನ ಗುರುದತ್ತ ಅವರೇ ಭೈರಪ್ಪ ಅವರು ಕಳಿಸಿದ ಸಂದೇಶವನ್ನು ಓದಿದರು.

'ಭಾರತದ ಬಹುತೇಕ ಎಲ್ಲ ಭಾಷೆಗಳೂ ಭಾರತ ಮಾತೆಯ ತನುಜಾತೆಯರೇ ಆಗಿದ್ದಾರೆ. ಇಲ್ಲಿನ ಎಲ್ಲ ಭಾಷೆಗಳಿಗೂ ಸಂಸ್ಕೃತ ಮಾತೃಸ್ಥಾನದಲ್ಲಿದೆ. ಸಾಹಿತ್ಯದ ಸಂವರ್ಧನೆ, ಸಮೃದ್ಧಿಗೆ ಸಂಸ್ಕೃತ ಕಾರಣವಾಗಿದೆ. ರಾಮಾಯಣ, ಮಹಾಭಾರತ ಸೇರಿ ವಿವಿಧ ಸಾಹಿತ್ಯ ಕೃತಿಗಳು ಸಂಸ್ಕೃತದಿಂದ ಭಾರತೀಯ ಭಾಷೆಗೆ ಅನುವಾದವಾದವು' ಎಂದು ಭೈರಪ್ಪ ಅವರು ಸಂದೇಶದಲ್ಲಿ ತಿಳಿಸಿದ್ದಾರೆ.

'ಭಾರತದ ಭಾಷೆಗಳ ಶಬ್ದ ಸಂಪತ್ತು ಸಂಸ್ಕೃತದಿಂದಲೇ ಬಂದಿದೆ. ಕನ್ನಡ ಶಬ್ದ ಕೋಶದ ಶೇ 60 ರಷ್ಟು ಶಬ್ದ ಸಂಪತ್ತು ಸಂಸ್ಕೃತದ್ದಾಗಿದೆ. ಈಗ ಎರಡನೇ ಹಂತದಲ್ಲಿ ಸಂಸ್ಕೃತದ ಸಂವರ್ಧನೆಗೆ ಭಾರತೀಯ ಭಾಷೆಗಳು ಕಾರಣವಾಗಿರುವುದು ವಿಶೇಷ ವಿದ್ಯಮಾನ. ನನ್ನ ಏಳು ಕಾದಂಬರಿಗಳು ಸಂಸ್ಕೃತಕ್ಕೆ ಅನುವಾದಗೊಂಡಿವೆ' ಎಂದು ಹೇಳಿದ್ದಾರೆ.

ಸಮ್ಮೇಳನಕ್ಕೆ ಗಣ್ಯರ ಗೈರು

ನಗರದಲ್ಲಿ ಶನಿವಾರ ನಡೆದ 86ನೇ ನುಡಿಜಾತ್ರೆಗೆ ಹಿರಿಯ ಕ್ರಿಕೆಟ್ ಆಟಗಾರ ವೆಂಕಟೇಶ ಪ್ರಸಾದ್, ಸಾಹಿತಿ ಚಂದ್ರಶೇಖರ ವಸ್ತ್ರದ, ಹಿರಿಯ ವಿದ್ವಾಂಸ ವೀರಣ್ಣ ರಾಜು, ಪ್ರಾಧ್ಯಾಪಕ ಓಂಕಾರ ಕಾಕಡೆ, ಐಎಎಸ್ ಅಧಿಕಾರಿ ನಂದಿನಿ ಗೈರು ಹಾಜರಾಗಿದ್ದರು.

ಇಂಗ್ಲಿಷ್ ಬಳಸದ ನಟ ಸುಚೇಂದ್ರ ಪ್ರಸಾದ್

ಶ್ರೀ ಹಾನಗಲ್ ಕುಮಾರ ಶಿವಯೋಗಿಗಳ ವೇದಿಕೆಯಲ್ಲಿ ನಡೆದ 'ಕಲಾ ಸಂಗಮ' ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಚಲನಚಿತ್ರ ನಟ ಸುಚೇಂದ್ರ ಪ್ರಸಾದ್ ಅವರು, ತಮ್ಮ 25 ನಿಮಿಷದ ಅಧ್ಯಕ್ಷೀಯ ನುಡಿಯಲ್ಲಿ ಒಂದೇ ಒಂದು ಇಂಗ್ಲಿಷ್ ಪದ ಬಳಸದೆ ಗಮನ ಸೆಳೆದರು. ಗೋಷ್ಠಿಯ ಸಂಪನ್ಮೂಲ ವ್ಯಕ್ತಿಯಾಗಿದ್ದ ಗ್ಯಾರಂಟಿ ರಾಮಣ್ಣ ಅವರ ಹೆಸರನ್ನು 'ಖಾತ್ರಿ ರಾಮಣ್ಣ' ಎಂದು ಉಚ್ಚರಿಸಿದರು.

'ಆಂಗ್ಲ ಬಳಕೆಯಿಂದ ಅಪಾರ್ಥ'

'ಸರ್ ನಮ್ಮ ಡಾಟರ್‌ದು ಸೆಕೆಂಡ್ ಮ್ಯಾರೇಜ್. ನೀವು ಫಸ್ಟ್ ನೈಟ್‌ಗೆ ಬನ್ನಿ...'



ಆಂಗ್ಲ ಪದಗಳ ಬಳಕೆಯಿಂದ ಆಗುವ ಅನರ್ಥದ ಬಗ್ಗೆ ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದ ಪುರಿ ಸ್ವಾಮೀಜಿ ಅವರು ನೀಡಿದ ಉದಾಹರಣೆ ಇದು. ಸಾಧಕರಿಗೆ ಸನ್ಮಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

'ಆಂಗ್ಲಭಾಷೆಯ ಅತಿಯಾದ ಬಳಕೆಯಿಂದ ಸಂವಹನ ಅಪಾರ್ಥಕ್ಕೆ ಒಳಗಾಗುತ್ತಿದೆ. ವ್ಯಕ್ತಿಯೊಬ್ಬರು ಮದುವೆ ಆಮಂತ್ರಣ ಪತ್ರಿಕೆ ನೀಡುವಾಗ ಆಂಗ್ಲ ಪದಗಳ ಬಳಕೆ ಅಪಾರ್ಥಕ್ಕೆ ಕಾರಣವಾಯಿತು. 'ನನ್ನ ಮಗಳದ್ದು ಎರಡನೇ ತಾರೀಖು ಮದುವೆ. ಒಂದನೇ ತಾರೀಖಿಗೆ ಬನ್ನಿ' ಎಂದು ಅಚ್ಚ ಕನ್ನಡದಲ್ಲಿ ಹೇಳಿದ್ದರೆ ಅನರ್ಥ ಆಗುತ್ತಿರಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಕನ್ನಡಪರ ಮತ್ತು ಪ್ರಗತಿಪರ ವರದಿಗಳ ಅನುಷ್ಠಾನ ಗೋಷ್ಠಿಯಲ್ಲಿ ಹಾರನಹಳ್ಳಿ ಆಗ್ರಹ

'ಕನ್ನಡಕ್ಕಾಗಿ ಸುಗ್ರೀವಾಜ್ಞೆ ಹೊರಡಿಸಿ'

ಪ್ರಜಾವಾಣಿ ವಾರ್ತೆ

ಪಾಪು-ಚಂಪಾ ವೇದಿಕೆ(ಹಾವೇರಿ): 'ಕನ್ನಡ ಭಾಷೆ ಅಧಿಕೃತವಾಗಿ ಎಲ್ಲ ಹಂತದಲ್ಲೂ ಅನುಷ್ಠಾನಗೊಳಿಸುವ ಕನ್ನಡ ಸಮಗ್ರ ಭಾಷಾ ಅಭಿವೃದ್ಧಿ ವಿಧೇಯಕವನ್ನು ಮುಖ್ಯಮಂತ್ರಿ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿಯೇ ಮಂಡಿಸಬೇಕಿತ್ತು. ಕನ್ನಡದ ಉಳಿವಿಗಾಗಿ ಅದನ್ನು ಸುಗ್ರೀವಾಜ್ಞೆ ಮೂಲಕವಾದರೂ ತಕ್ಷಣ ಜಾರಿಗೆ ತರಲಿ' ಎಂದು ವಕೀಲ ಅಶೋಕ ಹಾರನಹಳ್ಳಿ ಆಗ್ರಹಿಸಿದರು.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ 'ಕನ್ನಡಪರ ಮತ್ತು ಪ್ರಗತಿಪರ ವರದಿಗಳ ಅನುಷ್ಠಾನ'ದ ಕುರಿತು ನಡೆದ ಗೋಷ್ಠಿಯ 'ಕನ್ನಡ ಸಮಗ್ರ ಭಾಷಾ ಅಭಿವೃದ್ಧಿ ವಿಧೇಯಕ ಮತ್ತು ಕಾನೂನು' ಕುರಿತು ವಿಷಯ ಮಂಡಿಸಿ ಮಾತನಾಡಿದರು.

'ಮುಖ್ಯಮಂತ್ರಿಯವರು ಸಾರ್ವಜನಿಕ ಸಭೆಗಳಲ್ಲಿ, ಮಾಧ್ಯಮಗಳಲ್ಲಿ ಕಾನೂನು ಜಾರಿಗೆ ತರುತ್ತೇನೆ ಎಂದು ಹೇಳಿಕೆ ನೀಡುವುದು ಸರಿಯಲ್ಲ. ಅವಕಾಶ ದೊರೆತಾಗ ಮಾಡಿಬಿಡಬೇಕಿತ್ತು. ಒಂದೆರಡು ತಿಂಗಳಲ್ಲಿ ಅವರ ಅಧಿಕಾರ ಸಹ ಮುಕ್ತಾಯವಾಗಲಿದೆ' ಎಂದು ಅವರು ಹೇಳಿದರು.

'ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮಾತೃಭಾಷೆಗೆ ಪ್ರಾಮುಖ್ಯ ನೀಡಲಾಗಿದೆ. ಆದರೆ, ನ್ಯಾಯಾಲಯವು ಪಾಲಕರಿಗೆ ಭಾಷಾ ಸ್ವಾತಂತ್ರ್ಯ ನೀಡಿದ್ದು, ಅತಿರೇಕದ ನಿರ್ಣಯ. ಇದು ಕನ್ನಡ ಭಾಷೆಯ ಬೆಳವಣಿಗೆಗೆ ದೊಡ್ಡ ಹಿನ್ನಡೆಯಾಗಿದೆ' ಎಂದು ಅವರು ಅಭಿಪ್ರಾಯಪಟ್ಟರು.

'ಹಾವನೂರು ವರದಿಗೆ ಐವತ್ತು ವರ್ಷ' ವಿಷಯದ ಕುರಿತು ಮಾತನಾಡಿದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ, 'ಹಿಂದುಳಿದ ವರ್ಗದವರ ಪಾಲಿಗೆ ಹಾವನೂರು ವರದಿ ಬೈಬಲ್ ಇದ್ದಂತೆ. ಅದರ ಪರಿಣಾಮ ಹಿಂದುಳಿದ ವರ್ಗದವರು ಶಿಕ್ಷಣ, ಉದ್ಯೋಗ ಪಡೆದು ಸಮಾಜಮುಖಿಯತ್ತ ಸಾಗುತ್ತಿದ್ದಾರೆ' ಎಂದು ಅವರು ಹೇಳಿದರು.

'ವರದಿ ಸುತ್ತೋಲೆಗಷ್ಟೇ ಸೀಮಿತ...'

'ರಾಜ್ಯದಲ್ಲಿ 300ಕ್ಕೂ ಹೆಚ್ಚು ಆಯೋಗದ ವರದಿಗಳಿವೆ. ಆದರೆ, ಯಾವುದೂ ಸಮರ್ಪಕವಾಗಿ ಅನುಷ್ಠಾನವಾಗುತ್ತಿಲ್ಲ. ಕೇವಲ ಆದೇಶ, ಸುತ್ತೋಲೆಗಷ್ಟೇ ಸೀಮಿತವಾಗಿದೆ' ಎಂದು ಬೆಂಗಳೂರು ಮಹಾನಗರ ಪಾಲಿಕೆ ಉಪ ಆಯುಕ್ತ ಡಾ. ಕೆ. ಮುರುಳೀಧರ ಅಭಿಪ್ರಾಯ ವ್ಯಕ್ತಪಡಿಸಿದರು.

ಗೋಷ್ಠಿಯ ಆಶಯ ನುಡಿಯಾಡಿದ ಅವರು, 'ವರದಿ ಸಿದ್ಧಪಡಿಸುವಾಗ ಕಾನೂನು ತಜ್ಞರು ಹಾಗೂ ಆಯಾ ವಿಷಯಗಳ ತಜ್ಞರನ್ನು ಆಯೋಗದಲ್ಲಿ ಸೇರ್ಪಡೆ ಮಾಡಿಕೊಳ್ಳದಿದ್ದರೆ, ತಾಂತ್ರಿಕ ಕಾರಣದಿಂದ ಅನುಷ್ಠಾನ ಅಸಾಧ್ಯ' ಎಂದರು.

'ರಾಜ್ಯದಲ್ಲಿ ಶೇ 70ರಷ್ಟು ಖಾಸಗಿ ಶಾಲೆಗಳಿವೆ. ಸರ್ಕಾರಿ ಶಾಲೆಗಳು ಮುಚ್ಚುತ್ತ ಬಂದಿವೆ. ಶಿಕ್ಷಣದ ಖಾಸಗೀಕರಣ ತಡೆಯಲು ಪ್ರತ್ಯೇಕ ಕಾನೂನು ಜಾರಿಗೆ ತರ ಬೇಕು. ಯಾವುದೇ ನೀತಿ ಜಾರಿಗೆ ತರುವಾಗ ಕನ್ನಡದ ಪದರು ದಾಟಿಯೇ ಮುಂದಿನ ಪ್ರಕ್ರಿಯೆ ನಡೆಯುವಂತಾಗಬೇಕು' ಎಂದು ಸಲಹೆ ನೀಡಿದರು.

'ಹಿಂದುತ್ವ, ಭಾರತೀಯತೆ ಅಪಾಯದ ಸ್ಥಿತಿಯಲ್ಲಿ'

● ವರುಣ ಹೆಗಡೆ

ಕನಕ-ಶರೀಫ-ಸರ್ವಜ್ಞ ಪ್ರಧಾನ ವೇದಿಕೆ (ಹಾವೇರಿ): 'ಹಿಂದುತ್ವ ಮತ್ತು ಭಾರತೀಯತೆ ಅಪಾಯದ ಸ್ಥಿತಿಯಲ್ಲಿದೆ. ಇದನ್ನು ನಾವೆಲ್ಲ ಅರಿತು, ಗುರುತಿಸಬೇಕು' ಎಂದು ಸಾಹಿತಿ ಪ್ರಧಾನ ಗುರುದತ್ತ ಹೇಳಿದರು.

86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ, 'ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ' ಎಂಬ ಶೀರ್ಷಿಕೆ ಅಡಿ 'ಸರಸ್ವತಿ ಸಮ್ಮಾನ್' ಪುರಸ್ಕೃತ ಗ್ರಂಥಗಳ ವಿಶೇಷ ಉಪನ್ಯಾಸದಲ್ಲಿ ಭಾಗವಹಿಸಿ, ಮಾತನಾಡಿದರು.

'ನಾಡಗೀತೆಯಲ್ಲಿರುವ ಮುಖ್ಯ ತತ್ವಗಳನ್ನ ಅರಿತು ಸಾಗಬೇಕು. 2017ರಲ್ಲಿ ನಾಡಗೀತೆಯನ್ನು ಪರ್ಯಾಯ ರಾಷ್ಟ್ರಗೀತೆ ಎಂದು ಬಿಂಬಿಸಿ, ಇದರ ಹಾಡುವಿಕೆ ವಿರೋಧಿಸಿ ಕೆಲವರು ಸುಪ್ರೀಂ ಕೋರ್ಟ್‌ಗೆ ಹೋದರು. ಆದರೆ, ನ್ಯಾಯಾಧೀಶರು ಈ ಮೊಕದ್ದಮೆಯನ್ನು ನಿರಾಕರಿಸಿದರು. ಇತ್ತೀಚೆಗೆ ಹಿಜಾಬ್ ವಿಚಾರವಾಗಿ ವಿದ್ಯಾರ್ಥಿಗಳನ್ನು ಮುಂದಿಟ್ಟುಕೊಂಡು, ಕೆಲವರು ಕೋರ್ಟ್‌ಗೆ ಹೋದರು. ಹಿಂದುತ್ವ ಹಾಗೂ ಭಾರತೀಯತೆಯನ್ನು ನಾವು ಕಾಪಾಡಬೇಕು' ಎಂದು ಹೇಳಿದರು.

'ಕುವೆಂಪು ಅವರು ರಚಿಸಿದ ನಾಡಗೀತೆಯ ವಿಶೇಷತೆಯನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು. ಗೀತೆಯಲ್ಲಿ ಶಂಕರ, ರಾಮಾನುಜರನ್ನು ಪ್ರಸ್ತಾಪಿಸಿ, ಮಧ್ವರ ಹೆಸರು ಬಿಡಲಾಗಿದೆ ಎಂದು ವಿವಾದ ಹುಟ್ಟು ಹಾಕಲಾಯಿತು. ಅದೇ ರಿತಿ, ಗಂಗಾ–ಕಾವೇರಿಯನ್ನು ಉಲ್ಲೇಖಿಸಿರುವ ಅವರು, ಉಳಿದ ನದಿಗಳನ್ನು ಕಡೆಗಣಿಸಿದ್ದಾರೆ ಎಂದು ಆಕ್ಷೇಪಿಸಲಾಯಿತು. ನಾಡಗೀತೆ ಎನ್ನುವುದು ಪುರಾಣ ಚೂಡಾಮಣಿ ಅಥವಾ ರಾಮ ಸೂತ್ರವಲ್ಲ' ಎಂದು ಹೇಳಿದರು.



ಪ್ರಧಾನ ಗುರುದತ್ತ

ಭೈರಪ್ಪ ವಿಶ್ವ ಸಾಹಿತಿ: 'ಕುವೆಂಪು ಅವರ ಕೃತಿಗಳು ಹಿಂದಿ, ಇಂಗ್ಲಿಷ್ ಸೇರಿ ವಿವಿಧ ಭಾಷೆಗಳಿಗೆ ಅನುವಾದ ಆಗಿವೆ. ಇದರಿಂದ ಅವರ ವಿಶ್ವ ಮಾನವ ಸಂದೇಶ ಜಗತ್ತಿನ ಎಲ್ಲೆಡೆ ಸಾರಿದಂತಾಗಿದೆ. ಭೈರಪ್ಪ ಅವರ 'ಪರ್ವ' ಸೇರಿ ವಿವಿಧ ಕೃತಿಗಳು ಜಗತ್ತಿನ ವಿವಿಧ ಭಾಷೆಗಳಿಗೆ ಅನುವಾದವಾಗಿವೆ. ವಿಶ್ವ ಸಾಹಿತಿ ಆಗಿರುವ ಅವರು, ಭಾರತೀಯ ಸಾಹಿತ್ಯ ವಲಯದಲ್ಲಿ ಸಂಚಲನ ಮೂಡಿಸಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಜಯ ಭಾರತ ಜನನಿಯ ತನುಜಾತೆ... ಗೀತೆಯಿಂದ ಕುವೆಂಪು ಅವರು ಕನ್ನಡಿಗರ ಅನನ್ಯ ಪ್ರೇಮ ಗೆದ್ದಿದ್ದಾರೆ. ಇಂತಹ ಕವಿ ಪಡೆದ ಕನ್ನಡಿಗರು ಧನ್ಯ. ಭಾರತ ಮಾತೆಗೆ ಕನ್ನಡ ಮಾತೆ ಅತ್ಯಂತ ಮುದ್ದಿನ ಕುವರಿ. ಕರ್ನಾಟಕ ಸಂಸ್ಕೃತಿ ಭಾರತೀಯ ಸಂಸ್ಕೃತಿಯ ಅಂಗವೇ ಆಗಿದೆ. ಈ ಭಾಷೆಗೆ ಎಂಟು ಜ್ಞಾನಪೀಠ, ಎರಡು ಸರಸ್ವತಿ ಸಮ್ಮಾನ್ ಸಂದಿರುವ ಭಾಷೆಯ ಬಗ್ಗೆ ನಾವು ಹೆಮ್ಮೆ ಪಡಬೇಕು' ಎಂದು ಹೇಳಿದರು.

ಪ್ರಮುಖರ ಗೈರು: ಸರಸ್ವತಿ ಸಮ್ಮಾನ್ ಪುರಸ್ಕೃತ ಎಂ.ವೀರಪ್ಪ ಮೊಯಿಲಿ, ಬರಹಗಾರ ಪ್ರೇಮಶೇಖರ ಅವರು ಗೈರಾಗಿದ್ದರು.

ಪುಸ್ತಕ ಮಾರಾಟಕ್ಕೆ ನೆಟ್‌ವರ್ಕ್ ಅಡ್ಡಿ

● ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ನಗರದಲ್ಲಿ ನಡೆಯುತ್ತಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ 300 ಪುಸ್ತಕ ಮಳಿಗೆಗಳಲ್ಲಿ ಸಾಹಿತ್ಯಾಸಕ್ತರು ಕಿಕ್ಕಿರಿದು ತುಂಬಿದ್ದಾರೆ. ಆದರೆ, ಮೊಬೈಲ್ ನೆಟ್‌ವರ್ಕ್ ಸಮಸ್ಯೆಯಿಂದ ಆನ್‌ಲೈನ್ ಪಾವತಿ ಸ್ಥಗಿತಗೊಂಡು ಪುಸ್ತಕ ಮಾರಾಟಗಾರರು ನಷ್ಟ ಅನುಭವಿಸುವಂತಾಗಿದೆ.

ಕೋವಿಡ್ ಕಾರಣದಿಂದ 2021 ಮತ್ತು 2022ರಲ್ಲಿ ಎರಡು ವರ್ಷ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿರಲಿಲ್ಲ. ಹಾವೇರಿಯ ಸಮ್ಮೇಳನಕ್ಕೆ ಪುಸ್ತಕ ಮಾರಾಟಗಾರರು ಅತ್ಯುತ್ಸಾಹದಿಂದ ಲಕ್ಷಾಂತರ ರೂಪಾಯಿ ಮೌಲ್ಯದ ಪುಸ್ತಕಗಳನ್ನು ತೆಗೆದುಕೊಂಡು ಬಂದಿದ್ದಾರೆ. ಪುಸ್ತಕಪ್ರಿಯರು ಕೂಡ ಪುಸ್ತಕ ಖರೀದಿಗೆ ಹೆಚ್ಚಿನ ಒಲವು ತೋರುತ್ತಿದ್ದಾರೆ.

ಪುಸ್ತಕ ಮಾರಾಟಗಾರರ ನಿರೀಕ್ಷೆ ಮತ್ತು ಸಾಹಿತ್ಯಪ್ರಿಯರ ಉತ್ಸಾಹಕ್ಕೆ ಇಂಟರ್‌ನೆಟ್ ಸಮಸ್ಯೆ ತಣ್ಣೀರು ಎರಚಿದೆ. ಹಾವೇರಿ ನಗರದಿಂದ 5 ಕಿ.ಮೀ.ಹೊರವಲಯದಲ್ಲಿ ಸಮ್ಮೇಳನ ಆಯೋಜಿಸಲಾಗಿದೆ. ಲಕ್ಷಾಂತರ ಜನರು ಒಂದೆಡೆ ಸೇರಿರುವ ಕಾರಣ ನೆಟ್‌ವರ್ಕ್ ಜಾಮ್ ಆಗಿ ಕರೆಗಳು ಬರುತ್ತಿಲ್ಲ, ಮೆಸೇಜ್‌ಗಳು ಕೂಡ ಸಕಾಲದಲ್ಲಿ ತಲುಪುತ್ತಿಲ್ಲ.

ಕ್ಯಾಶ್ ಇಲ್ಲ!: 'ಸಮ್ಮೇಳನದ ಮೊದಲ ದಿನ ಬೆಳಿಗ್ಗೆ 10ರಿಂದ ರಾತ್ರಿ 10ರವರೆಗೆ ನೆಟ್‌ವರ್ಕ್ ಕಣ್ಣಾಮುಚ್ಚಾಲೆ ಆಡಿದ ಪರಿಣಾಮ ಆನ್‌ಲೈನ್ ಪಾವತಿ ಸಾಧ್ಯವಾಗಲೇ ಇಲ್ಲ. ನೂರಾರು ಓದುಗರು ನೆಚ್ಚಿನ ಪುಸ್ತಕಗಳನ್ನು ಆಯ್ಕೆ ಮಾಡಿ, ಬಿಲ್ ಮಾಡುವ ಸಂದರ್ಭ ನಗದು ಹಣವಿಲ್ಲದೆ, ಇತ್ತ ಆನ್‌ಲೈನ್ ಪಾವತಿಯೂ ಸಾಧ್ಯವಾಗದೆ ವಾಪಸ್ ಹೋದರು' ಎಂದು ನವಕರ್ನಾಟಕ ಪ್ರಕಾಶನದ ಸೇಲ್ಸ್ ಎಕ್ಸಿಕ್ಯೂಟಿವ್ ಅಶೋಕ್ ಅಳಲು ತೋಡಿಕೊಂಡರು.

'ಪುಸ್ತಕ ಖರೀದಿಸಲು ಬರುವ ಅನೇಕರು ಗೂಗಲ್ ಪೇ, ಫೋನ್ ಪೇ ಇದೆಯಾ ಅಂತ ಕೇಳುತ್ತಾರೆ. ಇಲ್ಲ ಅಂದರೆ ಪುಸ್ತಕಗಳನ್ನು ಬಿಟ್ಟು, ಹಿಂತಿರುಗುತ್ತಿದ್ದಾರೆ' ಎಂದು ಪುಸ್ತಕ ಮಾರಾಟಗಾರರು ಬೇಸರ ವ್ಯಕ್ತಪಡಿಸಿದರು.



ಸಮ್ಮೇಳನದಲ್ಲಿ ಶನಿವಾರ ಯುವತಿಯರು ಪುಸ್ತಕ ಖರೀದಿಸಿದರು
– ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

ನೆಟ್‌ವರ್ಕ್ ಸಮಸ್ಯೆಯಿಂದಾಗಿ ಯುಪಿಐ ಪಾವತಿ ವ್ಯವಸ್ಥೆ ಸರಾಗವಾಗಿ ನಡೆಯುತ್ತಿಲ್ಲ. ವೈಫೈ ಸೌಲಭ್ಯ ಕಲ್ಪಿಸಿ ನೆಟ್‌ವರ್ಕ್ ಸಮಸ್ಯೆ ನೀಗಿಸಬಹುದಿತ್ತು
ಚಿತ್ರಕಾಂತ್, ಬೆಂಗಳೂರು

ಒಂದೇ ಸೂರಿನಡಿ ವೈವಿಧ್ಯಮಯ ಪುಸ್ತಕಗಳನ್ನು ನೋಡಿ ಖುಷಿಯಾಯಿತು. ಖರೀದಿಸೋಣ ಅಂದರೆ ಆನ್‌ಲೈನ್ ಪೇಮೆಂಟ್‌ಗೆ ಅವಕಾಶವೇ ಇಲ್ಲ
ಅರುಣ್ ಸವಣೂರು, ದಾವಣಗೆರೆ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಪುನೀತ್ ಪುಸ್ತಕಕ್ಕೆ ಭಾರಿ ಬೇಡಿಕೆ

ಹಾವೇರಿ ಸಮ್ಮೇಳನಕ್ಕೆ ₹9 ಲಕ್ಷ ಮೌಲ್ಯದ ಪುಸ್ತಕಗಳೊಂದಿಗೆ ಬಂದಿದ್ದೇನೆ. ಮೊದಲ ದಿನವೇ ಪುಸ್ತಕಗಳು ಭರ್ಜರಿಯಾಗಿ ಮಾರಾಟವಾದವು. ನಾನು ಭಾಗವಹಿಸಿದ 13 ಸಮ್ಮೇಳನಗಳಲ್ಲಿ ಮೊದಲ ದಿನವೇ ಇಂಥ ಅಭೂತಪೂರ್ವ ಪ್ರತಿಕ್ರಿಯೆ ಸಿಕ್ಕಿರಲಿಲ್ಲ. ನಮ್ಮ ಪ್ರಕಾಶನದ ಪುನೀತ್ ರಾಜಕುಮಾರ್ ಕುರಿತ 'ನೀನೇ ರಾಜಕುಮಾರ', 'ಪ್ರೀತಿಯಿಂದ ರಮೇಶ್' ಪುಸ್ತಕಗಳು 5ನೇ ಮುದ್ರಣ ಕಂಡಿದ್ದು, ಈ ಕೃತಿಗಳಿಗೆ ಭಾರಿ ಬೇಡಿಕೆಯಿದೆ' ಎಂದು ಸಾವಣ್ಣ ಪ್ರಕಾಶನದ ಜಮೀಲ್ ಸಾವಣ್ಣ ಸಂತಸ ಹಂಚಿಕೊಂಡರು.

'ಕನ್ನಡ ಕಾನೂನು ಪ್ರಾಧಿಕಾರ ಸ್ಥಾಪಿಸಲಿ'

ಹಾವೇರಿ (ಕನಕ–ಶರೀಫ–ಸರ್ವಜ್ಞ ಪ್ರಧಾನ ವೇದಿಕೆ): 'ನ್ಯಾಯಾಂಗ, ಕಾನೂನು ಕ್ಷೇತ್ರದಲ್ಲಿ ಕನ್ನಡ ಬೆಳೆಸಬೇಕಾದರೆ ರಾಜ್ಯ ಸರ್ಕಾರ ಕನ್ನಡ ಕಾನೂನು ಪ್ರಾಧಿಕಾರ ಸ್ಥಾಪಿಸಬೇಕು' ಎಂದು ಹುಬ್ಬಳ್ಳಿಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಡಾ.ಸಿ. ಬಸವರಾಜ ಸಲಹೆ ನೀಡಿದರು.

ಸಮ್ಮೇಳನದಲ್ಲಿ 'ಕನ್ನಡದಲ್ಲಿ ಕಾನೂನು ಸಾಹಿತ್ಯ' ಕುರಿತು ಮಾತನಾಡಿದ ಅವರು, ಕನ್ನಡ ಕಾನೂನು ಪ್ರಾಧಿಕಾರ ಸ್ಥಾಪಿಸಿ ಅದಕ್ಕೆ ಹೆಚ್ಚು ಅಧಿಕಾರ, ಅನುದಾನ ಕೊಡಬೇಕು. ಕನ್ನಡದಲ್ಲಿ ಉತ್ಕೃಷ್ಟವಾದ ಕಾನೂನು ಪುಸ್ತಕಗಳನ್ನು ಹೊರತರಬೇಕು. ಬೇರೆ ಬೇರೆ ಕ್ಷೇತ್ರಗಳಲ್ಲಿ ಕನ್ನಡ ಬೆಳೆದಂತೆ, ನ್ಯಾಯಾಂಗ, ಕಾನೂನು ಕ್ಷೇತ್ರದಲ್ಲಿ ಕನ್ನಡ ಬೆಳೆಯದೇ ಇರುವುದು ಶೋಚನೀಯ' ಎಂದು ಹೇಳಿದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ್, ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಸಿದ್ದಪ್ಪ ಕೆಂಪಗೌಡರ, ನಿವೃತ್ತ ಜಿಲ್ಲಾ ನ್ಯಾಯಾಧೀಶ ಬಿ. ಶಿವಲಿಂಗೇಗೌಡ ಕೂಡ ಈ ಅಭಿಪ್ರಾಯಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಗಣರಾಜ್ಯೋತ್ಸವ ಪರೇಡ್‌ಗೆ ಅವಕಾಶ ನಿರಾಕರಣೆ

ಈ ಬಾರಿ ರಾಜ್ಯದ ಸ್ತಬ್ಧಚಿತ್ರ ಇಲ್ಲ

ಪ್ರಜಾವಾಣಿ ವಾರ್ತೆ


ಬೆಂಗಳೂರು: ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ (ಜ. 26) ಪರೇಡ್‌ನಲ್ಲಿ ಈ ಬಾರಿ ರಾಜ್ಯದ ಸ್ತಬ್ಧಚಿತ್ರಕ್ಕೆ ಅವಕಾಶ ನಿರಾಕರಿಸಲಾಗಿದೆ.

ದೇಶದ ಇತರ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೂ ಅವಕಾಶ ಕಲ್ಪಿಸಬೇಕೆಂಬ ಉದ್ದೇಶದಿಂದ ಈ ಬಾರಿ ಕರ್ನಾಟಕದ ಸ್ತಬ್ಧಚಿತ್ರವನ್ನು ಪರಿಗಣಿಸಿಲ್ಲ ಎಂದು ಹೇಳಲಾಗಿದೆ.

ರಕ್ಷಣಾ ಸಚಿವಾಲಯ ಸೆ.1ರಂದು ದೇಶದ ಎಲ್ಲ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸ್ತಬ್ಧಚಿತ್ರದ ವಿಷಯಗಳ ಕುರಿತು ಟಿಪ್ಪಣಿ ಕಳುಹಿಸುವಂತೆ ಕೋರಿತ್ತು. ನ. 24ರಂದು ನಡೆದ ಮೊದಲ ಆಯ್ಕೆ ಸಮಿತಿ ಸಭೆಯಲ್ಲಿ ಕರ್ನಾಟಕವೂ ಸೇರಿದಂತೆ ಕೇಂದ್ರಾಡಳಿತ ಪ್ರದೇಶ ಸೇರಿದಂತೆ 23 ರಾಜ್ಯಗಳು ಭಾಗವಹಿಸಿದ್ದವು. ಡಿ. 1ರಂದು ನಡೆದ ಎರಡನೇ ಸಭೆಯಲ್ಲಿ ಕರ್ನಾಟಕದ 'ನಾರಿಶಕ್ತಿ' ವಿಷಯ ಅಂತಿಮಗೊಂಡಿತ್ತು. ಪ್ರದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಸೂಲಗಿತ್ತಿ ನರಸಮ್ಮ, ಸಾಲುಮರದ ತಿಮ್ಮಕ್ಕ ಮತ್ತು ತುಳಸಿ ಗೌಡ ಹಾಲಕ್ಕಿ ಅವರ ಸಾಧನೆಗಳನ್ನು ಬಿಂಬಿಸುವ ಸ್ತಬ್ಧಚಿತ್ರಕ್ಕೆ ಆಯ್ಕೆ ಸಮಿತಿ ಸಮ್ಮತಿ ಸೂಚಿಸಿತ್ತು.

ಎರಡನೇ ಸಭೆಯಲ್ಲಿ ಒಟ್ಟು 25 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಭಾಗವಹಿಸಿದ್ದವು. ಮೂರನೇ ಸುತ್ತಿನ ಆಯ್ಕೆ ಸಭೆಯಲ್ಲಿ ಕರ್ನಾಟಕದ ಮಾದರಿಗೆ ಒಪ್ಪಿಗೆ ಸೂಚಿಸಿತ್ತು. ಅಲ್ಲದೆ, ಕರ್ನಾಟಕವೂ ಸೇರಿ 20 ರಾಜ್ಯಗಳ ಸ್ತಬ್ಧಚಿತ್ರಗಳು ಆಯ್ಕೆಯಾಗಿದ್ದವು. ನಾಲ್ಕನೇ ಸಭೆಯಲ್ಲಿ ಕರ್ನಾಟಕದ ಕೀ-ಮಾಡಲ್ ಮತ್ತು ಸಂಗೀತಕ್ಕೆ ಒಪ್ಪಿಗೆ ಸೂಚಿಸಿ, ಕೆಲವು ಮಾರ್ಪಾಟು ಮಾಡುವಂತೆ ತಿಳಿಸಿತ್ತು. ಆದರೆ, ಐದನೇ ಸುತ್ತಿನ ಸಭೆಗೆ 14 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸಭಾ ಸೂಚನಾ ಪತ್ರ ಕಳುಹಿಸಲಾಗಿತ್ತು. ಈ ಪಟ್ಟಿಯಲ್ಲಿ ಕರ್ನಾಟಕ ಹೆಸರು ಇರಲಿಲ್ಲ.

ಕರ್ನಾಟಕವು 2022ರಲ್ಲಿ ಪ್ರಸ್ತುತ ಪಡಿಸಿದ್ದ 'ಸಾಂಪ್ರದಾಯಿಕ ಕಸೂತಿಯ ತೊಟ್ಟಿಲು' ಸ್ತಬ್ಧಚಿತ್ರಕ್ಕೆ ಎರಡನೇ ಅತ್ಯುತ್ತಮ ಪ್ರಶಸ್ತಿ ಬಂದಿತ್ತು. ಉತ್ತರ ಪ್ರದೇಶಕ್ಕೆ ಪ್ರಥಮ ಮತ್ತು ಮೇಘಾಲಯಕ್ಕೆ ಮೂರನೇ ಪ್ರಶಸ್ತಿ ಬಂದಿತ್ತು. ಕಳೆದ ವರ್ಷ ಪ್ರಶಸ್ತಿ ಪಡೆದಿದ್ದ ಮೂರು ರಾಜ್ಯಗಳು ಈ ಬಾರಿ ಪರೇಡ್‌ಗೆ ಆಯ್ಕೆಯಾಗಿಲ್ಲ.



ಕರ್ನಾಟಕದ 'ನಾರಿಶಕ್ತಿ' ಸ್ತಬ್ಧಚಿತ್ರದ ಮಾದರಿ

ಹೋದ ಬಾರಿ ನಮ್ಮ ಸ್ತಬ್ಧಚಿತ್ರಕ್ಕೆ ಪ್ರಶಸ್ತಿ ಬಂದಿತ್ತು. ಈ ಬಾರಿಯೂ ಅವಕಾಶ ಕೊಡಿಸುವಂತೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತುಕತೆ ನಡೆಸಿದ್ದಾರೆ. ಸಿಗುವ ನಿರೀಕ್ಷೆ ಇದೆ
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

'ಅನುದಾನ: ಕನ್ನಡಕ್ಕೆ ತಾರತಮ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತು 15 ವರ್ಷಗಳಾದರೂ ಸಿಕ್ಕಿದ ಅನುದಾನ ₹ 3 ಕೋಟಿ. ಸಂಸ್ಕೃತಕ್ಕೆ ₹ 643 ಕೋಟಿ ಹಾಗೂ ತಮಿಳಿಗೆ ₹ 43 ಕೋಟಿ ಕೊಡಲಾಗಿದೆ. ಕನ್ನಡದ ಕಣ್ಣಿಗೆ ಸುಣ್ಣ, ಬೇರೆ ಭಾಷೆಗಳಿಗೆ ಬೆಣ್ಣೆಯೇ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಈ ಕುರಿತು ಶನಿವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಕೇಂದ್ರದಿಂದ ಕನ್ನಡಕ್ಕೆ ಆಗುತ್ತಿರುವ ಅನುದಾನದ ಅನ್ಯಾಯದ ಕುರಿತು ಹಲವು ಸಲ ದ್ವನಿ ಎತ್ತಿದ್ದೇನೆ. ಬಿಜೆಪಿ, ಕಾಂಗ್ರೆಸ್ ಆಡಳಿತಕ್ಕೆ ಅದು ಕೇಳಲೇ ಇಲ್ಲ. ಕೇಂದ್ರದಲ್ಲಿ ಬಿಜೆಪಿ ಬಂದ ಮೇಲೆ ಸಂಸ್ಕೃತ, ಹಿಂದಿ ತುಷ್ಟೀಕರಣ ಹೆಚ್ಚಾಗಿದೆ. ಕನ್ನಡಕ್ಕೆ ವಂಚನೆಯಾಗಿದೆ' ಎಂದು ದೂರಿದ್ದಾರೆ.

'ಕಸಾಪ ಬದಲಾಗದಿದ್ದರೆ ಪರ್ಯಾಯ ಕಟ್ಟುತ್ತೇವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುದಾನದ ಕಾರಣ ಮುಂದಿಟ್ಟುಕೊಂಡು ಕನ್ನಡ ಸಾಹಿತ್ಯ ಪರಿಷತ್ ರಾಜ್ಯ ಸರ್ಕಾರದ ಆಣತಿಯಂತೆ ಕೆಲಸ ಮಾಡುತ್ತಿದೆ. ಅದು ಸ್ವಾಯತ್ತ ಸಾಹಿತ್ಯ ಸಂಘಟನೆಯಾಗಿ ಬದಲಾಗದಿದ್ದರೆ ಪರ್ಯಾಯ ಸಂಸ್ಥೆ ಕಟ್ಟಲಾಗುವುದು ಎಂದು ಲೇಖಕ ಹಾಗೂ ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಪುರುಷೋತ್ತಮ ಬಿಳಿಮಲೆ ಹೇಳಿದರು.



ಪುರುಷೋತ್ತಮ ಬಿಳಿಮಲೆ

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೆಲವು ವರ್ಷಗಳಿಂದೀಚೆಗೆ ಕರ್ನಾಟಕದ ಸ್ವಾಯತ್ತ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆಗಳು ತಮ್ಮ ಮೂಲಸ್ವರೂಪ ಹಾಗೂ ಧ್ಯೇಯಗಳಿಂದ ದೂರ ಸರಿಯುತ್ತಿವೆ. ಅವುಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ ಮುಂಚೂಣಿಯಲ್ಲಿದೆ. ಸರ್ವಜನರ ಪ್ರಾತಿನಿಧಿಕ ಸಂಸ್ಥೆಗಳಾಗಿದ್ದ ಇವು ಈಗ ಆಡಳಿತಶಾಹಿಯ ಭಾಗದಂತೆ ವರ್ತಿಸುತ್ತಿವೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಕೋಮುವಾದಿಯಾಗಿದ್ದಾರೆ. ಸಂಸ್ಥೆಯ ಸ್ವಾಯತ್ತತೆಗಿಂತಲೂ ಪರಿಷತ್ತಿನ ಅಧ್ಯಕ್ಷರ ಸ್ಥಾನ ಸಚಿವ ಪದವಿಗೆ ಸಮನಾದುದು ಎಂಬುದನ್ನು ಪ್ರಚಾರ ಮಾಡುವುದರಲ್ಲೇ ಕಾಲ ಕಳೆಯುತ್ತಿದ್ದಾರೆ. ಕರ್ನಾಟಕದ ಏಕೀಕರಣವೂ ಸೇರಿದಂತೆ ಕನ್ನಡ, ಕನ್ನಡಿಗರು ಮತ್ತು ಕರ್ನಾಟಕದ ಪರವಾಗಿ ಕೆಲಸ ಮಾಡಿದ ಇತಿಹಾಸವಿರುವ ಸಾಹಿತ್ಯ ಪರಿಷತ್ತನ್ನು ಜೋಶಿ ದುಃಸ್ಥಿತಿಗೆ ತಳ್ಳಿದ್ದಾರೆ' ಎಂದರು.

ದಲಿತರು ಮತ್ತು ಮುಸ್ಲಿಮರನ್ನು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಿಂದ ದೂರವಿಡಲಾಗಿದೆ. ಅದಕ್ಕೆ ತಕ್ಷಣದ ಪ್ರತಿಕ್ರಿಯೆಯಾಗಿ ಜನಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದೆ. ಮುಂದಿನ ದಿನಗಳಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಒಂದು ಬೃಹತ್ ಸಮ್ಮೇಳನ ನಡೆಸಲಾಗುವುದು. ನಂತರ ಪ್ರತಿ ಜಿಲ್ಲೆಯಲ್ಲೂ ಸಮ್ಮೇಳನ ಆಯೋಜಿಸಲಾಗುವುದು. ಸಾಹಿತ್ಯ ಪರಿಷತ್ತು ತನ್ನ ಧೋರಣೆ ಬದಲಿಸದಿದ್ದರೆ ಪರ್ಯಾಯ ಸಂಸ್ಥೆ ಕಟ್ಟುವ ಕುರಿತು ತೀರ್ಮಾನಿಸಲಾಗುವುದು ಎಂದರು.

ಕರ್ನಾಟಕದ ಅನೇಕ ಭಾಷೆಗಳು ಅವಸಾನದ ಅಂಚಿನಲ್ಲಿವೆ. ತುಳು, ಕೊಡವ ಮತ್ತು ಬಂಜಾರ ಭಾಷೆಗಳನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸಬೇಕೆಂಬ ಬೇಡಿಕೆಯೂ ಬಾಕಿ ಇದೆ. ಈ ಯಾವ ವಿಚಾರಗಳ ಬಗ್ಗೆಯೂ ಸಾಹಿತ್ಯ ಪರಿಷತ್ತು ಧ್ವನಿ ಎತ್ತುತ್ತಿಲ್ಲ ಎಂದು ಟೀಕಿಸಿದರು.

ಇಂದು ಜನಸಾಹಿತ್ಯ ಸಮ್ಮೇಳನ

ನಗರದ ಕೆ.ಆರ್. ವೃತ್ತದಲ್ಲಿರುವ ಅಲುಮ್ನಿ ಅಸೋಸಿಯೇಷನ್‌ನ ಆವರಣದ ಮೈದಾನದಲ್ಲಿ ನಿರ್ಮಿಸಿರುವ ಸಂತ ಶಿಶುನಾಳ ಷರೀಫ ಮತ್ತು ಗುರುಗೋವಿಂದ ಭಟ್ಟ ಸಭಾಂಗಣದಲ್ಲಿ ಭಾನುವಾರ ಬೆಳಿಗ್ಗೆ 9ರಿಂದ ಸಂಜೆಯವರೆಗೂ ಜನಸಾಹಿತ್ಯ ಸಮ್ಮೇಳನ ನಡೆಯಲಿದೆ.

ಪರಿಶಿಷ್ಟರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ: ಮುಖ್ಯಮಂತ್ರಿ ಬೊಮ್ಮಾಯಿ

ಮೈಸೂರು: 'ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟರ ಮೀಸಲಾತಿ ಹೆಚ್ಚಿಸಿ ಅದಕ್ಕೆ ಕಾನೂನಿನ ಬಲ ನೀಡಲು ಬದ್ಧವಾಗಿದ್ದೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಶನಿವಾರ ಆರಂಭವಾದ ಬಿಜೆಪಿ ಪರಿಶಿಷ್ಟ ಜಾತಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಪರಿಶಿಷ್ಟ ಸಮುದಾಯವು ಭಾರತೀಯ ಸಂಸ್ಕೃತಿಯ ಅಡಿಪಾಯವಾಗಿದೆ. ಅವರಿಗೆ ಸ್ವಾಭಿಮಾನದ ಜೀವನ ರೂಪಿಸಲು ಸರ್ಕಾರವು ಹಲವು ವಿಷಯಗಳಲ್ಲಿ ರಚನಾತ್ಮಕ ನಿರ್ಣಯ ತೆಗೆದುಕೊಂಡಿದೆ' ಎಂದು ತಿಳಿಸಿದರು.

'ಪರಿಶಿಷ್ಟರಿಗೆ ಶಕ್ತಿ ತುಂಬುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ವಿದ್ಯಾರ್ಥಿವೇತನ ಹೆಚ್ಚಿಸಲಾಗಿದೆ. ರಾಜ್ಯದಾದ್ಯಂತ ಹೊಸದಾಗಿ 100 ಅಂಬೇಡ್ಕರ್ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗುತ್ತಿದ್ದು, ಬೆಂಗಳೂರು, ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಕಲಬುರಗಿ, ಮಂಗಳೂರು, ಮೈಸೂರಿನಲ್ಲಿ 5ಸಾವಿರ ವಿದ್ಯಾರ್ಥಿಗಳಿಗೆ ಮೆಗಾ ಹಾಸ್ಟೆಲ್ ನಿರ್ಮಿಸಲಾಗುವುದು' ಎಂದರು.

ಹೆಜಮಾಡಿ ತಲುಪಿದ ಪಾದಯಾತ್ರೆ

ಮಂಗಳೂರು: ಬಿಲ್ಲವ, ಈಡಿಗ, ನಾಮಧಾರಿ ಸಮುದಾಯಗಳ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರದಾಳು ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿ ಪೀಠದ ಪ್ರಣವಾನಂದ ಸ್ವಾಮೀಜಿ ನೇತೃತ್ವದಲ್ಲಿ ಕೈಗೊಳ್ಳಲಾದ ಪಾದಯಾತ್ರೆಯು ದಕ್ಷಿಣ ಕನ್ನಡ ಜಿಲ್ಲೆಯ ಕುಳಾಯಿಯಿಂದ ಶನಿವಾರ ಹೊರಟು ಉಡುಪಿ ಜಿಲ್ಲೆಯ ಹೆಜಮಾಡಿವರೆಗೆ ಸಾಗಿತು.

ಮೂಲ್ಕಿ ಬಿಲ್ಲವ ಸಂಘದಲ್ಲಿ ಸಮುದಾಯದ ಮುಖಂಡರ ಜೊತೆ ಸ್ವಾಮೀಜಿ ಸಭೆ ನಡೆಸಿದರು.

'ಬ್ರಹ್ಮಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮ ರಚಿಸುವ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭರವಸೆಯನ್ನು ಮಾತ್ರ ನೀಡಿದ್ದಾರೆ. ಈ ಬಗ್ಗೆ ಅಧಿಕೃತ ಅಧಿಸೂಚನೆ ಇನ್ನೂ ಪ್ರಕಟವಾಗಿಲ್ಲ. ಬಿಲ್ಲವರನ್ನು ಮತ್ತೆ ದಾರಿ ತಪ್ಪಿಸುವ ಪ್ರಯತ್ನ ನಡೆದಿದೆ' ಎಂದು ಸ್ವಾಮೀಜಿ ಆರೋಪಿಸಿದರು.

ರಾಷ್ಟ್ರೀಯ ಬಿಲ್ಲವ ಮಹಾಮಂಡಲದ ಅಧ್ಯಕ್ಷ ರಾಜಶೇಖರ ಕೋಟ್ಯಾನ್ ಹಾಗೂ ಕಾಂಗ್ರೆಸ್ ಮುಖಂಡ ವಿನಯ ಕುಮಾರ್ ಸೊರಕೆ ಅವರು ಸ್ವಾಮೀಜಿ ಜೊತೆ ಹೆಜ್ಜೆ ಹಾಕಿದರು. ಭಾನುವಾರ ಕಟಪಾಡಿ, ಉಡುಪಿಗೆ ಪಾದಯಾತ್ರೆ ತೆರಳಲಿದೆ,

2 ತಿಂಗಳಲ್ಲಿ ಕಾಲೇಜು ಕಟ್ಟಡ ಪೂರ್ಣ: ತಪ್ಪಿದಲ್ಲಿ ಪಿಐಎಲ್ ಎಚ್ಚರಿಕೆ

ಸ್ವಚ್ಛತೆಗಿಳಿದ ನ್ಯಾಯಮೂರ್ತಿ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: 'ಸರ್, ನಮ್ಮ ಕಾಲೇಜಿನಲ್ಲಿ ಸೊಳ್ಳೆಗಳ ಕಾಟ ಹೆಚ್ಚಿದೆ. ವಾತಾವರಣ ಅನೈರ್ಮಲ್ಯದಿಂದ ಕೂಡಿದ್ದು ಸ್ವಚ್ಛತೆ ಇಲ್ಲ. ಸಮರ್ಪಕ ಶೌಚಾಲಯವಿಲ್ಲ. ಸಮಸ್ಯೆ ಪರಿಹರಿಸಿ'

– ಹೀಗೆಂದು ಚಿಕ್ಕಬಳ್ಳಾಪುರ ಮಹಿಳಾ ಸರ್ಕಾರಿ ಪದವಿ ಕಾಲೇಜಿನ ವಿದ್ಯಾರ್ಥಿನಿಯರು ಕೆಲವು ದಿನಗಳ ಹಿಂದೆ ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ ಬರೆದಿದ್ದ ಪತ್ರ ಕಾಲೇಜಿನ ವಾತಾವರಣ ಬದಲಿಸುವಂತೆ ಮಾಡಿದೆ.

ವಿದ್ಯಾರ್ಥಿನಿಯರು ಕಾಲೇಜಿನ ಸಮಸ್ಯೆಗಳ ಕುರಿತು ಇತ್ತೀಚೆಗೆ ಪತ್ರ ಚಳವಳಿ ನಡೆಸಿದ್ದರು. ಕಾನೂನು ಸೇವಾ ಪ್ರಾಧಿಕಾರಕ್ಕೂ ಪತ್ರ ಬರೆದಿದ್ದರು. ಪತ್ರ ಆಧರಿಸಿ ಪ್ರಾಧಿಕಾರದ ರಾಜ್ಯ ಘಟಕದ ಅಧ್ಯಕ್ಷರಾದ ಹೈಕೋರ್ಟ್ ನ್ಯಾಯಮೂರ್ತಿ ಬಿ. ವೀರಪ್ಪ ಶನಿವಾರ ಕಾಲೇಜಿಗೆ ಭೇಟಿ ನೀಡಿದರು.

ದನದ ಕೊಟ್ಟಿಗೆಗಿಂತ ಅಧ್ವಾನ: ಕಾಲೇಜು ತಾತ್ಕಾಲಿಕವಾಗಿ ನಡೆಯುತ್ತಿರುವ ಸಿಟಿಜನ್ ಕ್ಲಬ್ ಆವರಣ ಪ್ರವೇಶಿಸುತ್ತಿದ್ದಂತೆ ನ್ಯಾಯಮೂರ್ತಿಗಳು ಕೆಂಡಾಮಂಡಲರಾದರು. 'ದನದ ಕೊಟ್ಟಿಗೆಗಿಂತ ಕಾಲೇಜು ಅಧ್ವಾನವಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು. 'ನಾನೂ ರೈತ ಕುಟುಂಬದಿಂದ ಬಂದವನು. ಇಲ್ಲಿ ಸ್ವಚ್ಛತೆಯನ್ನು ನಾನೇ ಮಾಡುತ್ತೇವೆ. ಅಗತ್ಯ ಸಲಕರಣೆ ತರಿಸಿ' ಎಂದು ಸ್ಥಳದಲ್ಲಿದ್ದ ಜಿಲ್ಲಾಧಿಕಾರಿಗೆ ಸೂಚಿಸಿದರು.

ನಂತರ ಅಲ್ಲಿಂದ ಹೊಸದಾಗಿ ನಿರ್ಮಾಣವಾಗುತ್ತಿರುವ ಕಾಲೇಜು ಕಟ್ಟಡಕ್ಕೆ ಭೇಟಿ ನೀಡಿದರು. ಒಂಬತ್ತು ವರ್ಷಗಳಿಂದ ಕಟ್ಟಡ ಕಾಮಗಾರಿ ನಡೆಯುತ್ತಿದೆ ಎನ್ನುವುದನ್ನು ತಿಳಿದು ಎಂಜಿನಿಯರ್‌ಗಳನ್ನು ತರಾಟೆಗೆ ತೆಗೆದುಕೊಂಡರು. ಎರಡು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸುವುದಾಗಿ ಎಂಜಿನಿಯರ್‌ಗಳು ಈ ವೇಳೆ ಭರವಸೆ ನೀಡಿದರು.

'ಎರಡು ತಿಂಗಳಲ್ಲಿ ಕಾಮಗಾರಿ ಪೂರ್ಣವಾಗದಿದ್ದರೆ ವಿದ್ಯಾರ್ಥಿಗಳ ಪರವಾಗಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಲಾಗುವುದು. ಎರಡು ತಿಂಗಳು ನೋಡೋಣ. ಕೆಲಸ ಆಗದಿದ್ದರೆ ಪಿಐಎಲ್ ದಾಖಲಿಸಿ ಇಲ್ಲಿಯೇ ಸತ್ಯಾಗ್ರಹ ಕುಳಿತುಕೊಳ್ಳೋಣ' ಎಂದು ನ್ಯಾಯಮೂರ್ತಿ ಹೇಳಿದರು.

ನಂತರ ತರಗತಿಗಳು ನಡೆಯುತ್ತಿದ್ದ ಸಿಟಿಜನ್ ಕ್ಲಬ್ ಆವರಣಕ್ಕೆ ಬಂದು ಕುಡುಗೋಲು ಹಿಡಿದು ಸ್ವಚ್ಛತಾ ಕಾರ್ಯಕ್ಕೆ ಮುಂದಾದರು. ವಕೀಲರು, ಜಿಲ್ಲೆಯ ನ್ಯಾಯಾಧೀಶರು ಸಹ ಸ್ವಚ್ಛತೆಯಲ್ಲಿ ತೊಡಗಿದರು. ಅಷ್ಟರಲ್ಲಿ ಎಚ್ಚೆತ್ತ ನಗರಸಭೆ ಅಧಿಕಾರಿಗಳು, ಪೌರಕಾರ್ಮಿಕರು, ಯಂತ್ರವನ್ನು ತಂದು ಇಡೀ ಆವರಣ ಸ್ವಚ್ಛಗೊಳಿಸಿದರು. ಕಾಲೇಜು ಆವರಣ ಪೂರ್ಣವಾಗಿ ಸ್ವಚ್ಛವಾಗುವವರೆಗೂ ನ್ಯಾಯಮೂರ್ತಿಗಳು ಅಲ್ಲಿಂದ ಕದಲಲಿಲ್ಲ.



ಚಿಕ್ಕಬಳ್ಳಾಪುರದ ಮಹಿಳಾ ಪದವಿ ಕಾಲೇಜು ಆವರಣವನ್ನು ಸ್ವಚ್ಛಗೊಳಿಸುತ್ತಿರುವ ಹೈಕೋರ್ಟ್ ನ್ಯಾಯಮೂರ್ತಿ ಬಿ. ವೀರಪ್ಪ ಹಾಗೂ ಜಿಲ್ಲಾ ನ್ಯಾಯಾಧೀಶರು

ಇಲ್ಲೇನೊ ಉತ್ಸವವಂತೆ. ಅಪ್ಪ, ಅಮ್ಮನಿಗೆ ಊಟ ಹಾಕದಿದ್ದರೂ ಉತ್ಸವ ಮಾಡುತ್ತಾರೆ. ಮಕ್ಕಳಿಗೆ ಶಿಕ್ಷಣ ನೀಡುವ ಶಕ್ತಿ ಇಲ್ಲ. ಸರ್ಕಾರ ಇದನ್ನು ಗಮನಿಸಲಿ.

ಬಿ. ವೀರಪ್ಪ, ಹೈಕೋರ್ಟ್ ನ್ಯಾಯಮೂರ್ತಿ

660 ಎಇಗಳ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು: ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ (ಎಇ) 660 ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಂದರ್ಶನ (ವ್ಯಕ್ತಿತ್ವ ಪರೀಕ್ಷೆ) ಮುಗಿಸಿದ 24 ಗಂಟೆಯೊಳಗೆ ಪ್ರಕಟಿಸುವ ಮೂಲಕ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ದಾಖಲೆ ಬರೆದಿದೆ.

ನೇಮಕಾತಿ ಪ್ರಕ್ರಿಯೆಯಲ್ಲಿನ ವಿಳಂಬದ ಕಾರಣಕ್ಕೆ ಅಪಖ್ಯಾತಿಗೆ ಒಳಗಾಗಿದ್ದ ಕೆಪಿಎಸ್‌ಸಿ, ಈ ಸಾಧನೆಯ ಮೂಲಕ ಅಚ್ಚರಿ ಮೂಡಿಸಿದೆ.

ಸಹಾಯಕ ಎಂಜಿನಿಯರ್ ಹುದ್ದೆಗಳಿಗೆ ಆಯ್ಕೆಗೆ ನಡೆದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 1:3 ಅನುಪಾತದಲ್ಲಿ ಆಯ್ಕೆಯಾಗಿದ್ದ ಅಭ್ಯರ್ಥಿಗಳಿಗೆ ನ.7ರಂದು ಸಂದರ್ಶನ ಆರಂಭಗೊಂಡಿತ್ತು. ಈ ಪ್ರಕ್ರಿಯೆ ಶುಕ್ರವಾರ (ಜ.6) ಪೂರ್ಣಗೊಂಡಿತ್ತು. ತಕ್ಷಣವೇ ತಾತ್ಕಾಲಿಕ ಆಯ್ಕೆ ಪಟ್ಟಿ ಸಿದ್ಧಪಡಿಸಿ ಕಾರ್ಯದರ್ಶಿ ವಿಕಾಸ್ ಕಿಶೋರ್ ಸುರಳ್ಕರ್, ಅನುಮೋದನೆಗಾಗಿ ಆಯೋಗಕ್ಕೆ ಮಂಡಿಸಿದ್ದರು. ಪಟ್ಟಿ ಸಲ್ಲಿಕೆಯಾದ ಕೆಲವೇ ಗಂಟೆಗಳಲ್ಲಿ ಆಯೋಗ ಪಟ್ಟಿಗೆ ಒಪ್ಪಿಗೆ ನೀಡಿದ್ದು, ಶನಿವಾರ ರಾತ್ರಿಯೇ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳಿದ್ದರೆ ಏಳು ದಿನಗಳ ಒಳಗೆ ಕೆಪಿಎಸ್‌ಸಿ ಕಾರ್ಯದರ್ಶಿಗೆ ಸಲ್ಲಿಸಬೇಕು.

'ಕೆರೆಮನೆ ಶಿವರಾಮ ಹೆಗಡೆ ಪ್ರಶಸ್ತಿ'ಗೆ ನಟ ಅನಂತನಾಗ್ ಆಯ್ಕೆ

ಹೊನ್ನಾವರ: ಕೆರೆಮನೆ ಶಿವರಾಮ ಹೆಗಡೆ ಹೆಸರಿನಲ್ಲಿ ಕೆರೆಮನೆ ಶ್ರೀಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ವತಿಯಿಂದ ವಾರ್ಷಿಕವಾಗಿ ನೀಡಲಾಗುವ 'ಕೆರೆಮನೆ ಶಿವರಾಮ ಹೆಗಡೆ ರಾಷ್ಟ್ರೀಯ ಪ್ರಶಸ್ತಿ'ಗೆ ಈ ಬಾರಿ ಚಲನಚಿತ್ರ ನಟ ಅನಂತನಾಗ್ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹25 ಸಾವಿರ ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ.

'ಕೆರೆಮನೆ ಗಜಾನನ ಹೆಗಡೆ' ವಾರ್ಷಿಕ ಪ್ರಶಸ್ತಿಗೆ ಯಕ್ಷಗಾನ ಕಲಾವಿದ ಶಿರಳಗಿ ತಿಮ್ಮಪ್ಪ ಹೆಗಡೆ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿ ₹15 ಸಾವಿರ ನಗದು ಹಾಗೂ ಸನ್ಮಾನ ಪತ್ರ ಒಳಗೊಂಡಿದೆ. ಫೆ. 3ರಿಂದ 5 ದಿನಗಳ ಕಾಲ ಗುಣವಂತೆಯಲ್ಲಿ ನಡೆಯುವ ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮಂಡಳಿಯ ನಿರ್ದೇಶಕ ಕೆರೆಮನೆ ಶಿವಾನಂದ ಹೆಗಡೆ ತಿಳಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಶ್ವಾಸನೆ

ಮೇದಾರ ಅಭಿವೃದ್ಧಿ ನಿಗಮ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಬಿದಿರು ಅಭಿವೃದ್ಧಿ ಹಾಗೂ ಬಿದಿರು ಉತ್ಪನ್ನಗಳ ಸಂರಕ್ಷಣೆಗಾಗಿ ಮೇದಾರ ಅಭಿವೃದ್ಧಿ ನಿಗಮ ಸ್ಥಾಪಿಸಲು ಶೀಘ್ರ ತೀರ್ಮಾನ ಕೈಗೊಳ್ಳಲಾಗುವುದು. ಕೇತೇಶ್ವರ ಜಯಂತಿ ಘೋಷಣೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಇಲ್ಲಿನ ಮೇದಾರ ಗುರುಪೀಠದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮೇದಾರ ಬುಡಕಟ್ಟು ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

'ಮೇದಾರ ಸಮುದಾಯದ ಕುಲ ಕಸುಬಿಗೆ ಬೆಂಬಲ ನೀಡುವ ಉದ್ದೇಶದಿಂದ ನಿಗಮ ಸ್ಥಾಪಿಸುವ ಅಗತ್ಯವಿದೆ. ಬಿದಿರು ಬೆಳೆಯಲು ಭೂಮಿ ಮೀಸಲಿಡಲಾಗುವುದು. ಅರಣ್ಯ ಇಲಾಖೆ ಪೂರೈಕೆ ಮಾಡುವ ಬಿದಿರಿಗೆ ಯೋಗ್ಯ ದರ ನಿಗದಿಪಡಿಸುತ್ತೇವೆ' ಎಂದು ಆಶ್ವಾಸನೆ ನೀಡಿದರು. 'ಬಿದಿರು ಉತ್ಪನ್ನಗಳಿಗೆ ಜಿಎಸ್‌ಟಿ ವಿನಾಯಿತಿ ನೀಡುವ ವಿಚಾರವನ್ನು ಚರ್ಚಿಸಿ ಸಮುದಾಯಕ್ಕೆ ಅನುಕೂಲವಾಗುವ ತೀರ್ಮಾನ ಕೈಗೊಳ್ಳುತ್ತೇವೆ. ಬಿದಿರು ಉತ್ಪನ್ನಗಳ ತಯಾರಿಕೆಯಲ್ಲಿ ಹೊಸ ತಂತ್ರಜ್ಞಾನ, ಕೌಶಲ ತರಲು ಪ್ರಯತ್ನಿಸುತ್ತೇವೆ. ಈ ವಸ್ತುಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಇದ್ದು, ಅಮೆಜಾನ್, ಫ್ಲಿಪ್‌ಕಾರ್ಟ್‌ಗೆ ಜೋಡಿಸುವ ಕಾರ್ಯ ಆಗಬೇಕಿದೆ' ಎಂದರು.

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಮೇದಾರ ಗುರುಪೀಠದ ಇಮ್ಮಡಿ ಬಸವ ಕೇತೇಶ್ವರ ಸ್ವಾಮೀಜಿ, ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಶಾಸಕ ಜಗದೀಶ ಶೆಟ್ಟರ್, ಮೇದಾರ ಕೇತೇಶ್ವರ ಟ್ರಸ್ಟ್ ಅಧ್ಯಕ್ಷ ಸಿ.ಪಿ. ಪಾಟೀಲ, ಮೇದಾರ ಗಿರಿ ಜನಾಂಗ ಕಲ್ಯಾಣ ಸೇವಾ ಸಂಘದ ಅಧ್ಯಕ್ಷ ವೈ.ಕೆ. ಹಳೆಪೇಟೆ ಇದ್ದರು.

ಬೇಡಿಕೆ ಈಡೇರಿಸಿಕೊಳ್ಳಲು ಕೆಲ ಸಮುದಾಯ ಬೆದರಿಕೆ ಒಡ್ಡುತ್ತಿವೆ. ಆಡಳಿತ ವ್ಯವಸ್ಥೆಯನ್ನು ಮಠಾಧೀಶರು ಬೇಡಬೇಕೆ ವಿನಾ ದಬ್ಬಾಳಿಕೆ ಮಾಡುವುದಲ್ಲ.

ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠ

ಗವಿಸಿದ್ಧೇಶ್ವರ ರಥೋತ್ಸವ ಇಂದು

ಕೊಪ್ಪಳ: ಇಲ್ಲಿನ ಗವಿಸಿದ್ಧೇಶ್ವರ ಮಠದ ಮಹಾರಥೋತ್ಸವ ಭಾನುವಾರ (ಜನವರಿ 8) ಸಂಜೆ 5.30ಕ್ಕೆ ನಡೆಯಲಿದೆ. ಈಶಾ ಫೌಂಡೇಷನ್‌ನ ಸದ್ಗುರು ಜಗ್ಗಿ ವಾಸುದೇವ್ ಚಾಲನೆ ನೀಡುವರು.

ಕೋವಿಡ್ ಕಾರಣ ಕಳೆದ ವರ್ಷ ಅದ್ಧೂರಿ ರಥೋತ್ಸವ ನಡೆದಿರಲಿಲ್ಲ. ಆದ್ದರಿಂದ ಈ ವರ್ಷ ಬೃಹತ್ ಪ್ರಮಾಣದಲ್ಲಿ ಭಕ್ತರು ಸೇರುವ ನಿರೀಕ್ಷೆಯಿದೆ. ಜಿಲ್ಲೆ ಹಾಗೂ ಹೊರ ಜಿಲ್ಲೆಗಳಿಂದ ಭಾರಿ ಸಂಖ್ಯೆಯಲ್ಲಿ ಭಕ್ತರು ದವಸ ಧಾನ್ಯಗಳನ್ನು ಮಠಕ್ಕೆ ನೀಡಿದ್ದಾರೆ. ಎಲ್ಲ ಭಕ್ತರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ. ಲಕ್ಷಾಂತರ ಜನ ಸೇರುವ ನಿರೀಕ್ಷೆಯಿದೆ' ಎಂದು ಮಠದ ಆಡಳಿತ ಮಂಡಳಿ ತಿಳಿಸಿದೆ.

ಕಾಂಗ್ರೆಸ್ ಐಕ್ಯತಾ ಸಮಾವೇಶ ಇಂದು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಪರಿಶಿಷ್ಟ ಜಾತಿ ಮತ್ತು ಪಂಗಡದ ಮತಗಳನ್ನು ಒಗ್ಗೂಡಿಸುವ ಉದ್ದೇಶದಿಂದ ಜ.8ರಂದು ಕಾಂಗ್ರೆಸ್ ಹಮ್ಮಿಕೊಂಡಿರುವ 'ಐಕ್ಯತಾ ಸಮಾವೇಶ'ಕ್ಕೆ ಕೋಟೆನಾಡು ಸಜ್ಜಾಗಿದೆ. ಮಧ್ಯ ಕರ್ನಾಟಕದಿಂದ ಚುನಾವಣೆಯ ರಣಕಹಳೆ ಮೊಳಗಿಸಲು ಕಾಂಗ್ರೆಸ್ ಮುಂದಾಗಿದೆ.

ಮುರುಘರಾಜೇಂದ್ರ ಕ್ರೀಡಾಂಗಣದಲ್ಲಿ ಅಂತಿಮ ಹಂತದ ಸಿದ್ಧತೆಗಳು ಶನಿವಾರ ಪೂರ್ಣಗೊಂಡವು. ಎಐಸಿಸಿ ಶಿಸ್ತು ಸಮಿತಿ ಅಧ್ಯಕ್ಷ ಜಿ.ಪರಮೇಶ್ವರ ನೇತೃತ್ವದಲ್ಲಿ ಸಮಾವೇಶವನ್ನು ಸಂಘಟಿಸಲಾಗಿದ್ದು, ಲಕ್ಷಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆ ಇದೆ ಎಂದು ಕಾಂಗ್ರೆಸ್ ಹೇಳಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಬಿ.ಕೆ.ಹರಿಪ್ರಸಾದ್ ಸೇರಿ ಹಲವು ಮುಖಂಡರು ಪಾಲ್ಗೊಳ್ಳಲಿದ್ದಾರೆ. ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ, ಉಪಾಧ್ಯಕ್ಷ ಕೆ.ಎಚ್. ಮುನಿಯಪ್ಪ, ಡಾ.ಎಚ್.ಸಿ. ಮಹದೇವಪ್ಪ, ಎಚ್. ಆಂಜನೇಯ, ಬಿ.ಎನ್. ಚಂದ್ರಪ್ಪ, ಟಿ.ಪಿ.ಪರಮೇಶ್ವರ ನಾಯ್ಕ ಸೇರಿ ಅನೇಕರು ರಾಜ್ಯ ಸಂಚರಿಸಿ ಸಮಾವೇಶಕ್ಕೆ ಕಾರ್ಯಕರ್ತರನ್ನು ಕರೆತರಲು ಪ್ರಯತ್ನಿಸಿದ್ದಾರೆ.

ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯಗಳ ಸಮಸ್ಯೆ, ಬೇಡಿಕೆಗಳ ಕುರಿತು ಸಮಾವೇಶದಲ್ಲಿ ಚರ್ಚೆ ನಡೆಯಲಿದೆ. ಮೀಸಲಾತಿ ಪ್ರಮಾಣ ಹೆಚ್ಚಿಸಿ ಪಾರಂಪರಿಕ ಮತಬುಟ್ಟಿಗೆ ಕೈಹಾಕಿರುವ ಬಿಜೆಪಿಗೆ ಪ್ರತಿತಂತ್ರ ರೂಪಿಸುವ ಉದ್ದೇಶದಿಂದ ಕಾಂಗ್ರೆಸ್ ಈ ಸಮಾವೇಶ ಸಂಘಟಿಸಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಿಡುವ ಅನುದಾನದಲ್ಲಿ ಉಂಟಾಗಿರುವ ವ್ಯತ್ಯಾಸ, ಎಸ್‌ಇಪಿ–ಟಿಎಸ್‌ಪಿ ಅನ್ಯ ಉದ್ದೇಶಕ್ಕೆ ಬಳಕೆ ಸೇರಿ ಹಲವು ವಿಚಾರಗಳನ್ನು ಸಮಾವೇಶದಲ್ಲಿ ಕಾಂಗ್ರೆಸ್ ಪ್ರಸ್ತಾಪಿಸಲು ಸಿದ್ಧತೆ ಮಾಡಿಕೊಂಡಿದೆ.

2ಎ ಮೀಸಲಾತಿ: ನಾಳೆ ಬಲಿಜರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಲಿಜ ಸಮುದಾಯಕ್ಕೆ 2ಎ ಮೀಸಲಾತಿ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ಜ.9ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ಬಲಿಜ ಸಂಘ ತಿಳಿಸಿದೆ.

'ಬಲಿಜ ಸಮುದಾಯ ಅತ್ಯಂತ ಹಿಂದುಳಿದಿದ್ದು, ಯಾವುದೇ ಆಯೋಗದ ಶಿಫಾರಸು ಇಲ್ಲದೇ 1994ರಲ್ಲಿ 3ಎ ಪ್ರವರ್ಗಕ್ಕೆ ಸೇರಿಸಲಾಗಿದೆ. ಇದರಿಂದ ನಮ್ಮ ಜನಾಂಗ ಅತ್ಯಂತ ಹೀನ ಸ್ಥಿತಿಗೆ ತಲುಪಿದೆ. ಸತತ ಹೋರಾಟದ ಫಲವಾಗಿ ಕೇವಲ ವಿದ್ಯಾಭ್ಯಾಸಕ್ಕಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಮಾತ್ರ 2ಎ ಮೀಸಲಾತಿ ಸೌಲಭ್ಯವನ್ನು ನೀಡಲಾಗಿದೆ' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಟಿ. ವೇಣುಗೋಪಾಲ್ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ರಾಜ್ಯದಲ್ಲಿ ಪ್ರಬಲ ಸಮುದಾಯಗಳಿಗೆ ಸರ್ಕಾರ ಎ,ಬಿ,ಸಿ,ಡಿ ಎಂಬ ಹೊಸ ಮೀಸಲಾತಿಯ ಸೌಲಭ್ಯವನ್ನು ಕಲ್ಪಿಸುತ್ತಿದೆ. ಆದರೆ, ನಮ್ಮಂತಹ ಧ್ವನಿಯಿಲ್ಲದ ಜಾತಿಗಳಿಗೆ ಸ್ಪಂದಿಸುತ್ತಿಲ್ಲ. ರಾಜ್ಯದಲ್ಲಿ ಬಲಿಜ ಸಮುದಾಯ 40 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿದೆ. ಕೃಷಿ, ಕೂಲಿ, ಹೈನುಗಾರಿಕೆ, ಬಳೆ, ಹೂವು ಹಾಗೂ ಮಂಗಳದ್ರವ್ಯಗಳ ಮಾರಾಟ ಮಾಡಿಕೊಂಡು ಜೀವನ ನಿರ್ವಹಿಸುತ್ತಿದ್ದಾರೆ. ಈ ಸಮುದಾಯ 54 ವಿಧಾನಸಭೆ ಕ್ಷೇತ್ರಗಳಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ.' ಎಂದರು.

ಪೂರ್ಣ ಪ್ರಮಾಣದ 2ಎ ಮೀಸಲಾತಿಗೆ ಹಲವಾರು ಬಾರಿ ಸರ್ಕಾರಕ್ಕೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಬಲಿಜ ಸಮುದಾಯ ಸರ್ಕಾರಿ ಉದ್ಯೋಗ ಮತ್ತು ರಾಜಕೀಯ ಮೀಸಲಾತಿಯಿಂದ ವಂಚಿತವಾಗಿದೆ. ಆದ್ದರಿಂದ ಉಪವಾಸ ಸತ್ಯಾಗ್ರಹ ಮತ್ತು ಪ್ರತಿಭಟನೆ ನಡೆಸಲಾಗುವುದು' ಎಂದರು.

ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN No. U93000KA2009SGC049213
ಸ್ಪೈರ್‌ಬಾಗ್, ನಂ.19/4, 2ನೇ ಮಹಡಿ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು–52 ಫೋನ್ ನಂ: 22285561, 62, 63, 65
ಇ-ಮೇಲ್: ktdclit@gmail.com ವೆಬ್‌ಸೈಟ್: www.banjarathanda.kar.nic.in
ಸಂ: ಕತಾಅನಿನಿ/ವಿ.ನಿ.5/ಸಿಆರ್–46/2022–23 ದಿನಾಂಕ: 03.01.2023

ಪ್ರಕಟಣೆಗಾಗಿ

2022–23ನೇ ಸಾಲಿನ ಪರಿಶಿಷ್ಟ ಜಾತಿಯ ಜನರ ಆರ್ಥಿಕ ಅಭಿವೃದ್ಧಿಗಾಗಿ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದಿಂದ ವೈಯಕ್ತಿಕ ಫಲಾನುಭವಿ ಯೋಜನೆಗಳಾದ ನೇರಸಾಲ, ಉದ್ಯಮಶೀಲತಾ, ಸರಕು ಸಾಗಾಣಿಕೆ ವಾಹನ, ಗಂಗಾ ಕಲ್ಯಾಣ, ದ್ವಿ/ತ್ರಿಚಕ್ರ ವಾಹನ, ಮೈಕ್ರೋಕ್ರೆಡಿಟ್ ಹಾಗೂ ಭೂ ಒಡೆತನ ಯೋಜನೆಗಳಿಗೆ ಅರ್ಜಿಗಳನ್ನು ಸಲ್ಲಿಸುವ ದಿನಾಂಕವನ್ನು **16.01.2023ರವರೆಗೆ** ವಿಸ್ತರಿಸಲಾಗಿದೆ. ಆಸಕ್ತರು ಅರ್ಜಿಗಳನ್ನು ಸೇವಾ ಸಿಂಧು ಪೋರ್ಟಲ್ **https://sevasindhu.karnataka.gov.in** ನ **ಗ್ರಾಮ ಒನ್, ಕರ್ನಾಟಕ ಒನ್ ಮತ್ತು ಬೆಂಗಳೂರು ಒನ್** ಕೇಂದ್ರಗಳಲ್ಲಿ ಆನ್‌ಲೈನ್ ಮುಖಾಂತರ ಮೇಲಿನ ಯೋಜನೆಗಳಿಗೆ ಅರ್ಜಿಗಳನ್ನು ಸಲ್ಲಿಸಿ ಸದುಪಯೋಗ ಪಡಿಸಿಕೊಳ್ಳಲು ಈ ಮೂಲಕ ಕೋರಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 16.01.2023ಕ್ಕೆ ನಿಗಧಿಪಡಿಸಿದೆ

ಸಹಿ/– (ಯು.ಚಂದ್ರಾನಾಯ್ಕ), ವ್ಯವಸ್ಥಾಪಕ ನಿರ್ದೇಶಕರು

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ – 586201
ತಾ: ಬ.ಬಾಗೇವಾಡಿ, ಜಿ:ವಿಜಯಪುರ.
ಸಂ:ಕೃ.ಭಾ.ಜ.ನಿ.ನಿ/ಎ ಎಲ್ ಬಿ ಸಿ ವಿಭಾಗ/ಡಿ ಎಮ್/ಮು–ಎಸ್‌ಸಿಪಿ–ಟಿಎಸ್‌ಪಿ/2022–23/2614 ದಿನಾಂಕ:06.01.2023

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರಾಕ್ಯೂರ್‌ಮೆಂಟ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ.ಎ ಎಲ್ ಬಿ ಸಿ ವಿಭಾಗ ಆಲಮಟ್ಟಿ.ತಾ: ನಿಡಗುಂದಿ ಇವರು **ಟರ್ನ ಕೀ ಟೆಂಡರನ್ನು** ಕೆಡಬ್ಲ್ಯೂ–1&2&3 ರನ್ವಯ ಅಹ್ವಾನಿಸಿಲಾಗಿದೆ. ಕೆಟಿಟಿಪಿ ಕಾಯ್ದೆ ನಿಯಮ–28ರನ್ವಯ ಏಕ/ದ್ವಿ–ಲಕೋಟೆ ಪದ್ಧತಿಯನ್ನು ಅನುಸರಿಸಲಾಗುವದು. ಗುತ್ತಿಗೆದಾರರು ಭದ್ರತಾ ಠೇವಣಿ ಸಹಿತ ಟೆಂಡರನ್ನು ಸಂದಾಯ ಮಾಡುವಂತೆ ಕೋರಲಾಗಿದೆ. ಮುದ್ದೇಬಿಹಾಳ **ಮತಕ್ಷೇತ್ರ ವ್ಯಾಪ್ತಿಯ 2021–22 ನೇ ಸಾಲಿನ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿ ಕೊಳವೆ ಭಾವಿ ಕೊರೆದು ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿಗಳಿಗಾಗಿ** ಟೆಂಡರ ಅಹ್ವಾನಿಸಲಾಗಿದೆ. ಇಂಡೆಂಟ್ ಸಂಖ್ಯೆ: **23352, 23353, 23354, 23355 & 23356** ಟೆಂಡರಗಿಟ್ಟ ಮೊತ್ತ **ರೂ.229.79 ಲಕ್ಷಗಳು**

ಟೆಂಡರನ ವಿವಿಧ ಹಂತಗಳನ್ನು 1) ಟೆಂಡರ ಡಾಕುಮೆಂಟ್‌ನ್ನು ಇ–ಪೋರ್ಟಲ್‌ನಲ್ಲಿ ವೀಕ್ಷಿಸುವ & ಭರ್ತಿ ಮಾಡಿದ ಬಿಡ್‌ನ್ನು ಸಲ್ಲಿಸುವ ಕಾಲಾವಧಿ ದಿನಾಂಕ: **09.01.2023 ರಿಂದ 21.01.2023** ರ **ಸಾಯಂಕಾಲ 5.00 ಘಂಟೆಯವರೆಗೆ.** 2) ಲಕೋಟೆ–1 (ತಾಂತ್ರಿಕ ಬಿಡ್)ನ್ನು ತೆರೆಯುವ ದಿನಾಂಕ; **23.01.2023 ಬೆಳಿಗ್ಗೆ 11.00 ಘಂಟೆಗೆ.** 3) ಲಕೋಟೆ–2 (ಆರ್ಥಿಕ ಬಿಡ್)ನ್ನು ತೆರೆಯುವ **ದಿನಾಂಕ: 25.01.2023 ಬೆಳಿಗ್ಗೆ 11.00 ಘಂಟೆಗೆ.**

ಯಾವದೇ ಸಂದರ್ಭದಲ್ಲಾದರೂ, ಯಾವದೇ ಕಾರಣ ನೀಡದೇ ಟೆಂಡರನ್ನು ಅಂಗಿಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. ಟೆಂಡರಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ಅವಧಿಯಲ್ಲಿ ಅಥವಾ http://eproc.karnataka.gov.in/eportal/ines.seam and www.kbjnl.karnataka.gov.in ವೆಬ್‌ಸೈಟನಲ್ಲಿ ಪಡೆದುಕೊಳ್ಳಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ

ವಾಸಾಸಂಇ/ವಿಜಯಪುರ/737/ಎಂಸಿಎ/2022–23

ಕರ್ನಾಟಕ ಸರ್ಕಾರ

(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

No: EE/RWSS/Dvn/SMG/JE/JJM/E-Proc/2022-23/2128 **Date: 04.01.2023**

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ವ್ಯಾಪ್ತಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಇಂಡೆಂಟ್ ಸಂಖ್ಯೆ: **(1) 49900, (2) 49901, (3) 49902, (4) 49907, (5) 49908, (6) 49964, (7) 49961, (8) 49954, (9) 49954, (10) 49958, (11) 41860 CALL 2, 12) 43832 CALL 3, (13) 41480 CALL 3, (14) 43211 CALL 2, (15) 39843 CALL 5, (16) 43088 CALL 2, (17) 43350 CALL 2, (18) 44267 CALL 3, (19) 41324 CALL 4, (20) 42453 CALL 4**

ಟೆಂಡರ್ ವಿವರಗಳು, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು **https://www.eproc.karnataka.gov.in** ಜಾಲತಾಣದಲ್ಲಿ ಲಭ್ಯವಿದ್ದು, ಅರ್ಹ ಗುತ್ತಿಗೆದಾರರು/ ಬಿಡ್ಡುದಾರರು ಅಗತ್ಯ ದಾಖಲೆಗಳನ್ನು ಮತ್ತು ತಮ್ಮ ಬಿಡ್ ಅನ್ನು ಸದರಿ ಜಾಲತಾಣದಲ್ಲಿಯೇ ಸಲ್ಲಿಸುವುದು.

ಟೆಂಡರ್‌ನ ಕೆಲವು ಷರತ್ತುಗಳು :

(1) ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 13.01.2023ರ ಸಂಜೆ 5.30.
(2) ದ್ವಿಲಕೋಟೆಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 15.01.2023ರ ಬೆಳಿಗ್ಗೆ 11.30.
(3) ದ್ವಿಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : 17.01.2023ರ ಬೆಳಿಗ್ಗೆ 11.30.
(4) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ : ದ್ವಿಲಕೋಟೆ 6 ತಿಂಗಳು (180 ದಿನಗಳು).

ಸಹಿ/–
ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ & ನೈ ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ./ಶಿ/ಸಂ.28/ಝೇಂಕಾರ್/2022–23

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಾಲಯ : ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿ(ನಿ), ಮುಶಾಕಾ, ಪಾ & ಪೋ ವಿಭಾಗ ಚಿಗರಹಳ್ಳಿ ಈಮೇಲ್ : mbckbjnl@gmail.com
ಸಂ: ಕೃಭಾಜನಿನಿ/ಮುಶಾಕಾ/ಪಾ–ಪೋ. ವಿಭಾಗ/ಚಿಗರಹಳ್ಳಿ/ಪಿಬಿ–1–2/2022–23/819 ದಿನಾಂಕ : 04–01–2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಉಲ್ಲೇಖ : 1) ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂ: 798, ದಿನಾಂಕ : 31–12–2022.
2) ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂ: 811, ದಿನಾಂಕ : 02–01–2023.

ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ ಮುಶಾಕಾ, ಪಾ–ಪೋ, ವಿಭಾಗ ಚಿಗರಹಳ್ಳಿ ರವರು 2021–22ನೇ ಸಾಲಿನ ಜೇವರ್ಗಿ ಮತಕ್ಷೇತ್ರದ ಹಾಗೂ 2022–23ನೇ ಸಾಲಿನ ಶಹಾಪೂರ ಮತಕ್ಷೇತ್ರದ SCP ಮತ್ತು TSP ಕಾಮಗಾರಿಗಳಾದ ವರ್ಕ Indent No. **23123, 23124 & 23271** ಒಟ್ಟು 3 ಕಾಮಗಾರಿಗಳಿಗೆ ಇ–ಟೆಂಡರಿಂಗ್ ಮುಖಾಂತರ ಶೇಕಡಾವಾರು/ಟರ್ನ್ ಕೀ ಆಧಾರದ ಮೇಲೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಕಾಮಗಾರಿಗಳ ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ. 74.70 ಲಕ್ಷ ಹಾಗೂ ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ. 70.00 ಲಕ್ಷ ಇದ್ದು, ಇ.ಎಂ.ಡಿ. ಮೊತ್ತ ಗರಿಷ್ಠ ರೂ. 1.5 ಲಕ್ಷ ಹಾಗೂ ಕನಿಷ್ಠ 1.4 ಲಕ್ಷ ಇರುತ್ತದೆ. ಕಾಮಗಾರಿಗೆ ಇ–ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ವಿವರಗಳು ಈ ಕೆಳಗಿನಂತಿರುತ್ತವೆ.

1) ಇ–ಟೆಂಡರಿಂಗ್ ಲಭ್ಯವಾಗುವ ಅವಧಿ : 09–01–2023 ರಿಂದ 18–01–2023 ಸಾಯಂಕಾಲ 5.00 ಘಂಟೆ ವರೆಗೆ, 2) ಇ–ಟೆಂಡರಿಂಗ್ ಕೊನೆಯ ದಿನಾಂಕ : 18–01–2023 ಸಾಯಂಕಾಲ 5.00 ಘಂಟೆವರೆಗೆ, 3) ತಾಂತ್ರಿಕ–ಆರ್ಥಿಕ ಟೆಂಡರ್ ತೆರೆಯುವ ದಿನಾಂಕ : 20–01–2023 ಮುಂಜಾನೆ 11.30 ಘಂಟೆಗೆ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎಂ.ಬಿ.ಸಿ., ಪಾ–ಪೋ, ವಿಭಾಗ ಚಿಗರಹಳ್ಳಿ ಕಛೇರಿಯಲ್ಲಿ, 4) ಸಂಪರ್ಕಿಸಬೇಕಾದ ಕಛೇರಿ ವಿಳಾಸ : ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ http://www.eproc.Karnataka.gov.in ನಲ್ಲಿ ನೋಡಬಹುದು ಹಾಗೂ ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿ(ನಿ), ಮುಶಾಕಾ, ಪಾ–ಪೋ, ವಿಭಾಗ, ಚಿಗರಹಳ್ಳಿ.

ವಾ.ಸಾ.ಸಂ.ಇ/ಕಲಬುರಗಿ/1087/ಎಂ.ಸಿ.&ಎ/2022–23

ಕರ್ನಾಟಕ ಸರಕಾರ
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ

No BUDA/PWD/E - TENDER/ 55/2022-23/4140 ದಿನಾಂಕ :06/01/2023

ಅಲ್ಪಾವಧಿ ಟೆಂಡರ ಪ್ರಕಟಣೆ (e-procurement ಮುಖಾಂತರ)

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ ಮತ್ತು ನಿಯಮಗಳನ್ವಯ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಅನ್ವಯ ಇ–ಪ್ರೋಕ್ಯೂರಮೆಂಟ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಯ ಇ–ಟೆಂಡರನಲ್ಲಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ನಗರ ಯೋಜನಾ ಸದಸ್ಯರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ ಇವರಿಂದ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ, (ದೂರವಾಣಿ ಸಂಖ್ಯೆ:0831–2470342) ಮತ್ತುಅಂತರ್‌ಜಾಲದ ಮೂಲಕ ವೆಬ್ ಸೈಟ್ ವಿಳಾಸ: http://www.eproc.karnataka.gov.in ರಲ್ಲಿ ಪಡೆಯಬಹುದು.

ಅ. ನಂ.	ಕಾಮಗಾರಿಯ ಹೆಸರು	ಇಂಡೆಂಟ್ ನಂ	ಟೆಂಡರ್‌ಗೆ ಇಟ್ಟ ಮೊತ್ತ ರೂ. ಲಕ್ಷಗಳಲ್ಲಿ	ಮುಂಗಡ ಠೇವಣಿ ರೂ.ಗಳಲ್ಲಿ	ಅವಧಿ
1	Development of Garden at Sai Nandan Residency at R.S. No 193 & Syndicate Bank Colony at R.S. No 202/2B in Belagavi Rural Constituency (Call 2)	387 (Call 2)	82.78	125000	Six Months

ಟೆಂಡರ ಫಾರ್ಮ ಬೆಲೆ ಇ–ಪ್ರೋಕ್ಯೂರಮೆಂಟ್‌ದಲ್ಲಿದ್ದಂತೆ

ಅ) ಟೆಂಡರ ಸಲ್ಲಿಸಲು ಕೊನೆಯ ದಿನಾಂಕ 23/01/2023 ರಂದು ಸಾಯಂಕಾಲ 3.00 ಘಂಟೆವರೆಗೆ, ಬ) ತಾಂತ್ರಿಕ ಬಿಡನ್ನು ತೆರೆಯುವ ದಿನಾಂಕ 24/01/2023 ರಂದು ಸಾಯಂಕಾಲ 3.30 ಘಂಟೆಗೆ.ಕ) ಆರ್ಥಿಕ ಬಿಡನ್ನು ತೆರೆಯುವ ದಿನಾಂಕ 27/01/2023 ರಂದು ಸಾಯಂಕಾಲ 4.00 ಘಂಟೆಗೆ.

1) ಯಾವ ಕಾರಣವನ್ನು ಸಹ ನೀಡದೇ ಯಾವುದೇ ಅಥವಾ ಎಲ್ಲಾ ಟೆಂಡರಗಳನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ಟೆಂಡರ ಸ್ವೀಕರಿಸುವದನ್ನು ಈ ಕೆಳಗಿನ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. 2) ಯಾವುದೇ ಕಾರಣಕ್ಕೂ ಅರ್ಜಿಯ ಮೊತ್ತವನ್ನು ಹಿಂತಿರುಗಿಸಲಾಗುವುದಿಲ್ಲ ಹಾಗೂ ಬೇರೆ ಕೆಲಸಕ್ಕೆ ವರ್ಗಾಯಿಸುವಂತಿಲ್ಲ. 3) ಅಪೂರ್ಣ ಟೆಂಡರಗಳನ್ನು ಯಾವುದೇಕಾರಣ ನೀಡದೇ ತಿರಸ್ಕರಿಸಲಾಗುವುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ

ಸಹಿ/– ಆಯುಕ್ತರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ

DIPR/BGM/RO-NO-1514/MCA/2022-23

ಸಂಖ್ಯೆ : ಎ6/ಬಿಯುಡಿ/ಟೆಂಡರ್/ಸಿಆರ್–29/2022–23 ದಿನಾಂಕ : 03–01–2023

ಅರಣ್ಯ ಕಾಮಗಾರಿಗಳಿಗೆ ಸಂಕ್ಷಿಪ್ತ ಮರು ಟೆಂಡರ್ ಪ್ರಕಟಣೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2022–23ನೇ ಸಾಲಿನಲ್ಲಿ **"ಹುಲಿ ಯೋಜನೆ"** ಲೆಕ್ಕಶೀರ್ಷಿಕೆಯಡಿಯಲ್ಲಿ ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ವಲಯಗಳ ಅರಣ್ಯ ಪ್ರದೇಶದಲ್ಲಿ ವಿವಿಧ ಅರಣ್ಯ ಕಾಮಗಾರಿಗಳನ್ನು ಕೈಗೊಳ್ಳಲು ಮರು ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ 18–01–2023ರ ಸಂಜೆ 3 ಗಂಟೆಯವರೆಗೆ ನಿಗಧಿಪಡಿಸಲಾಗಿದೆ. ಒಟ್ಟು 09 ಕಾಮಗಾರಿಗಳು ಮತ್ತು ಅವುಗಳ ಒಟ್ಟು ಟೆಂಡರ್ ಮೊತ್ತ ರೂ. 15.300 ಲಕ್ಷಗಳಾಗಿರುತ್ತದೆ. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ಭದ್ರಾ ಹುಲಿ ಸಂರಕ್ಷಿತ, ಚಿಕ್ಕಮಗಳೂರು

Karnataka Veterinary, Animal & Fisheries Sciences University
P.B. No. 6, Nandinagar, Bidar-585 226, Karnataka

No.R/UG-Admn/NRI/Left over/2022-23/ Date: 07.01.2023

NOTIFICATION

Sub: Admission to B.V.Sc & A.H, B.Tech (D.Tech) & B.F.Sc Degree Programme under FN/NRI/NRI-C/ NRI-S Candidates for the Year 2022-2023 **(Left Over Seats in First round seat admission)**

Online applications in the prescribed proforma are invited from the eligible FN/NRI/NRI-C/NRI-S candidates for admission to B.V.Sc & A.H, B.Tech (D.Tech) & B.F.Sc degree programmes for the academic year 2022-23. **(Left Over Seats in First round seat admission).** The submission of ONLINE application Starts from **08.01.2023 to 20.01.2023 (IST 23:59:59 midnight).**

For more details please visit the University **website: www.kvafsu.edu.in**

BY ORDER,
Sd/-
(Sivasankar S., IFS)
Registrar

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ)
ಇ-ಮೇಲ್: contactus@bmrc.co.in ವೆಬ್‌ಸೈಟ್: www.bmrc.co.in
ಸಂ: ಬಿಎಂಆರ್‌ಸಿಎಲ್/ಹೆಚ್‌ಆರ್/0002/ಪಿಆರ್‌ಜೆ/2023 ದಿನಾಂಕ: 07.01.2023

ಗುತ್ತಿಗೆ / ನಿಯೋಜನೆ ಮೇರೆಗೆ ನೇಮಕಾತಿಗಾಗಿ ಪ್ರಕಟಣೆ

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್)ವು ಯೋಜನಾ ವಿಭಾಗದಲ್ಲಿ ಕೆಳಕಂಡ ಹುದ್ದೆಗೆ ನೇಮಕ ಮಾಡಿಕೊಳ್ಳಲು ಅರ್ಹ ಮತ್ತು ಅನುಭವವುಳ್ಳ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಕ್ರ.ಸಂ.	ಹುದ್ದೆಯ ಹೆಸರು	ಹುದ್ದೆ ಸಂಖ್ಯೆ
1	ಪ್ರಧಾನ ವ್ಯವಸ್ಥಾಪಕರು (ಎಫ್&ಎ)	1
2	ಹೆಚ್ಚುವರಿ ಪ್ರಧಾನ ವ್ಯವಸ್ಥಾಪಕರು (ಎಫ್&ಎ)	2
3	ಉಪ ಪ್ರಧಾನ ವ್ಯವಸ್ಥಾಪಕರು (ಎಫ್&ಎ)	1
4	ಸಹಾಯಕ ಪ್ರಧಾನ ವ್ಯವಸ್ಥಾಪಕರು (ಎಫ್&ಎ)	3
5	ವ್ಯವಸ್ಥಾಪಕರು (ಎಫ್&ಎ)	2
6	ಸಹಾಯಕ ವ್ಯವಸ್ಥಾಪಕರು (ಎಫ್&ಎ)	5

ಆನ್‌ಲೈನ್ ಅರ್ಜಿಗಳಿಗೆ ಕೊನೆಯ **ದಿನಾಂಕ: 07.02.2023, ಸಂಜೆ 4.00 ಗಂಟೆವರೆಗೆ.** ಅರ್ಹತಾ ಅಗತ್ಯತೆ, ವೇತನ, ಅರ್ಜಿ ಪ್ರಕ್ರಿಯೆ ಮತ್ತು ಇತರೆ ಹೆಚ್ಚಿನ ಮಾಹಿತಿಗಾಗಿ ನಮ್ಮ ವೆಬ್‌ಸೈಟ್: **www.bmrc.co.in/Career Section** ಗೆ ಭೇಟಿನೀಡಿ.

ಸಹಿ/– ಪ್ರಧಾನ ವ್ಯವಸ್ಥಾಪಕರು (ಹೆಚ್‌ಆರ್)

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿ(ನಿ), ಮುಏನೀ ವಿಭಾಗ ನಂ.2, ಬಬಲೇಶ್ವರ. ತಾ:ಬಬಲೇಶ್ವರ, ಜಿ:ವಿಜಯಪುರ.
ಇ–ಮೇಲ್:eemli2babaleshwar@gmail.com
ಸಂ:ಕೃಭಾಜನಿನಿ/ಎಮ್.ಎಲ್.ಐ/ವಿ.ಸಂ.2/ಯೋ.ಶಾ–4/ಎಸ್,ಸಿ,ಪಿ & ಟಿ.ಎಸ್.ಪಿ/2022–23/1639 ದಿನಾಂಕ:05.01.2023

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರಾಕ್ಯೂರಮೆಂಟ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕೃಭಾಜನಿನಿ, ಮುಏನೀ ವಿಭಾಗ ನಂ.2 ಬಬಲೇಶ್ವರ ಇವರು 2022–23 ನೇ ಸಾಲಿನ ಬಬಲೇಶ್ವರ ಮತಕ್ಷೇತ್ರದಡಿಯಲ್ಲಿನ ಎಸ್,ಸಿ,ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿಯಲ್ಲಿನ ಟೆಂಡರ್ 1] **ಇಂಡೆಂಟ್ ಸಂ.23446** ಅಂದಾಜು ಮೊತ್ತ **ರೂ 84.63 ಲಕ್ಷ** [ಎಸ್.ಸಿ.ಪಿ–ಬೋರವೆಲ್] 2]ಟೆಂಡರ್ **ಇಂಡೆಂಟ್ ಸಂ.23447** ಅಂದಾಜು ಮೊತ್ತ ರೂ 126.86 ಲಕ್ಷ [ಟಿ.ಎಸ್.ಪಿ–ಬೋರವೆಲ್] ಮತ್ತು 3] ಟೆಂಡರ್ **ಇಂಡೆಂಟ್ ಸಂ.23444** ಅಂದಾಜು ಮೊತ್ತ ರೂ 84.70 ಲಕ್ಷ [ಎಸ್,ಸಿ,ಪಿ–ಸಿಸಿ ರಸ್ತೆ] ಕಾಮಗಾರಿಗಳಿಗಾಗಿ **ನೊಂದಾಯಿತ ಕೆ.ಪಿ.ಡಬ್ಲ್ಯೂ..ಡಿ–1 ಗುತ್ತಿಗೆದಾರರಿಂದ** ಕೆ.ಡ್ಲ್ಯೂ–3 ಮತ್ತು ಕೆ.ಡ್ಲ್ಯೂ–4 ರನ್ವಯ ಟೆಂಡರನ್ನು ಅಹ್ವಾನಿಸಲಾಗಿರುತ್ತದೆ.

ಇ–ಟೆಂಡರನಲ್ಲಿ ದಾಖಲಾತಿಗಳನ್ನು ಸ್ವಿಕರಿಸುವ ಹಾಗೂ ಸಲ್ಲಿಸುವ ವಿವರಗಳು.

1) ಅರ್ಹಗುತ್ತಿಗೆದಾರರು ಇ–ಟೆಂಡರ ಮೂಲಕ ಪ್ರವೇಶ ಪಡಯುವ ದಿನಾಂಕ; **06.01.2023 ರಿಂದ 18.01.2023** ಸಾಯಂಕಾಲ 5.00 ಗಂಟೆಯವರೆಗೆ 2) ಪೂರ್ವ ಬಿಡ್ ಸಭೆಯನ್ನು ದಿನಾಂಕ:**12.01.2023** ರಂದು ಮದ್ಯಾಹ್ನ: 11.00 ಗಂಟೆಗೆ ಕಾರ್ಯನಿವಾಹಕ ಇಂಜಿನೀಯರರು ಕೃಭಾಜನಿನಿ ಮುಏನೀ ವಿಭಾಗ ಸಂ 2, ಬಬಲೇಶ್ವರ ಜಿ:ವಿಜಯಪೂರ ಇವರ ಕಚೇರಿಯಲ್ಲಿ ಜರುಗಿಸಲಾಗುವುದು. ಗುತ್ತಿಗೆದಾರರ ಕ್ವಾರೀಸ್ (ಪ್ರಶ್ನಾವಳಿಗಳು) ಇದ್ದಲ್ಲಿ ದಿನಾಂಕ:**12.01.2023** ರ ಬೆಳಗ್ಗೆ 10.00 ಒಳಗಾಗಿ ಲಿಖಿತ ರೂಪದಲ್ಲಿ ಅಥವಾ ಈ ಕೆಳಕಂಡ ಇ–ಮೇಲ್ ಮುಖಾಂತರ ಸಲ್ಲಿಸಬಹುದಾಗಿದೆ eemli2babaleshwar@gmail.com 3) ಲಕೋಟೆ (ತಾಂತ್ರಿಕ ಬಿಡ್) ನ್ನು ಕಾರ್ಯನಿರ್ವಾಹಕ ಅಭಿಯಂತರು ಕೃಭಾಜನಿನಿ ಮುಏನೀ ವಿಭಾಗ ಸಂಖ್ಯೆ–2 ಬಬಲೇಶ್ವರ ಇವರ ಕಚೇರಿಯಲ್ಲಿ **ದಿನಾಂಕ: 20.01.2023** ರ ಬೆಳಗ್ಗೆ 11.00 ಗಂಟೆಗೆ ತೆರೆಯಲಾಗುವುದು.

ಇಲೆಕ್ಟ್ರಾನಿಕ್ ಟೆಂಡರಿಂಗ್ ಕುರಿತು ಹೆಚ್ಚಿನ ಮಾಹಿತಿಗಾಗಿ **http;//eproc.karnatak.gov.in/e portal/lines. Seam** ಕ್ಲಿಕ್ ಮಾಡಿ ಅಥವಾ **KBJNL** ವೆಬ್ ಸೈಟ್ www.kbjnl.karnataka.gov.in ಮತ್ತು ಈ ಕೆಳಗಿನ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಮುಏನೀ ವಿಭಾಗ ಸಂ.2, ಬಬಲೇಶ್ವರ.

ವಾಸಾಸಂಇ/ವಿಜಯಪುರ/731/ಎಂಸಿಎ/2022–23

ಕಾಡಂಚಿನ ಜನರ ಕಷ್ಟಕ್ಕಿಲ್ಲ ಎಣೆ

ಒಂದನೇ ಪುಟದಿಂದ..

ಮುಗಿಯದ ಸಂಘರ್ಷ: ಹುಲಿಯೋಜನೆಗಳ ಎಲ್ಲ ಕಾಡಂಚಿನ ಗ್ರಾಮಗಳಲ್ಲಿ ಮಾನವ ವನ್ಯಜೀವಿ ಸಂಘರ್ಷ ಮುಗಿಯದ ಕಥೆ. ಸಮಸ್ಯೆಗಳ ಬಗ್ಗೆ ಇಲ್ಲಿನ ಗ್ರಾಮಸ್ಥರನ್ನು ಕೇಳಿದರೆ, ಕಾಡು ಪ್ರಾಣಿಗಳ ಹಾವಳಿ ಬಗ್ಗೆಯೇ ಮೊದಲು ದೂರುತ್ತಾರೆ. ಹುಲಿ, ಆನೆ, ಚಿರತೆ, ಜಿಂಕೆ, ನವಿಲು ಮುಂತಾದ ಪ್ರಾಣಿಗಳು ಜನವಸತಿ ಪ್ರದೇಶಗಳಿಗೆ ನುಗ್ಗಿ ಜನ ಜಾನುವಾರುಗಳ ಮೇಲೆ ದಾಳಿ ಮಾಡುವುದು, ಕೃಷಿ ಜಮೀನುಗಳಿಗೆ ನುಗ್ಗಿ ಬೆಳೆ ನಾಶ ಮಾಡುವ ಪ್ರಕರಣಗಳು ವರದಿಯಾಗುತ್ತಲೇ ಇರುತ್ತವೆ. ಹುಲಿಗಳ ಸಂಖ್ಯೆ ಹೆಚ್ಚಿರುವ ನಾಗರಹೊಳೆ, ಬಂಡೀಪುರಗಳಲ್ಲಿ ನೆಲೆ ಕಳೆದುಕೊಳ್ಳುವ ವಯಸ್ಸಾದ ವ್ಯಾಘ್ರಗಳು ಆಹಾರ ಹುಡುಕಿಕೊಂಡು ಅರಣ್ಯದ ಅಂಚಿಗೆ ಬಂದು ರೈತರನ್ನು ಬಲಿ ಪಡೆದ ಉದಾಹರಣೆಗಳೂ ಸಾಕಷ್ಟಿವೆ. ಜಾನುವಾರುಗಳು ದಿನಂಪ್ರತಿ ಬಲಿಯಾಗುತ್ತಿರುತ್ತವೆ.

2019ರಲ್ಲಿ ಬಂಡೀಪುರದ ಅಂಚಿನ ಚೌಡಹಳ್ಳಿಯಲ್ಲಿ ಇಬ್ಬರು ರೈತರು ಹುಲಿಗೆ ಬಲಿಯಾಗಿದ್ದರು. ಕೊನೆಗೆ ಅರಣ್ಯ ಇಲಾಖೆ ಆ ವ್ಯಾಘ್ರನನ್ನು ಸೆರೆ ಹಿಡಿಯಬೇಕಾಯಿತು. ಕಳೆದ ವರ್ಷದ ಜುಲೈನಲ್ಲಿ ಹುಲಿಯೊಂದು ರೈತನ ಮೇಲೆ ದಾಳಿ ನಡೆಸಿತ್ತು. ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದರು. ಆಗಸ್ಟ್ 1ರಂದು ನಂಜನಗೂಡು ತಾಲ್ಲೂಕಿನ ಕಾಡಂಚಿನ ಗ್ರಾಮ ಒಡೆಯರ ಪುರದಲ್ಲಿ ಹುಲಿ ದನಗಾಹಿ ಹಾಗೂ ಹಸುವನ್ನು ಕೊಂದಿತ್ತು. ಕಳೆದ ತಿಂಗಳ 24ರಂದು ಬಿಆರ್‌ಟಿಯ ಪುಣಜನೂರು ವಲಯದ ಕಾಡಂಚಿನಲ್ಲಿ ಕರಡಿಯೊಂದು ದನಗಾಹಿಯ ಮೇಲೆ ದಾಳಿ ಮಾಡಿ ಕೊಂದಿದೆ.

ಬೇಸಿಗೆಯಲ್ಲಿ ಕಾಳ್ಗಿಚ್ಚು ಕಂಡುಬರುವುದು, ಪ್ರಾಣಿಗಳಿಗೆ ವಿಷ ಪ್ರಾಶನ ಮಾಡುವುದು, ಉರುಳಿಗೆ ಸಿಲುಕಿ ಪ್ರಾಣಿಗಳು ಸಾವಿಗೀಡಾಗುತ್ತಿರುವುದು ಮಾನವ ವನ್ಯಜೀವಿ ಸಂಘರ್ಷದ ಭಾಗವೇ ಆಗಿವೆ.

ಸಂಘರ್ಷ ತಡೆಯಲು ಅರಣ್ಯ ಇಲಾಖೆ ಸೌರ ಬೇಲಿ, ಆನೆ ಕಂದಕ, ರೈಲ್ವೆ ಕಂಬಿ ಬೇಲಿ, ಕಾಂಕ್ರೀಟ್ ಬೇಲಿ ನಿರ್ಮಿಸಿದೆ. ಇವೆಲ್ಲವೂ ತಾತ್ಕಾಲಿಕ ಶಮನ ನೀಡಿವೆಯಷ್ಟೇ ವಿನಾ, ಶಾಶ್ವತ ಪರಿಹಾರ ಒದಗಿಸಿಲ್ಲ. ಬಂಡೀಪುರದ ಓಂಕಾರ ವಲಯದಲ್ಲಿ, ನಾಗರಹೊಳೆ ವ್ಯಾಪ್ತಿಯಲ್ಲಿ ಆನೆಗಳು ರೈಲ್ವೆ ಕಂಬಿ ಬೇಲಿಯನ್ನೇ ದಾಟಿದ, ಹಲವು ಕಡೆ ಸೌರ ಬೇಲಿ ಮುರಿದ ಉದಾಹರಣೆಯಿದೆ. ವನ್ಯಮೃಗಗಳ ದಾಳಿಯಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಹಾಗೂ ಶಾಶ್ವತ ಅಂಗವಿಕಲರಾದವರಿಗೆ ಹೆಚ್ಚು ಪರಿಹಾರ ನೀಡಬೇಕು ಎಂಬ ಜನರ ಆಕ್ರೋಶಕ್ಕೆ ಮಣಿದಿರುವ ಸರ್ಕಾರ, ಈಚೆಗೆ ಪರಿಹಾರ ಮೊತ್ತವನ್ನು ದುಪ್ಪಟ್ಟು ಮಾಡಿದೆ.

ವನ್ಯಪ್ರಾಣಿಗಳು ಕಾಡಂಚಿನಲ್ಲಿರುವ ಕೃಷಿ ಜಮೀನುಗಳಲ್ಲಿ ಜನ ಜಾನುವಾರುಗಳ ಮೇಲೆ ದಾಳಿ ಮಾಡಿ ಜೀವ ಹಾನಿ ಸಂಭವಿಸಿದರೆ ಮಾತ್ರ ಇಲಾಖೆ ಪರಿಹಾರ ನೀಡುತ್ತದೆ. ಕಾಡಿನ ಒಳಗೆ ದಾಳಿ ಮಾಡಿದರೆ ಪರಿಹಾರ ಸಿಗುವುದಿಲ್ಲ. ಜೀವ ಹಾನಿಯಾದ ಸಂದರ್ಭದಲ್ಲಿ ಅರಣ್ಯ ಇಲಾಖೆ ಪರಿಹಾರವನ್ನು ಬೇಗ ನೀಡುತ್ತಿದೆ. ಗರಿಷ್ಠ 10 ದಿನಗಳ ಒಳಗಾಗಿ ಸಂತ್ರಸ್ತರ ಕುಟುಂಬದವರ ಖಾತೆಗೆ ಪರಿಹಾರ ಮೊತ್ತವನ್ನು ನೇರವಾಗಿ ಜಮಾವಣೆ ಮಾಡುತ್ತದೆ. ಆದರೆ, ಬೆಳೆ ಹಾನಿ ಸಂದರ್ಭದಲ್ಲಿ ಪರಿಹಾರ ನೀಡಲು ವಿಳಂಬವಾಗುತ್ತಿದೆ ಎಂಬುದು ಕೃಷಿಕರ ದೂರು.

ಅಭಿವೃದ್ಧಿಯಲ್ಲಿ ಹಿಂದೆ: ಮಾನವ- ವನ್ಯಜೀವಿ ಸಂಘರ್ಷ ಎಂದಿಗೂ ಬಗೆಹರಿಯದ ಸಮಸ್ಯೆಯಾಗಿದ್ದರೆ, ಕಾಡಂಚಿನ ಗ್ರಾಮಗಳಲ್ಲಿರುವ ಇತರ ಸಮಸ್ಯೆಗಳು ಅಲ್ಲಿನ ಜನರ ಬದುಕನ್ನು ದುಸ್ತರ ಮಾಡುತ್ತಿವೆ. ಈ ಹಳ್ಳಿಗಳು ಅಭಿವೃದ್ಧಿ ವಿಚಾರದಲ್ಲಿ ಹಿಂದುಳಿದಿವೆ. ಗ್ರಾಮಸ್ಥರು ಕೂಡ ಹೆಚ್ಚು ಸ್ಥಿತಿವಂತರಲ್ಲ. ಬಹುತೇಕರು ಬಡವರು. ಸಣ್ಣ ಹಿಡುವಳಿದಾರರು.

ಅರಣ್ಯಕ್ಕೆ ಹೊಂದಿಕೊಂಡಿರುವ ಪ್ರದೇಶಗಳು ಪರಿಸರ ಸೂಕ್ಷ್ಮ ವಲಯದ (ಇಎಸ್‌ಝಡ್) ವ್ಯಾಪ್ತಿಗೆ ಒಳಪಡುತ್ತವೆ. ಇಲ್ಲಿ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶ ಇಲ್ಲ. ಹೊಸದಾಗಿ ಅಭಿವೃದ್ಧಿ ಕೆಲಸಗಳಿಗೂ ಅರಣ್ಯ ಇಲಾಖೆ ನಿಯಮಗಳು ಆಸ್ಪದ ನೀಡುವುದಿಲ್ಲ. ನಗರ, ಪಟ್ಟಣ ಹೋಬಳಿ ಕೇಂದ್ರಗಳಿಗೆ ಹತ್ತಿರವಿರುವ ಗ್ರಾಮಗಳಿಗೆ ಹೋಲಿಸಿದರೆ ಇಲ್ಲಿ ಜನಸಂಖ್ಯೆಯೂ ಕಡಿಮೆ. ಈ ಕಾರಣದಿಂದ ನಾಗರಿಕ ಸೌಲಭ್ಯಗಳು ಉಳಿದೆಡೆಗೆ ತಲುಪುವ ವೇಗದಲ್ಲಿ ಬರುವುದಿಲ್ಲ. ಅಧಿಕಾರಿಗಳು, ಜನಪ್ರತಿನಿಧಿಗಳು ಇಲ್ಲಿಗೆ ಭೇಟಿ ನೀಡುವುದು ವಿರಳ. ಸೌಲಭ್ಯ ಪಡೆಯಲು ಜನರು ಸಾಹಸಪಡಬೇಕು.

ಮೂಲಸೌಕರ್ಯಗಳ ಕೊರತೆ: ರಸ್ತೆ, ಕುಡಿಯುವ ನೀರು, ವಿದ್ಯುತ್ ಸಂಪರ್ಕ, ಶಿಕ್ಷಣ, ಆರೋಗ್ಯ ಸೌಲಭ್ಯಗಳು ಸಮರ್ಪಕವಾಗಿ ಇಲ್ಲ. ಬಹುತೇಕ ಗ್ರಾಮಗಳಲ್ಲಿ ಮೊಬೈಲ್ ನೆಟ್‌ವರ್ಕ್, ಇಂಟರ್‌ನೆಟ್ ಸಂಪರ್ಕ ಸಮಸ್ಯೆಯೂ ಇದೆ.

ಮಳೆಗಾಲದಲ್ಲಿ ವಿದ್ಯುತ್ ಇಲ್ಲದ ದಿನಗಳೇ ಹೆಚ್ಚಿರುತ್ತವೆ. ಗಾಳಿ ಮಳೆಗೆ ವಿದ್ಯುತ್ ಕಂಬ ಮುರಿದರೆ, ತಂತಿ ತುಂಡಾಗಿ ಬಿದ್ದರೆ ದುರಸ್ತಿಗೆ ದಿನಗಳೇ ಹಿಡಿಯುತ್ತವೆ. ಬೇಸಿಗೆಯಲ್ಲೂ ಲೋಡ್ ಶೆಡ್ಡಿಂಗ್, ತ್ರಿಫೇಸ್ ವಿದ್ಯುತ್ ಸಮಸ್ಯೆಯಿಂದ ಕೃಷಿಕರು ತೊಂದರೆ ಅನುಭವಿಸುತ್ತಾರೆ. ಕೆಲವು ಕಡೆಗಳಲ್ಲಿ ರಾತ್ರಿ ಹೊತ್ತು ತ್ರಿಫೇಸ್ ವಿದ್ಯುತ್ ಪೂರೈಕೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಜಮೀನುಗಳಿಗೆ ನೀರು ಹಾಕುವುದಕ್ಕಾಗಿ ರೈತರು ಜೀವ ಭಯದಲ್ಲೇ ತೋಟಗಳಿಗೆ ಹೋಗಬೇಕಾದ ಪರಿಸ್ಥಿತಿ ಇದೆ.

ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲ್ಲೂಕಿನ ಡಿ.ಬಿ.ಕುಪ್ಪೆ ಗ್ರಾಮದಲ್ಲಿ ಮಳೆಗಾಲದ ಸಂದರ್ಭದಲ್ಲಿ ವಿದ್ಯುತ್ ತಂತಿಗಳು ತುಂಡಾಗಿ, ಇಲ್ಲವೇ ಕಂಬಗಳು ಮುರಿದು ವಿದ್ಯುತ್ ಸಂಪರ್ಕ ಪದೇ ಪದೇ ಕಡಿತವಾಗಿರುತ್ತಿರುತ್ತದೆ. ಊರು ತೀರಾ ಒಳಪ್ರದೇಶವಾಗಿರುವುದರಿಂದ ದುರಸ್ತಿ ಕಾರ್ಯ ವಿಳಂಬವಾಗುತ್ತಿರುತ್ತದೆ.

ಗುಂಡ್ಲುಪೇಟೆ ತಾಲ್ಲೂಕಿನ ಬರಗಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ರೈತರು ರಾತ್ರಿ ತ್ರಿಫೇಸ್ ವಿದ್ಯುತ್ ನೀಡುತ್ತಿರುವುದನ್ನು ಖಂಡಿಸಿ, ಹಗಲು ಹೊತ್ತಿನಲ್ಲೇ ತ್ರಿಫೇಸ್ ವಿದ್ಯುತ್ ನೀಡಬೇಕು ಎಂದು ಆಗ್ರಹಿಸಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ಉದಾಹರಣೆಗಳೂ ಇವೆ.

'ಲೋಡ್ ಶೆಡ್ಡಿಂಗ್ ಹೆಸರಿನಲ್ಲಿ ಗ್ರಾಮದಲ್ಲಿರುವ ತೋಟದ ಮನೆಗಳಿಗೆ ರಾತ್ರಿ ಹೊತ್ತು ಸಿಂಗಲ್ ಫೇಸ್ ವಿದ್ಯುತ್ ಪೂರೈಕೆ ಸರಿಯಾಗಿ ಆಗುತ್ತಿಲ್ಲ. ನಮ್ಮ ಗ್ರಾಮದಲ್ಲಿ ಚಿರತೆ, ಕಾಡುಹಂದಿ ಸೇರಿದಂತೆ ಪ್ರಾಣಿಗಳ ಹಾವಳಿ ಇದೆ. ತೋಟದ ಮನೆಗಳಲ್ಲಿ ರಾತ್ರಿ ತಂಗಲು ಕಷ್ಟವಾಗುತ್ತಿದೆ' ಎಂದು ಚಾಮರಾಜನಗರ ತಾಲ್ಲೂಕಿನ ಮೇಲೂರು ಗ್ರಾಮದ ಮೂರ್ತಿ ಹೇಳಿದರು.

ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಹಾಳಾಗಿವೆ. ಹದಗೆಟ್ಟಿರುವ ರಸ್ತೆಗಳ ದುರಸ್ತಿ ಕೆಲಸಗಳು ತ್ವರಿತವಾಗಿ ನಡೆಯುವುದಿಲ್ಲ. ಆರೋಗ್ಯ ಸೇವೆಗಳು ಸರಿಯಾಗಿ ಲಭ್ಯವಿಲ್ಲ. ಕೆಲವು ಗ್ರಾಮಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದರೆ, ಹಲವು ಗ್ರಾಮಗಳಲ್ಲಿ ಅದೂ ಇಲ್ಲ. ಚಿಕಿತ್ಸೆಗಾಗಿ ಹೋಬಳಿ ಕೇಂದ್ರ ಇಲ್ಲವೇ ತಾಲ್ಲೂಕು ಕೇಂದ್ರಗಳಿಗೇ ಬರಬೇಕು.

ಆರೋಗ್ಯ ಕ್ಷೇತ್ರದಲ್ಲಿ ದುಡಿಯುವ ಸ್ವಯಂ ಸೇವಾ ಸಂಸ್ಥೆಗಳು ಹಾಡಿಗಳಲ್ಲಿ ಆರೋಗ್ಯ ತಪಾಸಣಾ ಶಿಬಿರದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಆದಿವಾಸಿಗಳ ಆರೋಗ್ಯದ ಬಗ್ಗೆ ಕಾಳಜಿ ಮಾಡುತ್ತವೆ. ಈ ಸೌಲಭ್ಯವೂ ಕಾಡಂಚಿನ ಗ್ರಾಮಸ್ಥರಿಗೆ ಇಲ್ಲ. ಅಲ್ಲಿ ಆರೋಗ್ಯ ಶಿಬಿರಗಳನ್ನು ಮಾಡುವ ಪ್ರಯತ್ನ ಯಾರೂ ಮಾಡುವುದಿಲ್ಲ. ರಾಜಕೀಯ ಮುಖಂಡರು, ಸಂಘ ಸಂಸ್ಥೆಗಳು ಆಯೋಜಿಸುವ ಇಂತಹ ಶಿಬಿರಗಳು ನಗರ, ಪಟ್ಟಣ ಹಾಗೂ ಹೋಬಳಿಗಳಿಗಷ್ಟೇ ಸೀಮಿತವಾಗಿವೆ.

ಶಿಕ್ಷಣವೂ ಅಷ್ಟೇ. ಕಿರಿಯ ಇಲ್ಲವೇ ಹಿರಿಯ ಪ್ರಾಥಮಿಕ ಶಾಲಾ ಹಂತದವರೆಗೆ ಮಾತ್ರ ಲಭ್ಯವಿದೆ. ಪ್ರೌಢಶಾಲೆ, ಪಿಯುಸಿ ಶಿಕ್ಷಣಕ್ಕೆ ದೂರದ ಊರುಗಳಿಗೆ ಹೋಗುವುದು ಅನಿವಾರ್ಯ. ಸೌಲಭ್ಯಗಳ ಕೊರತೆ ನಡುವೆಯೂ ಪದವಿ, ಸ್ನಾತಕೋತ್ತರ ಹಾಗೂ ಇತರ ವೃತ್ತಿಪರ ಶಿಕ್ಷಣ ಮಾಡಿದವರು ಸಿಗುತ್ತಾರಾದರೂ ಈ ಸಂಖ್ಯೆ ಬೆರಳೆಣಿಕೆಯಷ್ಟೇ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಪರಿಸರ ಸೂಕ್ಷ್ಮ ವಲಯದಲ್ಲಿ 136 ಹಳ್ಳಿಗಳು ಬರುತ್ತವೆ. ಗಿರಿಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಗುಂಡ್ಲುಪೇಟೆ ತಾಲ್ಲೂಕಿನ ಹಗ್ಗದಹಳ್ಳ, ಹಾನಂಜಿಹುಂಡಿ, ಕಾರೆಮಾಳ ಚೆನ್ನು, ಆಡಿನ ಕಣಿವೆ, ಬೂದದರಹುಂಡಿ, ಚೆಲುವರಾಯನಪುರ ಗುಡ್ಡೇಕೆರೆ, ಚಿಕ್ಕೆಲಚೆಟ್ಟಿ ಗಿರಿಜನ ಕಾಲೊನಿಗಳಿಗೆ ರಸ್ತೆ ಸೌಲಭ್ಯ ಇಲ್ಲ. ಇಲ್ಲಿನ ಮಕ್ಕಳ ಶಾಲೆಗೆ ಹೋಗಬೇಕಾದರೆ ಕಿಲೋಮೀಟರ್ ಗಟ್ಟಲೆ ನಡೆಯಲೇಬೇಕು. ಪ್ರಾಣಿಗಳ ಭಯ ಅದಕ್ಕೂ ಅವಕಾಶ ಕೊಡುವುದಿಲ್ಲ. ಈ ಕಾರಣಕ್ಕೆ ಕೆಲವು ಪೋಷಕರು ಮಕ್ಕಳನ್ನು ಶಾಲೆ ಬಿಡಿಸಿದ್ದಾರೆ.

ಕಾಡಂಚಿನ ಊರುಗಳಿಗೆ ಸಾರಿಗೆ ವ್ಯವಸ್ಥೆಯೂ ಅಷ್ಟಕ್ಕಷ್ಟೇ. ದಿನಕ್ಕೆ ಒಂದೋ ಎರಡು ಬಸ್ ಬರುತ್ತದೆ. ಓಡಾಡುವುದಕ್ಕೆ ಸ್ವಂತ ಇಲ್ಲವೇ ಬಾಡಿಗೆ ವಾಹನಗಳನ್ನೇ ಆಶ್ರಯಿಸಬೇಕಾಗಿದೆ.



ಚಾಮರಾಜನಗರ ತಾಲ್ಲೂಕಿನ ಕಾಳಿಕಾಂಬ ಕಾಲೊನಿಗೆ ಒಂದೇ ಬಸ್ ಸೌಲಭ್ಯ ಇದ್ದು, ವಿದ್ಯಾರ್ಥಿಗಳು, ಗ್ರಾಮಸ್ಥರು ಅದನ್ನೇ ಅವಲಂಬಿಸಿದ್ದಾರೆ

ನಾಗರಹೊಳೆ ವ್ಯಾಪ್ತಿಯ ಹುಣಸೂರು ತಾಲ್ಲೂಕಿನ ಬಿಲ್ಲೇನಹಳ್ಳಿ ಗ್ರಾಮದಿಂದ ಪ್ರಾಥಮಿಕ ಶಾಲೆಗೆ ಮಕ್ಕಳು ನಡೆದು ಬರಬೇಕು. 'ಬಸ್ ವ್ಯವಸ್ಥೆ ಇಲ್ಲ. ದಾರಿಯಲ್ಲಿ ಹುಲಿ, ಚಿರತೆ ಹಾವಳಿ. ಜೀವದ ಹಂಗುತೊರೆದು ಮಕ್ಕಳು ಬರಬೇಕಿದೆ' ಎನ್ನುತ್ತಾರೆ ಸ್ಥಳೀಯರು.

ಬಿಆರ್‌ಟಿ ಹುಲಿ ಯೋಜನೆ ವ್ಯಾಪ್ತಿಯಲ್ಲಿ ಕಾಡಂಚಿನಲ್ಲಿ ಬರುವ 53 ಜನವಸತಿಗಳ ಪೈಕಿ ಚಾಮರಾಜನಗರ ತಾಲ್ಲೂಕಿನ ವ್ಯಾಪ್ತಿಗೆ ಕುಂಭೇಶ್ವರ ಕಾಲೊನಿ, ಕಾಳಿಕಾಂಬ ಕಾಲೊನಿಗಳಿಗೆ ಸಾರಿಗೆ ವ್ಯವಸ್ಥೆ ಸಮರ್ಪಕವಾಗಿ ಇಲ್ಲ.

'ಪ್ರತಿ ದಿನ ಬೆಳಿಗ್ಗೆ ಮತ್ತು ಸಂಜೆ ಒಂದು ಟ್ರಿಪ್ ಬಸ್ ಬರುತ್ತದೆ. ಭಾನುವಾರ ಅದೂ ಬರುವುದಿಲ್ಲ. ಬಸ್ ಬಂದರೆ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಹೋಗುತ್ತಾರೆ. ಇಲ್ಲದಿದ್ದರೆ ಆ ದಿನ ಶಾಲೆಗೆ ರಜೆ. ಸಾರ್ವಜನಿಕರು ಕೂಡ ಇದೇ ಬಸ್ ಅವಲಂಬಿಸಬೇಕು. ಇಲ್ಲದಿದ್ದರೆ ಖಾಸಗಿ, ಬಾಡಿಗೆ ವಾಹನಗಳಲ್ಲಿ ಓಡಾಡಬೇಕಾಗಿದೆ' ಎಂದು ಕಾಳಿಕಾಂಬ ಕಾಲೊನಿಯ ಪದವೀಧರ ಕಾರ್ತಿಕ್ 'ಪ್ರಜಾವಾಣಿ'ಗೆ ತಿಳಿಸಿದರು.

ಕಾಳಿ ಹುಲಿ ಸಂರಕ್ಷಿತಾರಣ್ಯದ (ಕೆಟಿಆರ್) ಅಂಚಿನಲ್ಲಿ 87 ಗ್ರಾಮಗಳಿವೆ. ಅಣಶಿ, ಶಿರ್ವೆ, ಕೊಡಸಳ್ಳಿ, ಕುಳಗಿ, ಫಣಸೋಲಿ, ಗುಂದ, ಕುಂಬಾರವಾಡ, ಕ್ಯಾಸಲ್‌ರಾಕ್ ಸೇರಿದಂತೆ ಹತ್ತಾರು ಹಳ್ಳಿಗಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಕೆಟಿಆರ್ ಸ್ಥಾಪನೆಗೂ ಮೊದಲೇ ಇದ್ದ ರಸ್ತೆಗಳ ಅಭಿವೃದ್ಧಿ, ಹೊಸ ವಿದ್ಯುತ್ ಮಾರ್ಗಗಳ ನಿರ್ಮಾಣ, ಕೆಲವೆಡೆ ಮನೆಗಳ ದುರಸ್ತಿಗೂ ಅರಣ್ಯ ಇಲಾಖೆ ನಿಯಮಗಳು ಅಡ್ಡಿಯಾಗಿವೆ.

ನಾಗರಹೊಳೆ ಹುಲಿ ಯೋಜನೆಯ ಅಂಚಿನಲ್ಲಿ 96 ಗ್ರಾಮಗಳು ಬರುತ್ತವೆ. ಹುಲಿ ಸೇರಿದಂತೆ ವನ್ಯಮೃಗಗಳ ಹಾವಳಿ ಇಲ್ಲಿನ ಜನರು ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆ. ರಸ್ತೆ ಸೇರಿದಂತೆ ಇತರೆ ಮೂಲಸೌಕರ್ಯಗಳ ಕೊರತೆ ಇದ್ದೇ ಇದೆ.

ಭದ್ರಾ ಹುಲಿ ಸಂರಕ್ಷಿತ ಪ್ರದೇಶಕ್ಕೆ ಹೊಂದಿಕೊಂಡಂತೆ 57 ಕಂದಾಯ ಗ್ರಾಮಗಳಿವೆ. ಅರಣ್ಯದಂಚಿನ ಪ್ರದೇಶದಲ್ಲಿ ಹುಲಿಗಳ ಓಡಾಟ ಹೆಚ್ಚಾಗಿದೆ. ಕಾಡಂಚಿನ ಗ್ರಾಮಗಳಲ್ಲಿ ರಸ್ತೆ, ವಿದ್ಯುತ್, ನೀರಿನ ಸಮಸ್ಯೆ ಇದೆ.

ಅಭಿವೃದ್ಧಿಯಲ್ಲಿ ಇಲಾಖೆ ಪಾತ್ರ: ಮಾನವ ವನ್ಯಜೀವಿ ಸಂಘರ್ಷ ತಡೆಯುವುದನ್ನು ಬಿಟ್ಟು, ಗ್ರಾಮಗಳ ಅಭಿವೃದ್ಧಿಯಲ್ಲಿ ಅರಣ್ಯ ಇಲಾಖೆಯ ಪಾತ್ರ ಹೆಚ್ಚಿಲ್ಲ ಎಂಬುದು ಅಧಿಕಾರಿಗಳ ಹೇಳಿಕೆ. 'ಆದರೆ, ಪರಿಸರ ಅಭಿವೃದ್ಧಿ ಸಮಿತಿ (ಇಡಿಸಿ), ಪರಿಸರ ಪ್ರವಾಸೋದ್ಯಮದ ಮೂಲಕ ಸ್ಥಳೀಯರಿಗೆ ಉದ್ಯೋಗ ನೀಡುವುದು, ವಿವಿಧ ಸೌಲಭ್ಯಗಳನ್ನು ಕಲ್ಪಿಸುವುದಕ್ಕೆ ಅವಕಾಶ ಇದೆ. ಹುಲಿ ಸಂರಕ್ಷಿತ ಪ್ರದೇಶದಲ್ಲಿ ಪರಿಸರ ಪ್ರವಾಸೋದ್ಯಮಕ್ಕೆ ಅವಕಾಶಗಳು ಹೆಚ್ಚು. ಹುಲಿ ಯೋಜನೆಗೆ ಕೇಂದ್ರ ಸರ್ಕಾರದಿಂದ ವಾರ್ಷಿಕವಾಗಿ ₹10 ಕೋಟಿಯಷ್ಟು ಅನುದಾನ ಬರುತ್ತದೆ. ಇದನ್ನು ಬಳಸಿಕೊಂಡು ಸ್ಥಳೀಯ ಜನರನ್ನು ಆರ್ಥಿಕವಾಗಿ ಸದೃಢ ಮಾಡುವಂತಹ ಯೋಜನೆಗಳನ್ನು ರೂಪಿಸುವುದಕ್ಕೆ ಅವಕಾಶ ಇದೆ' ಎಂದು ಹೇಳುತ್ತಾರೆ ಅಧಿಕಾರಿಗಳು.

ಬಿಆರ್‌ಟಿಯಲ್ಲಿ ಗಿರಿಜನರ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರ ಸಂಘ (ಲ್ಯಾಂಪ್ಸ್), ಕೆ.ಗುಡಿಯಲ್ಲಿರುವ ಪರಿಸರ ಅಭಿವೃದ್ಧಿ ಸಮಿತಿ ಉತ್ತಮವಾಗಿ ನಡೆಯುತ್ತಿದೆ. ಬಂಡೀಪುರದಲ್ಲಿ ಜಿಲ್ಲಾ ಪಂಚಾಯಿತಿ, ಅರಣ್ಯ ಇಲಾಖೆಯ ಸಹಯೋಗದಲ್ಲಿ ಗಿರಿಜನರಿಗೆ ಲಂಟಾನದಿಂದ ಗೃಹೋಪಯೋಗಿ ಅಲಂಕಾರಿಕ ವಸ್ತುಗಳನ್ನು ತಯಾರಿಸುವ ತರಬೇತಿಯನ್ನೂ ನೀಡಲಾಗುತ್ತಿದೆ. ಇಂತಹ ಬೆರಳೆಣಿಕೆಯಷ್ಟು ಉದಾಹರಣೆಗಳನ್ನು ಬಿಟ್ಟು, ಕಾಡಂಚಿನ ಗ್ರಾಮಗಳನ್ನು ಪ್ರಗತಿಯ ದಾರಿಯಲ್ಲಿ ಕೊಂಡೊಯ್ಯುವ ಪ್ರಯತ್ನಗಳು ನಡೆಯುತ್ತಿಲ್ಲ.

ಚರ್ಚೆ ಮುನ್ನೆಲೆಗೆ: ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ವನ್ಯಧಾಮವನ್ನು ಹುಲಿ ಯೋಜನೆಯಾಗಿ ಘೋಷಿಸುವ ಪ್ರಸ್ತಾವಕ್ಕೆ ತೀವ್ರ ವಿರೋಧ ವ್ಯಕ್ತವಾಗುತ್ತಿರುವ ಬೆನ್ನಲ್ಲೇ ಹುಲಿ ಯೋಜನೆಯ ಸಾಧಕ ಬಾಧಕಗಳ ಚರ್ಚೆ ಮುನ್ನಲೆಗೆ ಬಂದಿದೆ. ವನ್ಯಧಾಮದ ಒಳಗೆ 10 ಕುಗ್ರಾಮಗಳಿವೆ. ಹುಲಿಯೋಜನೆ ಘೋಷಣೆಯಾದರೆ ಈ ಗ್ರಾಮಗಳ ಪರಿಸ್ಥಿತಿ ಇನ್ನಷ್ಟು ಹದಗೆಡಲಿವೆ. ಅರಣ್ಯ ಇಲಾಖೆ ಗ್ರಾಮಸ್ಥರನ್ನು, ಗಿರಿಜನರನ್ನು ಒಕ್ಕಲೆಬ್ಬಿಸಿ ಅತಂತ್ರರನ್ನಾಗಿ ಮಾಡಲಿದೆ ಎಂಬ ಕಾರಣಕ್ಕೆ ಸ್ಥಳೀಯರು ಯೋಜನೆ ವಿರೋಧಿಸುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರೇ ಬಹಿರಂಗವಾಗಿ ವಿರೋಧಿಸುತ್ತಿರುವುದರಿಂದ ಘೋಷಣೆ ನನೆಗುದಿಗೆ ಬಿದ್ದಿದೆ.

(ಪೂರಕ ಮಾಹಿತಿ: ಬಿ.ಜೆ.ಧನ್ಯಪ್ರಸಾದ್, ನಾ.ಮಂಜುನಾಥಸ್ವಾಮಿ, ಮಲ್ಲೇಶ ಎಂ, ಬಿ.ಬಸವರಾಜು, ಸಚ್ಚಿತ್, ಸತೀಶ್ ಆರಾಧ್ಯ)

ದೇವರು ವರ ಕೊಟ್ಟರೂ ಪೂಜಾರಿ ಕೊಡಲಿಲ್ಲ!

ಹನೂರು (ಚಾಮರಾಜನಗರ): ತಾಲ್ಲೂಕಿನ ಮಲೆಮಹದೇಶ್ವರ ವನ್ಯಧಾಮದ ವ್ಯಾಪ್ತಿಯ ಚಂಗಡಿಯ ಗ್ರಾಮಸ್ಥರ ಸ್ಥಿತಿ ಈ ಗಾದೆ ಮಾತನ್ನು ಹೋಲುತ್ತದೆ.

ಗ್ರಾಮಗಳಲ್ಲಿ ಸೌಲಭ್ಯಗಳಿಲ್ಲ ಎಂಬ ಕಾರಣಕ್ಕೆ ಸ್ವಯಂಪ್ರೇರಿತರಾಗಿ ಇಡೀ ಗ್ರಾಮದ ಸ್ಥಳಾಂತರಕ್ಕೆ ಗ್ರಾಮಸ್ಥರು ಒಪ್ಪಿದರೂ ಇನ್ನೂ ಅನುದಾನ ನೀಡಲು ಹಿಂದೆಮುಂದೆ ನೋಡುತ್ತಿದೆ. ಗ್ರಾಮ ಸ್ಥಳಾಂತರಕ್ಕಾಗಿ ಜಾಗ ಗುರುತಿಸಿ, ಆ ಸ್ಥಳದ ಅಭಿವೃದ್ಧಿಯ ನೀಲ ನಕ್ಷೆಯನ್ನು ಅರಣ್ಯ ಇಲಾಖೆ ತಯಾರಿಸಿದೆ. ಗ್ರಾಮಸ್ಥರಿಗೆ ನೀಡಬೇಕಾದ ಪರಿಹಾರ ಪ್ಯಾಕೇಜನ್ನೂ ಸಿದ್ಧಪಡಿಸಲಾಗಿದೆ. ಯೋಜನೆಗೆ ₹34.50 ಕೋಟಿ ವೆಚ್ಚವಾಗುತ್ತದೆ. ಸರ್ಕಾರ ಈ ಬಗ್ಗೆ ನಿರ್ಧರಿಸಿಲ್ಲ.

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಶೆಟ್ಟಹಳ್ಳಿಯಲ್ಲಿ ಕಲ್ಪಿಸಿರುವ ಪುನರ್ವಸತಿ ಮಾದರಿಯಲ್ಲಿಯೇ ಈ ಯೋಜನೆಯನ್ನು ಕೈಗೆತ್ತಿಕೊಳ್ಳುವುದು ಅರಣ್ಯ ಇಲಾಖೆಯ ಯೋಜನೆ. ಪುನರ್ವಸತಿಗೆ ಒಪ್ಪಿಕೊಂಡವರಿಗಾಗಿ ಮೂರು ರೀತಿಯ ಪ್ಯಾಕೇಜ್ ಮಾಡಲಾಗಿದೆ.



ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರ ವನ್ಯಧಾಮದ ಒಳಗಿರುವ ಚಂಗಡಿ ಗ್ರಾಮ

ಸ್ಥಳಾಂತರಗೊಂಡ ಕುಟುಂಬಗಳಿಗೆ ₹15 ಲಕ್ಷ ನಗದು ನೀಡುವುದು, ಎರಡನೇ ಪ್ಯಾಕೇಜ್‌ನಲ್ಲಿ ಪ್ರತಿ ಕುಟುಂಬಕ್ಕೆ ₹75 ಸಾವಿರ ನಗದು, ಮೂರು ಎಕರೆ ಜಮೀನು ಹಾಗೂ ಮನೆ ನಿರ್ಮಿಸಿಕೊಡುವುದು, ₹5 ಲಕ್ಷ ನಗದು ಹಾಗೂ ಪ್ರತಿ ಕುಟುಂಬಕ್ಕೂ ಒಂದು ಮನೆ ನಿರ್ಮಿಸಿ ಕೊಡುವುದು ಮೂರನೇ ಪ್ಯಾಕೇಜ್.

ಮೊದಲನೇ ಪ್ಯಾಕೇಜ್‌ಗೆ 90 ಕುಟುಂಬಗಳು ಒಪ್ಪಿದ್ದರೆ ಇನ್ನೆರಡು ಪ್ಯಾಕೇಜ್‌ಗಳಿಗೆ ಕ್ರಮವಾಗಿ 116 ಮತ್ತು 24 ಕುಟುಂಬಗಳು ಒಪ್ಪಿಕೊಂಡಿವೆ. ಸಮಗ್ರ ಯೋಜನಾ ವರದಿಯನ್ನು ಸರ್ಕಾರಕ್ಕೆ ಕಳುಹಿಸಿ ಎರಡು ವರ್ಷ ಕಳೆಯುತ್ತಿದ್ದರೂ ಈ ಸಂಬಂಧ ಯಾವ ನಿರ್ಧಾರವೂ ಹೊರ ಬಿದ್ದಿಲ್ಲ.

ಭದ್ರಾ: ಪರದೇಶಪ್ಪನ ಮಠದ ಕುಟುಂಬಗಳಿಗೆ ಪುನರ್ವಸತಿ ಬಾಕಿ

ಭದ್ರಾ ಹುಲಿ ಸಂರಕ್ಷಿತ ಯೋಜನೆ ವ್ಯಾಪ್ತಿಯಲ್ಲಿ ಪುನರ್ವಸತಿ ಯೋಜನೆಯು ಅಂದಿನ ಡಿಸಿಎಫ್ ಡಿ.ಯತೀಶ್ ಕುಮಾರ್ ನಿರಂತರ ಪ್ರಯತ್ನದಿಂದ ಯಶಸ್ಸು ಕಂಡಿದೆ. ಈ ಪುನರ್ವಸತಿಗೆ ವರ್ಲ್ಡ್ ವೈಡ್ ಫಂಡ್ ನೇಚರ್ ಇಂಡಿಯಾ ಮತ್ತು ಪೆಸಿಫಿಕ್ ಏಷ್ಯಾ ಟ್ರಾವೆಲ್ ಅಸೋಸಿಯೇಷನ್‌ನ ಸಾಂಸ್ಥಿಕ ಪುರಸ್ಕಾರ 2001ರಲ್ಲಿ ಸಂದಿದೆ.

ಯೋಜನೆ ವ್ಯಾಪ್ತಿಯಲ್ಲಿದ್ದ ಮುತ್ತೋಡಿ, ಕೆಸವೆ, ಮಾಡ್ಲಾ, ತಬ್ಬಗಾರ್, ವಡ್ಡಿಹಟ್ಟಿ, ಕಂಚಿಗಾರ್‌ಕಾಲೊನಿ, ಹೆಬ್ಬೆ, ಕರವಾನಿ, ಹಿಪ್ಲಾ, ಹೆಗ್ಗಾರು, ಮತ್ವಾನಿ, ಹಿರೇಬಳ್ಳದ ಕುಟುಂಬಗಳಿಗೆ ಕೆಳಗೂರು, ಬಾಳೆಹಳ್ಳಿ, ಎಂ.ಸಿ. ಹಳ್ಳಿ ಭಾಗದಲ್ಲಿ ಪುನರ್ವಸತಿ ಕಲ್ಪಿಸಲಾಗಿದೆ. ಪರದೇಶಪ್ಪನ ಮಠದ ಕುಟುಂಬಗಳು ಸ್ಥಳಾಂತರಗೊಂಡಿಲ್ಲ, ಪುನರ್ವಸತಿ ಕಲ್ಪಿಸುವ ಕಾರ್ಯ ಆಗಿಲ್ಲ. ಈ ಕುಟುಂಬಗಳು ಪುನರ್ವಸತಿಗಾಗಿ ಹಲವು ಬಾರಿ ಪ್ರತಿಭಟನೆ ನಡೆಸಿವೆ. ಈವರೆಗೆ ಸಮಸ್ಯೆ ಪರಿಹರಿಸಿಲ್ಲ.

ಪುನರ್ವಸತಿ ಕಲ್ಪಿಸಿರುವ ಜಾಗದಲ್ಲಿ ರಸ್ತೆ ಹದಗೆಟ್ಟಿರುವುದು, ವನ್ಯಜೀವಿಗಳ ಹಾವಳಿ ಸಮಸ್ಯೆಗಳಿವೆ.

ಹುಲಿ ಯೋಜನೆಗೆ ವಿರೋಧವಿಲ್ಲ. ಅರಣ್ಯದ ಒಳಗೆ, ಅಂಚಿನ ಗ್ರಾಮಗಳಿಗೆ ಮೂಲಸೌಕರ್ಯ ಕಲ್ಪಿಸಲಿ. ಅರಣ್ಯ ಸಂರಕ್ಷಣೆ ಕಾಯ್ದೆಯಲ್ಲಿ ಅದಕ್ಕೆ ಅವಕಾಶ ಮಾಡಿಕೊಡಲಿ

ಹೊನ್ನೂರು ಪ್ರಕಾಶ್
ರೈತ ಸಂಘದ ಜಿಲ್ಲಾಧ್ಯಕ್ಷ, ಚಾಮರಾಜನಗರ

ಕಾಡಿಗೂ ನಮಗೂ ಅವಿನಾಭಾವ ಸಂಬಂಧ. ನಮಗೆ ಕಾಡಿನಿಂದ ಹೊರಗಡೆ ಪುನರ್ವಸತಿ ಕಲ್ಪಿಸಿದ್ದಾರೆ. ಈಗ ಅರಣ್ಯಕ್ಕೆ ಹೋಗುವುದಕ್ಕೂ ಅವಕಾಶ ಕೊಡುವುದಿಲ್ಲ. ಕೂಲಿ ಮಾಡಿ ಜೀವನ ಸಾಗಿಸಬೇಕಾಗಿದೆ

ಪುಟ್ಟಮ್ಮ, ಕಾರೇಮಾಳ ಕಾಲೊನಿ, ಬಂಡೀಪುರ

ಭದ್ರಾ ಹುಲಿ ಯೋಜನೆ ವ್ಯಾಪ್ತಿಯಲ್ಲಿ 13 ಹಳ್ಳಿಗಳನ್ನು ಸ್ಥಳಾಂತರಿಸಿ ಅಚ್ಚುಕಟ್ಟಾಗಿ ಪುನರ್ವಸತಿ ಕಲ್ಪಿಸಿದ್ದಾರೆ. ವಸತಿ, ನೀರಾವರಿ ಜಮೀನು ಒದಗಿಸಿದ್ದಾರೆ. ಇದೊಂದು ಯಶಸ್ವಿ ಯೋಜನೆ

ಡಿ.ವಿ.ಗಿರೀಶ್
ಟ್ರಸ್ಟಿ, ಭದ್ರಾ ವೈಲ್ಡ್‌ಲೈಫ್ ಕನ್ಸರ್ವೇಷನ್ ಟ್ರಸ್ಟ್

ಹುಲಿ ಯೋಜನೆಯಾದರೆ ಅರಣ್ಯ ಇಲಾಖೆ ಗಿರಿಜನರನ್ನು ಒಕ್ಕಲೆಬ್ಬಿಸುತ್ತದೆ. ರಸ್ತೆ, ಮನೆ ನಿರ್ಮಾಣಕ್ಕೂ ಅವಕಾಶ ಕೊಡುವುದಿಲ್ಲ. ನಮ್ಮ ಹಬ್ಬ ಆಚರಣೆ, ಸಂಸ್ಕೃತಿ ಪಾಲನೆಗೂ ತೊಂದರೆಯಾಗುತ್ತದೆ

ಡಾ.ಸಿ.ಮಾದೇಗೌಡ, ಜಿಲ್ಲಾ ಗಿರಿಜನ ಅಭಿವೃದ್ಧಿ ಸಂಘದ ಕಾರ್ಯದರ್ಶಿ, ಚಾಮರಾಜನಗರ

ಕಾಡಿನ ಗ್ರಾಮಗಳ ಸ್ಥಿತಿಯೂ ಚಿಂತಾಜನಕ

ಒಂದನೇ ಪುಟದಿಂದ...

ವಿದ್ಯುತ್‌ಗೆ ಸೋಲಾರ್ ಘಟಕ ಇದೆ. ಆದರೆ ಪದೇ ಪದೇ ಹಾಳಾಗುವುದರಿಂದ ಸೌಲಭ್ಯ ಇದ್ದರೂ ಪ್ರಯೋಜನಕ್ಕೆ ಸಿಗುವುದಿಲ್ಲ. ವಿದ್ಯುತ್ ಇಲ್ಲದಿದ್ದರೆ, ಕುಡಿಯುವ ನೀರಿಗೆ ಗ್ರಾಮಸ್ಥರು ಕಿ.ಮೀ ಗಟ್ಟಲೆ ನಡೆಯಬೇಕು. ಈ ಬಾರಿ ನಿರಂತರವಾಗಿ ಸುರಿದ ಮಳೆಗೆ 50ಕ್ಕೂ ಹೆಚ್ಚು ಮನೆಗಳು ಶಿಥಿಲವಾಗಿದ್ದು, ಮನೆಗಳು ಕುಸಿಯುವ ಸ್ಥಿತಿಯಲ್ಲಿವೆ. 'ಗ್ರಾಮದಲ್ಲಿ ಮನೆಗಳ ಚಾವಣಿ ಶಿಥಿಲವಾಗಿದೆ. ಮುಂಭಾಗದ ಬಾಗಿಲು ಕಿತ್ತು ಹೋಗಿದೆ. ಕದ ಇಲ್ಲದ ಮನೆಗಳಿಗೆ ಚಳಿ, ಗಾಳಿ ನುಗ್ಗುತ್ತಿದೆ. ಕೆಲವು ಕುಟುಂಬಗಳಲ್ಲಿ ಗೋಡೆಗಳು ಇಲ್ಲ. ಸೋಗೆ, ಪ್ಲಾಸ್ಟಿಕ್ ಬಳಸಿ ಬದುಕು ಸಾಗಿಸುತ್ತಿದ್ದೇವೆ. ಪುಟ್ಟ ಮಕ್ಕಳನ್ನು ಕೊರೆಯುವ ಚಳಿಯಲ್ಲಿ ರಕ್ಷಿಸುವುದೇ ಪೋಷಕರಿಗೆ ಸವಾಲಾಗಿದೆ. ಮಣ್ಣಿನ ಮನೆಗಳು ಗಾಳಿ, ಮಳೆಗೆ ಬೀಳುವ ಸ್ಥಿತಿಯಲ್ಲಿ ಇವೆ. ಪ್ರಾಣ ಭಯ ಪ್ರತಿದಿನ ದಿನ ಕಾಡಿದೆ' ಎಂದು ಲಕ್ಷ್ಮಿ ಹೇಳಿದರು.

ನಾಗರಹೊಳೆ, ಬಂಡೀಪುರ ವ್ಯಾಪ್ತಿಯಲ್ಲಿ ಅರಣ್ಯದಿಂದ ಪುನರ್ವಸತಿ ಕೇಂದ್ರಗಳಿಗೆ ಸ್ಥಳಾಂತರಗೊಂಡಿರುವ ಗಿರಿಜನರ ಜೀವನಸ್ಥಿತಿ ಇನ್ನೂ ಸುಧಾರಿಸಿಲ್ಲ.

'ಹುಣಸೂರಿನ ತಾಲ್ಲೂಕಿನ ಶೆಟ್ಟಹಳ್ಳಿ, ಹೆಬ್ಬಳ್ಳ ಪುನರ್ವಸತಿ ಕೇಂದ್ರಗಳಿಗೆ ಬಂದವರಿಗೆ, ನಾಗಾಪುರ ಕೇಂದ್ರದ ಫಲಾನುಭವಿಗಳಿಗಿಂತಲೂ ಹೆಚ್ಚು ಪ್ರಯೋಜನವಾಗಿದೆ. ಇಲಾಖೆಯು ಅವರಿಗೆ ₹15 ಲಕ್ಷದ ಪ್ಯಾಕೇಜ್ ಘೋಷಿಸಿ, ಮನೆ, 3 ಎಕರೆ ಕೃಷಿ ಭೂಮಿ ಮತ್ತು ₹3.50 ಲಕ್ಷವನ್ನು ಪ್ರತಿ ಕುಟುಂಬದ ಹೆಸರಿನಲ್ಲಿ ಠೇವಣಿ ಇಟ್ಟಿದೆ. ಅದನ್ನು ಗಿರಿಜನರ ಕಲ್ಯಾಣಕ್ಕೆ ಬಳಸುವುದಾಗಿ ಇಲಾಖೆ ತಿಳಿಸಿದೆ. ಆದರೆ ಕೃಷಿ ಭೂಮಿ ಅಭಿವೃದ್ಧಿಗೆ ಅದನ್ನೇ ಕೊಡಿ ಎಂದರೆ ಸಮ್ಮತಿ ನೀಡದಿರುವುದರಿಂದ ಆರ್ಥಿಕ ಸಂಕಷ್ಟ ಎದುರಾಗಿದೆ' ಎಂದು ಶೆಟ್ಟಹಳ್ಳಿ ಕೇಂದ್ರದ ನಿವಾಸಿ ಜೆ.ಕೆ.ರಾಜಪ್ಪ ಹೇಳಿದರು.




ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಒಳಗಡೆ ಇರುವ ಪುರಾಣಿ ಪೋಡಿನ ಗುಡಿಸಲಿನ ಮುಂದೆ ಮಕ್ಕಳೊಂದಿಗೆ ನಿಂತಿರುವ ಸೋಲಿಗ ಮಹಿಳೆ

ಹಾಡಿಗಳಿಗೆ ಆಹಾರ ಪೂರೈಕೆ: ಸರ್ಕಾರದ ಇತರೆ ಸವಲತ್ತುಗಳು ಪೂರ್ಣ ಪ್ರಮಾಣದಲ್ಲಿ ಆದಿವಾಸಿಗಳು ವಾಸಿಸುವ ಹಾಡಿಗಳು, ಕಾಲೊನಿಗಳಿಗೆ ತಲುಪದಿದ್ದರೂ, ಪೌಷ್ಟಿಕ ಆಹಾರ ಪೂರೈಕೆ ಸಮರ್ಪಕವಾಗಿ ಆಗುತ್ತಿದೆ. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ವರ್ಷದ ಆರು ತಿಂಗಳ ಕಾಲ ಗಿರಿಜನರಿಗೆ ಆಹಾರವನ್ನು ಒದಗಿಸುತ್ತದೆ.

'ಕೂಲಿ ಇಲ್ಲದ ಸಂದರ್ಭದಲ್ಲಿ ಈ ಆಹಾರವೇ ನಮ್ಮ ಹೊಟ್ಟೆ ತುಂಬಿಸುತ್ತದೆ' ಎಂದು ಕಾರೆಮಾಳ ಕಾಲೊನಿಯ ಪುಟ್ಟಮ್ಮ ತಿಳಿಸಿದರು.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 8-1-1998

● ಶ್ರೀಪೆರಂದೂರಿನಿಂದ ಸೋನಿಯಾ ಪ್ರಚಾರ

ನವದೆಹಲಿ, ಜನವರಿ 7– ಕಾಂಗ್ರೆಸ್ ಪರ ಪ್ರಚಾರ ನಡೆಸಲು ಒಪ್ಪಿರುವ ಸೋನಿಯಾ ಗಾಂಧಿ ಅವರು ಆರೂವರೆ ವರ್ಷಗಳ ಹಿಂದೆ ತಮ್ಮ ಪತಿ ಹತ್ಯೆಗೀಡಾದ ಶ್ರೀಪೆರಂಬದೂರ್‌ನಿಂದ ಈ ತಿಂಗಳು 11ರಂದು ಪ್ರಚಾರ ಕಾರ್ಯ ಆರಂಭಿಸಲಿದ್ದಾರೆ.

ಶ್ರೀಪೆರಂಬದೂರ್‌ನಲ್ಲಿರುವ ತಮ್ಮ ಪತಿ ರಾಜೀವ್ ಗಾಂಧಿ ಅವರ ಸ್ಮಾರಕಕ್ಕೆ ಗೌರವ ಸಲ್ಲಿಸಿದ ನಂತರ ಸೋನಿಯಾ ಅವರು ಚುನಾವಣಾ ಪ್ರಚಾರ ಕಾರ್ಯದಲ್ಲಿ ತೊಡಗುವರು.

50 ವರ್ಷಗಳ ಹಿಂದೆ

ಸೋಮವಾರ, 8-1-1973

● ಕೊಂಕಣ ರೈಲ್ವೆ ನಿರ್ಮಾಣ ಯೋಜನೆಗೆ ಕೇಂದ್ರದ ಒಪ್ಪಿಗೆ

ಔರಂಗಾಬಾದ್, ಜನವರಿ 7– ಅಭಾವ ಪರಿಹಾರ ಕಾಮಗಾರಿಯಾಗಿ ಕೊಂಕಣ ರೈಲ್ವೆ ಯೋಜನೆ ಆರಂಭಿಸುವುದಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ.

ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು ಅಭಾವ ಪ್ರದೇಶಗಳಿಗೆ ಹೆಲಿಕಾಪ್ಟರಿನಲ್ಲಿ ಸಂಚರಿಸಿ ಕ್ಷಿಪ್ರ ಭೇಟಿ ನೀಡಿದ ಸಂದರ್ಭದಲ್ಲಿ 2,000 ಜನ ಸಂಖ್ಯೆಯ ಆಚೆಗಾವ್‌ನಲ್ಲಿ ಐದು ಮಿನಿಟುಗಳ ಭಾಷಣ ಮಾಡಿದಾಗಲೂ ರೈಲ್ವೆ ಕಾಮಗಾರಿ ವಿಚಾರ ತಿಳಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಜನವರಿ 8, 2023

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣಪ್ರತಿಪದ್ ಗಂ.07-08 ನಕ್ಷತ್ರ: ಪುಷ್ಯ ಗಂ.30-05 ಯೋಗ: ವೈಧೃತಿ ಗಂ.09-42, ಕರಣ: ಕೌಲವ ಗಂ.07-08, ಧನುರ್ ಮಾಸದ 23 ನೇ ದಿನ.

ರಾಹುಕಾಲ : ಸಾಯಂಕಾಲ 04-30 –06-00
ಸೂರ್ಯೋದಯ : 06-59 ಸೂರ್ಯಾಸ್ತ : 06-15
ಮುಸ್ಲಿಂ ದಿನಾಂಕ : 15 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 2, 8

ಮೇಷ: ಗೆಳೆತನಕ್ಕೆ ಸಂಬಂಧಿಸಿದ ವಿಷಯಗಳಿಗೆ ಇಂದು ಪೋಷಕರಿಂದ ಬಹಳಷ್ಟು ಪ್ರೋತ್ಸಾಹ ಸಿಗುವುದು. ದಿನಸಿ ವರ್ತಕರು ವ್ಯಾಪಾರದಲ್ಲಿ, ಬಂಡವಾಳ ಹೂಡಿಕೆಯಲ್ಲಿ ಕಾಳಜಿ ವಹಿಸಬೇಕಾಗುವುದು.

ವೃಷಭ: ಆದರ್ಶವಾದಿ ಗುಂಪಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ನಿಮ್ಮ ವ್ಯಕ್ತಿತ್ವದಲ್ಲಿ ಒಳ್ಳೆ ಬದಲಾವಣೆಗಳಾಗುವುದು. ಪುಣ್ಯಕ್ಷೇತ್ರ ದರ್ಶನದಿಂದ ಮನಸ್ಸಿಗೆ ನೆಮ್ಮದಿ. ಸಹೋದರಿಗೆ ಕಂಕಣ ಭಾಗ್ಯ ಕೂಡಿ ಬರಲಿದೆ.

ಮಿಥುನ: ನಿಮ್ಮ ತೊಂದರೆಗಳೆಲ್ಲಾ ಒಂದೊಂದಾಗಿ ಉಪಶಮನಗೊಳ್ಳುತ್ತಾ ಹಂತ ಹಂತವಾಗಿ ಅಭಿವೃದ್ಧಿ ತೋರಿ ಬರುವುದು. ಮನೆಯಲ್ಲಿನ ನೆಮ್ಮದಿಯ ವಾತಾವರಣವು ಸಂತಸ ತರಲಿದೆ. ಮುದ್ರಣ ವೃತ್ತಿಯವರಿಗೆ ಉತ್ತಮ ಲಾಭ.

ಕರ್ಕಾಟಕ: ಸ್ವಂತ ಹೋಟೆಲ್ ಪ್ರಾರಂಭ ಮಾಡುವ ಯೋಚನೆಯು ಫಲಪ್ರದವಾಗುತ್ತದೆ. ದಿನದಿಂದ ದಿನಕ್ಕೆ ತಾಯಿಯ ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು. ಗುತ್ತಿಗೆದಾರರಿಗೆ ಹೊಸ ಗುತ್ತಿಗೆ ಸಿಗುವ ಸಂಭವ.

ಸಿಂಹ: ರಹಸ್ಯವಾಗಿ ಸಿಗುವ ಬೆಂಬಲದಿಂದ ನಿಮ್ಮ ಕನಸು ನನಸಾಗಲಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೆಚ್ಚಿನ ಪರಿಶ್ರಮ ಉತ್ತಮ. ವಿದೇಶದಿಂದ ಶುಭ ಸಮಾಚಾರ ಕೇಳುವಿರಿ. ದುರ್ಜನ ಸಹವಾಸದ ದುಷ್ಫಲ ಅನುಭವಕ್ಕೆ ಬರಲಿದೆ.

ಕನ್ಯಾ: ವೃತ್ತಿ ಜೀವನಕ್ಕೆ ಸಂಬಂಧಿಸಿದ ಗುರಿಗಳನ್ನು ಈಡೇರಿಸಿಕೊಳ್ಳುವಲ್ಲಿ ಸಫಲರಾಗುವಿರಿ. ಸ್ನೇಹಿತರೊಂದಿಗೆ ಸಂತೋಷ ಕೂಟಗಳಲ್ಲಿ, ಸಾಮಾಜಿಕ ಸಮಾರಂಭಗಳಲ್ಲಿ ಭಾಗವಹಿಸುವ ಅವಕಾಶ. ಹಸಿರು ಬಣ್ಣ ಶುಭ ತರಲಿದೆ.

ತುಲಾ: ಗುಂಪು ಗುಂಪಾಗಿ ಅಥವಾ ಬೇರೆಯವರೊಂದಿಗೆ ಸೇರಿ ಮಾಡುವ ಕೆಲಸದಿಂದ ಯಶಸ್ಸು. ಈಗಾಗಲೇ ಆರಂಭಿಸಿರುವ ಕೆಲಸವೂ ಬೆಳವಣಿಗೆಯ ಹಾದಿಯಲ್ಲಿ ಸಾಗುತ್ತದೆ. ಅವಿವಾಹಿತರಿಗೆ ವಿವಾಹ ಯೋಗ ಕೂಡಿಬರಲಿದೆ.

ವೃಶ್ಚಿಕ: ಜವಾಬ್ದಾರಿಗಳನ್ನು ನಿಭಾಯಿಸಲು ಸಿದ್ಧರಾಗಬೇಕಾಗಿದೆ. ಮನೆಯವರ ಒಳಿತಿಗಾಗಿ ಹೊಸ ಮಾರ್ಗ ಕಂಡುಕೊಳ್ಳಲು ಇದು ಸೂಕ್ತ ಸಮಯ. ನಿಮ್ಮ ನಿಮ್ಮ ವ್ಯಕ್ತಿತ್ವಕ್ಕೆ ಅನುಗುಣವಾಗಿ ಸಮಾಜದಲ್ಲಿ ಗೌರವ ದೊರೆಯಲಿದೆ.

ಧನು: ನಿಮ್ಮ ಹೊಸ ಯೋಜನೆಗೆ ಹೊಸ ರೂಪ ನೀಡಲು ಇಂದು ಬಹಳಷ್ಟು ಅವಕಾಶಗಳು ಎದುರಾಗುವುದು. ನಶಿಸಿ ಹೋಗಿದ್ದ ಪ್ರೇರಣೆ ಮತ್ತೆ ಮರಳುವುದು. ನಿಮ್ಮ ಶ್ರಮದಿಂದ ಸಿಗುವ ಪ್ರತಿಫಲ ಉತ್ತಮವಾಗಿರುವುದು.

ಮಕರ: ಹೆಚ್ಚಿನ ಆದಾಯದಿಂದ ಸಂಸಾರದಲ್ಲಿ ಸಂತೋಷ ಉಂಟಾಗುವುದು. ಗುರಿ ಸಾಧನೆಗೆ ಸ್ನೇಹಿತರಿಂದ ನೆರವು. ಭಯವನ್ನು ಹೊಡೆದೋಡಿಸುವ ಸಾಮರ್ಥ್ಯ ನಿಮ್ಮಲ್ಲಿದೆ. ಮಾನಸಿಕ ಕ್ಷೋಭೆ ದೂರಾಗುವುದು.

ಕುಂಭ: ಕಳೆದು ಹೋದದ್ದನ್ನು ಮತ್ತೆ ಪಡೆದುಕೊಳ್ಳವ ಹಂಬಲದಿಂದ ಹುಡುಕುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುವಿರಿ. ರಾಜಕೀಯ ರಂಗದವರು ನಿರ್ಲಿಪ್ತವಾಗಿರುವ ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಉತ್ತಮ.

ಮೀನ: ಸ್ವಂತ ಮನೆ ಮಾಡುವ ಬಗ್ಗೆ ಯೋಚಿಸಿ. ಮುಖ್ಯ ಕೆಲಸಗಳಿಗೆ ಆಪ್ತರ ಸಲಹೆ ಸ್ವೀಕರಿಸುವುದು ಅಗತ್ಯ. ವೈದ್ಯಕೀಯ ವೃತ್ತಿ ನಡೆಸುವವರಿಗೆ ಆಶ್ಚರ್ಯಕರವಾದ ಅನುಭವ ಸಿಗಲಿದೆ. ಹೊಸ ಬಟ್ಟೆ ಖರೀದಿಸುವ ಯೋಗವಿದೆ.

ಪದಬಂಧ 5193


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸೂರ್ಯನ ಕಾವಿನಲ್ಲಿ ಗೋಚರಿಸಿದ ಮರೀಚಿಕೆ (5)
3.ಅಗಲವಾದ ಹರಿವಾಣ (3)
5.ಬೆಲೆಯುಳ್ಳ ಮಣಿಯಿದು (2)
6.ಹೆಂಡತಿ ಇಲ್ಲಿ ತಿರುಗಿದ್ದಾಳಲ್ಲಾ! (2)
8.ಪ್ರಾತಃಕಾಲವಿದು (3)
9.ಕಿರೀಟಧಾರಣ ಮಹೋತ್ಸವವಿದು (5)
12.ಅಂತರಂಗದಲ್ಲಿನ ಅಲೆ (3)
13.ಇಂದ್ರಿಯಗಳನ್ನು ಹಿಡಿತದಲ್ಲಿಕೊಂಡಿರುವವನು (2)
15.ಒಗ್ಗರಣೆಗೆ ಹಾಕುವ ವಸ್ತು (2)
16.ಬಂಗಾರ ಇಲ್ಲಿದೆ (3)
17.ನೀರು ಹರಿದು ಹೋಗಲು ಮಾಡಿರುವ ಕೊಳವೆ (5)

ಮೇಲಿಂದ ಕೆಳಕ್ಕೆ

1.ಶಾಖವನ್ನು ಸೂಸುತ್ತಿರುವ ನೆತ್ತರು (4)
2.ಹೀನ ಸ್ಥಿತಿಯಿದು (3)
4.ಅಂತರವಿರುವ ತಲೆಮಾರು! (4)
7.ಒಳ್ಳೆಯ ಅಭಿಪ್ರಾಯ (5)
8.ಪ್ರತೀ ಸಲ ಕಾಣಿಸಿರುವ ಚಿಹ್ನೆ! (3)
9.ಹೂವಿನಲ್ಲಿರುವ ಹುಡಿ (3)
10.ಪರಮಾತ್ಮ ಇಲ್ಲಿಯೇ ಪ್ರತ್ಯಕ್ಷ! (4)
11.ಲಗ್ಗೆ ಹಾಕುವ ಬಗೆ ಬಹಳ ಚುರುಕು! (4)
14.ತಿರುಗುತ್ತಿರುವ ಕುಂಬಾರನ ಚಕ್ರ (3)



5192ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಂತಃಪುರ 3.ವಕ್ರತುಂಡ
5.ಸವಾರ 6.ಜಲಜ
8.ಜಲ್ಲರಿ 9.ಪ್ರಧಾನಿ
10.ಮಧ್ಯಸ್ಥ 11.ಕನ್ನಡ
12.ತನಯ 14.ದಾಯಾದಿ
16.ಶಯ್ಯಾಗೃಹ 17.ನಖಹತಿ

ಮೇಲಿಂದ ಕೆಳಕ್ಕೆ:
1.ಅಂಡಜ 2.ರಸ
3.ವರ 4.ಡಬರಿ
7.ಜನನಿಬಿಡ 8.ಜನುಮದಾತ
11.ಕಳಶ 13.ಯಯಾತಿ
14.ದಾಹ 15.ದಿನ

ಸುಡೊಕು 5579

3	5		7		2		8	
						3		4
	7	8	3		9		1	
1		4	8				2	3
				3				
8		7			1		5	9
2		3	9		6	5		8
		6						
	8		5		4		3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5578 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನಂಜುಂಡರಾವ್ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಎಸ್.ಎಂ.ಕೃಷ್ಣ ಬಣ್ಣನೆ

‘ಯಶೋಗಾಥೆಯನ್ನೇ ಬರೆದ ಚಿತ್ರಸಂತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಿತ್ರಕಲೆ ಹಾಗೂ ಸಾಮಾನ್ಯ ಶಿಕ್ಷಣಕ್ಕೆ ನಿಕಟ ಸಂಬಂಧವಿದೆ. ಈ ಸಂಬಂಧ ಮತ್ತಷ್ಟು ವೃದ್ಧಿ ಆಗಬೇಕಿದೆ’ ಎಂದು ಕರ್ನಾಟಕ ಚಿತ್ರಕಲಾ ಪರಿಷತ್ ಟ್ರಸ್ಟ್‌ನ ಅಧ್ಯಕ್ಷ ಎಸ್.ಎಂ. ಕೃಷ್ಣ ಹೇಳಿದರು.

ನಗರದ ಚಿತ್ರಕಲಾ ಪರಿಷತ್‌ನಲ್ಲಿ ಶನಿವಾರ ಸಾಧಕರಿಗೆ ಪ್ರೊ.ಎಂ.ಎಸ್. ನಂಜುಂಡರಾವ್ ರಾಷ್ಟ್ರೀಯ ಪ್ರಶಸ್ತಿ ಹಾಗೂ ಚಿತ್ರಕಲಾ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಚಿತ್ರಕಲಾ ಮಹಾವಿದ್ಯಾಲಯಗಳ ಜತೆಗೆ ವಿಶ್ವವಿದ್ಯಾಲಯಗಳೂ ಕೈಜೋಡಿಸಬೇಕು. ಆಗ ಮಾತ್ರ ಕಲೆ ಹಾಗೂ ಕಲಾವಿದರ ಬೆಳವಣಿಗೆಗೆ ನೆರವಾಗಲಿದೆ ಎಂದು ಸಲಹೆ ನೀಡಿದರು.

‘20 ವರ್ಷಗಳಿಂದ ನಡೆಯುತ್ತಿರುವ ಚಿತ್ರಸಂತೆಯು ಯಶೋಗಾಥೆಯನ್ನೇ ಬರೆದಿದೆ. ಚಿತ್ರಸಂತೆಗೆ ಉತ್ತಮ ಪ್ರತಿಕ್ರಿಯೆ ಲಭಿಸುತ್ತಿದೆ. ಜತೆಗೆ ಸ್ಥಳೀಯ ಕಲಾವಿದರಿಗೆ ವೇದಿಕೆ ಕಲ್ಪಿಸುತ್ತಿದೆ. ಕಲಾಕೃತಿಗಳನ್ನು ಖರೀದಿಸುವ ಮೂಲಕ ಕಲಾವಿದರಿಗೆ ಉತ್ತೇಜನ ನೀಡಬೇಕು’ ಎಂದು ಕರೆ ನೀಡಿದರು.

‘ಪರಿಷತ್‌ನ ಕಟ್ಟಡವು ನಗರದ ಹೃದಯ ಭಾಗದಲ್ಲಿ ಸ್ಥಾಪನೆ ಆಗಲು ಸಾಕಷ್ಟು ಮಹನೀಯರು ಶ್ರಮಿಸಿದ್ದಾರೆ. ದೇವರಾಜ ಅರಸು ಮುಖ್ಯಮಂತ್ರಿ ಹಾಗೂ ನಾನು ಸಚಿವನಾಗಿದ್ದ ಅವಧಿಯಲ್ಲಿ ಈ ಜಾಗವನ್ನು ಸರ್ಕಾರಿ ವಾಹನಗಳ ಚಾಲಕರ ವಸತಿಗೆ ನೀಡುವ ಪ್ರಸ್ತಾವ ಸಂಪುಟದ ಎದುರು ಬಂದಿತ್ತು. ಅಂದು ಪ್ರಸ್ತಾವ ತಡೆ ಹಿಡಿದು ಚಾಲಕರಿಗೆ ಪರ್ಯಾಯ ಜಾಗ ಕಲ್ಪಿಸಿ ಚಿತ್ರಕಲಾ ಪರಿಷತ್‌ಗೆ ಈ ಜಾಗ ನೀಡಲಾಯಿತು. 9 ಎಕರೆ ಪ್ರದೇಶದಲ್ಲಿ ಪರಿಷತ್ ಕಲಾ ಚಟುವಟಿಕೆಯ ತಾಣವಾಗಿದೆ’ ಎಂದು ಹೇಳಿದರು.

‘ಪರಿಷತ್‌ನಲ್ಲೂ ಅಸಮಾಧಾನವಿತ್ತು. ಈಗಿನ ಆಡಳಿತ ಮಂಡಳಿಯ ಪರಿಶ್ರಮ ಹಾಗೂ ಕರ್ತವ್ಯ ನಿಷ್ಠೆಯಿಂದ ಪರಿಷತ್ ಉತ್ತಮ ಕೆಲಸ ಮಾಡುತ್ತಿದೆ’ ಎಂದು ಶ್ಲಾಘಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಸ್.ಎಂ.ಜಯಶಂಕರ್ ಮಾತನಾಡಿ, ‘ಹೊಸ ಶಿಕ್ಷಣ ನೀತಿಯಂತೆ ವಿಜ್ಞಾನದ ವಿದ್ಯಾರ್ಥಿಗಳೂ ಸಂಗೀತ ಹಾಗೂ ಚಿತ್ರಕಲೆ ಕಲಿಯಲು ಅವಕಾಶವಿದೆ. ಉತ್ತಮ ಚಿತ್ರಕಲೆ ಬಿಡಿಸುವವರು ಹೆಚ್ಚಿನ ವರ್ಷ ಜೀವಿಸುತ್ತಾರೆ. ಚಿತ್ರಕಲೆ, ಶಿಲ್ಪಕಲೆ ಮಾನವೀಯತೆ ಬೆಳೆಸುತ್ತದೆ. ಕಲೆಯಿಂದ ಸೃಜನಶೀಲತೆ ಬೆಳೆದು ಸ್ಫೂರ್ತಿ ತುಂಬಲಿದೆ. ಕಲಾ ಶಿಕ್ಷಣಕ್ಕೆ ಪರಿಷತ್ ಕೊಡುಗೆ ಅಪಾರ’ ಎಂದರು.

ಚಿತ್ರಕಲಾ ಪರಿಷತ್‌ನ ಅಧ್ಯಕ್ಷ ಬಿ.ಎಲ್.ಶಂಕರ್ ಮಾತನಾಡಿ, ‘ಪರಿಷತ್ ಕಟ್ಟಿ ಬೆಳೆಸಿದ ಮಹನೀಯರ ಹೆಸರಿನಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ. ಕೋವಿಡ್ ಸಾಂಕ್ರಾಮಿಕದ ಸಂಕಷ್ಟದ ವೇಳೆಯೂ ಪರಿಷತ್‌ನ ಸಿಬ್ಬಂದಿಯ ವೇತನ ಕಡಿತ ಮಾಡಲಿಲ್ಲ’ ಎಂದರು.

‘ಚಿತ್ರಸಂತೆಯಲ್ಲಿ ಪಾಲ್ಗೊಳ್ಳಲು 2,500ರಷ್ಟು ಕಲಾವಿದರು ಉತ್ಸಾಹ ತೋರಿದ್ದರೂ ಸ್ಥಳದ ಕೊರತೆಯಿಂದ ಭಾನುವಾರ ನಡೆಯಲಿರುವ ಚಿತ್ರಸಂತೆಯಲ್ಲಿ 1,200 ಕಲಾವಿದರಿಗೆ ಅವಕಾಶ ಕಲ್ಪಿಸಲಾಗುತ್ತಿದೆ’ ಎಂದರು.

‘ಪರಿಷತ್ ಕಟ್ಟಡ ನಿರ್ಮಿಸಲು ದೇವರಾಜ ಅರಸು ಅವರು ಸ್ಥಳ ನೀಡಿ ಅನುದಾನ ನೀಡಿದ್ದರು. ದೇವೇಗೌಡ, ಸಿದ್ದರಾಮಯ್ಯ, ಯಡಿಯೂರಪ್ಪ ಅವರೂ ಪರಿಷತ್ ಕಾರ್ಯ ಚಟುವಟಿಕೆಗೆ ಅನುದಾನ ನೀಡಿದ್ದಾರೆ’ ಎಂದು ಹೇಳಿದರು.

ಪರಿಷತ್‌ನ ಪ್ರಧಾನ ಕಾರ್ಯದರ್ಶಿ ಎಸ್.ಎನ್.ಶಶಿಧರ್ ಹಾಜರಿದ್ದರು.



ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಭಾನುವಾರ ನಡೆಯುವ 20ನೇ ಚಿತ್ರಸಂತೆಗೆ ಕಾಲೇಜಿನ ವಿದ್ಯಾರ್ಥಿಗಳು ಕಾಲೇಜಿನ ಆವರಣವನ್ನು ರಂಗುರಂಗಾಗಿ ಅಲಂಕರಿಸುತ್ತಿರುವ ದೃಶ್ಯ ಶನಿವಾರ ಕಂಡುಬಂತು ಪ್ರಜಾವಾಣಿ ಚಿತ್ರ/ ರಂಜು ಪಿ.


ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಸಾಧಕರಾದ (ಕುಳಿತವರು ಎಡದಿಂದ) ಪ್ರೊ.ರಜನಿ ಪ್ರಸನ್ನ (ಎಂ.ಆರ್ಯಮೂರ್ತಿ ಪ್ರಶಸ್ತಿ), ಕೆ.ವಿಠಲ ಭಂಡಾರಿ (ವೈ.ಸುಬ್ರಹ್ಮಣ್ಯರಾಜು ಪ್ರಶಸ್ತಿ), ಪ್ರೊ.ಕೆ.ಲಕ್ಷ್ಮಣಗೌಡ (ಪ್ರೊ.ಎಂ.ಎಸ್.ನಂಜುಂಡರಾವ್ ಪ್ರಶಸ್ತಿ), ಮಾರ್ಥ ಯಾಕಿಮೋವಿಝ್ (ಎಚ್.ಕೆ.ಕೇಜ್ರಿವಾಲ್ ಪ್ರಶಸ್ತಿ) ಹಾಗೂ ಶಾಂತಾಮಣಿ ಮುದ್ದಯ್ಯ (ಡಿ.ದೇವರಾಜ ಅರಸು ಪ್ರಶಸ್ತಿ) ಅವರಿಗೆ 2022–23ನೇ ಸಾಲಿನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪರಿಷತ್ ಅಧ್ಯಕ್ಷ ಬಿ.ಎಲ್.ಶಂಕರ್, ಕರ್ನಾಟಕ ಚಿತ್ರಕಲಾ ಪರಿಷತ್ ಟ್ರಸ್ಟ್‌ನ ಅಧ್ಯಕ್ಷ ಎಸ್.ಎಂ.ಕೃಷ್ಣ, ಬೆಂಗಳೂರು ವಿ.ವಿ ಕುಲಪತಿ ಪ್ರೊ.ಎಸ್.ಎಂ.ಜಯಶಂಕರ್, ಪರಿಷತ್ ಪ್ರಧಾನ ಕಾರ್ಯದರ್ಶಿ ಎಸ್.ಎನ್.ಶಶಿಧರ್ ಹಾಜರಿದ್ದರು. – ಪ್ರಜಾವಾಣಿ ಚಿತ್ರ

‘ನಾಲ್ಕು ಕಡೆ ದೆಹಲಿ ಮಾದರಿ ಶಾಲೆ’

ಬೆಂಗಳೂರು: ‘ಯಾವ ಮಗುವೂ ಶಿಕ್ಷಣದಿಂದ ವಂಚಿತರಾಗಬಾರದು ಎನ್ನುವ ಉದ್ದೇಶದಿಂದ ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಾಲ್ಕು ಸ್ಥಳದಲ್ಲಿ ದೆಹಲಿ ಮಾದರಿ ಸರ್ಕಾರಿ ಶಾಲೆ ನಿರ್ಮಿಸಲಾಗಿದೆ’ ಎಂದು ಸಚಿವ ಕೆ.ಗೋಪಾಲಯ್ಯ ಹೇಳಿದರು.

ಪಶ್ಚಿಮ ಕಾರ್ಡ್ ರಸ್ತೆಯ ಅಂಬೇಡ್ಕರ್ ಮೆಮೋರಿಯಲ್ ಸೊಸೈಟಿ ಶಾಲಾ ವಾರ್ಷಿಕೋತ್ಸವದಲ್ಲಿ ಅವರು ಮಾತನಾಡಿದರು.

ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಮಲಾನಗರದ ಅಟಲ್ ಬಿಹಾರಿ ವಾಜಪೇಯಿ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ ಮತ್ತು ನಂದಿನಿ ಬಡಾವಣೆಯ ಕೃಷ್ಣಾನಂದ ನಗರದ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಿ, ಸಾವಿರಾರು ಬಡ ಮತ್ತು ಮಧ್ಯಮ ವರ್ಗದ ಮಕ್ಕಳಿಗೆ ಸಂಪೂರ್ಣ ಉಚಿತ ಶಿಕ್ಷಣ ನೀಡಲಾಗುತ್ತಿದೆ ಎಂದು ಅವರು ಹೇಳಿದರು.

ಡಿಡಿಪಿಯು ಬಿ.ಕೆ.ಶ್ರೀರಾಮ್, ಚಾಲೆಂಜರ್ಸ್ ಯೂತ್ ಅಸೋಸಿಯೇಷನ್ ಅಧ್ಯಕ್ಷ ಎಂ.ಮನೋಜ್, ಅಂಬೇಡ್ಕರ್ ಮೆಮೋರಿಯಲ್ ಸೊಸೈಟಿ ಅಧ್ಯಕ್ಷ ಡಾ.ರವಿಪ್ರಕಾಶ್ ಉಪಸ್ಥಿತರಿದ್ದರು.

ದೊಡ್ಡಬಳ್ಳಾಪುರ: ಪೌರಾಯುಕ್ತ, ಕಂದಾಯ ಅಧಿಕಾರಿ ಅಮಾನತು

ದೊಡ್ಡಬಳ್ಳಾಪುರ: ಯೋಜನಾ ಅಭಿವೃದ್ಧಿ ಪ್ರಾಧಿಕಾರದ ಅನುಮೋದನೆ ಪಡೆಯದೇ ನಿವೇಶನಗಳಿಗೆ ಇ-ಸ್ವತ್ತು ಮಾಡಿಕೊಟ್ಟಿರುವ ಆರೋಪದ ಮೇಲೆ ಈ ಹಿಂದೆ ದೊಡ್ಡಬಳ್ಳಾಪುರ ನಗರಸಭೆ ಪೌರಾಯುಕ್ತರಾಗಿದ್ದ ಹಾಗೂ ಪ್ರಸ್ತುತ ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತ ರಮೇಶ್ ಎಸ್. ಸುಣಗಾರ ಹಾಗೂ ಇಲ್ಲಿನ ನಗರಸಭೆ ಕಂದಾಯ ಅಧಿಕಾರಿ ರವೀಂದ್ರ ಬಿ.ಜಾಯಗೊಂಡೆ ಅವರನ್ನು ಅಮಾನತು ಮಾಡಲಾಗಿದೆ.

ಪೌರಾಡಳಿತ ಇಲಾಖೆ ನಿರ್ದೇಶಕಿ ಎನ್.ಮಂಜುಶ್ರೀ ಅವರು ಇಬ್ಬರೂ ಅಧಿಕಾರಿಗಳನ್ನು ಅಮಾನತುಗೊಳಿಸಿ ಗುರುವಾರ ಆದೇಶ ಹೊರಡಿಸಿದ್ದಾರೆ.

ದೊಡ್ಡಬಳ್ಳಾಪುರ ನಗರಸಭೆಯ ನಗರಸಭೆ 11ನೇ ವಾರ್ಡ್ ಕರೇನಹಳ್ಳಿ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಯ 39 ನಿವೇಶನಗಳಿಗೆ ಇ-ಸ್ವತ್ತು ಮಾಡಿಕೊಟ್ಟಿರುವ ಆರೋಪ ಈ ಇಬ್ಬರೂ ಅಧಿಕಾರಿಗಳ ಮೇಲಿತ್ತು. ಈ ಬಡಾವಣೆಗೆ ನಗರ ಯೋಜನಾ ಪ್ರಾಧಿಕಾರದ ಅನುಮೋದನೆ ಪಡೆದಿರಲಿಲ್ಲ.

ಪೌರಾಡಳಿತ ನಿರ್ದೇಶನಾಲಯ ಹಾಗೂ ಸರ್ಕಾರದ ಸುತ್ತೋಲೆ ಅನುಸಾರ ಖಾತೆಗಳನ್ನು ರದ್ದುಪಡಿಸಲು ಕ್ರಮ ವಹಿಸದೇ 39 ನಿವೇಶನಗಳ ಆಸ್ತಿಯ ಹಕ್ಕನ್ನು ಪೌವತಿ ಖಾತೆಗಳನ್ನು ಮಾಡಿಕೊಟ್ಟಿರುವ ಬಗ್ಗೆ ಇಲಾಖಾ ವಿಚಾರಣೆ ಬಾಕಿ ಇರಿಸಿ ಅಮಾನತುಗೊಳಿಸಿ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಪೌರಾಡಳಿತ ಇಲಾಖೆಗೆ ಪತ್ರ ಬರೆದಿದ್ದರು.


ನಟ ದಿವಂಗತ ಪುನೀತ್ ರಾಜಕುಮಾರ್ ಅವರಿಗೆ ಮರಣೋತ್ತರವಾಗಿ ನೀಡಿದ ರೇವಾ ಜೀವಮಾನ ಸಾಧನೆ ಪ್ರಶಸ್ತಿಯನ್ನು ರಾಘವೇಂದ್ರ ರಾಜಕುಮಾರ್ ಅವರು ಶನಿವಾರ ಸ್ವೀಕರಿಸಿದರು. ರೇವಾ ವಿವಿ ಕುಲಾಧಿಪತಿ ಡಾ.ಪಿ.ಶ್ಯಾಮರಾಜು, ಕುಲಪತಿ ಡಾ.ಎಂ.ಧನಂಜಯ, ಟ್ರಸ್ಟಿ ಉಮೇಶ್ ರಾಜು ಇದ್ದರು

ರೇವಾ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ

ಯಲಹಂಕ: ರೇವಾ ವಿಶ್ವವಿದ್ಯಾಲಯದ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ನೀಡಲಾಗುವ ‘ರೇವಾ ಜೀವಮಾನ’ ಸಾಧನೆ ಪ್ರಶಸ್ತಿಯನ್ನು ಹಿರಿಯ ನಟಿ ಸಾಹುಕಾರ್ ಜಾನಕಿ ಹಾಗೂ ವಿಜ್ಞಾನಿ ಡಾ.ಎ.ಶಿವತನು ಪಿಳ್ಳೈ ಅವರಿಗೆ ಪ್ರದಾನ ಮಾಡಲಾಯಿತು. ಪುನೀತ್ ರಾಜಕುಮಾರ್ (ಮರಣೋತ್ತರ) ಅವರನ್ನು ಕೂಡ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ನಟ ರಾಘವೇಂದ್ರ ರಾಜಕುಮಾರ್ ಸ್ವೀಕರಿಸಿದರು.

ಬಾಲಿವುಡ್ ನಟ ಸೋನು ಸೂದ್ ಅವರಿಗೆ ‘ರೇವಾ ಎಕ್ಸಲೆನ್ಸ್’ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವಿಜ್ಞಾನಿ ಡಾ.ಎ.ಶಿವತನು ಪಿಳ್ಳೈ ಮಾತನಾಡಿ, ‘ಯುವಕರು ದೇಶದ ಭವಿಷ್ಯವಾಗಿದ್ದು, ದೇಶವನ್ನು ಪ್ರಗತಿಯ ಪಥದಲ್ಲಿ ಕೊಂಡೊಯ್ಯಬೇಕಾದ ಜವಾಬ್ದಾರಿ ನಿಮ್ಮ ಮೇಲಿದೆ’ ಎಂದರು.

ವಿದ್ಯಾರ್ಥಿಗಳು ದೇಶಕ್ಕೆ ಒಳಿತಾಗುವಂತಹ ನೂತನ ಅನ್ವೇಷನೆಗಳನ್ನು ಕೈಗೊಳ್ಳುವ ಮೂಲಕ ಯಶಸ್ವಿಯಾಗಿ ಅನುಷ್ಠಾನಗೊಳಿಸಬೇಕು. ರೇವಾ ವಿಶ್ವವಿದ್ಯಾಲಯವು ಪರಿಸರವನ್ನು ಉತ್ತಮವಾಗಿ ನಿರ್ವಹಣೆ ಮಾಡುವ ಮೂಲಕ ಪರಿಸರ ಸಂರಕ್ಷಣೆಗೆ ತಮ್ಮದೇ ಆದ ರೀತಿಯಲ್ಲಿ ಕೊಡುಗೆ ನೀಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ತಿಳಿಸಿದರು.

ನಟ ಸೋನು ಸೂದ್ ಮಾತನಾಡಿ, ‘ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ಹಲವು ಪಾತ್ರಗಳಲ್ಲಿ ನಟಿಸಿದ್ದರೂ ಕಳೆದ ಎರಡು ವರ್ಷಗಳ ಜೀವನವು ನನ್ನ ಬದುಕಿನ ನಿಜವಾದ ಪಾತ್ರವಾಗಿದೆ’ ಎಂದರು.

‘ಐಐಎಸ್‌ಸಿ ವರದಿ ಬಳಿಕ ಕ್ರಮ’

ಹಳೆ ಮದ್ರಾಸ್ ರಸ್ತೆಯಲ್ಲಿ ನಿರ್ಮಿಸುತ್ತಿರುವ ‘ರ‍್ಯಾಪಿಡ್ ರಸ್ತೆ’ ಬಿರುಕು: ತುಷಾರ್ ಗಿರಿನಾಥ್ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೆ ಮದ್ರಾಸ್ ರಸ್ತೆಯಲ್ಲಿ ನಿರ್ಮಿಸುತ್ತಿರುವ ‘ರ‍್ಯಾಪಿಡ್ ರಸ್ತೆ’ ಬಿರುಕು ಬಿಟ್ಟಿರುವ ಸಂಬಂಧ ಐಐಎಸ್‌ಸಿ ತಜ್ಞರು ಪರಿಶೀಲನೆ ನಡೆಸುತ್ತಿದ್ದು, ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಇದು ಪ್ರಾಯೋಗಿಕ ರಸ್ತೆಯಾಗಿದ್ದು, ಬಿರುಕು ಬಿಡಲು ಕಾರಣ ಏನು ಮತ್ತು ಮುಂದೇನು ಮಾಡಬೇಕು ಎಂಬುದನ್ನು ಐಐಎಸ್‌ಸಿ ತಜ್ಞರು ವರದಿಯಲ್ಲಿ ತಿಳಿಸಲಿದ್ದಾರೆ. ಈ ರಸ್ತೆ ನಿರ್ಮಾಣ ಆರ್ಥಿಕವಾಗಿಯೂ ಕಾರ್ಯಸಾಧುವೆ ಎಂಬುದರ ಕುರಿತು ಪರಿಶೀಲನೆ ನಡೆಸಲಾಗುವುದು ಎಂದು ಹೇಳಿದರು.


ತುಷಾರ್ ಗಿರಿನಾಥ್

‘ಅಷ್ಟು ದಪ್ಪದಾದ ಪ್ರಿಕಾಸ್ಟ್ ರಸ್ತೆ ಬೇಕೆ-ಬೇಡವೇ ಎಂಬುದನ್ನು ವೈಜ್ಞಾನಿಕವಾಗಿ ಪರಿಶೀಲಿಸಬೇಕಾಗುತ್ತದೆ. ಎಷ್ಟು ದರ ಆಗಲಿದೆ ಎಂಬುದನ್ನು ನೋಡಿಕೊಂಡು ಮುಂದುವರಿಯಬೇಕಾಗುತ್ತದೆ. ಕಾರ್ಯಸಾಧು ಎನಿಸಿದರೆ ಲೋಕೋಪಯೋಗಿ ಇಲಾಖೆ ಎಸ್‌ಆರ್ ದರ ನಿಗದಿ ಮಾಡಲಿದೆ. ಈಗ ನಿರ್ಮಿಸುತ್ತಿರುವ ರಸ್ತೆ ಪ್ರಾಯೋಗಿಕವಷ್ಟೇ’ ಎಂದರು.

ಡಿವಿಜಿ ರಸ್ತೆಯಲ್ಲಿನ ವ್ಯಾಪಾರಿಗಳಿಗೆ ನೋಟಿಸ್ ನೀಡಿರುವ ವಿಷಯದ ಬಗ್ಗೆ ಪ್ರತಿಕ್ರಿಯಿಸಿದ ಅವರು, ವಾಸದ ಉದ್ದೇಶದ ಕಟ್ಟಡವನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿದ್ದರೆ ಆಸ್ತಿ ತೆರಿಗೆ ಪಾವತಿಸಬೇಕಾಗುತ್ತದೆ. ವಾಣಿಜ್ಯ ಉದ್ದೇಶಕ್ಕೆ ಪರಿವರ್ತನೆ ಮಾಡಿಕೊಳ್ಳದಿದ್ದರೆ ಕಾನೂನು ರೀತಿಯಲ್ಲಿ ಕ್ರಮ ಜರುಗಿಸುವುದು ಅನಿವಾರ್ಯ ಎಂದರು.

ಜ.16ರಿಂದ ಒತ್ತುವರಿ ತೆರವು

‘ರಾಜಕಾಲುವೆ ಒತ್ತುವರಿ ತೆರವು ಸಂಬಂಧ ಸಭೆ ನಡೆಸಿದ್ದೇವೆ. 242 ಆಸ್ತಿಗಳ ಸರ್ವೆ ಕಾರ್ಯ ಪೂರ್ಣಗೊಂಡಿದ್ದು, 26 ಪ್ರಕರಣದಲ್ಲಿ ತೆರವಿಗೆ ಆದೇಶ ಕೂಡ ಆಗಿದೆ. ಇದೇ 16ರ ನಂತರ ತೆರವು ಕಾರ್ಯಾಚರಣೆಯನ್ನು ಮತ್ತೆ ಆರಂಭಿಸಲಾಗುವುದು ಎಂದು ತುಷಾರ್ ಗಿರಿನಾಥ್ ಹೇಳಿದರು.

ಬಾಕಿ ಪ್ರಕರಣದಲ್ಲೂ ಆದೇಶವಾಗಬೇಕಿದ್ದು, ಜನವರಿ 30ರ ವೇಳೆಗೆ ಎಲ್ಲಾ ಪ್ರಕರಣದಲ್ಲೂ ಆದೇಶ ಹೊರಡಿಸಿ ತೆರವಿಗೆ ಕ್ರಮ ಕೈಗೊಳ್ಳಲಾಗುವುದು. ಈ ಪೈಕಿ 233 ಪ್ರಕರಣವನ್ನು ನಗರ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ನಡೆಯಲಿದೆ. ಸದ್ಯ ಆದೇಶ ಆಗಿರುವ ಪ್ರಕರಣಗಳಲ್ಲಿ 17 ಆಸ್ತಿ ತೆರವು ಕಾರ್ಯಾಚರಣೆ ನಡೆಯಬೇಕಿದೆ. ರಾಜಕಾಲುವೆ ಮೇಲೆ ಯಾವುದೇ ಆಸ್ತಿ ಇದ್ದರೂ ತೆರವುಗೊಳಿಸಲು ಹಿಂದೆ ಮುಂದೆ ನೋಡುವುದಿಲ್ಲ ಎಂದರು.

‘ನಿಜವಾದ ಕವಿ ವಿಶ್ವಮಾನವ ತತ್ವದ ಪರಿಪಾಲಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಿಜವಾದ ಕವಿ ವಿಶ್ವಮಾನವ ತತ್ವದ ಪರಿಪಾಲಕನಾಗಿದ್ದು, ಆತ ಸತ್ಯಕ್ಕೆ ಹತ್ತಿರ ಇರುತ್ತಾನೆ’ ಎಂದು ರಾಜ್ಯಸಭಾ ಸದಸ್ಯ ಡಾ.ಎಲ್. ಹನುಮಂತಯ್ಯ ಪ್ರತಿಪಾದಿಸಿದರು.

ಡಾ.ಎಸ್.ಗೋವಿಂದಪ್ಪ ಪಾವಗಡ ಸ್ನೇಹ ಬಳಗವು ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಎಸ್.ಗೋವಿಂದಪ್ಪ ಪಾವಗಡ ಅವರ ‘ಹರಿದ ಚಡಾವು’ ಮತ್ತು ‘ಬೆಂಕಿ ಮುಳ್ಳು’ ಕವನ ಸಂಕಲನ ಬಿಡುಗಡೆ ಮಾಡಿ ಮಾತನಾಡಿದರು.

‘ಕವಿ ಸತ್ಯವನ್ನೇ ಪ್ರತಿಪಾದಿಸುತ್ತಾನೆ. ಗೋವಿಂದಪ್ಪ ಅವರ ಕವಿತೆಗಳು ಯುದ್ಧ ವಿರೋಧಿ ನೀತಿ ಹೇಳುತ್ತವೆ. ಆದರೆ, ಎಲ್ಲ ಭಾಷೆಗಳ ಕವಿಗಳೂ ಯುದ್ಧ ವಿರೋಧಿಯೇ ಆಗಿರುತ್ತಾರೆ. ಆದರೆ, ರಾಜಕಾರಣಿಗಳು ಬೇರೆ ರೀತಿಯಲ್ಲಿ ಅರ್ಥೈಸುತ್ತಾರೆ. ಯುದ್ಧದಿಂದ ಸೈನಿಕರ ಕುಟುಂಬಗಳು ಮಾತ್ರವಲ್ಲ. ಮನುಷ್ಯತ್ವವೇ ನಶಿಸುತ್ತದೆ’ ಎಂದು ಹೇಳಿದರು.

ಸಾಹಿತಿ ಬರಗೂರು ರಾಮಚಂದ್ರಪ್ಪ ಮಾತನಾಡಿ, ‘ಕವಿಯಾದವನು ಮುನ್ನುಡಿ, ಬೆನ್ನುಡಿ ಆಶ್ರಯಿಸಿ ಕೂರಬಾರದು. ಮುನ್ನುಡಿ ಬೆನ್ನುಡಿಯಿಂದಲೇ ಕಾವ್ಯ ಗೆಲ್ಲುತ್ತದೆ ಎಂಬುದು ಸುಳ್ಳು. ಒಂದಷ್ಟು ಮಂದಿ ಇದನ್ನು ಗ್ರಹಿಸಬಹುದು ಅಷ್ಟೆ. ನಿಜವಾದ ಕಾವ್ಯ ಎಲ್ಲ ಕಾಲದಲ್ಲೂ ಓದುಗನನ್ನು ಸಲ್ಲುತ್ತದೆ. ಎಲ್ಲವನ್ನೂ ಮೀರಿ ಕವಿ ಬೆಳೆಯಬೇಕು. ಕಾವ್ಯ ಶಕ್ತಿಯಿಂದ ಕವಿ ಗೆಲ್ಲುವುದು’ ಎಂದು ಪ್ರತಿಪಾದಿಸಿದರು.

ಇಂದಿನ ಸಾಮಾಜಿಕ ಸಂದರ್ಭದಲ್ಲಿ ಕವಿತೆಗಳು ಹೇಗಿರಬೇಕು? ಕವಿಗಳ ಜವಾಬ್ದಾರಿ ಏನು ಎಂಬುದರ ಕುರಿತೂ ಅವರು ಹೇಳಿದರು.

ಕವಿ ಡಾ.ಎಚ್.ಲಕ್ಷ್ಮಿನಾರಾಯಣಸ್ವಾಮಿ ಕೃತಿ ಕುರಿತು ಮಾತನಾಡಿದರು.


ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಆರ್.ಎನ್.ಎಸ್ ಪ್ರಥಮ ದರ್ಜೆ ಕಾಲೇಜಿನ ಆಶ್ರಯದಲ್ಲಿ ಗಾನ ಸೌರಭ ಯಕ್ಷಗಾನ ಶಾಲೆಯ ವತಿಯಿಂದ ‘ಯಕ್ಷ ದಶಮಿ’ ಪರಿಸರ ಜಾಗೃತಿಯ ಕುರಿತು ಶನಿವಾರ ಯಕ್ಷಗಾನವನ್ನು ಪ್ರದರ್ಶಿಸಲಾಯಿತು. ನಂತರ ಗಾನ ಸೌರಭ ಯಕ್ಷಗಾನ ಶಾಲೆಯ ಅಧ್ಯಕ್ಷ ಶಿವಕುಮಾರ್ ಬೇಗಾರ್ ಅವರನ್ನು ಸನ್ಮಾನಿಸಲಾಯಿತು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿವೃತ್ತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಿ.ಆರ್. ಕುಮಾರಸ್ವಾಮಿ, ಆರ್.ಎನ್.ಎಸ್ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಸುಧೀರ್ ಪೈ ಕೆ.ಎಲ್., ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ರವಿಶಂಕರ್ ಬಿ.ವಿ., ಶಿಲ್ಪಾ ಸರ್ನಾಡ್, ನಾಗಾರಾಜ ಎನ್. ಇದ್ದರು.

ಸಂಕ್ಷಿಪ್ತ ಸುದ್ದಿ

ಎಎಪಿ, ಬಿಜೆಪಿ ಪ್ರತ್ಯೇಕ ಪ್ರತಿಭಟನೆ

ನವದೆಹಲಿ (ಪಿಟಿಐ): ದೆಹಲಿ ಮಹಾನಗರ ಪಾಲಿಕೆಗೆ (ಎಂಸಿಡಿ) ನಾಮನಿರ್ದೇಶನಗೊಂಡ ಹತ್ತು ಸದಸ್ಯರಿಗೆ ಮೊದಲಿಗೆ ಪ್ರತಿಜ್ಞಾ ವಿಧಿ ಸ್ವೀಕರಿಸಲು ಅವಕಾಶ ನೀಡುವ ಮೂಲಕ ಸಂವಿಧಾನ ನಾಶ ಮಾಡಲಾಗುತ್ತಿದೆ ಎಂದು ಆರೋಪಿಸಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ನಿವಾಸ ಎದುರು ಎಎಪಿ ಪ್ರತಿಭಟನೆ ನಡೆಸಿತು.

ಮತ್ತೊಂದೆಡೆ ಎಎಪಿ ಸದಸ್ಯರು ಮಹಾನಗರ ಪಾಲಿಕೆ ಸಭೆಯಲ್ಲಿ ಕೋಲಾಹಲ ಸೃಷ್ಟಿಸಿದ್ದಾರೆ ಎಂದು ಆರೋಪಿಸಿ ದೆಹಲಿ ಬಿಜೆಪಿ ಕಾರ್ಯಾಧ್ಯಕ್ಷ ವೀರೇಂದ್ರ ಸಚ್ದೇವ ಸೇರಿದಂತೆ ಬಿಜೆಪಿ ನಾಯಕರು ರಾಜ್‌ಘಾಟ್‌ನಲ್ಲಿರುವ ಮಹಾತ್ಮ ಗಾಂಧಿ ಸ್ಮಾರಕದ ಬಳಿ ಧರಣಿ ನಡೆಸಿದರು.

ಪಾಲಿಕೆ ವಿರುದ್ಧ ಪ್ರಕರಣ ದಾಖಲಿಸಲು ಸೂಚನೆ

ಶಿವಮೊಗ್ಗ: ನಗರದ ವಿವಿಧೆಡೆ ಶನಿವಾರ ಮುಂಜಾನೆ ಸಂಚಾರ ನಡೆಸಿದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಅವರು ಸರಿಯಾಗಿ ಕಸ ವಿಲೇವಾರಿ ಮಾಡದಿರುವುದು ಹಾಗೂ ಸ್ವಚ್ಛತೆ ಕಾಪಾಡಿಕೊಳ್ಳದ ಕಾರಣಕ್ಕೆ ಮಹಾನಗರ ಪಾಲಿಕೆ ಆಯುಕ್ತರ ವಿರುದ್ಧ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ನಿಗದಿತ ಸ್ಥಳಗಳಲ್ಲಿ 15 ದಿನಗಳ ಒಳಗೆ ಕಸ ವಿಲೇವಾರಿ ಹಾಗೂ ಸ್ವಚ್ಛತೆ ಕೆಲಸ ಪೂರ್ಣಗೊಳಿಸಿ ವರದಿ ನೀಡುವಂತೆ ತಮ್ಮನ್ನು ಭೇಟಿ ಮಾಡಿದ ಪಾಲಿಕೆ ಆಯುಕ್ತ ಮಾಯಣ್ಣಗೌಡ ಅವರಿಗೆ ಸೂಚಿಸಿದರು.

ನಂತರ ಮೆಗ್ಗಾನ್ ಆಸ್ಪತ್ರೆಗೂ ಭೇಟಿ ನೀಡಿ ಪರಿಶೀಲಿಸಿದರು.

ಬಿಹಾರ: ಜಾತಿ ಗಣತಿಗೆ ಚಾಲನೆ

ಪಟ್ನಾ (ಪಿಟಿಐ): ಬಿಹಾರದಲ್ಲಿ ಜಾತಿ ಗಣತಿ ಪ್ರಕ್ರಿಯೆಯು ಶನಿವಾರ ಆರಂಭವಾಯಿತು. ಈ ಪ್ರಕ್ರಿಯೆಯನ್ನು ‘ಐತಿಹಾಸಿಕ ಹೆಜ್ಜೆ’ ಎಂದು ರಾಜ್ಯದ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರು ಕರೆದಿದ್ದಾರೆ.

‘ಮಹಾಘಟಬಂಧನ ಸರ್ಕಾರ ತೆಗೆದುಕೊಂಡಿರುವ ಐತಿಹಾಸಿಕ ಹೆಜ್ಜೆ ಇದು. ಈ ಗಣತಿಯು ಸಂಪೂರ್ಣವಾದರೆ, ಜನರಿಗಾಗಿ ಅಭಿವೃದ್ಧಿ ಯೋಜನೆಗಳನ್ನು ಮತ್ತು ಸಮಾಜದ ದುರ್ಬಲ ವರ್ಗಗಳಿಗೆ ಕಲ್ಯಾಣ ಯೋಜನೆಗಳನ್ನು ರೂಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರಕ್ಕೆ ಇದು ವೈಜ್ಞಾನಿಕ ಅಂಕಿಅಂಶ ಒದಗಿಸುತ್ತದೆ’ ಎಂದು ತಿಳಿಸಿದರು.

ನಗರದಲ್ಲಿ ಇಂದು

176ನೇ ಸದ್ಗುರು ತ್ಯಾಗಬ್ರಹ್ಮ ವೈದಿಕ ಆರಾಧನಾ ಕೈಂಕರ್ಯ ಮತ್ತು ಸಂಗೀತೋತ್ಸವ: ಬೆಳಿಗ್ಗೆ 7ಕ್ಕೆ ಗಣಪತಿ ಪೂಜೆ, ಬೆಳಿಗ್ಗೆ 10ರಿಂದ ಸಂಗೀತ ಕಾರ್ಯಕ್ರಮ: ಕೊಳಲು: ಎಚ್.ಎಸ್. ವೇಣುಗೋಪಾಲ್, ಪಿಟೀಲು: ಎಂ.ಪಿ. ಕೃತಿಕ್ ಕೌಶಿಕ್, ಮೃದಂಗ: ಎನ್.ಜಿ. ಶಶಿಭೂಷಣ್, ಘಟ: ಶ್ರೀನಿಧಿ ಆರ್. ಕೌಂಡಿನ್ಯ, ಮೋರ್ಸಿಂಗ್: ಡಿ.ವಿ. ಪ್ರಸನ್ನ ಕುಮಾರ್, ಆಯೋಜನೆ: ತ್ಯಾಗಬ್ರಹ್ಮ ಕೈಂಕರ್ಯ ಟ್ರಸ್ಟ್, ಸ್ಥಳ: ಶೃಂಗೇರಿ ಮಠ, ಶಂಕರಮಠ ರಸ್ತೆ, ಚಾಮರಾಜಪೇಟೆ

ಸ್ವಚ್ಛತಾ ಕಾರ್ಯಕ್ರಮ: ಘೋಷ ವಾಕ್ಯ: ‘ಬಡಾವಣೆ ಸ್ವಚ್ಛತಾ ಕಡೆಗೆ ನಮ್ಮ ನಡೆ’, ಆಯೋಜನೆ: ಪ್ರಮೋದ್, ರೆಡ್ಡಿ ಮತ್ತು ನಂದಿನಗರ ಬಡಾವಣೆ ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಫೌಂಡೇಷನ್ ಟ್ರಸ್ಟ್, ಸ್ಥಳ: ಹೊಸಕೆರೆಹಳ್ಳಿ ನೈಸ್‌ಟೋಲ್, ಪೆಸೆಟ್ ಕಾಲೇಜ್ ಹತ್ತಿರ, ಬೆಳಿಗ್ಗೆ 8.30

ಸಿಜಿಕೆ ಕಪ್–2023: ಉದ್ಘಾಟನೆ: ಬಿ.ಆರ್. ರವಿಕಾಂತೇಗೌಡ, ಕೆ.ವೈ. ನಾರಾಯಣಸ್ವಾಮಿ, ಉಪಸ್ಥಿತಿ: ಬಿ. ಆನಂದ್, ಜಯಲಕ್ಷ್ಮಿ ಸಿ.ಜಿ.ಕೆ., ಮಾಗಡಿ ಗಿರೀಶ್, ಸರ್ವೇಶ, ಭಾಸ್ಕರ್, ಸಿಂಧು ಭಾಸ್ಕರಂ, ಕೆ.ಎಚ್. ಕುಮಾರ್, ಆಯೋಜನೆ: ರಂಗಚಂದಿರ ತಂಡ, ಸ್ಥಳ: ಸರ್ಕಾರಿ ಕಲಾ ಕಾಲೇಜು ಆವರಣ, ಅಂಬೇಡ್ಕರ್ ವೀಧಿ, ನಗರ ಸಿವಿಲ್ ನ್ಯಾಯಾಲಯ ಪಕ್ಕ, ಬೆಳಿಗ್ಗೆ 9

‘ಭಾರತೀಯ ಜೈನ್ ಮಿಲನ್’ ವಲಯ–8: ಸಾನ್ನಿಧ್ಯ: ಅಮೋಘ ಕೀರ್ತಿ ಸ್ವಾಮೀಜಿ, ಅಮರ ಕೀರ್ತಿ ಸ್ವಾಮೀಜಿ, ಉದ್ಘಾಟನೆ: ರಾಜಸ್ ಜ್ಯೋತಿ ದೋಷಿ, ಕೀರ್ತಿ ರೂಬಿ ದಾವಡಾ, ನವೀನ್ ಜೈನ್, ಉಪಸ್ಥಿತಿ: ಧರ್ಮಸ್ಥಳ ಸುರೇಂದ್ರಕುಮಾರ್, ಅನಿತಾ ಸುರೇಂದ್ರಕುಮಾರ್, ಆಯೋಜನೆ: ಭಾರತೀಯ ಜೈನ್ ಮಿಲನ್, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಳಿಗ್ಗೆ 9.30

ಉಚಿತ ನೇತ್ರ ತಪಾಸಣಾ ಶಿಬಿರ: ಸಹಕಾರ: ನಾರಾಯಣ ನೇತ್ರಾಲಯ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಬೆಳಿಗ್ಗೆ 10

ಚಿತ್ರಸಂತೆ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಕಲಾ ಪ್ರದರ್ಶನದ ಉದ್ಘಾಟನೆ: ಡಾ. ಸಿ.ಎನ್. ಅಶ್ವತ್ಥನಾರಾಯಣ, ಅಧ್ಯಕ್ಷತೆ: ಬಿ.ಎಲ್. ಶಂಕರ್, ಅತಿಥಿಗಳು: ಆರ್. ಅಶೋಕ, ಆರಗ ಜ್ಞಾನೇಂದ್ರ, ಎಸ್.ಟಿ. ಸೋಮಶೇಖರ್, ವಿ. ಸುನಿಲ್ ಕುಮಾರ್, ಪಿ.ಸಿ. ಮೋಹನ್, ರಿಜ್ವಾನ್ ಅರ್ಷದ್, ಲಕ್ಷ್ಮ ಗೌಡ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 10.30

‘ಬಾಲ್ಕ್ ಸಂಕಲ್ಪ–2023’ ರಾಷ್ಟ್ರೀಯ ಯುವ ದಿನಾಚರಣೆ: ಅಧ್ಯಕ್ಷತೆ: ಎಲ್. ಹನುಮಂತಯ್ಯ, ಉಪಸ್ಥಿತಿ: ಎಂ.ವಿ. ರಾಜೀವ್ ಗೌಡ, ಅತಿಥಿಗಳು: ನಾಗರಾಜ್ ಯಾದವ್, ಪ್ರಕಾಶ್ ಎಚ್.ಕೆ., ಸುರೇಶ್ ರಾಮು, ಎನ್. ಮೋಹನ್ ಕುಮಾರ್, ಮಂಜುನಾಥ್ ಅದ್ದೆ, ಆಯೋಜನೆ: ಭಾರತೀಯ ಅಕಾಡೆಮಿ ಆಫ್ ಲಿಂಗ್ವಿಸ್ಟಿಕ್ಸ್ ಆ್ಯಂಡ್ ಕಮ್ಯುನಿಕೇಷನ್, ಸ್ಥಳ: ತಿಮ್ಮಕ್ಕ ಪಟೇಲ್ ವೆಂಕಟಪ್ಪ ಕಲ್ಯಾಣ ಮಂಟಪ, ಸುಂಕದಕಟ್ಟೆ, ಬೆಳಿಗ್ಗೆ 11

‘ವಿಚಾರ ಸಂಕಿರಣ’, ಸಾವಿತ್ರಿಬಾಯಿ ಫುಲೆ ಅವರ ಜನ್ಮ ದಿನಾಚರಣೆ: ಉದ್ಘಾಟನೆ: ಇಂದಿರಾ ಕೃಷ್ಣಪ್ಪ, ಅಧ್ಯಕ್ಷತೆ: ನಿರ್ಮಲಾ, ಭಾವಚಿತ್ರಕ್ಕೆ ಮಾಲಾರ್ಪಣೆ: ರುದ್ರಪ್ಪ ಹನಗವಾಡಿ, ಅತಿಥಿ: ಮಾವಳ್ಳಿ ಶಂಕರ್, ಗಂಗಮ್ಮ, ಇಂದಿರಾ ಕೃಷ್ಣಪ್ಪ ಅವರ ‘ಶಿಕ್ಷಣ ಮಾತೆ, ಆಶ್ರಯ ದಾತೆ ಸಾವಿತ್ರಿ ಬಾಯಿ ಫುಲೆ’ ಪುಸ್ತಕ ಬಿಡುಗಡೆ: ವಸುಂಧರಾ ಭೂಪತಿ, ಉಪಸ್ಥಿತಿ: ಲಕ್ಷ್ಮೀದೇವಿ, ಅನಸೂಯಮ್ಮ, ಎಸ್.ಎಂ. ಶ್ಯಾಮಲಾ, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಕರ್ನಾಟಕ ದಲಿತ ಮಹಿಳಾ ಒಕ್ಕೂಟ, ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್, ಸ್ಥಳ: ಜೈ ಭೀಮ್ ಭವನ, ಪೂರ್ಣಿಮಾ ಚಿತ್ರಮಂದಿರ ಹತ್ತಿರ, ಬೆಳಿಗ್ಗೆ 11

‘ಸತ್ಯ ನಾರಾಯಣಸ್ವಾಮಿ’ ಪೂಜೆ: ಸಾನ್ನಿಧ್ಯ: ಸಚ್ಚಿದಾನಂದ ಜ್ಞಾನೇಶ್ವರ ಭಾರತೀ ಸ್ವಾಮೀಜಿ, ಅಧ್ಯಕ್ಷತೆ: ಮಹೇಶ ಜಿ. ಶೇಟ್, ಅತಿಥಿಗಳು: ಆರ್. ಅಶೋಕ, ಪಿ. ದಯಾನಂದ್ ಪೈ, ಮೋಹನ್ ಎಸ್. ರಾಯ್ಕರ್, ವೈಭವ್ ಶಾಂತಾರಾಮ್ ವರ್ಣೇಕರ್, ಆಯೋಜನೆ: ಬೆಂಗಳೂರು ದೈವಜ್ಞ ಯುವಕ ಸಂಘ, ಸ್ಥಳ: ಪೂರ್ಣಿಮ ಕನ್ವೆನ್ಷನ್ ಸೆಂಟರ್, 4ನೇ ಬ್ಲಾಕ್, ವಿಜಯ್ ಕಾಲೇಜ್ ಹಿಂಭಾಗ, ಜಯನಗರ, ಬೆಳಿಗ್ಗೆ 11.30


‘ಸಂವಿಧಾನವೇ ಉಸಿರು ಬಹುತ್ವವೇ ಬದುಕು’ ಒಗ್ಗೂಡುವ ಹಬ್ಬ: ಉದ್ಘಾಟನೆ: ರುತ್ ಮನೋರಮಾ, ಅತಿಥಿಗಳು: ಜಾನಕಿ ನಾಯರ್, ಸಬಿಹಾ ಭೂಮಿಗೌಡ, ಜ್ಯೋತಿ ಹಿಟ್ನಾಳ, ವಾಣಿ ಪೆರಿಯೋಡಿ, ಆಯೋಜನೆ: ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಆವರಣ, ಅರಮನೆ ರಸ್ತೆ, ಬೆಳಿಗ್ಗೆ 11.30

‘ಆರ್.ಎಸ್. ಪಂಚಮುಖಿ ಮತ್ತು ಕೆ. ನಾರಾಯಣ್ ಅಯ್ಯಂಗಾರ್’ ಅವರ ಸ್ಮಾರಕ ದತ್ತಿ ಉಪನ್ಯಾಸ: ಉಪನ್ಯಾಸ: ಸ್ಥಾನೇಶ್ವರ್ ತಿಮಲ್ಸಿನಾ, ಸಂಪದಾನಂದ ಮಿಶ್ರಾ, ಆಯೋಜನೆ ಮತ್ತು ಸ್ಥಳ: ಮಿಥಿಕ್ ಸೊಸೈಟಿ, ಸೆಂಚುರಿ ಹಾಲ್, ನೃಪತುಂಗ ರಸ್ತೆ, ಸಂಜೆ 4

‘ದಿ ಇಂಟರ್‌ನ್ಯಾಷನಲ್ ಇಯರ್ ಆಫ್ ಮಿಲ್ಲೆಟ್ಸ್–2023’: ಉದ್ಘಾಟನೆ: ಕೃಷ್ಣ ಬೈರೇಗೌಡ, ಆಯೋಜನೆ: ಕೆಫೆ ನ್ಯಾಚುರಲ್, ಸ್ಥಳ: #2279 ನೆಲಮಹಡಿ, ಕೊಡಿಗೆಹಳ್ಳಿ ರೈಲು ನಿಲ್ದಾಣದ ಎದುರು, ಸಹಕಾರ ನಗರ, ಸಂಜೆ 4.30

ಕರ್ನಾಟಕ ಸಂಗೀತ ಕಾರ್ಯಕ್ರಮ: ಗಾಯನ: ಎಚ್.ಎಸ್. ಪ್ರಶಾಂತ್, ಮೃದಂಗ: ಎನ್. ವಾಸುದೇವ್, ಪಿಟೀಲು: ನಳಿನಾ ಮೋಹನ್, ಘಟ: ರಂಗನಾಥ ಚಕ್ರವರ್ತಿ, ಆಯೋಜನೆ ಮತ್ತು ಸ್ಥಳ: ಶ್ರೀ ರಾಮ ಲಲಿತ ಕಲಾ ಮಂದಿರದ ಆವರಣ, ಕಾರಂತ್ ರಸ್ತೆ, ಬನಶಂಕರಿ 2ನೇ ಹಂತ, ಸಂಜೆ 5.30

‘ಗುರುನಂದನ ಕಲ್ಯಾಣಪುರ ಅವರ ನೆನಪಿನಲ್ಲಿ ಸ್ಮೃತಿ ಸಂಗೀತ’: ಗಾಯನ: ಗಣಪತಿ ಭಟ್ಟ ಹಾಸಣಗಿ, ಅಮೃತಾ ರಾವ್, ಆರ್ಯ ಧಾರೇಶ್ವರ, ಹಾರ್ಮೋನಿಯಂ: ಮಧುಸೂದನ ಭಟ್ಟ, ನೀತಾ ಬೆಳೆಯೂರು, ತಬಲಾ: ರವೀಂದ್ರ ಯಾವಗಲ್, ಪರಮೇಶ್ವರ ಹೆಗಡೆ, ಭೀಮಾ ಶಂಕರ್ ಬಿದನೂರು, ಆಯೋಜನೆ: ಸಪ್ತಕ, ಸ್ಥಳ: ಹವ್ಯಕ ಸಭಾಭವನ, ರೈಲು ನಿಲ್ದಾಣದ ಹತ್ತಿರ, ಮಲ್ಲೇಶ್ವರ, ಸಂಜೆ 4.30


ಗಣಪತಿ ಭಟ್ಟ ಹಾಸಣಗಿ

ತೀರ್ಮಾನವಾಗದ ಸಾಹಿತ್ಯ ಸಮ್ಮೇಳನದ ಆತಿಥ್ಯ

ಕಸಾಪ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಜಗಳ

ಪ್ರಜಾವಾಣಿ ವಾರ್ತೆ

ಹಾವೇರಿ: ಶನಿವಾರ ರಾತ್ರಿ ಇಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಗದ್ದಲ ಉಂಟಾಗಿದ್ದು, ಯಾವುದೇ ನಿರ್ಧಾರ ಕೈಗೊಳ್ಳಲಾಗದೆ ಸಭೆ ಮುಂದೂಡಲಾಯಿತು.


ಮುಂದಿನ ಸಾಹಿತ್ಯ ಸಮ್ಮೇಳನದ ಸ್ಥಳ ನಿರ್ಧರಿಸಲು ಸಭೆ ಸೇರಲಾಗಿತ್ತು. ಸಭೆಯಲ್ಲಿ ಬಳ್ಳಾರಿ, ಯಾದಗಿರಿ, ಉತ್ತರ ಕನ್ನಡ, ಮಂಡ್ಯ, ಹಾಸನ, ಚಿಕ್ಕಮಗಳೂರು ಸೇರಿದಂತೆ ಒಟ್ಟು ಆರು ಜಿಲ್ಲೆಯವರು ತಮ್ಮ ಜಿಲ್ಲೆಗಳಲ್ಲಿ ಸಮ್ಮೇಳನ ಸಂಘಟಿಸಬೇಕೆಂದು ಹಕ್ಕು ಮಂಡಿಸಿದರು. ಆದರೆ, ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಮಹೇಶ ಜೋಶಿ, ನನಗೆ ಒಂದು ತಿಂಗಳ ಕಾಲಾವಕಾಶ ಕೊಡಿ. ಅನಂತರ ನಿರ್ಧಾರ ಕೈಗೊಳ್ಳೋಣ ಎಂದರು.

ಅದಕ್ಕೆ ಹಾಸನ, ಚಿಕ್ಕಮಗಳೂರು ಹಾಗೂ ಉತ್ತರ ಕನ್ನಡದ ಕಾರ್ಯಕಾರಿ ಸಮಿತಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಮೊದಲಿನಿಂದಲೂ ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಿರ್ಧಾರ ಕೈಗೊಳ್ಳುತ್ತ ಬರಲಾಗಿದೆ. ನೀವು ಸಂಪ್ರದಾಯ ಮುರಿಯುವುದು ಸರಿಯಲ್ಲ ಎಂದು ಹೇಳಿ ಸಭೆಯಿಂದ ಹೊರ ನಡೆದರು.


ಹಾವೇರಿಯಲ್ಲಿ ಶನಿವಾರ ರಾತ್ರಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಗದ್ದಲ ಉಂಟಾಗಿದ್ದರಿಂದ ಸದಸ್ಯರು ಸಭೆಯಿಂದ ಹೊರ ನಡೆದರು

‘ಕಾರ್ಯಕಾರಿ ಸಮಿತಿ ಸಭೆಯಲ್ಲೇ ಮುಂದಿನ ಸಮ್ಮೇಳನದ ಸ್ಥಳ ನಿಗದಿಪಡಿಸಬೇಕು. ಒಂದು ತಿಂಗಳ ಕಾಲಾವಕಾಶ ಬೇಕಿಲ್ಲ ಎಂದು ಮಹೇಶ ಜೋಶಿಯವರಿಗೆ ಬಲವಾಗಿ ತಿಳಿಸಿ ಸಭೆಯಿಂದ ಹೊರಬಂದಿದ್ದೇವೆ. ಭಾನುವಾರ (ಜ.8) ಬೆಳಿಗ್ಗೆ 8.30ಕ್ಕೆ ಸಭೆ ಸೇರಲು ನಿರ್ಧರಿಸಲಾಗಿದೆ’ ಎಂದು ಯಾದಗಿರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿದ್ದಪ್ಪ ಹೊಟಿ ‘ಪ್ರಜಾವಾಣಿ’ಗೆ ತಿಳಿಸಿದರು.

ಮಹೇಶ ಜೋಶಿ ಪ್ರತಿಕ್ರಿಯಿಸಿ, ನನ್ನ ಅನಾರೋಗ್ಯದ ಹಿನ್ನೆಲೆಯಲ್ಲಿ ಸಭೆ ಮುಂದೂಡಲಾಗಿದೆ. ಭಾನುವಾರ ನಡೆಯಲಿರುವ ಸಭೆಯಲ್ಲಿ ಮುಂದಿನ ಸಮ್ಮೇಳನ ಎಲ್ಲಿ ಸಂಘಟಿಸಬೇಕೆನ್ನುವುದರ ಬಗ್ಗೆ ತೀರ್ಮಾನಿಸಿ ಘೋಷಿಸಲಾಗುವುದು ಎಂದು ತಿಳಿಸಿದರು. ಇದಕ್ಕೂ ಮುನ್ನ ಕೆಲ ಕಾರ್ಯಕಾರಿ ಸಮಿತಿ ಸದಸ್ಯರು, ನಿಕಟಪೂರ್ವ ಅಧ್ಯಕ್ಷರು, ಪರಿಷತ್ತಿನ ಪದಾಧಿಕಾರಿಗಳಿಗೆ ಸೂಕ್ತ ವ್ಯವಸ್ಥೆ ಮಾಡದ್ದಕ್ಕೆ ಜೋಶಿಯವರನ್ನು ತರಾಟೆಗೆ ತೆಗೆದುಕೊಂಡರು.


ನಗರದ ಮಲ್ಲೇಶ್ವರದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಕೌಶಲಾಭಿವೃದ್ಧಿ ನಿಗಮದ ವತಿಯಿಂದ ಆರಂಭಿಸಿರುವ ಭಾಷಾ ಪ್ರಯೋಗಾಲಯ ಉದ್ಘಾಟಿಸಿದ ಬಳಿಕ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಅವರು ಬೋಧನಾ ಪರಿಕರಗಳನ್ನು ವೀಕ್ಷಿಸಿದರು

‘ಆರು ಸ್ಥಳದಲ್ಲಿ ಭಾಷಾ ಪ್ರಯೋಗಾಲಯ ಸ್ಥಾಪನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದ್ಯಾರ್ಥಿಗಳಲ್ಲಿ ಇಂಗ್ಲಿಷ್ ಸಂವಹನ ಕೌಶಲ ಹೆಚ್ಚಿಸಲು ಹಾಗೂ ಉದ್ಯೋಗಾವಕಾಶ ವಿಸ್ತರಿಸಲು ಆಧುನಿಕ ತಂತ್ರೋಪಕರಣಗಳ ನೆರವಿನಿಂದ ತರಬೇತಿ ಕೊಡಲು ಒತ್ತು ನೀಡಲಾಗಿದೆ’ ಎಂದು ಸಚಿವ ಸಿ.ಎನ್. ಅಶ್ವತ್ಥ ನಾರಾಯಣ ಹೇಳಿದರು.

ಮಲ್ಲೇಶ್ವರದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಕೌಶಲಾಭಿವೃದ್ಧಿ ನಿಗಮದ ವತಿಯಿಂದ ‘ಸಂಕಲ್ಪ’ ಉಪಕ್ರಮದಡಿ ಸ್ಥಾಪಿಸಿರುವ ಭಾಷಾ ಪ್ರಯೋಗಾಲಯ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಆರು ಕಡೆಗಳಲ್ಲಿ ಇಂಥ ಭಾಷಾ ಪ್ರಯೋಗಾಲಯ ಸ್ಥಾಪಿಸಲಾಗಿದೆ. ಈ ಸಾಲಿನಲ್ಲಿ ಇದುವರೆಗೆ ಈ ಪ್ರಯೋಗಾಲಯಗಳಲ್ಲಿ 784 ವಿದ್ಯಾರ್ಥಿಗಳಿಗೆ ತರಬೇತಿ ಕೊಡಲಾಗಿದೆ ಎಂದು ವಿವರಿಸಿದರು.

ಈ ಪ್ರಯೋಗಾಲಯಗಳಲ್ಲಿ ಹೆಡ್‌ಸೆಟ್, ಮೈಕ್ರೋಫೋನ್, ಪ್ರೊಜೆಕ್ಟರ್ ಇತ್ಯಾದಿಗಳನ್ನು ಬಳಸಿ ಸಂವಹನ ಕಲಿಸಲಾಗುವುದು. ಇಂಗ್ಲಿಷ್ ಉಚ್ಚಾರಣೆ ಸೇರಿ ಹಲವು ಅಂಶಗಳಿಗೆ ಗಮನ ಕೊಡಲಾಗುತ್ತದೆ. ನಮ್ಮ ಮಾತೃ ಭಾಷೆ ಕನ್ನಡದಂತೆಯೇ ವಿದ್ಯಾರ್ಥಿಗಳು ಇಂಗ್ಲಿಷ್‌ನಲ್ಲಿಯೂ ಹಿಡಿತ ಸಾಧಿಸಬೇಕೆಂಬ ಆಶಯದೊಂದಿಗೆ ತರಬೇತಿ ಕೊಡಲಾಗುತ್ತದೆ ಎಂದರು.

ಕೌಶಲಾಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಶ್ವಿನ್ ಗೌಡ, ನಿಗಮ ಜಂಟಿ ನಿರ್ದೇಶಕ ಕೃಷ್ಣಮೂರ್ತಿ, ಕಾಲೇಜಿನ ಪ್ರಾಂಶುಪಾಲರಾದ ರವಿ ಇದ್ದರು.

35 ಮೊಬೈಲ್ ಜಪ್ತಿ

ಬೆಂಗಳೂರು: ರಸ್ತೆಯಲ್ಲಿ ಓಡಾಡುವ ಹಾಗೂ ನಿಲ್ಲುವ ಜನರನ್ನು ಬೆದರಿಸಿ ಸುಲಿಗೆ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಮೈಕೊ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸೈಯದ್ ಸುಹೇಲ್, ಮಾರಿಮುತ್ತು ಹಾಗೂ ಮುತ್ತು ಬಂಧಿತರು. ಇವರಿಂದ ₹ 8.50 ಲಕ್ಷ ಮೌಲ್ಯದ 35 ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಸ್ಥಳೀಯ ನಿವಾಸಿ ಸುಜಿತ್ ಎಂಬುವವರು ಇತ್ತೀಚೆಗೆ ಬೇರೆ ಊರಿಗೆ ಹೋಗಿದ್ದರು. ಡಿ. 28ರಂದು ಬೆಳಿಗ್ಗೆ ನಗರಕ್ಕೆ ವಾಪಸು ಬಂದಿದ್ದ ಅವರು ಬಿಳೇಕಹಳ್ಳಿ ವಿಜಯಾ ಬ್ಯಾಂಕ್ ಬಡಾವಣೆ ರಸ್ತೆಯಲ್ಲಿ ನಿಂತಿದ್ದರು. ಮನೆಗೆ ಹೋಗಲು ಮೊಬೈಲ್ ಆ್ಯಪ್ ಮೂಲಕ ಕ್ಯಾಬ್ ಕಾಯ್ದಿರಿಸುತ್ತಿದ್ದರು. ಇದೇ ವೇಳೆ ಸ್ಥಳಕ್ಕೆ ಬಂದಿದ್ದ ಆರೋಪಿಗಳು, ಐ-ಫೋನ್ ಕಿತ್ತುಕೊಂಡು ಪರಾರಿಯಾಗಿದ್ದರು' ಎಂದು ತಿಳಿಸಿದರು.

'ಸ್ಥಳೀಯರೊಬ್ಬರ ಮೊಬೈಲ್ ಮೂಲಕ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದ ಸುಜಿತ್, ಸುಲಿಗೆ ಬಗ್ಗೆ ಮಾಹಿತಿ ನೀಡಿದ್ದರು. ವಿಷಯ ಗೊತ್ತಾಗುತ್ತಿದ್ದಂತೆ ಮೈಕೊ ಲೇಔಟ್ ಪೊಲೀಸರು, ಚುರುಕಿನ ಕಾರ್ಯಾಚರಣೆ ನಡೆಸಿ ಎರಡು ಗಂಟೆಯಲ್ಲಿ ಆರೋಪಿಗಳನ್ನು ಬಂಧಿಸಿದ್ದಾರೆ' ಎಂದು ಹೇಳಿದರು.

'ಆರೋಪಿಗಳ ಬಂಧನಕ್ಕಾಗಿ ನಗರದ 90 ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗಿತ್ತು. ಸುಲಿಗೆಯನ್ನೇ ವೃತ್ತಿ ಮಾಡಿಕೊಂಡಿದ್ದ ಆರೋಪಿಗಳು, ನಗರದ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ಕೃತ್ಯ ಎಸಗಿರುವುದು ಪತ್ತೆಯಾಗಿದೆ' ಎಂದರು.

ತಂದೆ ಕೊಲೆ ರಹಸ್ಯ ಬಿಚ್ಚಿಟ್ಟ ಮಗಳು • ಆರು ತಿಂಗಳ ಬಳಿಕ ಆರೋಪಿಗಳು ಸೆರೆ

ಕೊಲೆ: ಪತ್ನಿ, ಪ್ರಿಯಕರ ಬಂಧನ

ಪ್ರಜಾವಾಣಿ ವಾರ್ತೆ



ಆಂಜನೇಯ

ಬೆಂಗಳೂರು: ನಂದಿನಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಆಂಜನೇಯ (35) ಎಂಬುವರ ಕೊಲೆ ಪ್ರಕರಣದಲ್ಲಿ ಪತ್ನಿ ಅನಿತಾ (31) ಹಾಗೂ ಅವರ ಪ್ರಿಯಕರ ರಾಕೇಶ್ (26) ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

'ಸಂಜಯಗಾಂಧಿನಗರದ ಕೊಳೆಗೇರಿ ಪ್ರದೇಶದ ನಿವಾಸಿ ಆಂಜನೇಯ ಅವರನ್ನು 2022ರ ಜೂನ್ 18ರಂದು ಉಸಿರುಗಟ್ಟಿಸಿ ಕೊಲೆ ಮಾಡಲಾಗಿತ್ತು. ಇದೊಂದು ಹೃದಯಾಘಾತವೆಂದು ಕಥೆ ಕಟ್ಟಿ ಕುಟುಂಬಸ್ಥರನ್ನು ನಂಬಿಸಿದ್ದ ಪತ್ನಿ ಅನಿತಾ, ಅಂತ್ಯಸಂಸ್ಕಾರವನ್ನೂ ನೆರವೇರಿಸಿದ್ದರು' ಎಂದು ಪೊಲೀಸರು ಹೇಳಿದರು.

'ಮೃತದೇಹ ಹೊರತೆಗೆಯಲು ಸಿದ್ಧತೆ'

'ಆಂಜನೇಯ ಅವರದ್ದು ಕೊಲೆ ಎಂಬುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ. ಗೊರಗುಂಟೆಪಾಳ್ಯ ಬಳಿಯ ಸ್ಮಶಾನದಲ್ಲಿ ಆಂಜನೇಯ ಮೃತದೇಹವನ್ನು ಹೂಳಲಾಗಿದೆ. ಅದನ್ನು ಹೊರತೆಗೆದು ಮರಣೋತ್ತರ ಪರೀಕ್ಷೆ ನಡೆಸಬೇಕಿದೆ' ಎಂದು ಪೊಲೀಸರು ಹೇಳಿದರು.



ಅನಿತಾ



ರಾಕೇಶ್

'ಇತ್ತೀಚೆಗೆ ಮನೆ ತೊರೆದಿದ್ದ ಆರೋಪಿ ಅನಿತಾ, ಪ್ರಿಯಕರ ರಾಕೇಶ್ ಜೊತೆ ಹೋಗಿದ್ದರು. ಅನಾಥವಾಗಿದ್ದ 14 ವರ್ಷದ ಮಗಳು, ತಂದೆಯ ಕೊಲೆ ರಹಸ್ಯವನ್ನು ಅಜ್ಜಿಗೆ ತಿಳಿಸಿದ್ದಳು. ಬಳಿಕವೇ ಕುಟುಂಬಸ್ಥರು ಠಾಣೆಗೆ ಬಂದಿದ್ದರು. ಮಗಳಿಂದಲೇ ದೂರು ಪಡೆದು ಪ್ರಕರಣ ದಾಖಲಿಸಿಕೊಂಡು, ಅನಿತಾ ಹಾಗೂ ಉತ್ತರಹಳ್ಳಿಯ ರಾಕೇಶ್‌ನನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

ಸಹೋದರಿ ಮನೆಗೆ ಹೋದಾಗ ಪರಿಚಯ: 'ಆಂಜನೇಯ ಹಾಗೂ ಅನಿತಾ, ಹಲವು ವರ್ಷಗಳ ಹಿಂದೆ ಮದುವೆಯಾಗಿದ್ದರು. ದಂಪತಿಗೆ ಮಗಳು ಇದ್ದಾಳೆ. ಮದ್ಯವ್ಯಸನಿ ಆಗಿದ್ದ ಆಂಜನೇಯ, ನಿತ್ಯವೂ ಮನೆಯಲ್ಲಿ ಗಲಾಟೆ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಅನಿತಾ, ಉತ್ತರಹಳ್ಳಿಯಲ್ಲಿರುವ ಸಹೋದರಿ ಮನೆಗೆ ಆಗಾಗ ಹೋಗಿ ಬರುತ್ತಿದ್ದರು. ಅಲ್ಲಿಯೇ ಅವರಿಗೆ ರಾಕೇಶ್ ಪರಿಚಯವಾಗಿತ್ತು. ನಂತರ, ಸ್ನೇಹವಾಗಿ ಸಲುಗೆ ಬೆಳೆದಿತ್ತು. ಇಬ್ಬರೂ ಹಲವೆಡೆ ಸುತ್ತಾಡುತ್ತಿದ್ದರು' ಎಂದು ತಿಳಿಸಿದರು.

ದಿಂಬಿನಿಂದ ಉಸಿರುಗಟ್ಟಿಸಿ ಕೊಲೆ: 'ಮದ್ಯವ್ಯಸನಿ ಆಗಿರುವ ಪತಿಯನ್ನು ಕೊಲೆ ಮಾಡಬೇಕೆಂದು ಅನಿತಾ ಸಂಚು ರೂಪಿಸಿದ್ದರು. ಅದಕ್ಕೆ ಸಹಕಾರ ನೀಡಲು ರಾಕೇಶ್ ಒಪ್ಪಿದ್ದ' ಎಂದು ಪೊಲೀಸರು ಹೇಳಿದರು.

'ಮದ್ಯದ ಅಮಲಿನಲ್ಲಿ ಮನೆಗೆ ಬಂದು ಗಲಾಟೆ ಮಾಡಿದ್ದ ಆಂಜನೇಯ, ಊಟ ಮಾಡಿ ಮಲಗಿದ್ದ. ಅದೇ ಸಂದರ್ಭದಲ್ಲೇ ರಾಕೇಶ್‌ನನ್ನು ಅನಿತಾ ಮನೆಗೆ ಕರೆಸಿಕೊಂಡಿದ್ದರು. ಇಬ್ಬರೂ ಸೇರಿ, ಆಂಜನೇಯ ಮುಖವನ್ನು ದಿಂಬಿನಿಂದ ಮುಚ್ಚಿ ಉಸಿರುಗಟ್ಟಿಸಿ ಕೊಂದಿದ್ದರು. ರಾಕೇಶ್ ಅಲ್ಲಿಂದ ಪರಾರಿಯಾಗಿದ್ದ. ಕೃತ್ಯವನ್ನು ಮಗಳು ಸಹ ನೋಡಿದ್ದಳು. ತಂದೆ ಕುಡಿದು ಬಂದು ಗಲಾಟೆ ಮಾಡುತ್ತಿದ್ದರಿಂದ ಕೊಂದಿರುವುದಾಗಿ ಹೇಳಿದ್ದ ಅನಿತಾ, ವಿಷಯವನ್ನು ಯಾರಿಗೂ ಹೇಳಬೇಡವೆಂದು ತಾಕೀತು ಮಾಡಿದ್ದರು.'

'ಪತಿ ಹೃದಯಾಘಾತದಿಂದ ಮೃತಪಟ್ಟಿದ್ದಾನೆ' ಎಂಬುದಾಗಿ ಹೇಳಿ ಸ್ಥಳೀಯರನ್ನು ಸೇರಿಸಿದ್ದ ಅನಿತಾ, ಗೋಳಾಡಿದ್ದರು. ಅದನ್ನು ನಂಬಿದ್ದ ಸ್ಥಳೀಯರು ಹಾಗೂ ಕುಟುಂಬಸ್ಥರು, ಅಂತ್ಯಸಂಸ್ಕಾರ ಸಹ ನೆರವೇರಿಸಿದ್ದರು' ಎಂದು ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

ಸುದ್ದಿ 2 ನಿಮಿಷ

'ಅಂಗವಿಕಲರಲ್ಲಿ ಕ್ಷಮೆಯಾಚಿಸಿ'

ಬೆಂಗಳೂರು: ರಾಜಕಾರಣಿಗಳು ತಮ್ಮ ವೈರಿಗಳನ್ನು ಟೀಕಿಸುವ ಭರದಲ್ಲಿ ಅಂಗವಿಕಲರನ್ನು ಹಿಯಾಳಿಸುವ ರೀತಿಯಲ್ಲಿ ಪದಗಳ ಬಳಕೆ ಮಾಡುತ್ತಿರುವುದನ್ನು ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ ಖಂಡಿಸಿದೆ.

'ತೋಟಗಾರಿಕೆ ಸಚಿವ ಮುನಿರತ್ನ ಅವರು ಜೆಡಿಎಸ್‌ನ ಎಚ್‌.ಡಿ. ಕುಮಾರಸ್ವಾಮಿ ವಿರುದ್ಧ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಕುಂಟನ ಕಥೆ ನೆನಪಾಗುತ್ತದೆ ಎಂದು ಅಂಗವಿಕಲರಿಗೆ ಹೋಲಿಕೆ ಮಾಡಿರುವುದಕ್ಕೆ ಕೂಡಲೇ ಕ್ಷಮೆಯಾಚಿಸಬೇಕು' ಎಂದು ಸಮಿತಿಯ ಕಾರ್ಯಾಧ್ಯಕ್ಷ ಚಂದ್ರಶೇಖರ್ ಪುಟ್ಟಪ್ಪ ಆಗ್ರಹಿಸಿದರು.

'ಸಮಾಜದಲ್ಲಿ ಮಾದರಿಯಾಗಬೇಕಿದ್ದ ರಾಜಕಾರಣಿಗಳು ಸಾರ್ವಜನಿಕವಾಗಿ ಎಲುಬಿಲ್ಲದ ನಾಲಿಗೆಯಿಂದ ಅಂಗವಿಕಲರಿಗೆ ನೋವುಂಟಾಗುವ ಕುಂಟ, ಕುರುಡ ಪದಗಳನ್ನು ಬಳಸಿ ಅವಮಾನ ಮಾಡುತ್ತಿದ್ದಾರೆ' ಎಂದು ಪತ್ರಿಕಾ ಹೇಳಿಕೆಯಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

ಕೋರಮಂಗಲ: ಉದ್ಯೋಗ ಮೇಳ



ಬೆಂಗಳೂರು: ಬಿಟಿಎಂ ಕ್ಷೇತ್ರದ ಕೋರಮಂಗಲದ ವೇಮನ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆವರಣದಲ್ಲಿ ನೆಕ್ಸ್ ಪ್ಲೇಸ್ ಇನ್ಫೊ ಸಂಸ್ಥೆಯಿಂದ ಕಾಂಗ್ರೆಸ್ ಮುಖಂಡ ರಾಮೋಜಿಗೌಡ, ಹರ್ಷಿತಾಗೌಡ ನೇತೃತ್ವದಲ್ಲಿ ಆಯೋಜಿಸಿದ್ದ 'ಉದ್ಯೋಗ ಮೇಳ'ಕ್ಕೆ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಹಾಗೂ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಚಾಲನೆ ನೀಡಿದರು.

ರಾಮಲಿಂಗಾರೆಡ್ಡಿ ಮಾತನಾಡಿ, 'ಬಿಟಿಎಂ ವಿಧಾನಸಭಾ ಕ್ಷೇತ್ರದಲ್ಲಿ ನಿರಂತರವಾಗಿ ಉದ್ಯೋಗ ಮೇಳ ಆಯೋಜಿಸುತ್ತಿದ್ದು, ಪ್ರತಿವರ್ಷ ಸಹಸ್ರಾರು ಮಂದಿಗೆ ಉದ್ಯೋಗ ಕಲ್ಪಿಸಲಾಗುತ್ತಿದೆ. ಈ ಬಾರಿ 125ಕ್ಕೂ ಹೆಚ್ಚು ಪ್ರಖ್ಯಾತ ಕಂಪನಿಗಳು ಭಾಗವಹಿಸಿದ್ದವು' ಎಂದರು.

ಕಾಂಗ್ರೆಸ್ ಆಡಳಿತದಲ್ಲಿ ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಿ, ಯುವ ಸಮೂಹಕ್ಕೆ ಉದ್ಯೋಗ ಕಲ್ಪಿಸಲಾಗಿತ್ತು ಎಂದು ಹೇಳಿದರು.

22 ಸಾವಿರ ಮಂದಿ ನೋಂದಣಿ ಮಾಡಿಕೊಂಡಿದ್ದರು. ಮೊದಲ ಹಂತದಲ್ಲಿ ಸುಮಾರು 11,560 ಅಭ್ಯರ್ಥಿಗಳು ಆಯ್ಕೆ ಆಗಿದ್ದಾರೆ. ಅಂತಿಮವಾಗಿ ಸುಮಾರು 5,600 ಅಭ್ಯರ್ಥಿಗಳಿಗೆ ಉದ್ಯೋಗದ ಆದೇಶ ಪತ್ರ ನೀಡಲಾಗಿದೆ ಎಂದು ಆಯೋಜಕರು ತಿಳಿಸಿದರು.

ಬಾಂಬ್ ಬೆದರಿಕೆ ಬಾಲಕ ವಶಕ್ಕೆ

ಬೆಂಗಳೂರು: ರಾಜಾಜಿನಗರದ ಎನ್‌ಪಿಎಸ್ ಶಾಲೆಗೆ ಬಾಂಬ್ ಬೆದರಿಕೆ ಸಂದೇಶ ಕಳುಹಿಸಿದ್ದ ಪ್ರಕರಣದಲ್ಲಿ 13 ವರ್ಷದ ಬಾಲಕನನ್ನು ಬಸವೇಶ್ವರನಗರ ಠಾಣೆ ಪೊಲೀಸರು ಶನಿವಾರ ವಶಕ್ಕೆ ಪಡೆದಿದ್ದಾರೆ.

'ಸ್ಥಳೀಯ ನಿವಾಸಿಯಾದ ಬಾಲಕ, ತಾಯಿ ಜೊತೆ ವಾಸವಿದ್ದಾನೆ. ಈತನೇ ಬಾಂಬ್ ಬೆದರಿಕೆ ಸಂದೇಶ ಕಳುಹಿಸಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ. ಹೀಗಾಗಿ, ಬಾಲಕನನ್ನು ವಶಕ್ಕೆ ಪಡೆದು ಬಾಲನ್ಯಾಯ ಮಂಡಳಿಗೆ ತಿಳಿಸಲಾಗಿದೆ' ಎಂದು ಹೇಳಿದರು.

'ಪತಿಯಿಂದ ವಿಚ್ಛೇದನ ಪಡೆದಿರುವ ತಾಯಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಒಬ್ಬನೇ ಮಗನಾದ ಬಾಲಕ, ನಗರದ ಶಾಲೆಯೊಂದರಲ್ಲಿ ಓದುತ್ತಿದ್ದಾನೆ. ಗೂಗಲ್ ಜಾಲತಾಣದಲ್ಲಿ ಎನ್‌ಪಿಎಸ್ ಶಾಲೆಯ ಇ-ಮೇಲ್ ವಿಳಾಸ ತಿಳಿದುಕೊಂಡಿದ್ದ ಬಾಲಕ, ತಾಯಿಯ ಐ-ಫೋನ್‌ನಿಂದ ಬಾಂಬ್ ಬೆದರಿಕೆ ಸಂದೇಶ ಕಳುಹಿಸಿದ್ದ.'

'ತಾಯಿ ಬಳಸುತ್ತಿದ್ದ ಇ-ಮೇಲ್ ವಿಳಾಸದಿಂದಲೇ ಶಾಲೆ ಆಡಳಿತ ಮಂಡಳಿ ಇ-ಮೇಲ್‌ಗೆ ಸಂದೇಶ ಬಂದಿತ್ತು. ಇದರ ಆಧಾರದಲ್ಲಿ ತನಿಖೆ ಕೈಗೊಂಡು ತಾಯಿಯನ್ನು ವಿಚಾರಿಸಲಾಗಿತ್ತು. ಆದರೆ, ಅವರಿಗೆ ಯಾವುದೇ ಮಾಹಿತಿ ಗೊತ್ತಿರಲಿಲ್ಲ. ಬಾಲಕನನ್ನು ಕೇಳಿದಾಗ, ತಮಾಷೆಗಾಗಿ ಸಂದೇಶ ಕಳುಹಿಸಿರುವುದಾಗಿ ತಪ್ಪೊಪ್ಪಿಕೊಂಡ. ಬಾಲಕನಾಗಿದ್ದರಿಂದ ಹೆಚ್ಚು ವಿಚಾರಣೆ ನಡೆಸಲಿಲ್ಲ' ಎಂದು ತಿಳಿಸಿದರು.

'ಎನ್‌ಪಿಎಸ್ ಶಾಲೆಯಲ್ಲಿ ಪರೀಕ್ಷೆಗಳು ನಡೆಯುತ್ತಿವೆ. ಹೀಗಾಗಿ, ಶಾಲೆಯ ವಿದ್ಯಾರ್ಥಿಗಳಲ್ಲೇ ಯಾರಾದರೂ ಸಂದೇಶ ಕಳುಹಿಸಿರಬಹುದೆಂಬ ಅನುಮಾನವಿತ್ತು. ಆದರೆ, ವಶಕ್ಕೆ ಪಡೆದಿರುವ ಬಾಲಕ ಬೇರೆ ಶಾಲೆ ವಿದ್ಯಾರ್ಥಿ' ಎಂದು ಹೇಳಿದರು.



ಬಹುಮಾನ ವಿತರಣೆ

ಪೀಣ್ಯ ದಾಸರಹಳ್ಳಿ ಸಮೀಪದ ನೆಲಗದರನಹಳ್ಳಿಯ ಗಂಗಾ ಇಂಟರ್ ನ್ಯಾಷನಲ್ ಶಾಲೆ ಮತ್ತು ಪದವಿಪೂರ್ವ ಕಾಲೇಜಿನ ವಾರ್ಷಿಕೋತ್ಸವ 'ಗಂಗಾ ಸ್ಪಂದನ -2022' ಸಮಾರಂಭ ನಡೆಯಿತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಶಾಂತಿಧಾಮ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಜಿ. ಧನಂಜಯ ಅವರು ಬಹುಮಾನ ವಿತರಿಸಿದರು. ಶಾಲೆಯ ಜಿ. ಲಕ್ಷ್ಮೀನರಸಿಂಹ, ಅನುಪಮಾ, ಲೋಕೇಶ್, ಪ್ರಥಶತಿ ಕೃಷ್ಣ ಅಯ್ಯರ್ ಇದ್ದರು.

₹ 58.60 ಲಕ್ಷ ಮೌಲ್ಯದ ಆಭರಣ ಕಳವು: ಪ್ರತಿನಿಧಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸಕ್ಕಿದ್ದ ಆಭರಣ ಮಳಿಗೆಯಲ್ಲಿ ಚಿನ್ನಾಭರಣ ಕಳ್ಳತನ ಮಾಡಿದ್ದ ಆರೋಪದಡಿ ಆರ್. ವಾಣಿ ವಾಡೇಕರ್ (22) ಎಂಬುವವರನ್ನು ಯಲಹಂಕ ಪೊಲೀಸರು ಬಂಧಿಸಿದ್ದಾರೆ.

'ಬೀದರ್‌ನ ವಾಣಿ, ಕೆಲಸ ಹುಡುಕಿಕೊಂಡು ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಯಲಹಂಕದ ಆರ್.ಎಂ.ಜೆಡ್ ಗ್ಯಾಲೆರಿಯಾ ಮಾಲ್‌ನಲ್ಲಿರುವ ತನಿಷ್ಕ ಜ್ಯುವೆಲರಿ ಮಳಿಗೆಯಲ್ಲಿ ಮಾರುಕಟ್ಟೆ ಪ್ರತಿನಿಧಿಯಾಗಿ ಕೆಲಸಕ್ಕೆ ಸೇರಿದ್ದರು' ಎಂದು ಪೊಲೀಸರು ಹೇಳಿದರು.

'ಕೆಲಸ ಮಾಡುತ್ತಲೇ ಆರೋಪಿ, ಆಗಾಗ ಚಿನ್ನಾಭರಣ ಕದಿಯುತ್ತಿದ್ದರು. ಇತ್ತೀಚೆಗೆ ಅವರ ಕೃತ್ಯದ ಬಗ್ಗೆ ಮಳಿಗೆ ವ್ಯವಸ್ಥಾಪಕರಿಗೆ ಅನುಮಾನ ಬಂದಿತ್ತು. ಅವರು ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ. ₹ 58.60 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ವಜ್ರದ ಆಭರಣ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

ಟೋಲ್‌ಗೇಟ್ ದೃಶ್ಯ ಆಧರಿಸಿ ಎಂಜಿನಿಯರ್ ಬಂಧನ

ಆಟೊಗೆ ಗುದ್ದಿದ ಕಾರು ಇಬ್ಬರು ಮಹಿಳೆಯರ ಸಾವು

ಪ್ರಜಾವಾಣಿ ವಾರ್ತೆ

ಕೆ.ಆರ್. ಪುರ: ಇಲ್ಲಿಯ ಭಟ್ಟರಹಳ್ಳಿ ಆರ್‌ಟಿಒ ಕಚೇರಿ ಬಳಿ ಆಟೊಗೆ ಕಾರು ಡಿಕ್ಕಿ ಹೊಡೆದು ಶುಕ್ರವಾರ ರಾತ್ರಿ ಅಪಘಾತ ಸಂಭವಿಸಿದ್ದು, ಆಟೊದಲ್ಲಿ ಹೊರಟಿದ್ದ ಇಬ್ಬರು ಮಹಿಳೆಯರು ಮೃತಪಟ್ಟಿದ್ದಾರೆ.

'ಫಾಜಿಲಾ (40) ಮತ್ತು ಹಸೀನಾ (38) ಮೃತರು. ಅಪಘಾತದಲ್ಲಿ ಆಟೊ ಚಾಲಕ ಖಾಲೀದ್ ಖಾನ್ (39) ಮಕ್ಕಳಾದ ಸಾದಿಯಾ (3) ಹಾಗೂ ಸುಮಯ್ಯ (5) ತೀವ್ರ ಗಾಯಗೊಂಡಿದ್ದಾರೆ. ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಕೆ.ಆರ್. ಪುರ ಸಂಚಾರ ಪೊಲೀಸರು ಹೇಳಿದರು.

'ಅಪಘಾತಕ್ಕೆ ಕಾರಣ ಎನ್ನಲಾದ ಸಾಫ್ಟ್‌ವೇರ್ ಎಂಜಿನಿಯರ್ ಗುಂಟೂರಿನ ಸಂತೋಷ್ ಎಂಬುವರನ್ನು ಬಂಧಿಸಲಾಗಿದೆ. ಅವರ ಇನ್ನೋವಾ ಕಾರು ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.



ಫಾಜಿಲಾ



ಹಸೀನಾ

ಮೇಡಹಳ್ಳಿಗೆ ಹೊರಟಿದ್ದ ಆಟೊ: 'ಚಾಲಕ ಖಾಲೀದ್, ಪತ್ನಿ ಹಸೀನಾ, ಸಹೋದರಿ ಫಾಜಿಲಾ ಹಾಗೂ ಇಬ್ಬರು ಮಕ್ಕಳನ್ನು ಆಟೊದಲ್ಲಿ ಹತ್ತಿಸಿಕೊಂಡು ಭಟ್ಟರಹಳ್ಳಿಯಿಂದ ಮೇಡಹಳ್ಳಿ ಕಡೆಗೆ ಹೊರಟಿದ್ದರು. ಇದೇ ಮಾರ್ಗದಲ್ಲಿ ತೆರಳುತ್ತಿದ್ದ ಸಂತೋಷ್, ನಿರ್ಲಕ್ಷ್ಯದಿಂದ ಅತಿ ವೇಗವಾಗಿ ತಮ್ಮ ಕಾರು ಚಲಾಯಿಸಿದ್ದರು' ಎಂದು ಪೊಲೀಸರು ಹೇಳಿದರು.

'ಆರ್‌ಟಿಒ ಕಚೇರಿ ಎದುರು ಆಟೊಗೆ ಕಾರು ಡಿಕ್ಕಿ ಹೊಡೆದಿತ್ತು. ಇದರಿಂದಾಗಿ ಆಟೊ ರಸ್ತೆಯಲ್ಲಿ ಉರುಳಿ ಬಿದ್ದಿತ್ತು. ಅಪಘಾತದ ನಂತರ ಚಾಲಕ ಸಂತೋಷ್, ಕಾರು ಸಮೇತ ಸ್ಥಳದಿಂದ ಪರಾರಿಯಾಗಿದ್ದ' ಎಂದು ತಿಳಿಸಿದರು.

'ರಕ್ಷಣೆಗೆ ಹೋಗಿದ್ದ ಸ್ಥಳೀಯರು, ಗಾಯಾಳುಗಳನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ, ಹಸೀನಾ ಹಾಗೂ ಫಾಜಿಲಾ ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು. ಉಳಿದ ಗಾಯಾಳುಗಳಿಗೆ ಚಿಕಿತ್ಸೆ ಮುಂದುವರಿದಿದ್ದು, ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ' ಎಂದು ಹೇಳಿದರು.

ಕ್ಯಾಮೆರಾ ದೃಶ್ಯ ನೀಡಿದ ಸುಳಿವು: 'ಸ್ಥಳದಿಂದ ಪರಾರಿಯಾಗಿದ್ದ ಆರೋಪಿ ಸಂತೋಷ್, ಕಾರಿನಲ್ಲಿ ನಗರದೆಲ್ಲೆಡೆ ಸುತ್ತಾಡಿದ್ದ. ಅಪಘಾತಕ್ಕೆ ಕಾರಣವಾದ ಕಾರು ಯಾವುದೆಂಬ ಮಾಹಿತಿ ಆರಂಭದಲ್ಲಿ ಇರಲಿಲ್ಲ. ಸ್ಥಳೀಯರು ನೀಡಿದ್ದ ಸುಳಿವು ಆಧರಿಸಿ ತನಿಖೆ ಮುಂದುವರಿಸಲಾಗಿತ್ತು' ಎಂದು ತಿಳಿಸಿದರು.

'ಹೊಸಕೋಟೆ ಟೋಲ್‌ಗೇಟ್‌ನಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಆರೋಪಿಯ ಕಾರಿನ ದೃಶ್ಯ ಸೆರೆಯಾಗಿತ್ತು. ನೋಂದಣಿ ಸಂಖ್ಯೆ ಗೊತ್ತಾಗುತ್ತಿದ್ದಂತೆ ವಿಳಾಸ ಪತ್ತೆ ಮಾಡಿ ಆರೋಪಿಯನ್ನು ಬಂಧಿಸಲಾಗಿದೆ. ಈತ, ವೈಟ್‌ಫೀಲ್ಡ್ ಬಳಿಯ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ' ಎಂದು ಹೇಳಿದರು.

ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆ: ಆರೋಪಿ ಬಂಧನ

ಬೆಂಗಳೂರು: 'ನಗರದ ನ್ಯಾಯಾಲಯದಲ್ಲಿ ಬಾಂಬ್ ಇರಿಸಿದ್ದೇನೆ' ಎಂಬುದಾಗಿ ಬೆದರಿಕೆಯೊಡ್ಡಿದ್ದ ಆರೋಪಿ ಸುನೀಲ್‌ಕುಮಾರ್ (40) ಎಂಬುವವರನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೇರಳದ ಸುನೀಲ್ ಕುಮಾರ್, ಕಾಡುಗೋಡಿಯಲ್ಲಿ ವಾಸವಿದ್ದ. ಜ. 3ರಂದು ಬೆಳಿಗ್ಗೆ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದ ಈತ, ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಬಾಂಬ್ ಇರಿಸಿರುವುದಾಗಿ ಹೇಳಿದ್ದ. ನಂತರ, ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬೆದರಿಕೆ ಬಗ್ಗೆ ನಿಯಂತ್ರಣ ಕೊಠಡಿ ಸಿಬ್ಬಂದಿ, ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು. ಶ್ವಾನ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ನ್ಯಾಯಾಲಯದಲ್ಲಿ ತೀವ್ರ ಶೋಧ ನಡೆಸಿದ್ದರು. ಆದರೆ, ಯಾವುದೇ ಅನುಮಾನಾಸ್ಪದ ವಸ್ತು ಪತ್ತೆಯಾಗಿರಲಿಲ್ಲ. ಹುಸಿ ಬೆದರಿಕೆ ಕರೆಯೆಂದು ಘೋಷಿಸಿದ್ದರು.'

'ಆರೋಪಿ ವಿರುದ್ಧ ಪ್ರಕರಣ ದಾಲಿಸಿಕೊಳ್ಳಲಾಗಿತ್ತು. ಆರೋಪಿಯನ್ನು ಬಂಧಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಆಕ್ರೋಶಗೊಂಡು ಕರೆ: 'ಸುನೀಲ್ ಕುಮಾರ್ ಪತ್ನಿ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದರು. ವರದಕ್ಷಿಣೆ ಕಿರುಕುಳ ಆರೋಪದಡಿ ಸುನೀಲ್ ಕುಮಾರ್ ವಿರುದ್ಧ ಪ್ರಕರಣ ದಾಖಲಾಗಿತ್ತು. ಇದೇ ಪ್ರಕರಣದ ವಿಚಾರಣೆಗೆಂದು ಆರೋಪಿ, ನ್ಯಾಯಾಲಯಕ್ಕೆ ಆಗಾಗ ಹಾಜರಾಗುತ್ತಿದ್ದ'. 'ಹಲವು ಬಾರಿ ವಿಚಾರಣೆ ನಡೆದಿತ್ತು. ಜ. 3ರಂದು ಸಹ ವಿಚಾರಣೆಗೆ ಬಂದಿದ್ದ. ಇದೇ ಸಂದರ್ಭದಲ್ಲೇ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದ. 'ನ್ಯಾಯಾಲಯಕ್ಕೆ ಅಲೆದಾಡಿ ಸಾಕಾಗಿತ್ತು. ಆಕ್ರೋಶಗೊಂಡು ಕರೆ ಮಾಡಿದೆ' ಎಂಬುದಾಗಿ ಆರೋಪಿ ಹೇಳಿಕೆ ನೀಡಿದ್ದಾನೆ' ಎಂದು ಮೂಲಗಳು ತಿಳಿಸಿವೆ.

ಆನ್‌ಲೈನ್ ಮೂಲಕ ತರಿಸಿದ್ದ ಖಾದ್ಯ ಸೇವನೆ: ಯುವತಿ ಸಾವು

ಪ್ರಜಾವಾಣಿ ವಾರ್ತೆ

ಕಾಸರಗೋಡು: ಹೋಟೆಲ್‌ನಿಂದ ಆನ್‌ಲೈನ್ ಮೂಲಕ ತರಿಸಿದ್ದ 'ಕುಳಿಮಂದಿ' (ಕೋಳಿ ಮಾಂಸದಿಂದ ತಯಾರಿಸಲಾದ ಖಾದ್ಯ) ಸೇವಿಸಿ, ಅಸ್ವಸ್ಥಗೊಂಡಿದ್ದ 20 ವರ್ಷದ ಯುವತಿ ಮೃತಪಟ್ಟಿದ್ದಾರೆ.



ಅಂಜುಶ್ರೀ ಪಾರ್ವತಿ

ಜಿಲ್ಲೆಯ ಪೆರುಂಬಳ ಬೇನೂರಿನ ದಿ. ಕುಮಾರನ್-ಅಂಬಿಕಾ ದಂಪತಿಯ ಪುತ್ರಿ ಅಂಜುಶ್ರೀ ಪಾರ್ವತಿ ಮೃತರು. ಇವರು ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರ್ಕಾರಿ ಕಾಲೇಜಿನ ಬಿ.ಕಾಂ ವಿದ್ಯಾರ್ಥಿನಿ.

ಕೇರಳ ಆರೋಗ್ಯ ಸಚಿವೆ ವೀಣಾ ಜಾರ್ಜ್ ತನಿಖೆಗೆ ಆದೇಶಿಸಿದ್ದು, ಪೊಲೀಸರು ಹೋಟೆಲ್ ಮಾಲೀಕ ಸೇರಿದಂತೆ ಮೂವರನ್ನು ವಶಕ್ಕೆ ಪಡೆದಿದ್ದಾರೆ.

ಅಡ್ಕತ್ತಬೈಲಿನ ಅಲ್ ರೊಮಾನ್ಸಿಯಾ ಎಂಬ ಹೆಸರಿನ ಹೋಟೆಲ್‌ನಿಂದ ಜ.1ರಂದು ಆನ್‌ಲೈನ್ ಮೂಲಕ 'ಕುಳಿಮಂದಿ' ಖಾದ್ಯವನ್ನು ಅಂಜುಶ್ರೀ ತರಿಸಿದ್ದರು. ಅದನ್ನು ಸೇವಿಸಿದ ನಂತರ ಅಸ್ವಸ್ಥಗೊಂಡ ಅವರನ್ನು ಕಾಸರಗೋಡಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಶನಿವಾರ ಮೃತಪಟ್ಟಿದ್ದಾರೆ.

ತನಿಖೆಗೆ ಆದೇಶ: ಘಟನೆಗೆ ಸಂಬಂಧಿಸಿದಂತೆ ತುರ್ತು ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಆಹಾರ ಸುರಕ್ಷೆ ಇಲಾಖೆಯ ಆಯುಕ್ತರಿಗೆ ಹಾಗೂ ಚಿಕಿತ್ಸೆಗೆ ಸಂಬಂಧಿಸಿದ ವರದಿ ಸಲ್ಲಿಸುವಂತೆ ಜಿಲ್ಲಾ ವೈದ್ಯಾಧಿಕಾರಿಗೆ ಕೇರಳ ಆರೋಗ್ಯ ಸಚಿವೆ ಸೂಚಿಸಿದ್ದಾರೆ. ಹೋಟೆಲ್ ಪರವಾನಗಿ ರದ್ದು ಮಾಡುವಂತೆಯೂ ಆದೇಶ ನೀಡಿದ್ದಾರೆ.

ಹೋಟೆಲ್‌ಗೆ ಬೀಗ: ಹೋಟೆಲ್‌ಗೆ ಶನಿವಾರ ದಾಳಿ ನಡೆಸಿದ ಆರೋಗ್ಯ ಇಲಾಖೆ ಸಿಬ್ಬಂದಿ ತಪಾಸಣೆ ನಡೆಸಿ, ಬಾಗಿಲು ಮುಚ್ಚಿಸಿದ್ದಾರೆ. ಮೇಲ್ಪರಂಬ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

6 ದಿನಗಳ ಅಂತರದಲ್ಲಿ 2ನೇ ಸಾವು

ಕೇರಳದಲ್ಲಿ 6 ದಿನಗಳ ಅವಧಿಯಲ್ಲಿ ವಿಷಾಹಾರ ಸೇವಿಸಿ ಮೃತಪಟ್ಟ 2ನೇ ಪ್ರಕರಣ ಇದಾಗಿದೆ. ಕೊಟ್ಟಾಯಂ ಮೆಡಿಕಲ್ ಕಾಲೇಜಿನ ನರ್ಸಿಂಗ್ ಆಫೀಸರ್ ಆಗಿದ್ದ ರಶ್ಮಿ ರಾಜ್ ಎಂಬುವರು 6 ದಿನಗಳ ಹಿಂದೆ ವಿಷಾಂಶ ಬೆರೆತ ಆಹಾರ ಸೇವಿಸಿ ಮೃತಪಟ್ಟಿದ್ದರು.



ನಗರದ ಡೇರಿ ವಿಶ್ವವಿದ್ಯಾಲಯದ ಕ್ರಿಕೆಟ್ ಮೈದಾನದಲ್ಲಿ ಶನಿವಾರ ಆಯೋಜಿಸಲಾಗಿದ್ದ 'ಅಡ್ವೊಕೇಟ್ ಜನರಲ್ ಕಪ್' ಕ್ರಿಕೆಟ್ ಟ್ರೋಫಿ ಟೂರ್ನಿಯಲ್ಲಿ 'ಕೇಂದ್ರ ಸರ್ಕಾರದ ಹೈಕೋರ್ಟ್ ವಕೀಲರ ತಂಡ'ವು ಪ್ರಶಸ್ತಿ ಜಯಿಸಿತು. ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ ಅವರೊಂದಿಗೆ ನಾಯಕ ನಾಗರಾಜ್ ಹೆಗ್ಡೆ ಮತ್ತು ಸಹ ಆಟಗಾರರು ಇದ್ದಾರೆ. ಫೈನಲ್‌ನಲ್ಲಿ ತಂಡವು 'ಮಾಧ್ಯಮ ತಂಡ'ದ ವಿರುದ್ಧ ಗೆದ್ದಿತು.

ಚರಂಡಿಯಲ್ಲಿ 30 ಜನ: ಸುಳ್ಳಿನಿಂದ ಹೈರಾಣಾಗಿಸಿದ ವ್ಯಸನಿ

ಬೆಂಗಳೂರು: 'ಚರಂಡಿಯಲ್ಲಿ 30 ಮಂದಿ ಸಿಲುಕಿದ್ದಾರೆ' ಎಂಬುದಾಗಿ ಹೇಳಿ ಗೋಳಾಡಿದ್ದ ಗಾಂಜಾ ವ್ಯಸನಿ ಮಾತು ನಂಬಿ ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ, ಶನಿವಾರ ಚರಂಡಿಯಲ್ಲಿ ಗಂಟೆಗಟ್ಟಲೇ ಹುಡುಕಾಡಿ ಹೈರಾಣಾದರು.

'ತಮಿಳುನಾಡಿನ ರಾಜು ಎಂಬಾತ ಇತ್ತೀಚೆಗೆ ನಗರಕ್ಕೆ ಬಂದಿದ್ದ. ಮದ್ಯ ಹಾಗೂ ಗಾಂಜಾ ವ್ಯಸನಿಯಾಗಿರುವ ಈತ, ಅದರ ಅಮಲಿನಲ್ಲಿ ಯಶವಂತಪುರ ಹಾಗೂ ಸುತ್ತಮುತ್ತ ಓಡಾಡುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಯಶವಂತಪುರ ಎಂಇಐ ಸಿಗ್ನಲ್ ಬಳಿ ದೊಡ್ಡ ಚರಂಡಿ ಇದೆ. ಶನಿವಾರ ಬೆಳಿಗ್ಗೆ ರಾಜು ಚರಂಡಿಯಿಂದ ಹೊರಗೆ ಬಂದಿದ್ದ. ಅದನ್ನು ನೋಡಿದ್ದ ಸ್ಥಳೀಯರು, 'ಚರಂಡಿಯಿಂದ ಏಕೆ ಬಂದಿದೆಯಾ' ಎಂದು ಪ್ರಶ್ನಿಸಿದ್ದರು. 'ಶ್ರೀರಾಮಪುರದಿಂದ ಚರಂಡಿ ಮೂಲಕ ಇಲ್ಲಿಗೆ ಬಂದಿದ್ದೇನೆ. ಇನ್ನು 30 ಮಂದಿ ಚರಂಡಿಯಲ್ಲಿ ಸಿಲುಕಿದ್ದಾರೆ. ಅವರನ್ನು ರಕ್ಷಿಸಿ' ಎಂದು ಗೋಳಾಡಿದ್ದ.'

'ಗಾಬರಿಗೊಂಡಿದ್ದ ಸ್ಥಳೀಯರು, ಆರ್.ಎಂ.ಸಿ ಯಾರ್ಡ್ ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿದ್ದ ಪೊಲೀಸರ ಬಳಿಯೂ ರಾಜು ಅದೇ ಕಥೆ ಹೇಳಿದ್ದ. ಅಗ್ನಿಶಾಮಕ ದಳದ ಸಿಬ್ಬಂದಿಯನ್ನು ಸ್ಥಳಕ್ಕೆ ಕರೆಸಿಕೊಳ್ಳಲಾಗಿತ್ತು. ಚರಂಡಿಗೆ ಇಳಿದಿದ್ದ ಸಿಬ್ಬಂದಿ, ಎರಡು ಗಂಟೆ ಹುಡುಕಾಡಿದ್ದರು. ಆದರೆ, ಚರಂಡಿಯಲ್ಲಿ ಯಾರೊಬ್ಬರೂ ಕಂಡುಬರಲಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ರಾಜುನನ್ನು ಹೆಚ್ಚಿನ ವಿಚಾರಣೆ ನಡೆಸಿದಾಗ, ಆತ ಗಾಂಜಾ ಮತ್ತಿನಲ್ಲಿದ್ದುದ್ದು ಗೊತ್ತಾಗಿತ್ತು. ಬಳಿಕ ಆತನನ್ನು ವಶಕ್ಕೆ ಪಡೆದು ಠಾಣೆಗೆ ಕರೆತರಲಾಗಿದೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ರಾಕೆಟ್ ಸವಾರಿ: 'ಚರಂಡಿಯಲ್ಲಿ ಇಳಿದು ರಾಕೆಟ್ ಮೂಲಕ ಹೊರಗೆ ಬಂದಿದ್ದೇನೆ' ಎಂದೂ ರಾಜು ಹೇಳುತ್ತಿದ್ದಾನೆ. ಈತ ಮಾನಸಿಕ ಅಸ್ವಸ್ಥನಂತೆಯೂ ವರ್ತಿಸುತ್ತಿದ್ದಾನೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಯುವತಿ ಹೆಸರಿನಲ್ಲಿ ನಕಲಿ ಖಾತೆ ತೆರೆದಿದ್ದ ಆರೋಪಿ

ಆ್ಯಪ್‌ನಲ್ಲಿ ಪರಿಚಯ: ವಿಡಿಯೊ ಚಿತ್ರೀಕರಿಸಿ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಆ್ಯಪ್ ಮೂಲಕ ಯುವಕರೊಬ್ಬರನ್ನು ಪರಿಚಯ ಮಾಡಿಕೊಂಡು ವಿಡಿಯೊ ಚಿತ್ರೀಕರಿಸಿ ಸುಲಿಗೆ ಮಾಡಿದ್ದ ಆರೋಪದಡಿ ಮಹಿಳೆ ಸೇರಿ ಇಬ್ಬರನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಲಕ್ಷ್ಮಿಪ್ರಿಯ (31) ಹಾಗೂ ಸುನೀಲ್‌ಕುಮಾರ್ (22) ಬಂಧಿತರು. ಇವರಿಬ್ಬರಿಂದ ₹ 2.20 ಲಕ್ಷ ಮೌಲ್ಯದ 45 ಗ್ರಾಂ ಚಿನ್ನಾಭರಣ, ಮೊಬೈಲ್ ಹಾಗೂ ಎರಡು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಹೆಸರಘಟ್ಟದ ನಿವಾಸಿಯಾದ ದೂರುದಾರ ಯುವಕ, ಡೇಟಿಂಗ್ ಆ್ಯಪ್‌ವೊಂದರಲ್ಲಿ ಖಾತೆ ತೆರೆದಿದ್ದರು. ಆರೋಪಿ ಸುನೀಲ್‌ಕುಮಾರ್ ಸಹ ಅದೇ ಆ್ಯಪ್‌ನಲ್ಲಿ ಯುವತಿ ಹೆಸರಿನಲ್ಲಿ ನಕಲಿ ಖಾತೆ ಸೃಷ್ಟಿಸಿದ್ದ. ಯುವತಿ ಇರಬಹುದೆಂದು ತಿಳಿದಿದ್ದ ದೂರುದಾರ, ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿದ್ದರು. ಅದನ್ನು ಸ್ವೀಕರಿಸಿದ್ದ ಸುನೀಲ್‌ಕುಮಾರ್, ಯುವತಿ ಹೆಸರಿನಲ್ಲಿ ಚಾಟಿಂಗ್ ಮಾಡಲಾರಂಭಿಸಿದ್ದ' ಎಂದು ತಿಳಿಸಿದರು.



ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿತ ಆರೋಪಿಗಳಿಂದ ಜಪ್ತಿ ಮಾಡಿರುವ ಚಿನ್ನಾಭರಣ ಹಾಗೂ ದ್ವಿಚಕ್ರ ವಾಹನಗಳು ಚಿನ್ನಾಭರಣ

ತಂಗಿ ಹೆಸರಿನಲ್ಲಿ ಭೇಟಿ: 'ಇತ್ತೀಚೆಗೆ ಖಾತೆಗೆ ಸಂದೇಶ ಕಳುಹಿಸಿದ್ದ ದೂರುದಾರ, ಭೇಟಿಯಾಗೋಣವೆಂದು ಹೇಳಿದ್ದ. ಅದಕ್ಕೆ ಪ್ರತಿಕ್ರಿಯಿಸಿದ್ದ ಆರೋಪಿ, 'ನನಗೆ ಬರಲು ಆಗುವುದಿಲ್ಲ. ಬೇಕಾದರೆ, ನನ್ನ ತಂಗಿಯನ್ನು ನಿನ್ನ ಮನೆಗೆ ಕಳುಹಿಸುತ್ತೇನೆ' ಎಂದಿದ್ದ. ಅದಕ್ಕೆ ದೂರುದಾರ ಸಹ ಒಪ್ಪಿದ್ದ' ಎಂದು ಪೊಲೀಸರು ಹೇಳಿದರು.

'ಡಿ. 4ರಂದು ಮಧ್ಯಾಹ್ನ ಆರೋಪಿ ಲಕ್ಷ್ಮಿಪ್ರಿಯ ದೂರುದಾರರ ಮನೆಗೆ ಹೋಗಿ, ಕೆಲ ಹೊತ್ತು ಮಾತನಾಡಿ ಮನೆಯಿಂದ ಹೊರಗೆ ಬಂದಿದ್ದರು. ಅದೇ ಸಂದರ್ಭದಲ್ಲೇ ಸುನೀಲ್‌ಕುಮಾರ್ ಸ್ಥಳಕ್ಕೆ ಬಂದಿದ್ದ. ಇಬ್ಬರೂ ಪುನಃ ಮನೆಯೊಳಗೆ ಹೋಗಿದ್ದರು.'

'ಮಹಿಳೆ ಜೊತೆ ಅಸಭ್ಯವಾಗಿ ವರ್ತಿಸಿರುವ ವಿಡಿಯೊವನ್ನು ಚಿತ್ರೀಕರಣ ಮಾಡಿದ್ದೇವೆ. ಇದೇ ವಿಡಿಯೊವನ್ನು ಪೊಲೀಸರಿಗೆ ಕೊಟ್ಟು ಜೈಲಿಗೆ ಕಳುಹಿಸುತ್ತೇವೆ' ಎಂದು ಆರೋಪಿಗಳು ಬೆದರಿಸಿದ್ದರು. ನಂತರ, ದೂರುದಾರರ ಮೇಲೆ ಹಲ್ಲೆ ಮಾಡಿದ್ದರು. 45 ಗ್ರಾಂ ಚಿನ್ನಾಭರಣ ಕಿತ್ತುಕೊಂಡು ಪರಾರಿಯಾಗಿದ್ದರು. ಕೃತ್ಯದ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

'ಬಂಧಿತ ಆರೋಪಿಗಳು, ಆ್ಯಪ್ ಮೂಲಕ ಹಲವು ಯುವಕರನ್ನು ಪರಿಚಯ ಮಾಡಿಕೊಂಡು ಸುಲಿಗೆ ಮಾಡಿರುವ ಮಾಹಿತಿ ಇದೆ' ಎಂದು ಹೇಳಿದರು.

ಕದ್ದ ಚಿನ್ನಾಭರಣ ಕಸದ ಬುಟ್ಟಿಗೆ ಎಸೆದಿದ್ದ ಆರೋಪಿ

ಬೆಂಗಳೂರು: ರಾಮಮೂರ್ತಿನಗರ ಠಾಣೆ ವ್ಯಾಪ್ತಿಯ ಉದ್ಯಮಿಯೊಬ್ಬರ ಮನೆಯಲ್ಲಿ ಕಳ್ಳತನ ಮಾಡಿದ್ದ ಆರೋಪಿ ರಾಜೇಶ್ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

'ವಿಜಿನಾಪುರದ ಮಂಜುನಾಥ ಬಡಾವಣೆಯ ಮಂಜುನಾಥ್ ಎಂಬುವರ ಮನೆಯಲ್ಲಿ ಕಳ್ಳತನ ನಡೆದಿತ್ತು. ಈ ಬಗ್ಗೆ ದಾಖಲಾದ ಪ್ರಕರಣದ ತನಿಖೆ ಕೈಗೊಂಡು ಆರೋಪಿ ರಾಜೇಶ್‌ನನ್ನು ಬಂಧಿಸಲಾಗಿದೆ. ಈತನಿಂದ ₹ 10 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಂಜುನಾಥ್ ಅವರು ಮೊಮ್ಮಗಳ ನಾಮಕರಣ ಕಾರ್ಯಕ್ರಮಕ್ಕೆಂದು ಕುಟುಂಬ ಸಮೇತ 2022ರ ನ. 25ರಂದು ಹೊಸೂರಿಗೆ ಹೋಗಿದ್ದರು. ಮನೆಗೆ ಬೀಗ ಹಾಕಿದ್ದರು. ಮನೆಯಲ್ಲಿ ಯಾರೂ ಇಲ್ಲವೆಂಬುದನ್ನು ತಿಳಿದುಕೊಂಡಿದ್ದ ಆರೋಪಿ, ಬಾಗಿಲು ಮೀಟಿ ಒಳನುಗ್ಗಿ, ₹ 10 ಲಕ್ಷ ಮೌಲ್ಯದ ಚಿನ್ನಾಭರಣ ಕದ್ದುಕೊಂಡು ಪರಾರಿಯಾಗಿದ್ದ' ಎಂದು ತಿಳಿಸಿದರು.

ನಕಲಿ ಚಿನ್ನವೆಂದು ಕಸದ ಬುಟ್ಟಿಗೆ: 'ಚಿನ್ನಾಭರಣ ಸಮೇತ ಹೊಸೂರಿಗೆ ಹೋಗಿದ್ದ ಆರೋಪಿ, ಮಳಿಗೆಯೊಂದರಲ್ಲಿ ಮಾರಲು ಮುಂದಾಗಿದ್ದ. ಮಳಿಗೆ ಮಾಲೀಕ, ಚಿನ್ನಾಭರಣ ಖರೀದಿಸಲು ನಿರಾಕರಿಸಿದ್ದರು' ಎಂದು ಹೇಳಿದರು.

'ಚಿನ್ನಾಭರಣ ಮಾರಾಟವಾಗದ ಸಂಗತಿಯನ್ನು ಆರೋಪಿ ಸ್ನೇಹಿತನಿಗೆ ತಿಳಿಸಿದ್ದ. ಚಿನ್ನಾಭರಣ ನೋಡಿದ್ದ ಸ್ನೇಹಿತ, 'ಇವು ಅಸಲಿ ಚಿನ್ನಾಭರಣವಲ್ಲ. ನಕಲಿ ಎಂಬಂತೆ ಕಾಣುತ್ತಿವೆ. ಅದಕ್ಕೆ ಮಳಿಗೆಯವರು ಖರೀದಿ ಮಾಡಿಲ್ಲ' ಎಂದಿದ್ದರು. ಅಷ್ಟಕ್ಕೆ ಆರೋಪಿ, ಚಿನ್ನಾಭರಣವನ್ನು ರಸ್ತೆ ಬದಿಯ ಕಸದ ಬುಟ್ಟಿಗೆ ಎಸೆದು ಸ್ಥಳದಿಂದ ಹೊರಟು ಹೋಗಿದ್ದ' ಎಂದು ತಿಳಿಸಿದರು.

'ಆರೋಪಿ ಮಾಸ್ಕ್ ಧರಿಸಿ ಮನೆಯೊಳಗೆ ನುಗ್ಗಿದ್ದ. ಕಳ್ಳತನ ಮಾಡಿಕೊಂಡು ವಾಪಸು ಹೋಗುವಾಗ ಕ್ಯಾಮೆರಾ ಎದುರೇ ಮಾಸ್ಕ್ ತೆಗೆದಿದ್ದ. ಆತನ ಮುಖಚಹರೆ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಅದೇ ಸುಳಿವು ಆಧರಿಸಿ ಆತನ ವಿಳಾಸ ಪತ್ತೆ ಮಾಡಲಾಗಿತ್ತು. ಆರೋಪಿಯನ್ನು ವಶಕ್ಕೆ ಪಡೆದಾಗ, ಕಸದ ಬುಟ್ಟಿಯಲ್ಲಿ ಚಿನ್ನಾಭರಣ ಎಸೆದಿರುವುದಾಗಿ ಹೇಳಿದ್ದ. ಆತನನ್ನು ಹೊಸೂರಿಗೆ ಕರೆದೊಯ್ದು ಪರಿಶೀಲಿಸಿದಾಗ ಕಸದ ಬುಟ್ಟಿಯಲ್ಲಿ ಚಿನ್ನಾಭರಣ ಪತ್ತೆಯಾಯಿತು' ಎಂದು ತಿಳಿಸಿದರು.

ನಿಧನ ವಾರ್ತೆ

ಅನಂತರಾಮಯ್ಯ



ತುಮಕೂರು: ತುಮಕೂರು ವಿಶ್ವವಿದ್ಯಾಲಯದ ಮೊದಲ ಕುಲಪತಿ ಪ್ರೊ.ಒ.ಅನಂತರಾಮಯ್ಯ (75) ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಶನಿವಾ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಹಾಗೂ ಪುತ್ರ ಇದ್ದಾರೆ. ಅವರು ಹಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು.ಅವರ ಹುಟ್ಟೂರು ಕೊರಟಗೆರೆ ಪಟ್ಟಣದಲ್ಲಿ ಭಾನುವಾರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೋಲ್ಕತ್ತ ಡರ್ಬಿ

ಸಕ್ಸಸ್ ಗೆಲ್ಲುವ ನಿರೀಕ್ಷೆ

ವೂಲ್ಫ್ 777 ಕೋಲ್ಕತ್ತ ಡರ್ಬಿ ಸ್ಟೇಕ್ಸ್ (ಗ್ರೇಡ್-1) ಭಾನುವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸಕ್ಸಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ರೀಜೆನ್ಸಿ ಸ್ಟೈಲ್ 5, ಸಂಟನ 2, ಪ್ರೆಸಿಡೆನ್ಶಿಯಲ್ 1
2ನೇ ರೇಸ್: ಅರೇಬಿಯನ್ ಕ್ವೀನ್ 1, ರಿಮೆಲ್ 6, ವಿಷಲ್ ಬ್ಲೋವರ್ 5
3ನೇ ರೇಸ್: ದುಬೈ ಬೇ 2, ಓಡಿನ್ 4, ರೋಕ 3
4ನೇ ರೇಸ್: ಬ್ಯೂಟಿಫುಲ್ 10, ಮೌಂಟ್ ರೆನಿ 6, ಬ್ರೆಡ್ ಎನ್ ಬಟರ್ 5
5ನೇ ರೇಸ್: ಟಸ್ಕಾನಿ 8, ಬ್ಲ್ಯೂ ಒರಿಜಿನ್ 2, ಜೀನ್ ಲಫೆಟ್ಟೆ 3
6ನೇ ರೇಸ್: ಗ್ಯಾಲೆನ್ 7, ಅರೇಕಾ ಲೆಜೆಂಡ್ 4, ಕೇಪ್ ಟನರೋಸ್ 2
7ನೇ ರೇಸ್: ಸಕ್ಸಸ್ 7, ಮಾಂಟೆವರ್ಡಿ 3, ಲಿಯೊನಾರ್ಡೊ 1
8ನೇ ರೇಸ್: ದಿ ಗೋಲ್ಡ್ ಡಿಗ್ಗರ್ 3, ಟ್ರೂತ್ ಅಂಡ್ ಡೇರ್ 5, ಯಾಝ್ 9

ಉತ್ತಮ ಬೆಟ್: ಬ್ಯೂಟಿಫುಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಸಂಕ್ಷಿಪ್ತ ಸುದ್ದಿ

ಆಸ್ತಿ ವಿವಾದ; ಇಬ್ಬರಿಗೆ ಗುಂಡೇಟು

ಕಲಬುರಗಿ: ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ ಶನಿವಾರ ನಗರದಲ್ಲಿ ನಡೆದ ಜಗಳದಲ್ಲಿ ಇಬ್ಬರ ಮೇಲೆ ಗುಂಡು ಹಾರಿಸಿ ಆರೋಪಿ ಪರಾರಿಯಾಗಿದ್ದಾನೆ. ಗಾಯಾಳುಗಳನ್ನು ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಸಂತೋಷ ಪಾಟೀಲ ದಣ್ಣೂರ ಅವರ ಸಹೋದರ ಚನ್ನವೀರ ಪಾಟೀಲ ಮತ್ತು ಅಬೂಬಕರ್ ಗಾಯಗೊಂಡವರು. ಬಸಯ್ಯ ಗುತ್ತೇದಾರ ಎಂಬಾತ ಗುಂಡಿನ ದಾಳಿ ನಡೆಸಿದ್ದಾನೆ.

‘ನಿವೇಶನಕ್ಕೆ ಸಂಬಂಧಿಸಿದಂತೆ ಪಾಟೀಲ ಮತ್ತು ಗುತ್ತೇದಾರ ಕುಟುಂಬದ ಮಧ್ಯೆ ವರ್ಷಗಳಿಂದ ವ್ಯಾಜ್ಯವಿತ್ತು. 2018ರಲ್ಲಿ ನ್ಯಾಯಾಲಯವು ನಿವೇಶನ ಸಂತೋಷ ಪಾಟೀಲಗೆ ಸೇರಿದೆ ಎಂದು ತೀರ್ಪು ನೀಡಿತು. ಆದರೆ, ಆರೋಪಿಗಳಾದ ಬಸಯ್ಯ ಗುತ್ತೇದಾರ, ದಸ್ತಯ್ಯ ಗುತ್ತೇದಾರ, ಶಾಂತಾಬಾಯಿ ಗುತ್ತೇದಾರ, ರಾಜು ಗುತ್ತೇದಾರ ಎಂಬುವರು ನಿವೇಶನ ತಮ್ಮದೆಂದು ಕಿರಿಕಿರಿ ಮಾಡುತ್ತಿದ್ದರು’ ಎಂದು ಚನ್ನವೀರ ಪಾಟೀಲ ದೂರು ನೀಡಿದ್ದರು.

‘ನಿವೇಶನದಲ್ಲಿ ಬಾಡಿಗೆಗೆ ನೀಡಿದ್ದ ಹೋಟೆಲ್‌ನ ಇಟ್ಟಿಗೆಗಳನ್ನು ಕೆಡವಲು ಬಸಯ್ಯ ಗುತ್ತೇದಾರ ಮತ್ತು ಅವರ ಕುಟುಂಬದವರು ಬಂದಿದ್ದಾರೆ. ಇದಕ್ಕೆ ಚನ್ನವೀರ ಆಕ್ಷೇಪಿಸಿದ್ದಾರೆ. ಆಗ ಜಗಳ ಆರಂಭವಾಗಿದೆ. ಬಸಯ್ಯ ಪಿಸ್ತೂಲ್‌ನಿಂದ ಮೂರು ಸುತ್ತು ಗುಂಡು ಹಾರಿಸಿದರು. ಒಂದು ಗುಂಡು ಗಾಳಿಯಲ್ಲಿ ಹಾರಿತು. ಒಂದು ಗುಂಡು ಚನ್ನವೀರ ಬಲಗೈಗೆ ಮತ್ತು ಇನ್ನೊಂದು ಗುಂಡು ಜಗಳ ನೋಡಲು ನಿಂತಿದ್ದ ಅಬೂಬಕರ್ ಕಾಲಿಗೆ ತಾಗಿದೆ. ಆರೋಪಿಯ ಬಂಧನಕ್ಕೆ ಕಾರ್ಯಾಚರಣೆ ನಡೆಸಿದ್ದೇವೆ’ ಎಂದು ಡಿಸಿಪಿ ಅಡ್ಡೂರು ಶ್ರೀನಿವಾಸಲು ತಿಳಿಸಿದರು.

ಟವರ್ ಏರಿ ರೈತ ಆತ್ಮಹತ್ಯೆ

ಕಾಳಗಿ (ಕಲಬುರಗಿ ಜಿಲ್ಲೆ): ನೆಟೆರೋಗದಿಂದ ತೊಗರಿ ಬೆಳೆ ಹಾನಿಯಾಗಿದ್ದು, ಇದರಿಂದ ಸಾಲ ತೀರಿಸಲಾಗದು ಎಂದು ಮನನೊಂದು ತಾಲ್ಲೂಕಿನ ಕೊಡದೂರ ಗ್ರಾಮದ ರೈತ ಸಂತೋಷ ಕುಮಾರ ಹರಿಶ್ಚಂದ್ರ ಜಾಧವ (32) ಎಂಬುವರು ಮೊಬೈಲ್ ಟವರ್ ಏರಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಒಟ್ಟು 30 ಎಕರೆ ಜಮೀನಿನಲ್ಲಿ ತೊಗರಿ ಬಿತ್ತನೆ ಮಾಡಲಾಗಿತ್ತು. ಆದರೆ, ನೆಟೆ ರೋಗದಿಂದ ಸಂಪೂರ್ಣ ಬೆಳೆ ಹಾನಿಯಾಯಿತು. ಸಂತೋಷಕುಮಾರ ಖಾಸಗಿ ಮತ್ತು ಬ್ಯಾಂಕ್‌ನಿಂದ ಸುಮಾರು ₹ 3 ಲಕ್ಷಕ್ಕೂ ಹೆಚ್ಚು ಸಾಲ ಹೊಂದಿದ್ದರು’ ಎಂದು ಕಾಳಗಿ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಸಿ.ಡಿ ಇಟ್ಟುಕೊಂಡು ಮಂತ್ರಿ ಆಗ್ತಾರೆ–ಯತ್ನಾಳ • ತಾಕತ್ತಿದ್ದರೆ ಎಲೆಕ್ಷನ್ ಗೆದ್ದು ಬರಲಿ– ನಿರಾಣಿ

ನಿರಾಣಿ, ಯತ್ನಾಳ ಮಧ್ಯೆ ‘ಸಿ.ಡಿ’ ಕಿತ್ತಾಟ

ಪ್ರಜಾವಾಣಿ ವಾರ್ತೆ

ವಿಜಯಪುರ: ವಿಧಾನಸಭೆ ಚುನಾವಣೆ ಹೊಸ್ತಿಲಿನಲ್ಲಿ ಬೃಹತ್ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಮತ್ತು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಶನಿವಾರ ಮಾಧ್ಯಮಗಳ ಎದುರು ಪರಸ್ಪರ ಆರೋಪ, ಪ್ರತ್ಯಾರೋಪ, ಸವಾಲು– ಪ್ರತಿ ಸವಾಲು ಹಾಕುವ ಜೊತೆಗೆ ಕೆಸರೆರಚಾಟ ಮಾಡಿಕೊಂಡಿದ್ದಾರೆ.

‘ಯಾರ ಯಾರದ್ದೋ ಸಿ.ಡಿ ಇಟ್ಟುಕೊಂಡು ನಿರಾಣಿ ಬ್ಲ್ಯಾಕ್ ಮೇಲ್ ಮಾಡುತ್ತಿದ್ದಾರೆ. ಸಿ.ಡಿ ಇಟ್ಟುಕೊಂಡೇ ಅವರು ಮಂತ್ರಿಯಾಗುತ್ತಾರೆ. ನಾ ಅಂಥ ಹಲ್ಕಾ ಕೆಲಸ ಮಾಡಲ್ಲ’ ಎಂದು ಯತ್ನಾಳ ಅವರು ಸಚಿವ ಮುರುಗೇಶ ನಿರಾಣಿ ವಿರುದ್ಧ ಹರಿಹಾಯ್ದರು.


ಬಸನಗೌಡ ಪಾಟೀಲ ಯತ್ನಾಳ


ಮುರುಗೇಶ ನಿರಾಣಿ

‘ತಾಕತ್ತಿದ್ದರೆ, ಅಪ್ಪಗೆ ಹುಟ್ಟಿದ್ದರೆ ಸಿ.ಡಿ ಬಿಡುಗಡೆ ಮಾಡಲಿ. ನನಗೆ ಟಿಕೆಟ್ ಕೊಡುವವಾ ಇವಾ ಯಾರು?’ ಎಂದು ಯತ್ನಾಳ ಹೇಳಿದರು. ‘ವಿಜಯಪುರ ಮಹಾನಗರ ಪಾಲಿಕೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ನಿರಾಣಿ, ವಿಜಯೇಂದ್ರ ಬಿಜೆಪಿ ಬಂಡಾಯ ಅಭ್ಯರ್ಥಿಗಳಿಗೆ ಹಣ ನೀಡಿ, ಬಿಜೆಪಿ ಅಭ್ಯರ್ಥಿಗಳನ್ನು ಸೋಲಿಸಲು ಯತ್ನಿಸಿದ್ದರು’ ಎಂದು ಆರೋಪಿಸಿದರು. ‘ಬಿಜೆಪಿ ಬಂಡಾಯ, ಪಕ್ಷೇತರ ಅಭ್ಯರ್ಥಿಗಳಿಗೆ ಹಣ ನೀಡಿಲ್ಲ ಎಂದಾದರೆ ವಿಜಯೇಂದ್ರ, ನಿರಾಣಿ ಧರ್ಮಸ್ಥಳದಲ್ಲಿ ಆಣೆ ಮಾಡಲಿ’ ಎಂದು ಸವಾಲು ಹಾಕಿದರು.

ಮತದಾರರು ಪಾಠ ಕಲಿಸ್ತಾರೆ: ನಿರಾಣಿ

ಯತ್ನಾಳ ಆರೋಪಕ್ಕೆ ಪ್ರತಿಕ್ರಿಯಿಸಿದ ಸಚಿವ ಮುರುಗೇಶ ನಿರಾಣಿ, ‘ಸಿ.ಡಿ ಮಾಡಿದವರಿಗೆ, ಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತಂದವರಿಗೆ ಮಾತ್ರ ಇದೆಲ್ಲ ಗೊತ್ತಿರುತ್ತದೆ. ನನಗೆ ಗೊತ್ತಿಲ್ಲ’ ಎಂದು ಮಾತಿನ ಮೂಲಕವೇ ಯತ್ನಾಳಗೆ ತಿವಿದರು.

‘ಬಿಜೆಪಿ ಅಭ್ಯರ್ಥಿಗಳಿಗೆ ಚುನಾವಣೆಗೆ ಹಣ ನೀಡಿದ್ದೇನೆಯೇ ಹೊರತು, ಬೇರೆ ಪಕ್ಷದವರಿಗೆ ನೀಡಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ನಿನಗೆ ತಾಕತ್ತಿದ್ದರೇ ಈ ಬಾರಿ ಎಲೆಕ್ಷನ್ ಗೆದ್ದು ಬಾ. ವಿಜಯಪುರ ಮತದಾರರು ನಿನಗೆ ಪಾಠ ಕಲಿಸಲು ಸಜ್ಜಾಗಿದ್ದಾರೆ, ಕಾದು ನೋಡು’ ಎಂದು ಯತ್ನಾಳಗೆ ಸವಾಲು ಹಾಕಿದರು.

‘ಮುಂದಿನ ಚುನಾವಣೆಯಲ್ಲಿ ವಿಜಯಪುರ ನಗರ ಬಿಜೆಪಿ ಟಿಕೆಟ್ ಯಾರಿಗೆ ಸಿಗುತ್ತದೆ ಎಂದು ನೋಡೋಣ? ನನ್ನ ಬಳಿ ಅಧಿಕಾರ ಇದ್ದರೆ ಈಗಲೇ ಹೇಳುತ್ತಿದ್ದೆ’ ಎಂದು ಹೇಳಿದರು.

‘ಮುಖ್ಯಮಂತ್ರಿ ಬೊಮ್ಮಾಯಿ, ಮುಖಂಡರಾದ ಬಿ.ಎಸ್. ಯಡಿಯೂರಪ್ಪ, ಬಿ.ವೈ. ವಿಜಯೇಂದ್ರ, ಹರಿಹರ ಪೀಠ ಮತ್ತು ನನ್ನ ಬಗ್ಗೆ ಹಗುರವಾಗಿ ಮಾತನಾಡಿದರೇ ಇನ್ನು ಮುಂದೆ ಸರಿ ಇರುವುದಿಲ್ಲ, ಏನ್ ಹುಡುಗಾಟ ಹಚ್ಚಿದ್ದೀಯಾ?’ ಎಂದು ಏಕ ವಚನದಲ್ಲೇ ಯತ್ನಾಳ ಅವರನ್ನು ತರಾಟೆಗೆ ತೆಗೆದುಕೊಂಡರು.

ಸಮಗ್ರ ತನಿಖೆಗೆ ಸೂಚನೆ: ಸಿ.ಎಂ

ಸ್ಯಾಂಟ್ರೊ ರವಿ ಪ್ರಕರಣ: ಯಾರನ್ನೂ ಬಚಾವ್ ಮಾಡುವ ಪ್ರಶ್ನೆಯೇ ಇಲ್ಲ

ಪ್ರಜಾವಾಣಿ ವಾರ್ತೆ

ಮೈಸೂರು: ‘ಸ್ಯಾಂಟ್ರೊ ರವಿ ವಿರುದ್ಧದ ಎಲ್ಲ ಪ್ರಕರಣಗಳ ಸಮಗ್ರ ತನಿಖೆ ಕೈಗೊಳ್ಳುವಂತೆ ಮೈಸೂರು ಪೊಲೀಸರಿಗೆ ಸೂಚಿಸಿದ್ದೇನೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಶನಿವಾರ ಮಾತನಾಡಿದ ಅವರು, ‘ಆತನ ಜೊತೆಗೆ ಚಿತ್ರಗಳು ಇವೆ ಎಂದ ಮಾತ್ರಕ್ಕೆ ಸಂಬಂಧವೇ ಇದೆ ಎನ್ನಲು ಸಾಧ್ಯವಿಲ್ಲ. ಆತನ ವಿರುದ್ಧ ಹಲವು ಪ್ರಕರಣಗಳು ದಾಖಲಾಗಿದ್ದು, ಪುರಾವೆಗಳನ್ನು ಸಂಗ್ರಹಿಸುವಂತೆ ಪೊಲೀಸರಿಗೆ ಸೂಚಿಸಿದ್ದೇನೆ. ವಿಚಾರಣೆ ನಡೆದಿದ್ದು, ಆದಷ್ಟು ಶೀಘ್ರ ಆತನ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಿದ್ದಾರೆ’ ಎಂದು ಪ್ರತಿಕ್ರಿಯಿಸಿದರು.

‘20 ವರ್ಷಗಳಿಂದಲೂ ಆತನ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈಗ ದಾಖಲಾಗಿರುವುದೂ ಸೇರಿದಂತೆ ಎಲ್ಲ ಪ್ರಕರಣಗಳ ತನಿಖೆಯನ್ನೂ ನಡೆಸಲಾಗುತ್ತದೆ. ನನ್ನ ಹಾಗೂ ನನ್ನ ಪುತ್ರನ ಜೊತೆ ಚಾಟ್ ನಡೆಸಿರುವಂತೆ ವಾಟ್ಸ್‌ಆ್ಯಪ್‌ನಲ್ಲಿ ಸೃಷ್ಟಿಸಿದ್ದಾನೆ. ಅದೆಲ್ಲ ನಕಲಿ. ತಂತ್ರಜ್ಞಾನ ಬಳಸಿ ಆ ರೀತಿ ಮಾಡಿರಬಹುದು. ಆತನ ಜೊತೆಗಿರುವ ಸಂಬಂಧ, ಹಣಕಾಸು ವ್ಯವಹಾರದ ಸಮಗ್ರ ತನಿಖೆ ನಡೆದರೆ ಸತ್ಯಾಂಶ ಬಯಲಾಗಲಿದೆ’ ಎಂದರು.

‘ವಿರೋಧ ಪಕ್ಷದವರ ಜೊತೆಗೂ ಆತನಿಗೆ ಸಂಪರ್ಕವಿದೆ. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಬಿಡುಗಡೆ ಮಾಡಿದ ಆಡಿಯೊ–ವಿಡಿಯೊ ಕೂಡ ತನಿಖೆಗೆ ಒಳಪಡಲಿದೆ. ಯಾರನ್ನೂ ಬಚಾವ್ ಮಾಡುವ ಪ್ರಶ್ನೆಯೇ ಇಲ್ಲ’ ಎಂದು ಸ್ಪಷ್ಟಪಡಿಸಿದರು.

ರವಿ ಬಗ್ಗೆಯೇ ಕೇಳಿ ಬಂದ ಪ್ರಶ್ನೆಗಳಿಂದ ವಿಚಲಿತರಾದ ಮುಖ್ಯಮಂತ್ರಿ, ‘ನಾನು ತನಿಖಾಧಿಕಾರಿ ಅಲ್ಲ, ನೀವೂ ಅಲ್ಲ’ ಎಂದು ಹರಿಹಾಯ್ದರು.

ಕಾಂಗ್ರೆಸ್ ಭ್ರಷ್ಟಾಚಾರದ ಬ್ಯಾಂಕ್: ವಿಧಾನಸೌಧದಲ್ಲಿ ₹10 ಲಕ್ಷ ಪತ್ತೆಯಾದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಆ ಮಾನದಂಡ ತೆಗೆದುಕೊಂಡರೆ, ಕಾಂಗ್ರೆಸ್ ಸರ್ಕಾರವಿದ್ದಾಗ ಸಚಿವ ಪುಟ್ಟರಂಗಶೆಟ್ಟಿ ಕಚೇರಿಯಲ್ಲಿಯೇ ₹22 ಲಕ್ಷ ಹಣ ಪತ್ತೆಯಾಗಿತ್ತು. ಆಗಲೇ ವಿಧಾನಸೌಧ ಕಾಂಗ್ರೆಸ್‌ನ ಭ್ರಷ್ಟಾಚಾರದ ಬ್ಯಾಂಕ್ ಆಗಿತ್ತು. ಆಗ ಸಚಿವರ ವಿರುದ್ಧ ತನಿಖೆ ನಡೆಸಲಿಲ್ಲ. ಎಸಿಬಿಗೆ ಕೊಟ್ಟು ಪ್ರಕರಣ ಮುಚ್ಚಿ ಹಾಕಿದರು’ ಎಂದು ತಿರುಗೇಟು ನೀಡಿದರು.

ಜಾಮೀನಿಗೆ ಸ್ಯಾಂಟ್ರೊ ರವಿ ಅರ್ಜಿ

ಮೈಸೂರು: ಪರಿಶಿಷ್ಟ ಸಮುದಾಯದ ಮಹಿಳೆಯನ್ನು ವಂಚಿಸಿ, ಜಾತಿ ನಿಂದನೆ ಮಾಡಿ, ಹಲ್ಲೆ ನಡೆಸಿ, ವರದಕ್ಷಿಣೆ ಕಿರುಕುಳ ಪ್ರಕರಣದ ಆರೋಪಿ ಕೆ.ಎಸ್.ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿ ಜಾಮೀನು ಕೋರಿ ತಮ್ಮ ವಕೀಲರ ಮೂಲಕ ಇಲ್ಲಿನ 6ನೇ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಶನಿವಾರ ಅರ್ಜಿ ಸಲ್ಲಿಸಿದ್ದಾನೆ.

ಈ ನಡುವೆ, ಸಂತ್ರಸ್ತೆಯು ಸೆಷನ್ಸ್ ಕೋರ್ಟ್‌ನಲ್ಲಿ ತಮ್ಮ ಹೇಳಿಕೆ ದಾಖಲಿಸಿದ್ದಾರೆ.

‘ಸಂತ್ರಸ್ತೆ ನೀಡಿದ ದೂರಿನಲ್ಲಿ ನಿವೃತ್ತ ಐಎಎಸ್ ಅಧಿಕಾರಿ, ವಕೀಲರ ಹೆಸರನ್ನು ಉಲ್ಲೇಖಿಸಲಾಗಿದೆ. ಆದರೂ, ಅವರನ್ನು ಆರೋಪಿಯಾಗಿ ಪರಿಗಣಿಸಿಲ್ಲ. ಈ ಪ್ರಕರಣದಲ್ಲಿ ಭಾಗಿಯಾದವರನ್ನು ತನಿಖೆಗೆ ಒಳಪಡಿಸಬೇಕು. ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲಾಗುವುದು’ ಎಂದು ಒಡನಾಡಿ ಸೇವಾ ಸಂಸ್ಥೆಯ ನಿರ್ದೇಶಕ ಸ್ಟ್ಯಾನ್ಲಿ ತಿಳಿಸಿದರು.

ಸ್ಯಾಂಟ್ರೊ ರವಿ ವಿರುದ್ಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ಜ.2ರಂದು ಪ್ರಕರಣ ದಾಖಲಾಗಿದೆ.

ಕುಮಾರಕೃಪಾ ಅತಿಥಿಗೃಹದ ವ್ಯವಸ್ಥಾಪಕ ಎತ್ತಂಗಡಿ

ಬೆಂಗಳೂರು: ಸ್ಯಾಂಟ್ರೊ ರವಿ ತಂಡಕ್ಕೆ ಆಶ್ರಯ ನೀಡಿದ ಆರೋಪದ ಬೆನ್ನಲ್ಲೇ, ಕುಮಾರಕೃಪಾ ಅತಿಥಿಗೃಹದ ಹಿರಿಯ ವ್ಯವಸ್ಥಾಪಕ ಎಚ್‌.ಎಸ್. ದೇವರಾಜ್ ಅವರನ್ನು ಎತ್ತಂಗಡಿ ಮಾಡಲಾಗಿದೆ.

ಕರ್ನಾಟಕ ಪ್ರವಾಸೋದ್ಯಮ ನಿಗಮದ ಸಹಾಯಕ ಪ್ರಧಾನ ವ್ಯವಸ್ಥಾಪಕ (ಪ್ರಭಾರ) ಆಗಿರುವ ದೇವರಾಜ್ ಅವರನ್ನು ನಿಗಮದ ಕೇಂದ್ರ ಕಚೇರಿಗೆ ನಿಯೋಜಿಸಿ ವ್ಯವಸ್ಥಾಪಕ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ.

ಕುಮಾರಕೃಪಾ ಅತಿಥಿಗೃಹದಲ್ಲಿ ಸ್ಯಾಂಟ್ರೊ ರವಿ ವಾಸ್ತವ್ಯ ಹೂಡಿದ್ದ ಎಂಬ ಕಾರಣಕ್ಕೆ ಜೆಡಿಎಸ್ ಮತ್ತು ಕಾಂಗ್ರೆಸ್ ನಾಯಕರು ಬಿಜೆಪಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದರು. ಸಮ್ಮಿಶ್ರ ಸರ್ಕಾರ ಕೆಡವಿದ ಶಾಸಕರು ಮುಂಬೈನಲ್ಲಿದ್ದಾಗ ಅವರ ಮೋಜು ಮಸ್ತಿಗೆ ಸ್ಯಾಂಟ್ರೊ ರವಿ ಸಹಾಯ ಮಾಡಿದ್ದ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದ್ದರು. ‘ಕುಮಾರಕೃಪಾ ಅತಿಥಿಗೃಹದಲ್ಲಿ ಸ್ಯಾಂಟ್ರೋ ರವಿ ವ್ಯವಹಾರ ಮಾಡುತ್ತಿದ್ದ. ಅವನಿಗೆ ಅಲ್ಲಿ ಕೊಠಡಿ ಕೊಟ್ಟವರು ಯಾರು? ಯಾರ ಶಿಫಾಸಿನ ಆಧಾರದಲ್ಲಿ ಕೊಠಡಿ ಕೊಟ್ಟಿದ್ದರು? ಸಮ್ಮಿಶ್ರ ಸರ್ಕಾರ ಉರುಳಿಸುವ ವೇಳೆ ಅವರನ್ನು ಯಾರು, ಎಲ್ಲಿಗೆ ಕರೆದುಕೊಂಡು ಹೋಗಿದ್ದರು ಎಂದು ತನಿಖೆ ಮಾಡಬೇಕು’ ಎಂದು ಕುಮಾರಸ್ವಾಮಿ ಆಗ್ರಹಿಸಿದ್ದರು. ‘ಬಿಜೆಪಿ ಸರ್ಕಾರ ಸ್ಯಾಂಟ್ರೊ ರವಿಗೆ ಕುಮಾರಕೃಪಾ ಅತಿಥಿಗೃಹದಲ್ಲಿ ಕೊಠಡಿ ನೀಡಿ, ವ್ಯವಹಾರ ಮಾಡಲು ಅನುವು ಮಾಡಿಕೊಟ್ಟಿತ್ತು’ ಎಂದು ಆರೋಪಿಸಿ ಕಾಂಗ್ರೆಸ್ ಟ್ವೀಟ್ ಮಾಡಿತ್ತು.

ಸಚಿವ ಸಂಪುಟ ಶೀಘ್ರ ವಿಸ್ತರಣೆ: ಬೊಮ್ಮಾಯಿ

ಚಿತ್ರದುರ್ಗ: ‘ಸಚಿವ ಸಂಪುಟ ವಿಸ್ತರಣೆ ಕುರಿತು ಕೇಂದ್ರ ನಾಯಕರೊಂದಿಗೆ ವಿಸ್ತೃತವಾಗಿ ಚರ್ಚಿಸಲಾಗಿದೆ. ಶೀಘ್ರವೇ ಸಂಪುಟ ವಿಸ್ತರಣೆ ಆಗಲಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

‘ಸಂಪುಟ ವಿಸ್ತರಣೆಗೆ ಸಂಬಂಧಿಸಿದ ಎಲ್ಲ ವಿಚಾರಗಳನ್ನು ವರಿಷ್ಠರ ಗಮನಕ್ಕೆ ತರಲಾಗಿದೆ. ಮತ್ತೊಂದು ಸುತ್ತಿನ ಸಭೆ ನಡೆದ ಬಳಿಕ ತೀರ್ಮಾನ ಹೊರಬೀಳಲಿದೆ. ಕೆ.ಎಸ್. ಈಶ್ವರಪ್ಪ, ರಮೇಶ ಜಾರಕಿಹೊಳಿ ಅವರಿಗೆ ಸಚಿವ ಸ್ಥಾನ ಕಲ್ಪಿಸುವ ಬಗ್ಗೆ ಹೈಕಮಾಂಡ್ ನಿರ್ಧರಿಸಲಿದೆ’ ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

3 ದಿನಗಳಲ್ಲಿ ತೀರ್ಮಾನ– ಬಿಎಸ್‌ವೈ (ಶಿಕಾರಿಪುರ ವರದಿ): ‘ಸಂಪುಟ ವಿಸ್ತರಣೆ ಬಗ್ಗೆ 2–3 ದಿನಗಳಲ್ಲಿ ಕೇಂದ್ರದ ನಾಯಕರು ತೀರ್ಮಾನ ಕೈಗೊಳ್ಳಲಿದ್ದಾರೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು. ‘ಸಚಿವ ಸಂಪುಟ ವಿಸ್ತರಣೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರದ ನಾಯಕರು ತೀರ್ಮಾನ ತೆಗೆದುಕೊಳ್ಳುತ್ತಾರೆ. ಬಿಜೆಪಿ 150 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ’ ಎಂದರು.



ಎಸ್‌ಡಿಪಿಐ ಅಭ್ಯರ್ಥಿಗಳ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಗೆ ಎಸ್‌ಡಿಪಿಐನಿಂದ (ಸೋಷಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ) ಸ್ಪರ್ಧೆ ಮಾಡಲಿರುವ 10 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿಯನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಂ.ಕೆ. ಫೈಝಿ ಶನಿವಾರ ಪ್ರಕಟಿಸಿದರು.

ಮೈಸೂರಿನ ನರಸಿಂಹರಾಜ, ಬೆಂಗಳೂರಿನ ಪುಲಕೇಶಿನಗರ(ಎಸ್‌ಸಿ), ಸರ್ವಜ್ಞನಗರ, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ, ಮೂಡಬಿದಿರೆ, ಬೆಳ್ತಂಗಡಿ, ದಾವಣಗೆರೆ ದಕ್ಷಿಣ ಕ್ಷೇತ್ರ, ಚಿತ್ರದುರ್ಗ, ರಾಯಚೂರು ಕ್ಷೇತ್ರಕ್ಕೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಕೆ.ಎಚ್.ಅಬ್ದುಲ್ ಮಜೀದ್ ಮಾತನಾಡಿ, ‘ರಾಜ್ಯದಲ್ಲಿ ಒಟ್ಟು 100 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು. ಇನ್ನೂ 44 ಕ್ಷೇತ್ರಗಳಿಗೆ ಶೀಘ್ರದಲ್ಲೇ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗುವುದು. ಬಾಕಿ 46 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿಯನ್ನು ಮುಂದಿನ ಹಂತದಲ್ಲಿ ಬಿಡುಗಡೆ ಮಾಡಲಾಗುವುದು’ ಎಂದು ತಿಳಿಸಿದರು.

‘ಅಭ್ಯರ್ಥಿಯಾಗಬಯಸುವವರು ಅರ್ಜಿ ಹಾಕಬೇಕಿಲ್ಲ, ಶುಲ್ಕ ಪಾವತಿಸಬೇಕಿಲ್ಲ. ಪಕ್ಷವೇ ಅಭ್ಯರ್ಥಿ ಆಯ್ಕೆ ಮಾಡುತ್ತದೆ. ನಮ್ಮ ಪಕ್ಷ ಭ್ರಷ್ಟಾಚಾರವನ್ನು ಕಿಂಚಿತ್ತೂ ಸಹಿಸುವುದಿಲ್ಲ. ಪಕ್ಷದ ತತ್ವ ಸಿದ್ಧಾಂತಗಳಿಗೆ ಒಪ್ಪಿ ಬರುವ ಎಲ್ಲರಿಗೂ ಆಹ್ವಾನ ನೀಡುತ್ತದೆ’ ಎಂದು ಹೇಳಿದರು.

‘ಮೈತ್ರಿಗೆ ಸಿದ್ಧ’

‘ಬಿಜೆಪಿ ಹೊರತುಪಡಿಸಿ ಬೇರೆ ಯಾವುದೇ ಪಕ್ಷದ ಜತೆ ಹೊಂದಾಣಿಕೆ ರಾಜಕೀಯಕ್ಕೆ ಎಸ್‌ಡಿಪಿಐ ಸಿದ್ಧವಿದೆ. ಈ ಸಂಬಂಧ ಚರ್ಚೆಗಳೂ ಆರಂಭವಾಗಿವೆ’ ಎಂದು ಎಂ.ಕೆ. ಫೈಝಿ ತಿಳಿಸಿದರು.

‘ಜೆಡಿಎಸ್ ಜತೆ ಹೊಂದಾಣಿಕೆ ಎಸ್‌ಡಿಪಿಐ ಸಿದ್ಧವಿದೆಯೇ’ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳನ್ನು ಒಮ್ಮತದಿಂದ ಒಪ್ಪಿಕೊಂಡರೆ ಚುನಾವಣಾ ಪೂರ್ವ ಒಪ್ಪಂದ ಮಾಡಿಕೊಂಡು ಕೋಮುವಾದಿ ಪಕ್ಷದ ವಿರುದ್ಧ ಹೋರಾಡಬಹುದು. ಕಾಂಗ್ರೆಸ್ ಪಕ್ಷದ ಜತೆಗೂ ಹೊಂದಾಣಿಕೆಗೆ ಸಹಮತವಿದೆ’ ಎಂದು ಹೇಳಿದರು.

ಪತನಗೊಳ್ಳಲಿದೆ ನಾಸಾದ 38 ವರ್ಷ ಹಳೆಯ ಉಪಗ್ರಹ

ಕೇಪ್ ಕೆನವೆರಲ್ (ಎ.ಪಿ): ನಾಸಾ 38 ವರ್ಷಗಳ ಹಿಂದೆ ಉಡಾವಣೆ ಮಾಡಿದ್ದ, ಸುಮಾರು 2,450 ಕೆ.ಜಿ. ತೂಕದ ಉಪಗ್ರಹ 'ಇಆರ್‌ಬಿಎಸ್', ಪತನಗೊಳ್ಳುವ ಸಾಧ್ಯತೆಗಳಿವೆ.

ಈ ಉಪಗ್ರಹದ ಅವಶೇಷಗಳು ಯಾರ ಮೇಲಾದರೂ ಬೀಳುವ ಸಾಧ್ಯತೆಗಳು ಕಡಿಮೆ. ಬಹುತೇಕ ಭಾಗಗಳು ಭೂಮಿಗೆ ಮರುಪ್ರವೇಶದ ಮಾರ್ಗದಲ್ಲಿಯೇ ಸುಟ್ಟುಹೋಗಲಿವೆ. ಕೆಲವೊಂದು ತುಣುಕುಗಳು ಬೀಳಬಹುದಷ್ಟೇ ಎಂದು ನಾಸಾ ಹೇಳಿದೆ.

'ಭೂ ವಿಕಿರಣದ ಬಜೆಟ್ ಉಪಗ್ರಹ' (ಇಆರ್‌ಬಿಎಸ್) ಹೆಸರಿನ ಈ ಉಪಗ್ರಹವನ್ನು 1984ರಲ್ಲಿ ಉಡಾವಣೆ ಮಾಡಲಾಗಿತ್ತು. ಕಾರ್ಯಾಚರಣೆ ಅವಧಿ ಎರಡು ವರ್ಷ ಎಂದು ಅಂದಾಜಿಸಿದ್ದರೂ ನಿರೀಕ್ಷೆ ಮೀರಿ 2005ರವರೆಗೆ ಕಾರ್ಯ ನಿರ್ವಹಿಸಿತ್ತು. ಸೂರ್ಯನಿಂದ ಹೊಮ್ಮುವ ಶಕ್ತಿಯನ್ನು ಭೂಮಿ ಹೀರಿಕೊಂಡ ಹಾಗೂ ಪರಸರಿಸಿದ್ದು ಹೇಗೆ ಎಂಬುದನ್ನು ಈ ಉಪಗ್ರಹದ ಮೂಲಕ ಅಧ್ಯಯನ ಮಾಡಲಾಗಿತ್ತು.

ಕ್ಯಾಲಿಫೋರ್ನಿಯಾದ ಏರೋಸ್ಪೇಸ್ ಕಾರ್ಪೊರೇಷನ್ ಪ್ರಕಾರ, ಹೆಚ್ಚುಕಡಿಮೆ 13 ಗಂಟೆಗಳ ಅಂತರದಲ್ಲಿ ಈ ಉಪಗ್ರಹದ ಪತನದ ಮಾರ್ಗ ಆಫ್ರಿಕಾ, ಏಷ್ಯಾ, ಮಧ್ಯಪೂರ್ವ ರಾಷ್ಟ್ರಗಳು, ಉತ್ತರ ಮತ್ತು ದಕ್ಷಿಣ ಅಮೆರಿಕ ಮೇಲೆ ಹಾದುಹೋಗಲಿದೆ. ಉಪಗ್ರಹದ ಅವಶೇಷಗಳು ಭೂಮಿಗೆ ಬೀಳುವ ಸಂದರ್ಭದಲ್ಲಿ, 9,400 ಜನರಲ್ಲಿ ಒಬ್ಬರಿಗೆ ಪೆಟ್ಟು ಆಗಬಹುದು ಎಂದು ನಾಸಾ ಅಂದಾಜು ಮಾಡಿದೆ.

ವಿಮಾನದಲ್ಲಿ ಮಹಿಳೆಯ ಮೇಲೆ ಮೂತ್ರ ವಿಸರ್ಜನೆ ಪ್ರಕರಣ • ಕ್ಷಮೆಯಾಚಿಸಿದ ಏರ್ ಇಂಡಿಯಾ

ಮದ್ಯ ಪೂರೈಕೆ: ಮರುಪರಿಶೀಲನೆಗೆ ನಿರ್ಧಾರ

ನವದೆಹಲಿ (ಪಿಟಿಐ): ಶಂಕರ್ ಮಿಶ್ರಾ ಎಂಬಾತ ವಿಮಾನದಲ್ಲಿ ಮಹಿಳೆಯೊಬ್ಬರ ಮೇಲೆ ಮೂತ್ರ ವಿಸರ್ಜಿಸಿದ ಪ್ರಕರಣ ಕುರಿತಂತೆ ಏರ್ ಇಂಡಿಯಾ ವಿಮಾನಯಾನ ಸಂಸ್ಥೆಯ ಸಿಇಒ ಕ್ಯಾಂಬ್‌ಬೆಲ್ ವಿಲ್ಸನ್ ಅವರು ಕ್ಷಮೆ ಕೋರಿದ್ದಾರೆ. ವಿಮಾನದ ಪೈಲಟ್, ನಾಲ್ವರು ಸಿಬ್ಬಂದಿಯನ್ನು ಕೆಲಸದಿಂದ ಅಮಾನತು ಮಾಡಲಾಗಿದ್ದು, ವಿಮಾನದಲ್ಲಿ ಮದ್ಯ ಪೂರೈಕೆ ನೀತಿಯನ್ನು ಪರಾಮರ್ಶಿಸುವುದಾಗಿ ಅವರು ಹೇಳಿದ್ದಾರೆ.

'ಪ್ರಯಾಣಿಕರೊಬ್ಬರು ವಿಮಾನ ಪ್ರಯಾಣದ ವೇಳೆ ತೋರಿದ ಅನುಚಿತ ವರ್ತನೆಯಿಂದ ಸಹ ಪ್ರಯಾಣಿಕರಿಗೆ ಇರಿಸುಮುರಿಸು ಉಂಟಾಗಿದೆ. ಈ ಬಗ್ಗೆ ವಿಷಾದವಿದೆ. ಈ ವಿಚಾರವನ್ನು ಇನ್ನಷ್ಟು ಸೂಕ್ತವಾಗಿ ನಿರ್ವಹಿಸಬಹುದಿತ್ತು. ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲು ಸಂಸ್ಥೆ ಬದ್ಧವಾಗಿದೆ' ಎಂದು ವಿಲ್ಸನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಘಟನೆ ನಡೆದಾಗ ಎಐ-102 ವಿಮಾನದಲ್ಲಿ ಕರ್ತವ್ಯದಲ್ಲಿದ್ದ ಒಬ್ಬ ಪೈಲಟ್ ಹಾಗೂ ನಾಲ್ವರು ಸಿಬ್ಬಂದಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ. ಜೊತೆಗೆ ವಿಚಾರಣೆ ಮುಗಿಯುವವರೆಗೂ ಅವರನ್ನು ಅಮಾನತಿನಲ್ಲಿ ಇರಿಸಲಾಗಿದೆ ಎಂದು ಅವರು ಹೇಳಿದ್ದಾರೆ. ಮುಂದೆ ಇಂತಹ ಘಟನೆಗಳು ನಡೆದರೆ ತಪ್ಪದೇ ವರದಿ ಮಾಡುವಂತೆ ಸಂಸ್ಥೆಯ ಸಿಬ್ಬಂದಿಗೆ ಅವರು ಮನವಿ ಮಾಡಿದ್ದಾರೆ.

ಘಟನೆಯ ನಿರ್ವಹಣೆ, ಮದ್ಯ ಪೂರೈಕೆ, ಪ್ರಯಾಣದ ವೇಳೆ ದೂರು ದಾಖಲು ವ್ಯವಸ್ಥೆ, ಸಂಸ್ಥೆಯ ಸಿಬ್ಬಂದಿಯಿಂದ ಲೋಪ ಆಗಿದೆಯೇ ಎಂಬಂತಹ ವಿಚಾರಗಳ ಕುರಿತು ಏರ್ ಇಂಡಿಯಾ ಆಂತರಿಕ ತನಿಖೆ ಕೈಗೊಂಡಿದೆ. ವಿಮಾನ ಪ್ರಯಾಣದ ವೇಳೆ ಮದ್ಯ ಪೂರೈಸುವ ನೀತಿಯನ್ನು ಪರಿಷ್ಕರಿಸುವ ಕುರಿತು ಸಿಇಒ ಸುಳಿವು ನೀಡಿದ್ದಾರೆ.

ವಿಮಾನ ಪ್ರಯಾಣದ ವೇಳೆ ನಡೆಯುವ ಈ ರೀತಿಯ ಘಟನೆಯನ್ನು ಲಿಖಿತವಾಗಿ ವರದಿ ಮಾಡುವ ಈಗಿನ ವ್ಯವಸ್ಥೆಯನ್ನು ಡಿಜಿಟಲ್ ರೂಪಕ್ಕೆ ಪರಿವರ್ತಿಸಲು ಸಂಸ್ಥೆ ಮುಂದಾಗಿದೆ.


ಆರೋಪಿ ಶಂಕರ್ ಮಿಶ್ರಾನನ್ನು ಪೊಲೀಸರು ದೆಹಲಿಯ ಪಟಿಯಾಲ ಹೌಸ್ ಕೋರ್ಟ್‌ಗೆ ಶನಿವಾರ ಕರೆತಂದರು —ಪಿಟಿಐ ಚಿತ್ರ

ಆರೋಪಿಗೆ ನ್ಯಾಯಾಂಗ ಬಂಧನ

ನವದೆಹಲಿ/ಬೆಂಗಳೂರು (ಪಿಟಿಐ): ಏರ್ ಇಂಡಿಯಾ ವಿಮಾನದಲ್ಲಿ ಮಹಿಳಾ ಪ್ರಯಾಣಿಕರೊಬ್ಬರ ಮೇಲೆ ಮೂತ್ರ ವಿಸರ್ಜನೆ ಮಾಡಿದ ಆರೋಪದಲ್ಲಿ ಶಂಕರ್ ಮಿಶ್ರಾ ಎಂಬ ವ್ಯಕ್ತಿಯನ್ನು ದೆಹಲಿ ಪೊಲೀಸರು ಬೆಂಗಳೂರಿನಲ್ಲಿ ಶನಿವಾರ ಬಂಧಿಸಿದ್ದಾರೆ. ದೆಹಲಿ ಕೋರ್ಟ್ ಆತನನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಕಳೆದ ವರ್ಷದ ನವೆಂಬರ್ 26ರಂದು ನ್ಯೂಯಾರ್ಕ್–ದೆಹಲಿ ಮಾರ್ಗದ ಏರ್ ಇಂಡಿಯಾ ವಿಮಾನದ ಬ್ಯುಸಿನೆಸ್ ಕ್ಲಾಸ್‌ನಲ್ಲಿ ಪ್ರಯಾಣಿಸುತ್ತಿದ್ದ ಹಿರಿಯ ಮಹಿಳೆಯ ಮೇಲೆ ಮದ್ಯದ ಅಮಲಿನಲ್ಲಿದ್ದ ಆರೋಪಿಯು ಮೂತ್ರ ವಿಸರ್ಜನೆ ಮಾಡಿದ್ದ.

ದೇಶ ಬಿಟ್ಟು ತೆರಳದಂತೆ ಆರೋಪಿ ವಿರುದ್ಧ ಲುಕ್‌ಔಟ್ ನೋಟಿಸ್ ಹೊರಡಿಸಲಾಗಿತ್ತು.

ನಿರ್ವಹಣೆ ವೈಫಲ್ಯ: ಸಹಪ್ರಯಾಣಿಕ ಕಿಡಿ

ಮೂತ್ರ ವಿಸರ್ಜನೆ ಘಟನೆಯಿಂದ ಆಘಾತಕ್ಕೊಳಗಾಗಿದ್ದ ಮಹಿಳೆಗೆ ಬದಲಿ ಆಸನದ ವ್ಯವಸ್ಥೆ ಮಾಡುವಲ್ಲಿ ವಿಮಾನದ ಪೈಲಟ್ ವಿಫಲರಾಗಿದ್ದಾರೆ ಎಂದು ಏರ್ ಇಂಡಿಯಾ ವಿಮಾನದಲ್ಲಿ ಸಂಚರಿಸಿದ್ದ ಸಹ ಪ್ರಯಾಣಿಕ ಡಾ. ಸುಗತ ಭಟ್ಟಾಚಾರ್ಯ ಅವರು ಆರೋಪಿಸಿದ್ದಾರೆ. ವಿಮಾನದ ಫಸ್ಟ್ ಕ್ಲಾಸ್ ವಿಭಾಗದಲ್ಲಿ ನಾಲ್ಕು ಆಸನಗಳು ಖಾಲಿಯಿದ್ದರೂ, ವಿಮಾನದ ಸಿಬ್ಬಂದಿಗೆ ಮೀಸಲಾದ ಚಿಕ್ಕ ಸೀಟನ್ನು ಸಂತ್ರಸ್ತ ಮಹಿಳೆಗೆ ಕೊಟ್ಟಿದ್ದು ಏಕೆ ಎಂದು ಅವರು ತಮ್ಮ ದೂರಿನಲ್ಲಿ ಪ್ರಶ್ನಿಸಿದ್ದಾರೆ.

ಬದಲಿ ಆಸನ ಕಲ್ಪಿಸುವಾಗ ಆದ ಯಡವಟ್ಟಿನ ಬಗ್ಗೆ ಸಂತ್ರಸ್ತ ಮಹಿಳೆಯೂ ತಮ್ಮ ದೂರಿನಲ್ಲಿ ಉಲ್ಲೇಖಿಸಿದ್ದಾರೆ. '20 ನಿಮಿಷ ಕಳೆದ ಬಳಿಕ ವಿಮಾನದ ಸಿಬ್ಬಂದಿ ಕುಳಿತುಕೊಳ್ಳುವ ಸಣ್ಣ ಸೀಟಿನಲ್ಲಿ ಕುಳಿತುಕೊಳ್ಳುವಂತೆ ನನಗೆ ಸೂಚಿಸಲಾಯಿತು. ಎರಡು ಗಂಟೆಯ ನಂತರ ಮತ್ತೆ ನನ್ನ ಸೀಟಿಗೆ ಹೋಗುವಂತೆ ಸೂಚಿಸಲಾಯಿತು. ಆದರೆ ಅಲ್ಲಿ ಮೂತ್ರದ ವಾಸನೆ ಬರುತ್ತಿದ್ದುದರಿಂದ ನಾನು ಅಲ್ಲಿ ಕುಳಿತುಕೊಳ್ಳಲು ನಿರಾಕರಿಸಿದೆ. ಉಳಿದ ನನ್ನ ಪೂರ್ಣ ಪ್ರಯಾಣವನ್ನು ಮೇಲ್ವಿಚಾರಕರ ಸೀಟಿನಲ್ಲೇ ಮುಂದುವರಿಸಬೇಕಾಯಿತು' ಎಂದು ಸಂತ್ರಸ್ತೆ ದೂರು ನೀಡಿದ್ದಾರೆ.

ದೆಹಲಿ–ಬೆಂಗಳೂರು ಪೊಲೀಸರ ಜಂಟಿ ಕಾರ್ಯಾಚರಣೆ

ಬೆಂಗಳೂರು: 'ಶಂಕರ್ ಮಿಶ್ರಾ, ಬೆಂಗಳೂರಿನ ಸಂಜಯನಗರದ ಗೆಸ್ಟ್ ಹೌಸ್‌ನಲ್ಲಿ ಉಳಿದುಕೊಂಡಿದ್ದ. ದೆಹಲಿ ಪೊಲೀಸರ ತಂಡದ ಜೊತೆ ಕಾರ್ಯಾಚರಣೆ ನಡೆಸಿ ಶುಕ್ರವಾರ ರಾತ್ರಿ ಆತನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ನೊಂದ ಮಹಿಳೆ, ಜ. 4ರಂದು ದೆಹಲಿ ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣ ದಾಖಲಾಗುತ್ತಿದ್ದಂತೆಯೇ ತಲೆಮರೆಸಿಕೊಂಡಿದ್ದ ಶಂಕರ್, ಹಲವು ರಾಜ್ಯಗಳಲ್ಲಿ ಸುತ್ತಾಡಿದ್ದ. ನಂತರ ಆರೋಪಿ ಬೆಂಗಳೂರಿಗೆ ಬಂದಿದ್ದ. ಮಾರತ್ತಹಳ್ಳಿಯಲ್ಲಿರುವ ತಂಗಿ ಮನೆಯಲ್ಲಿ ಕೆಲದಿನ ಉಳಿದುಕೊಂಡಿದ್ದ. ಇತ್ತೀಚೆಗೆ ಬೆಂಗಳೂರಿನ ಸಂಜಯನಗರದಲ್ಲಿರುವ ರಾಮ್ಕಿ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ಉಳಿದುಕೊಂಡಿದ್ದ' ಎಂದು ಪೊಲೀಸರು ಹೇಳಿದರು. ಆತ ಉಳಿದಿದ್ದ ಫ್ಲ್ಯಾಟ್ ಕಂಪನಿಯೊಂದಕ್ಕೆ ಸೇರಿದ್ದಾಗಿದೆ.

'ಆರೋಪಿಯ ಮೊಬೈಲ್ ನೆಟ್‌ವರ್ಕ್ ಮಾಹಿತಿ ಆಧರಿಸಿ ದೆಹಲಿ ಪೊಲೀಸರು ಬೆಂಗಳೂರಿಗೆ ಬಂದಿದ್ದರು. ಶುಕ್ರವಾರ ರಾತ್ರಿ ಗೆಸ್ಟ್‌ಹೌಸ್‌ನಲ್ಲೇ ಆತನನ್ನು ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದರು.

ಗುಜರಾತ್: ಕೃಷಿ ಬಾವಿಗೆ ಬಿದ್ದು ಸಿಂಹಗಳ ಸಾವು

ಗುಜರಾತ್: ಅಮ್ರೇಲಿ ಜಿಲ್ಲೆಯ ಗಿರ್ ಅರಣ್ಯದ ಕೃಷಿ ಜಮೀನಿನಲ್ಲಿ 40 ಅಡಿ ಆಳದ ತೆರೆದ ಬಾವಿಗೆ ಬಿದ್ದು ಏಷ್ಯಾ ಮೂಲದ ಎರಡು ಸಿಂಹಗಳು ಮುಳುಗಿ ಸಾವನ್ನಪ್ಪಿವೆ. ಬಾವಿಯಿಂದ ಹೊರಬರಲು ಸಿಂಹಗಳು ಹರಸಾಹಸ ಪಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಖಂಭಾ ತಾಲ್ಲೂಕಿನ ಕೊಟ್ಡಾ ಗ್ರಾಮದಲ್ಲಿ ಶುಕ್ರವಾರ ಮುಂಜಾನೆ 5 ರಿಂದ 9 ವರ್ಷದೊಳಗಿನ ಗಂಡು ಮತ್ತು ಹೆಣ್ಣು ಸಿಂಹಗಳು ಬಾವಿಗೆ ಬಿದ್ದಿವೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ. ಈ ಪ್ರದೇಶ ಗಿರ್ ಪೂರ್ವ ಅರಣ್ಯ ವಿಭಾಗ ವ್ಯಾಪ್ತಿಗೆ ಬರುತ್ತದೆ.

'ಶುಕ್ರವಾರ ಮುಂಜಾನೆ, ಎರಡು ಸಿಂಹಗಳು ಬಾವಿಗೆ ಬಿದ್ದಿವೆ ಎಂದು ತೋಟದ ಮಾಲೀಕರು ತಿಳಿಸಿದರು. ಆದರೆ, ರಕ್ಷಣಾ ತಂಡಗಳು ಸ್ಥಳಕ್ಕೆ ತಲುಪುವ ಹೊತ್ತಿಗೆ, ಸಿಂಹಗಳು ಮುಳುಗಿದ್ದವು. ಅವುಗಳ ಕಳೇಬರ ಹೊರತೆಗೆದು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಯಿತು ಎಂದು ರಾಜದೀಪ್‌ಸಿನ್ಹ ಝಲಾ 'ಪ್ರಜಾವಾಣಿ'ಗೆ ತಿಳಿಸಿದರು.

ಸಿಂಹಗಳ ಅಟ್ಟಾಡಿಸಿದ ಪ್ರಕರಣ, ಮೂವರ ಬಂಧನ (ಜುನಾಗಡ ವರದಿ): ಗುಜರಾತ್‌ನ ಜುನಾಗಡ ಜಿಲ್ಲೆಯ ಗಿರ್ ವನ್ಯಜೀವಿ ಅಭಯಾರಣ್ಯದಲ್ಲಿ ಸಿಂಹಗಳನ್ನು ವಾಹನಗಳಲ್ಲಿ ಬೆನ್ನಟ್ಟಿ ವಿಡಿಯೊ ಚಿತ್ರೀಕರಿಸುವ ಮೂಲಕ ಕಿರುಕುಳ ನೀಡಿದ ಆರೋಪದ ಮೇಲೆ ಮೂವರನ್ನು ಬಂಧಿಸಲಾಗಿದೆ ಎಂದು ಅರಣ್ಯ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

'ಕೈದಿಗಳ ಅವಧಿಪೂರ್ವ ಬಿಡುಗಡೆ ಪರೋಲ್ ಅವಧಿ ಪರಿಗಣನೆ ಬೇಡ'

ನವದೆಹಲಿ (ಪಿಟಿಐ): ಕೈದಿಗಳ ಅವಧಿಪೂರ್ವ ಬಿಡುಗಡೆ ಅರ್ಜಿ ಪರಿಗಣಿಸುವಾಗ ಕೈದಿಯು ಪರೋಲ್ ಮೇಲೆ ಜೈಲಿನ ಹೊರಗಿದ್ದ ಅವಧಿಯನ್ನು ಶಿಕ್ಷೆಯ ಅವಧಿಯ ಭಾಗವಾಗಿ ಪರಿಗಣಿಸಬಾರದು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ನ್ಯಾಯಮೂರ್ತಿಗಳಾದ ಎಂ.ಆರ್.ಶಾ, ಸಿ.ಟಿ.ರವಿಕುಮಾರ್ ಅವರಿದ್ದ ಪೀಠವು ಈ ಕುರಿತ ಬಾಂಬೆ ಹೈಕೋರ್ಟ್‌ನ ಆದೇಶವನ್ನು ಎತ್ತಿಹಿಡಿಯಿತು. ಪರೋಲ್ ಅವಧಿ ಪರಿಗಣಿಸಿದರೆ ಕೈದಿ ಹಲವು ಬಾರಿ ಪರೋಲ್‌ಗೆ ಅರ್ಜಿ ಸಲ್ಲಿಸಬಹುದು ಎಂದೂ ಹೇಳಿತು.

ಅರ್ಜಿದಾರ ಪರ ವಕೀಲರ ವಾದವನ್ನು ಪರಿಗಣಿಸಿದರೆ ಕೈದಿ ಹೆಚ್ಚು ಬಾರಿ ಪರೋಲ್ ಪಡೆಯಲು ಮುಂದಾಗಬಹುದು. ಪರೋಲ್ ಪಡೆಯಲು ಮಿತಿ ಇಲ್ಲದ ಕಾರಣ, ಶಿಕ್ಷೆಯನ್ನು ವಿಧಿಸುವ ಮೂಲ ಉದ್ದೇಶವೇ ಅರ್ಥಕಳೆದುಕೊಳ್ಳಬಹುದು ಎಂದು ಹೇಳಿತು.

ಹೀಗಾಗಿ, ಶಿಕ್ಷೆಯ ಅವಧಿಯನ್ನು ಲೆಕ್ಕ ಹಾಕುವಾಗ ಪರೋಲ್ ಅವಧಿಯನ್ನು ಪರಿಗಣಿಸಬಾರದು. ಈ ಕುರಿತಂತೆ ಹೈಕೋರ್ಟ್ ಅದೇಶಕ್ಕೆಪೂರ್ಣ ಸಹಮತವಿದೆ ಎಂದು ಅಭಿಪ್ರಾಯಪಟ್ಟಿತು.

ಜೋಶಿಮಠ: ನೆರವಿಗೆ 'ಸುಪ್ರೀಂ'ಗೆ ಮೊರೆ

ಪರಿಸ್ಥಿತಿ ಪರಿಶೀಲಿಸಿದ ಮುಖ್ಯಮಂತ್ರಿ • 600 ಕುಟುಂಬಗಳ ಸ್ಥಳಾಂತರಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಜೋಶಿಮಠ ಪಟ್ಟಣದಲ್ಲಿ ಆತಂಕದಲ್ಲಿರುವ ನಿವಾಸಿಗಳ ನೆರವಿಗೆ ಧಾವಿಸಬೇಕು ಮತ್ತು ಪರಿಹಾರ ಒದಗಿಸಬೇಕು ಎಂದು ಕೇಂದ್ರ ಸರ್ಕಾರ ಮತ್ತು ರಾಷ್ಟ್ರೀಯ ವಿಕೋಪ ನಿರ್ವಹಣಾ ಪ್ರಾಧಿಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಲಾಗಿದೆ.

ಜೋಶಿಮಠ ಪಟ್ಟಣದಲ್ಲಿ ಅಪಾಯಕಾರಿ ಮಟ್ಟದಲ್ಲಿ ಬಿರುಕು ಬಿಟ್ಟಿರುವ ಮನೆಗಳಲ್ಲಿನ ಜೀವ ಮತ್ತು ಆಸ್ತಿಪಾಸ್ತಿ ನಷ್ಟದ ಭೀತಿಯಲ್ಲಿರುವ ನಿವಾಸಿಗಳಿಗೆ ನೆರವಾಗಲು ಉತ್ತರಾಖಂಡ ಸರ್ಕಾರ ಕೈಗೊಂಡಿಲುವ ಪರಿಹಾರ ಕಾರ್ಯಗಳಿಗೆ ಸಹಕರಿಸುವಂತೆ ಸೂಚಿಸಬೇಕು ಎಂದು ಅರ್ಜಿದಾರರು ಕೋರಿದ್ದಾರೆ.

ಜ್ಯೋತಿರ್ಮಠದ ಶಂಕರಾಚಾರ್ಯ ಸ್ವಾಮಿ ಅವಿಮುಕ್ತೇಶ್ವರಾನಂದ ಸರಸ್ವತಿ ಅವರು ಈ ಪಿಐಎಲ್ ಸಲ್ಲಿಸಿದ್ದಾರೆ.

ಸ್ಥಳಾಂತರಕ್ಕೆ ಆದೇಶ (ಡೆಹ್ರಾಡೂನ್ ವರದಿ): 'ಜೋಶಿಮಠದಲ್ಲಿ ಆತಂಕದಲ್ಲಿರುವ 600 ಕುಟುಂಬಗಳನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲು' ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಆದೇಶ ನೀಡಿದ್ದಾರೆ.

ಪರಿಸ್ಥಿತಿ ಕುರಿತು ಅಧಿಕಾರಿಗಳ ಜೊತೆ ಸಭೆ ನಡೆಸಿದ ಅವರು, 'ಜನರ ಜೀವರಕ್ಷಣೆ ಸರ್ಕಾರದ ಮೊದಲ ಆದ್ಯತೆ. ಸಮಸ್ಯೆ ಪರಿಹರಿಸಲು ಅಲ್ಪಾವಧಿ ಮತ್ತು ದೀರ್ಘಾವಧಿ ಯೋಜನೆ ರೂಪಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ದೇವಾಲಯ ಕುಸಿತ: (ಜೋಶಿಮಠ ವರದಿ): ಜೋಶಿಮಠದಲ್ಲಿ ಶುಕ್ರವಾರ ದೇವಸ್ಥಾನವೊಂದು ಕುಸಿದಿದೆ. ವರ್ಷದಿಂದ ತಮ್ಮ ಮನೆಗಳ ಗೋಡೆಗಳಲ್ಲಿ ಬೀಳುತ್ತಿರುವ ಭಾರೀ ಬಿರುಕುಗಳ ನಡುವೆ ಭಯದಲ್ಲಿಯೇ ವಾಸಿಸುತ್ತಿರುವ ನಿವಾಸಿಗಳನ್ನು ಇದು ಮತ್ತಷ್ಟು ಸಂಕಷ್ಟಕ್ಕೆ ದೂಡಿದೆ.


ಉತ್ತರಾಖಂಡದ ಚಮೋಲಿ ಜಿಲ್ಲೆಯ ಜೋಶಿಮಠಕ್ಕೆ ಶನಿವಾರ ಭೇಟಿ ನೀಡಿದ್ದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಭೂ ಕುಸಿತದ ಕುರಿತು ಪರಿಶೀಲನೆ ನಡೆಸಿದರು —ಪಿಟಿಐ ಚಿತ್ರ

'ಸ್ವಾರ್ಥಿಗಳು ಆರೆಸ್ಸೆಸ್‌ನಿಂದ ದೂರವೇ ಇರಲಿ'

ಪಣಜಿ: 'ಸ್ವಾರ್ಥಿಗಳು ಖಂಡಿತವಾಗಿ ಸಂಘದಿಂದ ದೂರವೇ ಇರಿ. ದೇಶವನ್ನು ಒಗ್ಗೂಡಿಸುವ ಉದ್ದೇಶ ಸಾಧನೆಗಾಗಿ ಜನರು ಸಂಘವನ್ನು ಸೇರಿ' ಎಂದು ಮೋಹನ್ ಭಾಗವತ್ ಶನಿವಾರ ಜನತೆಗೆ ಮುಕ್ತ ಆಹ್ವಾನವನ್ನು ನೀಡಿದರು.

ಸಂಘವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಜನರು ಅಲ್ಪಾವಧಿಗಾದರೂ ಸಂಘವನ್ನು ಸೇರಬೇಕು ಎಂದು ಭಾಗವತ್ ಅಭಿಪ್ರಾಯಪಟ್ಟರು. 'ಸಂಘವನ್ನು ಸೇರಿದರೆ ನಮಗೇನು ಸಿಗುತ್ತದೆ ಎಂದು ಯಾರಾದರೂ ಪ್ರಶ್ನಿಸಿದರೆ, ನನ್ನ ಉತ್ತರ ಏನೂ ಇಲ್ಲ. ಅಕಸ್ಮಾತ್ ಏನಾದರೂ ಸಿಕ್ಕರೂ ಅದು ಮರಳಿ ಸಮಾಜಕ್ಕೆ ಹೋಗುತ್ತದೆ. ಧೈರ್ಯವಿದ್ದರೆ ಅವರು ಬರಬಹುದು. ಸ್ವಾರ್ಥಿಗಳು ದೂರವೇ ಉಳಿದರೂ ಅವರಿಗೂ, ಸಂಘಕ್ಕೂ ಒಳ್ಳೆಯದು' ಎಂದು ಹೇಳಿದರು.

ನಾವು ದೇಶವನ್ನು ಒಗ್ಗೂಡಿಸಲು ಬಯಸುತ್ತೇವೆ. ಅದನ್ನು ಅರ್ಥಮಾಡಿಕೊಳ್ಳುವ ಉದಾರತೆ ಇದ್ದರೆ, ಸಮಾಜದ ಈ ದೃಷ್ಟಿಕೋನದಲ್ಲಿ ಸ್ಪಷ್ಟತೆ ಸಿಗಲಿದೆ. ಸ್ವಾತಂತ್ರ್ಯ ನಂತರದಿಂದ ಈವರೆಗಿನ ದೇಶದ ಪ್ರಗತಿಯನ್ನು ಗಮನಿಸಿದರೆ, ಸಮಾಜಕ್ಕೆ ಪರ್ಯಾಯವಾಗಿ ಅಭಿವೃದ್ಧಿಯ ರೇಖೆಯನ್ನು ನೀವವು ಗುರುತಿಸುತ್ತೀರಿ' ಎಂದರು.

'ಸಂದರ್ಭಾನುಸಾರ ಮಾಡಬೇಕಾದ್ದನ್ನು ಕಾರ್ಯಕರ್ತರು ಮಾಡುತ್ತಾರೆ' (ಪಣಜಿ ವರದಿ–ಪಿಟಿಐ): 'ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಕಾರ್ಯಕರ್ತರ ಮುಖೇನ 'ಒತ್ತಡ ಹೇರುವ' ಗುಂಪು ರಚಿಸಲು ಬಯಸುವುದಿಲ್ಲ' ಎಂದು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಹೇಳಿದರು.

ವಿವಿಧ ಕ್ಷೇತ್ರಗಳಲ್ಲಿ ದೇಶಕ್ಕೆ ಗಣನೀಯವಾದ ಕೊಡುಗೆಯನ್ನು ನೀಡುವ ಕಾರ್ಯಕರ್ತರನ್ನಷ್ಟೇ ಆರ್‌ಎಸ್‌ಎಸ್ ರೂಪಿಸಲಿದೆ ಎಂದು ಅವರು ಶನಿವಾರ ಇಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಹೇಳಿದರು.

'ಆರ್‌ಎಸ್‌ಎಸ್ ಕಾರ್ಯಕರ್ತರು ವೈಯಕ್ತಿಕ ನೆಲೆಯಲ್ಲೂ ಸಾಮಾಜಿಕ ಉದ್ದೇಶದ ವಿವಿಧ ಕಾರ್ಯಗಳಲ್ಲಿ ತೊಡಗುವರು. ಅದರರ್ಥ ಆರ್‌ಎಸ್‌ಎಸ್ ಒಂದು ಸೇವಾ ಸಂಸ್ಥೆ ಎಂಬುದಲ್ಲ' ಎಂದು ಸ್ಪಷ್ಟಪಡಿಸಿದರು.

ಪಂಜಾಬ್: ಸಚಿವ ಫೌಜಾ ಸಿಂಗ್ ರಾಜೀನಾಮೆ

ಚಂಡೀಗಢ (ಪಿಟಿಐ): ಪಂಜಾಬ್‌ನ ತೋಟಗಾರಿಕೆ ಮತ್ತು ಆಹಾರ ಸಂಸ್ಕರಣೆ ಸಚಿವ ಫೌಜಾ ಸಿಂಗ್ ಸರಾರಿ ಅವರು ಶನಿವಾರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಗುತ್ತಿಗೆದಾರರಿಂದ ಹಣ ಸುಲಿಗೆ ಮಾಡುವ ಯೋಜನೆ ರೂಪಿಸುತ್ತಿದ್ದ ಆರೋಪಕ್ಕೆ ಸಂಬಂಧಿಸಿದ ಸರಾರಿ ಅವರ ಆಡಿಯೊ ಕ್ಲಿಪಿಂಗ್ ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಬಹಿರಂಗಗೊಂಡಿತ್ತು. ಇದು ತೀವ್ರ ವಿವಾದಕ್ಕೆ ಕಾರಣವಾಗಿತ್ತು. ಪಂಜಾಬ್‌ನಲ್ಲಿ ಎಎಪಿ ಸರ್ಕಾರ ಅಧಿಕಾರಕ್ಕೆ ಬಂದ ಎರಡು ತಿಂಗಳಲ್ಲಿಯೇ ಆರೋಗ್ಯ ಸಚಿವರಾಗಿದ್ದ ವಿಜಯ್ ಸಿಂಗ್ಲಾ ಅವರ ವಿರುದ್ಧ ಭ್ರಷ್ಟಾಚಾರದ ಆರೋಪ ಕೇಳಿ ಬಂದಿತ್ತು. ಮುಖ್ಯಮಂತ್ರಿ ಭಗವಂತ ಮಾನ್ ಅವರು ಕೂಡಲೇ ಅವರನ್ನು ಸಂಪುಟದಿಂದ ವಜಾಗೊಳಿಸಿದ್ದರು.

ಕೋವಿಡ್ ನಿರ್ಬಂಧ ಟೀಕೆ: ಜಾಲತಾಣಗಳ ಸಾವಿರಕ್ಕೂ ಅಧಿಕ ಖಾತೆಗಳ ರದ್ದು

ಬೀಜಿಂಗ್(ಎ.ಪಿ): ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸರ್ಕಾರದ ನೀತಿಗಳ ಬಗ್ಗೆ ಟೀಕೆ, ವಿಮರ್ಶೆಗಳನ್ನು ಒಳಗೊಂಡಿದ್ದ, ಸಾಮಾಜಿಕ ಜಾಲತಾಣಗಳ 1000ಕ್ಕೂ ಅಧಿಕ ಖಾತೆಗಳನ್ನು ಚೀನಾ ಸರ್ಕಾರ ಅಮಾನತುಪಡಿಸಿದೆ.

ಚೀನಾದಲ್ಲಿ ದಿನೇ ದಿನೇ ಕೋವಿಡ್ ಸೋಂಕು ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ. ಹೆಸರಾಂತ ಜಾಲತಾಣ 'ಸಿನಾ ವೀಬೊ', ನಿಯಮ ಉಲ್ಲಂಘನೆಯ 12,854 ಪ್ರಕರಣಗಳನ್ನು ತಾನು ಗುರುತಿಸಿರುವುದಾಗಿ ತಿಳಿಸಿದೆ.

ಪರಿಣತರು, ವಿದ್ವಾಂಸರು, ವೈದ್ಯಕೀಯ ಕ್ಷೇತ್ರದ ಕಾರ್ಯಕರ್ತರ ವಿರುದ್ಧದ ದಾಳಿಗಳು ಇದರಲ್ಲಿ ಸೇರಿದ್ದವು. ಈ ಪೈಕಿ 1,120 ಖಾತೆಗಳನ್ನು ತಾತ್ಕಾಲಿಕ ಅಥವಾ ಶಾಶ್ವತವಾಗಿ ಬಂದ್ ಮಾಡಲಾಗಿದೆ ಎಂದು ಹೇಳಿದೆ.

ಆಡಳಿತರೂಢ ಕಮ್ಯುನಿಸ್ಟ್ ಪಾರ್ಟಿಯು ಕೋವಿಡ್ ಕುರಿತ ಬಿಗಿ ನಿಬಂಧನೆಗಳನ್ನು ಸಮರ್ಥಿಸಿಕೊಳ್ಳಲು ಬಹುತೇಕ ವೈದ್ಯ ಕ್ಷೇತ್ರದ ಪರಿಣತರನ್ನು ಆಧರಿಸಿದೆ. ಚೀನಾದಲ್ಲಿ ನೇರ ಟೀಕೆಗೆ ಅವಕಾಶವಿಲ್ಲ, ವಾಕ್ ಸ್ವಾತಂತ್ರ್ಯದ ಮೇಲೂ ನಿರ್ಬಂಧ ಹೇರಲಾಗಿದೆ.

ನಿರ್ಬಂಧ ಕೈಬಿಟ್ಟ ಚೀನಾ

ಬೀಜಿಂಗ್ (ಪಿಟಿಐ): ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದ ನಿರ್ಬಂಧಗಳನ್ನು ಪೂರ್ಣ ಕೈಬಿಡುವ ಕ್ರಮವಾಗಿ ಚೀನಾ ಸರ್ಕಾರ, ಕೋವಿಡ್ ನಿಯಮ ಉಲ್ಲಂಘನೆ ಆರೋಪದಡಿ ವಶಕ್ಕೆ ಪಡೆದಿದ್ದ ಎಲ್ಲರನ್ನೂ ಬಿಡುಗಡೆ ಮಾಡುವಂತೆ ಆದೇಶಿಸಿದೆ.

ಭಾನುವಾರದಿಂದ ಜಾರಿಗೆ ಬರುವಂತೆ ನಿರ್ಬಂಧಗಳನ್ನು ಕೈಬಿಡಲಾಗಿದೆ. ವಿಮಾನ ನಿಲ್ದಾಣಗಳು ಮುಕ್ತವಾಗಲಿದ್ದು, ವಾಣಿಜ್ಯ ವಹಿವಾಟು ಪುನರಾರಂಭವಾಗಲಿದೆ.

ಅಂತರಾಷ್ಟ್ರೀಯ ಪ್ರಯಾಣಿಕರಿಗೆ ಇನ್ನು ಮುಂದೆ ಯಾವುದೇ ತಪಾಸಣೆ ಇರುವುದಿಲ್ಲ, ಕ್ವಾರಂಟೈನ್‌ಗೆ ಒಳಪಡಿಸುವ ಕ್ರಮವು ಇರುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೋವಿಡ್‌ನ ಒಮೈಕ್ರಾನ್ ತಳಿಯು ಈ ಹಿಂದಿನ ಡೆಲ್ಟಾ ತಳಿಯಷ್ಟು ಗಂಭೀರವಾದುದಲ್ಲ ಎಂದು ಅಧಿಕಾರಿಗಳು ಅಭಿಪ್ರಾಯ ಪಟ್ಟಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸಾಹಿತ್ಯ ಅಕಾಡೆಮಿ: ಬಸವರಾಜ ಸಾದರ ನೇಮಕ


ಬಸವರಾಜ ಸಾದರ

ನವದೆಹಲಿ: ಕೇಂದ್ರ ಸಾಹಿತ್ಯ ಅಕಾಡೆಮಿಯ ಸಾಮಾನ್ಯ ಪರಿಷತ್‌ನ ಸದಸ್ಯರನ್ನಾಗಿ ಕನ್ನಡದ ಲೇಖಕ ಪ್ರೊ.ಬಸವರಾಜ ಸಾದರ ಅವರನ್ನು ನಾಮನಿರ್ದೇಶನ ಮಾಡಲಾಗಿದೆ.

ಪರಿಷತ್ ಅನ್ನು ಪುನರ್ ರಚನೆ ಮಾಡಲಾಗಿದ್ದು, ಇದರ ಅವಧಿ ಐದು ವರ್ಷಗಳು. ಪರಿಷತ್‌ನ ಮೊದಲ ಸಭೆ ಮಾರ್ಚ್ 11ರಂದು ನವದೆಹಲಿಯ ಅಕಾಡೆಮಿಯ ಕಚೇರಿಯಲ್ಲಿ ನಡೆಯಲಿದೆ ಎಂದು ಅಕಾಡೆಮಿಯ ಕಾರ್ಯದರ್ಶಿ ಡಾ.ಕೆ.ಶ್ರೀನಿವಾಸ ರಾವ್ ತಿಳಿಸಿದ್ದಾರೆ.

ಲೋಕಸಭಾ ಕ್ಷೇತ್ರಗಳಿಗೆ ವೀಕ್ಷಕರ ನೇಮಕ

ನವದೆಹಲಿ: ಲೋಕಸಭೆಯ ಮುಂಬರುವ ಚುನಾಣೆಗೆ ಕರ್ನಾಟಕದಲ್ಲಿ ಪಕ್ಷವನ್ನು ಸಜ್ಜುಗೊಳಿಸಲು 28 ಲೋಕಸಭಾ ಕ್ಷೇತ್ರಗಳಿಗೆ ವೀಕ್ಷಕರನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಶನಿವಾರ ನೇಮಕ ಮಾಡಿದೆ.

ವಿವಿಧ ರಾಜ್ಯಗಳ 11 ಸಂಸದರು ಹಾಗೂ ಹಿರಿಯ ಮುಖಂಡರನ್ನು ವೀಕ್ಷಕರನ್ನಾಗಿ ನೇಮಿಸಲಾಗಿದೆ. ವಿಧಾನಸಭಾ ಚುನಾವಣೆಗೆ ಪಕ್ಷದ ಸಿದ್ಧತೆ ಬಗ್ಗೆ ಪರಿಶೀಲಿಸುವ ಹೊಣೆಯನ್ನು ಇವರಿಗೆ ನೀಡಲಾಗಿದೆ.

ಇರಾನ್: ಇಬ್ಬರಿಗೆ ಗಲ್ಲು

ದುಬೈ (ಎಪಿ): ಮಹಸಾ ಅಮೀನಿ ಹತ್ಯೆ ಖಂಡಿಸಿ ದೇಶದಾದ್ಯಂತ ಪ್ರತಿಭಟನೆಗಳು ನಡೆದ ವೇಳೆ ಅರೆಸೇನಾ ಪಡೆಯ ಸೈನಿಕನೊಬ್ಬನನ್ನು ಕೊಂದ ಆರೋಪದಡಿ ಇಬ್ಬರನ್ನು ಗಲ್ಲಿಗೆ ಏರಿಸಲಾಗಿದೆ ಎಂದು ಇರಾನ್ ಸರ್ಕಾರ ಶನಿವಾರ ತಿಳಿಸಿದೆ.

ಮರಣದಂಡನೆಗೆ ಗುರಿಯಾದವರನ್ನು ಮೊಹಮ್ಮದ್ ಕರಾಮಿ ಮತ್ತು ಮೊಹಮ್ಮದ್ ಹೊಸೇನಿ ಎಂದು ಗುರುತಿಸಲಾಗಿದೆ. ಈ ಹಿಂದೆಯೂ ಪ್ರತಿಭಟನೆ ವೇಳೆ ಸೈನಿಕರ ಮೇಲೆ ದಾಳಿ ನಡೆಸಿದ ಆರೋಪದ ಮೇಲೆ ಇಬ್ಬರನ್ನು ಗಲ್ಲಿಗೇರಿಸಲಾಗಿತ್ತು.

ಸಿಜೆಐಗೆ ಹಾರ್ವರ್ಡ್ ಪ್ರಶಸ್ತಿ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು 'ಅವಾರ್ಡ್ ಆಫ್ ಗ್ಲೋಬಲ್ ಲೀಡರ್‌ಶಿಪ್' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಹಾರ್ವರ್ಡ್ ಲಾ ಸ್ಕೂಲ್ ಸೆಂಟರ್, ಕಾನೂನು ವೃತ್ತಿಯಲ್ಲಿ ದೇಶ ಮತ್ತು ಜಗತ್ತಿಗೆ ನೀಡಿರುವ ಜೀವಮಾನ ಸೇವೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡುತ್ತದೆ. ಜ.11ರಂದು ಆನ್‌ಲೈನ್ ಮೂಲಕ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ರಿಪಬ್ಲಿಕನ್ ಪಕ್ಷದ ಕೆವಿನ್ ಮೆಕಾರ್ಥಿಗೆ ಸ್ಪೀಕರ್ ಸ್ಥಾನ

ವಾಷಿಂಗ್ಟನ್(ಪಿಟಿಐ): ರಿಪಬ್ಲಿಕನ್ ಪಕ್ಷದ ಕೆವಿನ್ ಮೆಕಾರ್ಥಿ ಅವರು ಅಮೆರಿಕದ ಜನಪ್ರತಿನಿಧಿಗಳ ಸಭೆಯ 55ನೇ ಸ್ಪೀಕರ್ ಆಗಿ ಶನಿವಾರ ಆಯ್ಕೆಯಾದರು. 15ನೇ ಸುತ್ತಿನ ಮತಎಣಿಕೆಯಲ್ಲಿ ಈ ಆಯ್ಕೆ ನಡೆಯಿತು.

ಚಿನ್ನ, ಬೆಳ್ಳಿ ಧಾರಣೆ
ಬೆಂಗಳೂರು
ಸ್ಟಾಂಡರ್ಡ್ ಚಿನ್ನ 10ಗ್ರಾಂ ₹57,550
ಒಡವೆ ಚಿನ್ನ 1ಗ್ರಾಂ ₹5,295
ಬೆಳ್ಳಿ ಕೆ.ಜಿ ₹70,400

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ
ಬೆಂಗಳೂರು
100 ಮೊಟ್ಟೆಗೆ ₹565
12 ಮೊಟ್ಟೆಗೆ ₹72
ಮೈಸೂರು
100 ಮೊಟ್ಟೆಗೆ ₹567

ಖಾದ್ಯ ತೈಲ ಮುಂಬೈ (10 ಕೆಜಿಗೆ)
ಶೇಂಗಾ (ಶುದ್ಧೀಕೃತ) ₹1610 (1625)
ಸೋಯಾ (ಶುದ್ಧೀಕೃತ) ₹1270 (1270)
ಸೂರ್ಯಕಾಂತಿ (ಶುದ್ಧೀಕೃತ) ₹1310 (1310)
ಪಾಮೋಲಿನ್ ₹953 (952)

ತೆಂಗು ಧಾರಣೆ (ಸಾವಿರಕ್ಕೆ)
ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)
ದಪ್ಪ ₹1400-1600
ಮಧ್ಯಮ ₹1000-1200
ಸಣ್ಣ ₹500-800

ತಿಪಟೂರು ಕೊಬ್ಬರಿ (ಕ್ವಿಂಟಲ್‌ಗೆ)
ಕನಿಷ್ಠ ₹10500
ಗರಿಷ್ಠ ₹11600
ಮಾದರಿ ₹11300
ಒಟ್ಟು ಆವಕ (ಚೀಲ) 4899

ಎನ್.ಆರ್.ಪುರ ರಬ್ಬರ್
ಆರ್‌ಎಸ್‌ಎಸ್-4 ₹134.50
ಆರ್‌ಎಸ್‌ಎಸ್-5 ₹128
ಗುಡ್ ಲಾಟ್ ₹122
(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು ಧಾರಣೆ
ಮಿಶ್ರತಳಿ (ಸಿ.ಬಿ) ₹522-688
ದ್ವಿತಳಿ (ಬಿ.ವಿ) ₹333-788

ಬೀದಿ ವ್ಯಾಪಾರಿಗಳಿಗೆ ಕಿರುಸಾಲ ನೀಡಲು ಗಮನ: ವೈಷ್ಣವ್

ನವದೆಹಲಿ (ಪಿಟಿಐ): ಬೀದಿ ಬದಿ ವ್ಯಾಪಾರಿಗಳಿಗೆ ₹3 ಸಾವಿರದಿಂದ ₹4 ಸಾವಿರದವರೆಗಿನ ಮೊತ್ತದ ಕಿರುಸಾಲ ನೀಡಲು ಈ ವರ್ಷ ಹೆಚ್ಚಿನ ಗಮನ ಹರಿಸಲಾಗುವುದು ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಶನಿವಾರ ಹೇಳಿದ್ದಾರೆ.

ಡಿಜಿಟಲ್ ಇಂಡಿಯಾ ಪ್ರಶಸ್ತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಡಿಜಿಟಲ್ ತಂತ್ರಜ್ಞಾನಗಳ ನೆರವಿನ ಮೂಲಕ ಕಿರು ಸಾಲ ನೀಡಲಾಗುವುದು ಎಂದು ತಿಳಿಸಿದ್ದಾರೆ. ಪಿಎಂ ಸ್ವನಿಧಿ ಯೋಜನೆಯಡಿ ಕಡಿಮೆ ಬಡ್ಡಿದರಕ್ಕೆ ಯಾವುದೇ ಆಧಾರ ಪಡೆಯದೇ ಕಿರುಸಾಲ ನೀಡಲಾಗುತ್ತದೆ.

‘ಐಡಿಬಿಐ ಬ್ಯಾಂಕ್ ಮಾರಾಟ: ಹೂಡಿಕೆದಾರರಿಂದ ಬಿಡ್’

ನವದೆಹಲಿ (ಪಿಟಿಐ): ಐಡಿಬಿಐ ಬ್ಯಾಂಕ್‌ನ ಶೇ 60.72ರಷ್ಟು ಷೇರುಗಳನ್ನು ಖರೀದಿಸಲು ಆಸಕ್ತಿ ವ್ಯಕ್ತಪಡಿಸಿ ಹಲವು ಹೂಡಿಕೆದಾರರು ಪ್ರಾಥಮಿಕ ಬಿಡ್ ಸಲ್ಲಿಸಿದ್ದಾರೆ ಎಂದು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯ (ಡಿಐಪಿಎಎಂ) ಕಾರ್ಯದರ್ಶಿ ತುಹಿನ್ ಕಾಂತ್ ಪಾಂಡೆ ಟ್ವೀಟ್ ಮಾಡಿದ್ದಾರೆ.

ಸದ್ಯ, ಕೇಂದ್ರ ಸರ್ಕಾರ ಮತ್ತು ಎಲ್‌ಐಸಿ ಜಂಟಿಯಾಗಿ ಶೇ 94.72ರಷ್ಟು ಷೇರುಪಾಲನ್ನು ಐಡಿಬಿಐ ಬ್ಯಾಂಕ್‌ನಲ್ಲಿ ಹೊಂದಿವೆ. ಇದರಲ್ಲಿ ಶೇ 60.72ರಷ್ಟು ಷೇರುಪಾಲನ್ನು ಬ್ಯಾಂಕ್‌ನ ಆಡಳಿತದ ನಿಯಂತ್ರದ ಜೊತೆಗೆ ಮಾರಾಟ ಮಾಡಲು ಅಕ್ಟೋಬರ್‌ನಲ್ಲಿ ಬಿಡ್ ಆಹ್ವಾನಿಸಲಾಗಿತ್ತು. ಪ್ರಾಥಮಿಕ ಬಿಡ್ ಸಲ್ಲಿಸಲು ಡಿಸೆಂಬರ್ 16 ಕಡೆಯ ದಿನವಾಗಿತ್ತು. ಆದರೆ, ನಂತರ ಅದನ್ನು 2023ರ ಜನವರಿ 7ರವರೆಗೆ ವಿಸ್ತರಿಸಲಾಗಿತ್ತು.

ಖಾಸಗೀಕರಣದ ನಂತರ ಎಲ್‌ಐಸಿ ಹಾಗೂ ಕೇಂದ್ರದ ಜಂಟಿ ಪಾಲು ಶೇ 94.72ರಿಂದ ಶೇ 34ಕ್ಕೆ ಇಳಿಕೆಯಾಗಲಿದೆ. ಮಾರ್ಚ್ ತಿಂಗಳಿನಲ್ಲಿ ಹಣಕಾಸಿನ ಬಿಡ್ ಕರೆಯುವ ಸಾಧ್ಯತೆ ಇದ್ದು, ಮಾರಾಟ ಪ್ರಕ್ರಿಯೆಯು ಮುಂದಿನ ಹಣಕಾಸು ವರ್ಷದ ಅಂತ್ಯದ ಒಳಗಾಗಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ಹಣದುಬ್ಬರ ಏರಿಕೆ, ಅಮೆರಿಕದಿಂದ ಬಡ್ಡಿದರ ಹೆಚ್ಚಳದ ನಿರ್ಧಾರ

ಎಫ್‌ಪಿಐ ಹೊರಹರಿವು ಅಬಾಧಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಷೇರುಪೇಟೆಗಳಿಂದ ವಿದೇಶಿ ಸಾಂಸ್ಥಿಕ ಬಂಡವಾಳ (ಎಫ್‌ಪಿಐ) ಹೊರಹರಿವು 2023ರಲ್ಲಿಯೂ ಮುಂದುವರಿದಿದೆ. ಜನವರಿ 6ಕ್ಕೆ ಕೊನೆಗೊಂಡ ವಾರದಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹7,813 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಎಫ್‌ಪಿಐ ಹೊರಹರಿವಿಗೆ ಹಲವು ಅಂಶಗಳು ಕಾರಣವಾಗಿವೆ. ಜಾಗತಿಕ ಆರ್ಥಿಕ ಹಿಂಜರಿತದ ಭೀತಿ, ಹಣದುಬ್ಬರ ಏರಿಕೆ, ಬಡ್ಡಿದರ ಹೆಚ್ಚಳದಂತಹ ಅಂಶಗಳು ಪ್ರತಿಕೂಲ ಪರಿಣಾಮ ಬೀರುತ್ತಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.





‘ವಿದೇಶಿ ಹೂಡಿಕೆದಾರರು ಇದೇ ರೀತಿಯಲ್ಲಿ ಷೇರುಗಳನ್ನು ಮಾರಾಟ ಮಾಡುವುದನ್ನು ಮುಂದುವರಿಸಿದರೆ, ದೇಶಿ ಹೂಡಿಕೆದಾರರಿಗೆ ಷೇರುಗಳನ್ನು ಖರೀದಿಸಲು ಅವಕಾಶಗಳು ತೆರೆದುಕೊಳ್ಳಲಿವೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬ್ಯಾಂಕಿಂಗ್‌ನಂತಹ ಲಾಭ ತಂದುಕೊಡುವ ಷೇರುಗಳನ್ನು ಮಾರಾಟ ಮಾಡುತ್ತಿದ್ದಾರೆ. ಕಳೆದ ವರ್ಷವೂ ಅವರು ಬ್ಯಾಂಕ್ ಷೇರುಗಳನ್ನು ಮಾರಾಟ ಮಾಡಿದ್ದರಿಂದ ದೇಶಿ ಹೂಡಿಕೆದಾರರಿಗೆ ಷೇರುಗಳನ್ನು ಖರೀದಿಸಲು ಅವಕಾಶ ಲಭ್ಯವಾಗಿತ್ತು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಪ್ರಜಾವಾಣಿಗೆ ತಿಳಿಸಿದರು.

‘ವಿದೇಶಿ ಹೂಡಿಕೆದಾರರು 2022ರ ಡಿಸೆಂಬರ್‌ನಲ್ಲಿ ಬಂಡವಾಳ ಸರಕುಗಳು, ಎಫ್‌ಎಂಸಿಜಿ ಮತ್ತು ಹಣಕಾಸು ಸೇವೆಗಳ ವಲಯದ ಷೇರುಗಳನ್ನು ಖರೀದಿಸಿದ್ದಾರೆ. ಆದರೆ, ಐ.ಟಿ. ಕಂಪನಿಗಳ ಷೇರುಗಳನ್ನು ಹೆಚ್ಚಾಗಿ ಮಾರಾಟ ಮಾಡಿದ್ದಾರೆ’ ಎಂದು ಅವರು ಮಾಹಿತಿ ನೀಡಿದರು.

2022ರಲ್ಲಿ ಡಿಸೆಂಬರ್ 29ರವರೆಗಿನ ವಹಿವಾಟಿನಲ್ಲಿ ಎಫ್‌ಪಿಐ ₹1.46 ಲಕ್ಷ ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ದೇಶಿ ಹೂಡಿಕೆ ಬಲ: ದೇಶಿ ಸಾಂಸ್ಥಿಕ ಹೂಡಿಕೆದಾರರ (ಡಿಐಐ) ಸಕ್ರಿಯ ಭಾಗವಹಿಸುವಿಕೆಯು 2023ರಲ್ಲಿಯೂ ಮುಂದುವರಿದಿದೆ. ಹೂಡಿಕೆದಾರರು ಜನವರಿ 6ಕ್ಕೆ ಕೊನೆಗೊಂಡ ವಾರದಲ್ಲಿ ₹2,700 ಕೋಟಿಗೂ ಹೆಚ್ಚಿನ ಮೊತ್ತದ ಷೇರುಗಳನ್ನು ಖರೀದಿಸಿದ್ದಾರೆ.

ದೇಶಿ ಹೂಡಿಕೆದಾರರು 2022ರಲ್ಲಿ ₹ 2.51 ಲಕ್ಷ ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಸುಪ್ರೀಂ ಕದ ತಟ್ಟಿದ ಗೂಗಲ್

ನವದೆಹಲಿ (ಪಿಟಿಐ): ಆಂಡ್ರಾಯ್ಡ್ ಪ್ಲಾಟ್‌ಫಾರಂನಲ್ಲಿ ಸ್ಥಾನ ದುರ್ಬಳಕೆ ಮಾಡಿಕೊಂಡಿರುವ ಪ್ರಕರಣದ ಸಂಬಂಧ ಗೂಗಲ್ ಕಂಪನಿಯು ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯ (ಎನ್‌ಸಿಎಲ್‌ಎಟಿ) ಆದೇಶದ ವಿರುದ್ಧ ಸುಪ್ರೀಂಕೋರ್ಟ್ ಮೆಟ್ಟಿಲೇರಿದೆ.

ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆಯ ಬಳಕೆ ಇರುವಲ್ಲಿ ತಾನು ಹೊಂದಿರುವ ಪ್ರಬಲ ಸ್ಥಾನವನ್ನು ದುರ್ಬಳಕೆ ಮಾಡಿಕೊಂಡ ಕಾರಣಕ್ಕೆ ಭಾರತೀಯ ಸ್ಪರ್ಧಾ ಆಯೋಗವು (ಸಿಸಿಐ) ಗೂಗಲ್ ಕಂಪನಿಗೆ ₹1,337.76 ಕೋಟಿ ದಂಡ ವಿಧಿಸಿದೆ. ಇದಕ್ಕೆ ತಡೆ ನೀಡುವಂತೆ ಕೋರಿ ಕಂಪನಿಯು ಎನ್‌ಸಿಎಲ್‌ಎಟಿಗೆ ಮನವಿ ಸಲ್ಲಿಸಿತ್ತು. ಆದರೆ, ದಂಡದಲ್ಲಿ ಶೇ 10ರಷ್ಟು ಮೊತ್ತವನ್ನು ಪಾವತಿಸುವಂತೆ ನ್ಯಾಯಮಂಡಳಿಯು (ಎನ್‌ಸಿಎಲ್‌ಎಟಿ) ನಿರ್ದೇಶನ ನೀಡಿದೆ. ನ್ಯಾಯಂಡಳಿಯ ಈ ಆದೇಶದ ವಿರುದ್ಧ ಗೂಗಲ್ ಇದೀಗ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ವಿಚಾರಣೆ ದಿನಾಂಕ ಇನ್ನಷ್ಟೇ ನಿಗದಿ ಆಗಬೇಕಿದೆ.

ಈ ಕುರಿತು ಗೂಗಲ್ ವಕ್ತಾರರು ತಕ್ಷಣಕ್ಕೆ ಪ್ರತಿಕ್ರಿಯೆ ನೀಡಿಲ್ಲ.

ಮುಂಬೈ ಧಾರಣೆ

ಶೇಂಗಾ

7–1–2023

ಜಾವಾ 70/80(ಹೊಸ)	12150-12200
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	11600-11700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1635)
ಒಂದು ವಾರದ ಡೆಲಿವರಿ	1615 (1630)
ಸೋಯಾ ಕಚ್ಚಾ	1190 (1200)
ಪಾಮ್ ವಾರದ ಡೆಲಿವರಿ	955 (954)
ಸೂರ್ಯಕಾಂತಿ ಎಣ್ಣೆ ಕಚ್ಚಾ	1190 (1190)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
55,765 (55,550)
ಬೆಳ್ಳಿ ಕೆ.ಜಿ 68,400 (68,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	250-300
ನಡುಗೋಲು	450-480
ರಾಶಿ	480-500
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	490

ಬಂಟ್ವಾಳ

ಕೋಕ	12500-25000
ಹೊಸತು	22500-38000
ಹಳತು	48000-54500

ಚಿತ್ರದುರ್ಗ

ಆಪಿ	46719-47129
ಬೆಟ್ಟೆ	33800-34200
ಕೆಂಪುಗೋಟು	29579-29999
ರಾಶಿ	46239-46669

ಕುಂದಾಪುರ

ಹಳೆಚಾಲಿ	40000-49500
ಹೊಸಚಾಲಿ	30000-37500

ಸಿದ್ದಾಪುರ

ಬಿಳಿಗೋಟು	30399-32929
ಹೊಸಚಾಲಿ	32200-33339
ಕೋಕ	27599-32789
ಕೆಂಪುಗೋಟು	30699-32109
ರಾಶಿ	42899-46199
ತಟ್ಟಿಬೆಟ್ಟೆ	40099-43899

ಶಿರಸಿ

ಬೆಟ್ಟೆ	37069-42999
ಬಿಳಿಗೋಟು	24299-35600
ಚಾಲಿ	39030-43801
ಕೆಂಪುಗೋಟು	34031-34900
ರಾಶಿ	44199-46399



ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	13650	13600	160.55 ಸೆಂಟ್ಸ್
ಎಸಿ	---	6800	6000	
ಆರ್‌ಪಿ	---	8200	7900	ಲಂಡನ್
ಆರ್‌ಸಿ	---	155 on OT	4175	1832 ಡಾಲರ್ಸ್

‘ಆ್ಯಂಟ್ ಸಮೂಹದಿಂದ ಜಾಕ್ ಮಾ ಹೊರಕ್ಕೆ’

ಬೀಜಿಂಗ್ (ಎಎಫ್‌ಪಿ): ಜಾಕ್ ಮಾ ಅವರು ಆ್ಯಂಟ್ ಸಮೂಹದಿಂದ ಹೊರನಡೆಯಲಿದ್ದಾರೆ ಎಂದು ಕಂಪನಿಯು ಶನಿವಾರ ಹೇಳಿದೆ.

ಯಾವುದೇ ಷೇರುದಾರ, ಏಕಾಂಗಿಯಾಗಿ ಅಥವಾ ಇತರರೊಂದಿಗೆ ಜಂಟಿಯಾಗಿ ಆ್ಯಂಟ್ ಸಮೂಹದ ಮೇಲೆ ನಿಯಂತ್ರಣ ಹೊಂದದಂತೆ ಮಾಲೀಕತ್ವ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಲಾಗುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.


ಜಾಕ್ ಮಾ

ಮಾಲೀಕತ್ವದ ಬಗ್ಗೆ ಕಂಪನಿಯ ಹಿಂದಿನ ಸಂಕೀರ್ಣವಾದ ವ್ಯವಸ್ಥೆಯಿಂದಾಗಿ ಜಾಕ್ ಮಾ ಅವರು ಪರೋಕ್ಷವಾಗಿ ಆ್ಯಂಟ್‌ನ 53.46ರಷ್ಟು ಷೇರುಗಳ ಮೇಲೆ ನಿಯಂತ್ರಣ ಹೊಂದಿದ್ದರು ಎಂದು ಅದು ಹೇಳಿದೆ.

ಸ್ಥಾಪಕರು, ನಿರ್ವಾಹಕರು ಮತ್ತು ಸಿಬ್ಬಂದಿ ಒಳಗೊಂಡು ಒಟ್ಟು 10 ಮಂದಿಗೆ ಸ್ವತಂತ್ರವಾಗಿ ಮತದಾನದ ಹಕ್ಕು ಇರಲಿದೆ. ಇದರಿಂದಾಗಿ ಮಾ ಅವರು ಶೇ 6.2ರಷ್ಟು ಮತದಾನದ ಹಕ್ಕು ಹೊಂದಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಾ ಅವರು 2020ರ ಅಕ್ಟೋಬರ್‌ನಲ್ಲಿ ಶಾಂಘೈನಲ್ಲಿ ನಡೆದಿದ್ದ ಕಾರ್ಯಕ್ರಮವೊಂದರಲ್ಲಿ ಚೀನಾದ ಹಣಕಾಸು ವ್ಯವಸ್ಥೆಯ ಬಗ್ಗೆ ಕಟು ವಿಮರ್ಶೆಯ ಮಾತುಗಳನ್ನು ಆಡಿದ್ದರು. ಮಾ ಅವರ ಆ್ಯಂಟ್ ಕಂಪನಿ ಷೇರುಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ (ಐಪಿಒ) ಪ್ರಕ್ರಿಯೆಯನ್ನು ಚೀನಾದ ಅಧಿಕಾರಿಗಳು ರದ್ದು ಮಾಡಿದ್ದರು. ಇದು ಮಾ ಅವರ ಕಟು ಮಾತಿಗೆ ಸಿಕ್ಕ ಪ್ರತಿಕ್ರಿಯೆ ಎಂದು ಪರಿಗಣಿಸಲಾಗಿತ್ತು.

2020ರ ಅಕ್ಟೋಬರ್ 10ರ ನಂತರ ಸುಮಾರು ಎರಡು ತಿಂಗಳವರೆಗೆ ಅವರು ಸಾರ್ವಜನಿಕವಾಗಿ ಕಾಣಿಸಿಕೊಂಡಿರಲಿಲ್ಲ.



ಜಾತ್ರೆ ಬಲು ಜೋರ...



ಚಿತ್ರ: ಭರತ್ ಕಂಡಕೂರ

ಸಂಕ್ರಾಂತಿ ಬಂತೆಂದರೆ ಉತ್ತರ ಕರ್ನಾಟಕದಲ್ಲಿ ಜಾತ್ರೆಗಳ ಸಂಭ್ರಮ. ಸಾಮಾಜಿಕ ಹಾಗೂ ವೈಚಾರಿಕ ಕಾರಣಗಳಿಂದ ಕೊಪ್ಪಳದ ಗವಿಸಿದ್ಧೇಶ್ವರ ಮಠದ ಜಾತ್ರೆ, ನಾಟಕಗಳ ಪ್ರದರ್ಶನಕ್ಕೆ ಹೆಸರಾದ ಬನಶಂಕರಿ ಜಾತ್ರೆ, ಗ್ರಾಮೀಣ ಸೊಗಡಿನ ಸಡಗರಕ್ಕೆ ಖ್ಯಾತಿ ಗಳಿಸಿದ ಸವದತ್ತಿ ಜಾತ್ರೆಗಳ ವೈಭವ ನೋಡಿಕೊಂಡು ಬರೋಣ ಬನ್ನಿ...

ಪ್ರಮೋದ

ಕೊಪ್ಪಳಕ್ಕೆ ನೀವು ಎಂದಾದರೂ ಬೇಸಿಗೆಯಲ್ಲಿ ಬಂದಿದ್ದೀರಾ? ಒಲೆಯ ಮೇಲಿನ ಬೋಗುಣಿಯಂತೆ ಕಾದು ನಿಂತ ಕಲ್ಲುಬಂಡೆಗಳು, ಕೆಂಡದ ಸ್ನಾನ ಮಾಡಿಸುವ ರಣರಣ ಬಿಸಿಲು, ಕಾದ ಕಾವಲಿಯಂತಾದ ಗವಿಮಠದ ಮುಂದಿನ ಜಾತ್ರೆಯ ಬಯಲು. ಆ ಬಿಸಿಲಿನ ಸವಿಯುಂಡವರು ಜನವರಿಯಲ್ಲಿ ನಡೆಯುವ ಅಜ್ಜನ ಜಾತ್ರೆಗೆ ಸಾಕ್ಷಿಯಾದರೆ ನಿಬ್ಬೆರಗಾಗಿ ನಿಂತುಬಿಡುತ್ತಾರೆ. ಕೊಪ್ಪಳ ಸೀಮೆಗೆ ಅಷ್ಟೊಂದು ರೂಪಾಂತರ ಆಗ. ಜಾತ್ರೆಯ ಬಯಲಿನಲ್ಲಿ ಇರುವೆ ಕೂಡ ಓಡಾಡಲು ಆಗದಷ್ಟು ಕಿಕ್ಕಿರಿದ ಜನಸಾಗರ, ಜನರಿಂದ ತುಂಬಿ ತುಳುಕುತ್ತಿದ್ದರೂ ಸ್ವಚ್ಛತೆಯಲ್ಲಿ ಒಂದಿಷ್ಟೂ ಕಾಣದ ಲೋಪ, ಲಕ್ಷ ಲಕ್ಷ ಜನರಿಗೆ ಹಗಲು ರಾತ್ರಿಯನ್ನದೆ ಸಾಂಗೋಪಾಂಗವಾಗಿ ನಡೆಯುವ ಊಟದ ಸಮಾರಾಧನೆ, ಪ್ರತಿಯೊಂದು ಕೆಲಸದಲ್ಲೂ ಪುಟಿದೇಳುವ ಜೀವನೋತ್ಸಾಹ. ಅಬ್ಬಬ್ಬಾ, ಜಾತ್ರೆ ಅಂದರೆ ಹೀಗಿರಬೇಕು ಎನ್ನುವ ಉದ್ಗಾರ. ಇದೇ ಅಜ್ಜನ ಜಾತ್ರೆಯ ವೈಶಿಷ್ಟ್ಯ.

ಹೊಸವರ್ಷಕ್ಕೂ ಮೊದಲು ಕೊಪ್ಪಳ ಜಿಲ್ಲೆಯ ಗುನ್ನಾಳ, ಗಿಣಗೇರಾ, ಜಹಗೀರ ಗೂಡದೂರ್, ಕೋಳೂರು, ಕಾಟ್ರಳ್ಳಿ, ಕಾಮನೂರು, ಅಳವಂಡಿ, ಗಂಗಾವತಿ, ಕಾರಟಗಿ ಹೀಗೆ ಹಲವಾರು ಊರುಗಳಲ್ಲಿ ಜೋಳದ ರೊಟ್ಟಿ ಸದ್ದು ಜೋರಾಗಿ ಕೇಳುತ್ತಲೇ ಇರುತ್ತದೆ. ಆಗ ಊರಿನ ಮಂದಿಗೆಲ್ಲ ದಿನಪೂರ್ತಿ ರೊಟ್ಟಿ ತಟ್ಟುವುದೇ ಕೆಲಸ. ಅದು ಗವಿಸಿದ್ಧೇಶ್ವರನ ಸೇವೆ. ಉತ್ತರ ಕರ್ನಾಟಕದ ಬೇರೆ ಜಿಲ್ಲೆಗಳಲ್ಲಿಯೂ ಈ ಸದ್ದು ಸಾಮಾನ್ಯ. ನವೆಂಬರ್ ದಾಟಿದರಂತೂ ಶೇಂಗಾ ಹೋಳಿಗೆಯ ಘಮ ಮೂಗಿಗೆ ರಾಚದೇ ಇರದು.

ಹೊಸ ವರ್ಷದ ಸಂಭ್ರಮ ಮುಗಿಯುತ್ತಿದ್ದಂತೆ ಕೊಪ್ಪಳದ ಗವಿಸಿದ್ಧೇಶ್ವರ ಮಠದ ಮುಂದೆ ಸರತಿ ಸಾಲು. ಜಿಲ್ಲೆ ಹಾಗೂ ಹೊರಜಿಲ್ಲೆಗಳಿಂದ ಅಕ್ಕಿ, ಬೇಳೆಕಾಳು, ಜೋಳ, ಬೆಲ್ಲ, ಎಣ್ಣೆ ಮೊದಲಾದ ಆಹಾರ ಸಾಮಗ್ರಿಗಳನ್ನು ಹೊತ್ತು ಚಕ್ಕಡಿ, ಟ್ರ್ಯಾಕ್ಟರ್‌ಗಳು ಸಾಲುಗಟ್ಟಿ ಮಠದ ಮುಂದೆ ನಿಲ್ಲುತ್ತವೆ. ಬೆಣ್ಣೆ, ತುಪ್ಪದ ಕ್ಯಾನ್‌ಗಳು ರಾಶಿ ರಾಶಿಯಾಗಿ ಮಠದ ಆವರಣದಲ್ಲಿ ಸಂಗ್ರಹಗೊಳ್ಳುತ್ತವೆ. ರೊಟ್ಟಿಯ ಬಣವೆಯನ್ನೇ ಅಲ್ಲಿ ಒಟ್ಟಲಾಗಿರುತ್ತದೆ.

ಗವಿಮಠದ ಪಾಕಶಾಲೆಯಲ್ಲಿ ಹೊತ್ತಿದ ಒಲೆಗಳು ಆರುವುದೇ ಇಲ್ಲ. ಹೌದು, ಕಟ್ಟಿಗೆ ಬಳಸಿ ಅಡುಗೆ ಮಾಡುವ ಒಲೆಗಳು 24 ತಾಸು ಉರಿಯುತ್ತಲೇ ಇರುತ್ತವೆ. ಒಲೆ ಎಲ್ಲಿಯವರೆಗೆ ಉರಿಯುತ್ತದೆ ಎನ್ನುವ ಪ್ರಶ್ನೆಗೆ ಕೊನೆಯ ಭಕ್ತನ ಊಟವಾಗುವ ತನಕ ಎನ್ನುವುದೇ ಉತ್ತರ. ಗಂಗಾವತಿ ಪ್ರಾಣೇಶ್ ಅವರ ಮಾತಿನಲ್ಲೇ ಹೇಳುವುದಾದರೆ ಇಲ್ಲಿರುವ ಸಾಂಬಾರದ ಕೊಪ್ಪರಿಗೆಗಳು ಸ್ವಿಮ್ಮಿಂಗ್ ಪೂಲ್‌ನಂತೆ ಗೋಚರಿಸುತ್ತವೆ! ಒಟ್ಟಿದ ಅನ್ನದ ಬೆಟ್ಟ ಒಂದೇ ಪಂಕ್ತಿಗೆ ಖಾಲಿಯಾಗಿ ಮತ್ತೊಂದು ಅನ್ನದ ಬೆಟ್ಟ ಪಕ್ಕದಲ್ಲಿ ಏಳುತ್ತಿರುತ್ತದೆ. ಲಕ್ಷ ಲಕ್ಷ ಸಂಖ್ಯೆಯಲ್ಲಿ ಜನ ಊಟಕ್ಕೆ ಬಂದರೂ ಒಂದಿನಿತೂ ಗೊಂದಲವಿಲ್ಲ. ಗೌಜು ಗದ್ದಲವಿಲ್ಲ. ನೂಕಾಟ, ತಳ್ಳಾಟವಂತೂ ಇಲ್ಲವೇ ಇಲ್ಲ. ಎಲ್ಲರಿಗೂ ಶಿಸ್ತಿನಿಂದ ಊಟ ಬಡಿಸಲಾಗುತ್ತದೆ. ಅಚ್ಚುಕಟ್ಟಾದ ಊಟದ ಕೌಂಟರ್‌ಗಳ ವ್ಯವಸ್ಥೆ ಇರುತ್ತದೆ. ಕೆಲವೇ ಗಂಟೆಗಳಲ್ಲಿ ಲಕ್ಷಾಂತರ ಭಕ್ತರು ಊಟ ಮಾಡಿ ಹೋಗಿದ್ದು ಕೂಡ ಗೊತ್ತಾಗದಷ್ಟು ಶಿಸ್ತು ಅಲ್ಲಿ ಮನೆಮಾಡಿರುತ್ತದೆ.

13ನೇ ಪುಟಕ್ಕೆ...



ನಾಟಕಗಳದ್ದೇ ಕಾರುಬಾರು

ಎರಡು ದಿನಗಳ ಹಿಂದೆಯಷ್ಟೇ ರಥೋತ್ಸವ ನೆರವೇರಿದ ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನ ಬನಶಂಕರಿ ಜಾತ್ರೆ ವಿಭಿನ್ನ ನಾಟಕಗಳ ಕಾರಣದಿಂದಲೇ ಜನಮಾನಸದಲ್ಲಿ ಉಳಿದುಕೊಂಡಿದೆ.


ರಂಗಭೂಮಿ ಕಲಾವಿದರು ಹಾಗೂ ನಾಟಕ ಕಂಪನಿಗಳಿಗೆ ‘ಅಕ್ಷಯ ಪಾತ್ರೆ‘ಯಾದ ಈ ಜಾತ್ರೆಯಲ್ಲಿ ನಾಟಕ ನೋಡುವ ಸಲುವಾಗಿಯೇ ಲಕ್ಷಾಂತರ ಜನ ಬರುತ್ತಾರೆ. ಭರ್ತಿ ಒಂದು ತಿಂಗಳು ಬೆಳಗಿನ ಜಾವದ ತನಕ ನಾಟಕಗಳು ಪ್ರದರ್ಶನಗೊಳ್ಳುತ್ತವೆ. ‘ಬನಶಂಕರಿ ದೇವಿ ಭಕ್ತರಿಗಷ್ಟೇ ಅಲ್ಲ. ನೂರಾರು ಜನ ಕಲಾವಿದರನ್ನು ಕಾಪಾಡುತ್ತಾಳೆ. ನಾಟಕ ಕಲೆಯನ್ನು ರಕ್ಷಿಸುತ್ತಾಳೆ’ ಎನ್ನುವ ನಂಬಿಕೆ ಹೊಂದಿದ್ದಾರೆ.

ವರನಟ ಡಾ. ರಾಜಕುಮಾರ್, ಉಮಾಶ್ರೀ, ಗುಬ್ಬಿ ವೀರಣ್ಣ, ಚಿಂದೋಡಿ ಕುಟುಂಬ ಸೇರಿದಂತೆ ಅನೇಕ ಹೆಸರಾಂತ ಕಲಾವಿದರು ಬನಶಂಕರಿ ಸನ್ನಿಧಿಯಲ್ಲಿ ಬಣ್ಣ ಹಚ್ಚಿದ್ದಾರೆ. ಎಳ್ಳು ಅಮವಾಸ್ಯೆ ಮುಗಿಯುತ್ತಿದ್ದಂತೆ ಜಾತ್ರೆಯ ಸಿದ್ಧತೆ ಜೋರಾಗುತ್ತದೆ. ಬನಶಂಕರಿ ಜಾತ್ರೆಯಲ್ಲಿ ನಾಟಕ ಪ್ರದರ್ಶನ ಮಾಡಿದರೆ ಆ ಕಂಪನಿಯವರಿಗೆ ‘ವರ್ಷದ ಅನ್ನ‘ ಸಿಗುತ್ತದೆ ಎನ್ನುವ ಗಟ್ಟಿ ನಂಬಿಕೆ ಕಲಾವಿದರದ್ದು. ಇದಕ್ಕಾಗಿಯೇ ‘ಬನಶಂಕರಿ ಜಾತ್ರೆ ಜೋರ, ಬರ್ತಾವ ನಾಟಕ ಸಾವಿರಾರ...‘ ಎನ್ನುವ ಹಾಡು ಉತ್ತರ ಕರ್ನಾಟಕದಲ್ಲಿ ಜನಜನಿತ. ಸದ್ಯದ ಟ್ರೆಂಡ್‌ಗಳಿಗೆ ಅನುಗುಣವಾಗಿ ಹಾಸ್ಯಭರಿತ ನಾಟಕಗಳಿಗೆ ಆದ್ಯತೆ ಸಿಗುತ್ತಿದೆ. ಜಾತ್ರೆಗೆ ಸಾಕಷ್ಟು ದಿನಗಳ ಮೊದಲೇ ನಾಟಕಗಳ ಪ್ರದರ್ಶನದ ಪ್ರಚಾರ ನಡೆಯುತ್ತದೆ.

‘ತೊದಲ ಗಂಗಿ ಹರಿದಾಳ ಅಂಗಿ, 'ಕೈ ಕೊಟ್ಟ ಹುಡುಗಿ ತಲೆ ಕೆಟ್ಟ ಹುಡುಗ', 'ಬಂಡ ಬಡ್ಡಿ ಮಗ', 'ಪ್ಯಾಟೆ ಹುಡಿಗ್ಯಾರು', 'ಹುಚ್ಚ ಹಿಡಿಸ್ಯಾಳ ಹುಚ್ಚಮಂಗಿ', 'ಅವ್ವ ಬಂಗಾರಿ ಮಗಳು ಸಿಂಗಾರಿ', 'ಅಪ್ಪ ಮನ್ಯಾಗ ಮಗಳು ಸಂತ್ಯಾಗ', 'ಮಂಗಳೂರು ಮಾಣಿ ಹುಬ್ಬಳ್ಳಿ ರಾಣಿ' ಹೀಗೆ ನಾಟಕಗಳ ಹೆಸರೇ ಜನರನ್ನು ಟೆಂಟ್‌ಗಳಿಗೆ ಆಕರ್ಷಿಸುತ್ತವೆ. ಜಾತ್ರೆಯ ಮೆರಗು ಹೆಚ್ಚಿಸುತ್ತವೆ.

ದಿನಪೂರ್ತಿ ಜಾತ್ರೆಯ ಸಂತೆ, ಸಂಜೆಯಾಗುತ್ತಿದ್ದಂತೆ ನಾಟಕಗಳ ಕಂತೆ ಜನರನ್ನು ಬನದ ಹುಣ್ಣಿಮೆಗೆ ಬನಶಂಕರಿಗೆ ಮತ್ತೆ ಮತ್ತೆ ಬರಲು ಪ್ರೇರೇಪಿಸುತ್ತವೆ. ಹೀಗಾಗಿ ಬನಶಂಕರಿಯಲ್ಲಿ ಇನ್ನು ಒಂದು ತಿಂಗಳು ಹಗಲು, ಇರುಳು ಎರಡೂ ಒಂದೇ!

ಬನಶಂಕರಿ ಜಾತ್ರೆ ಕೇವಲ ಆಡಂಬರವಲ್ಲ, ಅದ್ದೂರಿಗೆ ಮಾತ್ರ ಸೀಮಿತವಲ್ಲ. ಜನಜಂಗುಳಿಯಷ್ಟೇ ಮುಖ್ಯ ವಿಷಯವಲ್ಲ. ಅಲ್ಲಿ ಬದುಕು ಕಟ್ಟಿಕೊಳ್ಳುವ ಕಲೆಯಿದೆ. ನೋವಿನ ಕಥನಗಳಿಗೆ ಮುಲಾಮು ಇದೆ. ವರ್ಷಪೂರ್ತಿ ಹೊಲಗಳಲ್ಲಿ ದುಡಿದು ದಣಿದ ಅನ್ನದಾತರಿಗೆ ದಣಿವಾರಿಸಿಕೊಳ್ಳಲು, ಬನದ ಹುಣ್ಣಿಮೆಯ ಹೊನಲಲ್ಲಿ ನೋವು ಮರೆಯಲು ಜಾತ್ರೆ ವೇದಿಕೆಯೂ ಹೌದು. ನಾಟಕಗಳ ಸಡಗರದ ಜೊತೆಗೆ ಬೆಂಡು, ಬತ್ತಾಸು, ಬೂಂದಿ, ಖಾರ, ಮಂಡಕ್ಕಿ, ಜಿಲೇಬಿ, ಮೈಸೂರು ಪಾಕ್ ಸವಿಯೂ ಸಿಗುತ್ತದೆ. ಬನಶಂಕರಿ, ಬಾದಾಮಿ ಸುತ್ತಮುತ್ತಲಿನ ಗ್ರಾಮಗಳ ಮಹಿಳೆಯರು ಸಜ್ಜಿ, ಜೋಳದ ರೊಟ್ಟಿ, ತರಹೇವಾರಿ ಪಲ್ಲೆ, ಮೊಸರು, ಮಜ್ಜಿಗೆ, ಒಂದಷ್ಟು ತರಕಾರಿಯನ್ನು ಬಿದಿರಿನ ಬುಟ್ಟಿಯೊಳಗೆ ತಲೆ ಮೇಲೆ ಹೊತ್ತು ತಂದು ಭಕ್ತರಿಗೆ ಇದ್ದ ಜಾಗದಲ್ಲಿಯೇ ಉಣಬಡಿಸುತ್ತಾರೆ. ಮೊಸರಿನ ರುಚಿ ಬಾಯಿ ಚಪ್ಪರಿಸುವಂತೆ ಮಾಡುತ್ತದೆ.



ಬಂಡಿಗಳ ಸಾಲು, ಭಂಡಾರದ ಮುಗಿಲು

ಚಿತ್ರ-ಲೇಖನ: ಟಿ. ಕೆಂಪಣ್ಣ

ಸಂಕ್ರಾಂತಿ ಕಳೆಯುತ್ತಿದ್ದಂತೆ ಒಂದರ ಹಿಂದೆ ಒಂದರಂತೆ ಬರುವ ಜಾತ್ರೆಗಳಲ್ಲಿ ಹೆಚ್ಚಿನವು ಒಂದೆರಡು ದಿನಗಳಲ್ಲಿ ಮುಗಿದು ಹೋದರೆ, ತೀರಾ ಕೆಲವು ತಿಂಗಳ ಕಾಲ ನಡೆಯುತ್ತವೆ. ಅವುಗಳಲ್ಲಿ ಸವದತ್ತಿ ಎಲ್ಲಮ್ಮನ ಜಾತ್ರೆ ಕೂಡ ಒಂದು. ಎಲ್ಲಮ್ಮನ ಆರಾಧನೆ ಪ್ರತೀ ಪೂರ್ಣಿಮೆಯಂದು ನಡೆದರೂ ಮಾರ್ಗಶಿರ ಪೂರ್ಣಿಮೆಯ ದಿನದ್ದು ವಿಶೇಷ ಮಹತ್ವ ಪಡೆದುಕೊಂಡಿದೆ. ಈ ಜಾತ್ರೆಗೆ ಕರ್ನಾಟಕದವರಲ್ಲದೆ, ಆಂಧ್ರ, ತೆಲಂಗಾಣ, ಗೋವಾ, ಮಹಾರಾಷ್ಟ್ರ ಹಾಗೂ ಮಧ್ಯಪ್ರದೇಶಗಳಿಂದಲೂ ಬಹುಸಂಖ್ಯೆಯ ಭಕ್ತರು ಬರುತ್ತಾರೆ. ಸವದತ್ತಿಯಿಂದ ಎಂಟು ಕಿ.ಮೀ. ದೂರದಲ್ಲಿ ಐದು ಕೊಳ್ಳಗಳಿಂದೊಡಗೂಡಿದ ಗುಡ್ಡದ ಸರಸ್ವತಿ ತಟಾಕದಲ್ಲಿ ಈ ದೇವಾಲಯವಿದೆ. ರಚನೆಯ ದೃಷ್ಟಿಯಿಂದ ಈ ದೇವಾಲಯವು 7 ಅಥವಾ 8ನೇ ಶತಮಾನಕ್ಕೆ ಸೇರಿರಬಹುದೆಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ.

ಎಲ್ಲಮ್ಮ, ಪುರಾಣದ ಜಮದಗ್ನಿ ಋಷಿಯ ಪತ್ನಿ ಹಾಗೂ ಪರಶುರಾಮನ ತಾಯಿ ರೇಣುಕೆ ಎಂದು ಭಕ್ತಾದಿಗಳು ನಂಬಿದ್ದಾರೆ. ವರ್ಷದ ಪ್ರತೀ ಪೂರ್ಣಿಮೆಯಂದು ಇಲ್ಲಿ ಜಾತ್ರೆ ನಡೆಯುತ್ತದೆ. ಆದರೆ, ಡಿಸೆಂಬರ್ ತಿಂಗಳಲ್ಲಿ ಬರುವ ಹೊಸ್ತಿಲು ಹುಣ್ಣಿಮೆ, ಜನವರಿ ತಿಂಗಳಲ್ಲಿ ಬರುವ ಬನದ ಹುಣ್ಣಿಮೆ ಹಾಗೂ ಫೆಬ್ರುವರಿ ತಿಂಗಳಲ್ಲಿ ಬರುವ ಭರತ ಹುಣ್ಣಿಮೆ ಸಂದರ್ಭದಲ್ಲಿ ದೊಡ್ಡ ಜಾತ್ರೆಗಳು ನಡೆಯುತ್ತವೆ. ಹೊಸ್ತಿಲು ಹುಣ್ಣಿಮೆಯನ್ನು ರಂಡಿ ಹುಣ್ಣಿಮೆ ಎಂದೂ ಕರೆಯುತ್ತಾರೆ. ಕೆಲವು ಮಂಗಳಮುಖಿಯರು ಈ ಸಂದರ್ಭದಲ್ಲಿ ಬಳೆ, ತಾಳಿಗಳನ್ನು ತೆಗೆದು ವಿಧವೆಯರಾಗುತ್ತಾರಂತೆ, ಮುಂದೆ ಬರುವ ಬನದ ಹುಣ್ಣಿಮೆಯಲ್ಲಿ ಮತ್ತೆ ಮುತ್ತೈದೆಯರಾಗುತ್ತಾರಂತೆ.

ಭರತ ಹುಣ್ಣಿಮೆಯ ದಿನ ಸಂಪ್ರದಾಯದಂತೆ ಸೀರೆ, ರವಿಕೆ, ಬಳೆ ಹಾಗೂ ಅರಿಶಿನ ಕುಂಕುಮವನ್ನು ಒಳಗೊಂಡ ಬಾಗಿನವನ್ನು ಎಲ್ಲಮ್ಮನಿಗೆ ಒಪ್ಪಿಸಿದ ಮೇಲೆ ಜಾತ್ರೆ ಪ್ರಾರಂಭವಾಗುತ್ತದೆ. ಜಾತ್ರೆಗೆ ಬಂದ ಭಕ್ತರು ಸೂಕ್ತ ಜಾಗ ಹುಡುಕಿ ಬಂಡಿಗಳನ್ನು ಸಾಲಾಗಿ ನಿಲ್ಲಿಸಿ, ರಾತ್ರಿ ತಂಗಲು ಟೆಂಟುಗಳನ್ನು ಕಟ್ಟಿಕೊಳ್ಳುತ್ತಾರೆ. ಹರಕೆ ಹೊತ್ತವರು ಜೋಗತಿ ಗುಂಡಿಯಲ್ಲಿ ಸ್ನಾನಮಾಡಿ ಬರುತ್ತಾರೆ. ಅಷ್ಟರಲ್ಲಿ ಇತರ ಮಹಿಳೆಯರು ಅಮ್ಮನ ನೈವೇದ್ಯಕ್ಕೆ ಹಲವು ಬಗೆಯ ಆಹಾರಗಳನ್ನು ತಯಾರಿಸುತ್ತಾರೆ. ಬೆಳಗಾವಿ ಹಾಗೂ ಮಹಾರಾಷ್ಟ್ರದ ಕಡೆಯಿಂದ ಬಂದವರು ಜೋಳದ ಹಿಟ್ಟಿನ ಕಡುಬು ಮತ್ತು ಗುಗ್ಗರಿ ಮಾಡುತ್ತಾರೆ. ಆಂಧ್ರ ಕಡೆಯವರು ಮೊಸರು ಅನ್ನ, ಕರಿಕಡುಬು, ದಾವಣಗೆರೆ ಕಡೆಯವರು ಹೋಳಿಗೆ ಮಾಡುತ್ತಾರೆ.



ಬಳೆ ಹಾಕಿಸಿಕೊಳ್ಳುವ ಸಂಭ್ರಮ

ತಾವು ಉಳಿದುಕೊಂಡ ಬಯಲಿನಲ್ಲಿಯೇ ಸೂಕ್ತ ಜಾಗವನ್ನು ಸ್ವಚ್ಛಗೊಳಿಸಿ ಪಡ್ಲಿಗೆಗಳನ್ನಿಟ್ಟು (ಬಿದಿರಿನ ಬುಟ್ಟಿಗಳು) ತಾವು ಆ ವರುಷ ಬೆಳೆದ ಜೋಳ, ಅಕ್ಕಿ, ಸಜ್ಜೆ, ನವಣೆ ಮುಂತಾದ ಹೊಸ ಧಾನ್ಯ ಹಾಗೂ ತರಕಾರಿಗಳನ್ನು ಪಡ್ಲಿಗೆಗಳಲ್ಲಿ ತುಂಬುತ್ತಾರೆ. ಪಡ್ಲಿಗೆಗಳ ಮುಂದೆ ಎಲೆ ಹಾಕಿ, ತಾವು ತಯಾರಿಸಿದ ನೈವೇದ್ಯವನ್ನು ಇಡುತ್ತಾರೆ. ಮಂಗಳಾರತಿ ಮಾಡಿ ಐದು ಜನ ಜೋಗತಿಯರಿಂದ ಉಧೋ ಉಧೋ ಹಾಕಿಸುತ್ತಾರೆ. ಅಲ್ಲಿಗೆ ಅಮ್ಮನಿಗೆ ಪಡ್ಲಿಗೆ ತುಂಬಿಸುವ ಪ್ರಮುಖ ಹರಕೆ ಕಾರ್ಯ ಮುಗಿಯುತ್ತದೆ. ನಂತರ ಗುಡಿಗೆ ಹೋಗಿ ದರ್ಶನ ಮಾಡಿಕೊಂಡು ಬರುತ್ತಾರೆ. ದೇವದಾಸಿ ಪದ್ಧತಿ ಈಗ ಬಹುಮಟ್ಟಿಗೆ ನಿಂತು ಹೋಗಿದ್ದರೂ, ರಹಸ್ಯ ತಾಣಗಳಲ್ಲಿ ಹಾಗೂ ಕೆಲವು ಜೋಗತಿಯರ ಮನೆಯಲ್ಲಿ ಕಾನೂನುಬಾಹಿರ ಆಚರಣೆಗಳು ಈಗಲೂ ನಡೆಯುತ್ತಿವೆ ಎಂಬ ಮಾಹಿತಿ ಇದೆ.

ಈಗಿನಂತೆ ವಾಹನ ಸೌಕರ್ಯ ಇಲ್ಲದಿದ್ದ ಹಿಂದಿನ ಕಾಲದಲ್ಲಿ ಸಿಂಗಾರಗೊಂಡ ಎತ್ತುಗಳನ್ನು ಕಟ್ಟಿದ ಬಣ್ಣ-ಬಣ್ಣದ ಕಮಾನು ಬಂಡಿಗಳಲ್ಲಿ ಜನ ಜಾತ್ರೆಗೆ ಬರುತ್ತಿದ್ದರು. ರಸ್ತೆಯ ಒಂದು ಪಕ್ಕದಲ್ಲಿ ಶಿಸ್ತಿನ ಸಿಪಾಯಿಯಂತೆ ಸಾಲಾಗಿ ಸಾಗುತ್ತಿದ್ದ ಸಾಲು ಬಂಡಿಗಳ ಸೊಬಗು, ಎತ್ತುಗಳ ಕೊರಳ ಗಂಟೆಗಳಿಂದ ಹೊರಹೊಮ್ಮುವ ನಿನಾದ ಎಂಥವರನ್ನೂ ಆಕರ್ಷಿಸುತ್ತಿತ್ತು. ಈಗಲೂ ಹತ್ತಿರದ ಊರುಗಳಿಂದ ಜಾತ್ರೆಗೆ ಬರುವ ಸಾಲು ಬಂಡಿಗಳನ್ನು ಕಾಣಬಹುದು. ಎಲ್ಲಮ್ಮನ ದೇವಾಲಯದ ಸುತ್ತಲಿನ ಗುಡ್ಡಗಳ ಮೇಲೆಲ್ಲಾ ಯಾತ್ರಾರ್ಥಿಗಳು ಬೀಡುಬಿಟ್ಟಿರುವುದನ್ನು ಮುಸ್ಸಂಜೆಯಲ್ಲಿ ನೋಡುವುದಕ್ಕೆ ಚೆಂದ.

ಜಾತ್ರೆಯಲ್ಲಿ ನಡೆಯುತ್ತಾ ಸಾಗಿದರೆ, ಒಟ್ಟಾಗಿ ಅಡುಗೆಮಾಡುವ ಮಹಿಳೆಯರನ್ನು, ಹರಟೆ ಹೊಡೆಯುತ್ತ ಕುಳಿತಿರುವ ಪುರುಷರನ್ನು ಕಂಡಾಗ ಆ ಜನರ ಸಂಸ್ಕೃತಿ-ಪರಂಪರೆಗಳ ಪರಿಚಯವಾಗುತ್ತದೆ. ಆದರೆ ಮೊಣಕಾಲು ಉದ್ದ ಕಲುಷಿತ ನೀರಿರುವ ಜೋಗತಿ ಗುಂಡಿಯಲ್ಲಿ ಪವಿತ್ರ ಸ್ನಾನಕ್ಕಾಗಿ ಮುಳುಗೇಳುವ ಪರಿಪಾಟ, ಎಲ್ಲೆಂದರಲ್ಲಿ ಒಬ್ಬರ ಎದುರಿಗೊಬ್ಬರು ನಿಸ್ಸಂಕೋಚವಾಗಿ ಶೌಚಕ್ಕೆ ಕೂರುವ ದೃಶ್ಯ ನಾಗರಿಕತೆಯನ್ನು ಅಣಕಿಸುತ್ತವೆ. ಜೋಗತಿ ಗುಂಡಿಯಲ್ಲಿಯೇ ಸ್ನಾನ ಮಾಡಬಯಸಿ, ಸಾವಿರಾರು ಭಕ್ತರು ಬರುವುದರಿಂದ ಶುದ್ಧ ನೀರನ್ನು ಗುಂಡಿಯಲ್ಲಿ ತುಂಬಿಸುವ ಕೆಲಸವಾಗಬೇಕು. ಹಾಗೆಯೇ, ನೀರಿನ ಸೌಲಭ್ಯದೊಂದಿಗೆ ಶೌಚಾಲಯಗಳ ವ್ಯವಸ್ಥೆ ಮಾಡಿದಲ್ಲಿ ದೇವಾಲಯದ ಸುತ್ತಲಿನ ಪರಿಸರದಲ್ಲಿ ನೈರ್ಮಲ್ಯ ಕಾಪಾಡಬಹುದು.



ಜೋಗತಿ ಗುಂಡಿಯಲ್ಲಿ ಭಕ್ತರಿಂದ ಸ್ನಾನ...

ಆರ್ಕಿಡ್ ಅಂಗಳದಲಿ...

ಕಾಶ್ಮೀರದ ಏಳು ಸರೋವರಗಳನ್ನೊಮ್ಮೆ ನೋಡಬೇಕು ಎಂದು ಕಂಡಿದ್ದ ಕನಸು ನನಸಾದ ಕ್ಷಣವದು. ಗಡಸರ್ ಸುಂದರಿಯನ್ನೇ ನೆನೆಯುತ್ತಾ 14,000 ಅಡಿಗಳೇರಿದ ಸಾಹಸ, ಝರಿಗಳ ಇಂಪಾದ ಜೋಗುಳವನ್ನು ಹೀಗೆ ನೆನಪಿಸಿಕೊಳ್ಳುತ್ತಾ...

ಶ್ರೀಧರ್ ಎಸ್. ಸಿದ್ದಾಪುರ

ಚಾರಣ



ಗಡಸರ್ ಸುಂದರಿ ಮುಡಿಯಲ್ಲಿ ಹಿಮವಿಟ್ಟುಕೊಂಡು ಸೊಂಟಕ್ಕೆ ಹೂವ ತಡಿಕೆ ಹೊದ್ದು ನಿಂತಾಗ ಹೀಗೆ ಕಾಣುತ್ತಾಳೆ...

ಹಿಮಾಲಯದ ಮಡಿಲಲ್ಲಿ ಮಗುವಾಗುವ ಆಸೆಗಳು ಗರಿಗೆದರಿದ್ದವು. ಕಾಶ್ಮೀರದ ಏಳು ಸರೋವರಗಳ ಚಾರಣಕ್ಕೆ ಹೊರಟು ನಿಂತಾಗ ಪುಳಕ!

ತಿಳಿ ನೀಲಿ ದಾಲ್ ಸರೋವರದ ಅಂಚಿನ ಹೋಟೆಲ್‌ನಲ್ಲಿ ರೂಮ್ ಕಾದಿರಿಸಿದ್ದೆವು. ಕೆಹವಾದ ಉಗಿ ಸೇವಿಸುತ್ತಾ ದಾಲ್ ಸರೋವರಕ್ಕೆ ಸುತ್ತು ಬರಲು ಹೊರಟು ನಿಂತಾಗ ಎಳೆ ಬಿಸಿಲು ನೀರಿಗೆ ಚಿಮ್ಮಿ ಆಹ್ಲಾದಕರ ವಾತಾವರಣ. ನೀರ ಮೇಲೆ ತೇಲುತ್ತಾ ಚಹಾ ಕಾಯಿಸುವವರು, ಕೇಸರಿ ಮಾರುವವರು, ಓಲೆ ಮಾರುವವರು ದೋಣಿ ಹಿಡಿದೇ ಬರುತ್ತಿದ್ದರು. ಕೊನೆಗೆಲ್ಲವೂ ನೀಲಿಯಾಗಿ ಸಂಪೂರ್ಣ ಕರಗುತ್ತಿತ್ತು.

ಮೊದಲ ನಂಬರ್ ಗೇಟಿನೆದುರು ನಮ್ಮ 40 ಚಾರಣಿಗರ ಸಂತೆ ನೆರೆದಿತ್ತು. ನನಗಂತೂ ತವಕ. ಎಲ್ಲರೂ ಸಪ್ತ ಸರೋವರದ ಕನಸಿನಲ್ಲಿದ್ದರು. ಟೆಂಪೊ ಟ್ರಾವೆಲರ್ ಮೂಲಕ ನಾವು ಸೋನ್ ಮಾರ್ಗದ ದಾರಿ ಹಿಡಿದೆವು.

ಸೋನ್ ಮಾರ್ಗ್ ಎಂಬ ಸ್ವರ್ಗ: ಅದು ನಿಶ್ಯಬ್ದದ ಸ್ವಪ್ನ ಲೋಕ. ಪರ್ವತಗಳು ಸೈನಿಕರಂತೆ ನಮ್ಮನ್ನು ಸುತ್ತುವರಿದಿದ್ದವು. ನದಿಯೊಂದು ಸ್ವರ್ಗ ಲೋಕವನ್ನು ಸೃಷ್ಟಿಮಾಡಿತ್ತು. ಸೋನ್ ಮಾರ್ಗಕ್ಕೆ ಕೆಲವೇ ಕಿ.ಮೀ. ಹಿಂದೆ ನಮ್ಮ ಕ್ಯಾಂಪ್. ಸ್ವಪ್ನಲೋಕ ಸೃಷ್ಟಿಸಿದ ನದಿ, ರಾತ್ರಿ ದುಃಸ್ವಪ್ನದಂತೆ ಕಾಡಿತ್ತು. ಹಂಸ ತೂಲಿಕದ ಮೇಲೆ ಮಲಗಿದ ನನಗೆ, ಒಂಟೆ ಮೇಲೆ ಮಲಗಿದ ಅನುಭವ. ನದಿ ಭೋರ್ಗರೆತಕ್ಕೆ ನಿದ್ದೆ ಹಾರಿ ಹೋಗಿತ್ತು.



ನಿಚ್‌ನಾಯ್ ಪಾಸ್‌ನತ್ತ: ಕನಸು ಹೆಕ್ಕುತ್ತಾ ಕಪ್ಪಿರುವೆ ಸಾಲಿನಂದದಿ ಹೊರಟಿತ್ತು ಚಾರಣಿಗರ ಮೆರವಣಿಗೆ ನಿಚ್‌ನಾಯ್‌ವರೆಗೆ. ದೂರದ ಸೋನ್ ಮಾರ್ಗ ಎದ್ದಿತ್ತಷ್ಟೆ. ಏರುದಾರಿಯಲ್ಲಿ ಕುರಿ ಗಾಹಿಗಳ ಹಿಂಡು. ಸಾಲು ಸಾಲು ಓಕ್ ಮರಗಳ ಮೆರವಣಿಗೆ. ದೂರದಲ್ಲಿ ಹಿಮ ಬೆಟ್ಟಗಳು. ಬೆಳಗಿನ ಅವಲಕ್ಕಿ ಎರಡು ಗಂಟೆಯ ನಡಿಗೆಯಲ್ಲಿ ಕರಗಿ ಹೋಗಿತ್ತು. ತಂದ ಕೆಲವು ತಿಂಡಿಗಳನ್ನು ಹಂಚಿ ತಿಂದು ಹೆಜ್ಜೆ ಎಣಿಸುತ್ತಾ ಸಾಗಿದೆವು. ಶೀತಲಮಯವಾದ ವಾತಾವರಣದಲ್ಲಿ ಬಿಸಿ ಬಿಸಿ ಕೆಹವಾ ಸಿಕ್ಕಾಗ ಸ್ವರ್ಗವೇ ಗಂಟಲಿಗಿಳಿದಂತೆ. ಇಷ್ಟು ಎತ್ತರದಲ್ಲಿ ಬಂದು ಥಂಡಿಯ ಜಾಗದಲ್ಲಿ ಚಹಾ ಅಂಗಡಿ ಇಟ್ಟ ಪುಣ್ಯಾತ್ಮನ ಸಾಹಸಕ್ಕೆ ಸಲಾಂ.

ಇಲ್ಲಿಂದ ಮುಂದೆ ಇಳಿಜಾರಿನ ಹಾದಿಯಲ್ಲಿ ಲಿಡ್ಡರ್ ನದಿಗುಂಟ ಸಾಗಿದಾಗ ಸಣ್ಣ ತೊರೆಯ ಬಳಿ ನಮ್ಮ ಕ್ಯಾಂಪ್ ನಮಗಾಗಿ ಕಾದಿತ್ತು. ನಾನು ಮತ್ತು ಗೆಳೆಯ ನಾಗರಾಜ ಹಿಮಾಲಯದ ಹೂಗಳನ್ನು ನೋಡುತ್ತಾ ಗುರಿ ಸೇರಿದೆವು. ದೊಡ್ಡ ಬೆಟ್ಟದ ಬುಡದ ಸಣ್ಣ ಝರಿಯ ಸನಿಹವೇ ನಮ್ಮ ಬಿಡಾರ. ಇದನ್ನು ನೋಡುತ್ತಲೇ ನಮಗೆ 11.6 ಕಿ.ಮೀ. ನಡಿಗೆ ಸಾರ್ಥಕ ಎನಿಸಿಬಿಟ್ಟಿತು. ನಾನಂತು ಖುಷಿಯಲ್ಲಿ ಝರಿಯ ಜೋಗುಳವನ್ನಾಲಿಸಲು ಕ್ಯಾಮೆರಾ ಎತ್ತಿಕೊಂಡು ಹೊರಟೆ. ಕಶ್ಮೀರಿ ಹುಕ್ಕಾ ಸೇದುತ್ತಾ ಕುಳಿತ ಅಜ್ಜನೊಬ್ಬ ನನ್ನ ಕ್ಯಾಮೆರಾದೊಳಗೆ ಬಂದಿಯಾದ. ಸಣ್ಣ ಝರಿಯ ಜೋಗುಳದಲಿ, ನಕ್ಷತ್ರಗಳ ಹೊದಿಕೆ ಅಡಿಯಲಿ ನಿದ್ರಾ ದೇವಿಯ ವಶವಾಗಿದ್ದು ತಿಳಿಯಲೇ ಇಲ್ಲ!

ವಿಷ್ಣು ಸರ್ ಸರೋವರದಲ್ಲಿ: ಶೀತಲಮಯವಾದ ನಿಚ್‌ನಾಯ್‌ಯ ಮೋಡ ಕವಿದ ವಾತಾವರಣದಲ್ಲಿ ಶಾಸ್ತ್ರಕ್ಕೆಂಬಂತೆ ಬೆಳಗಿನ ಉಪಾಹಾರ ಸೇವಿಸಿ ಹೊರಟಿದ್ದೆವು. ಅದು ಸಣ್ಣ ಕಲ್ಲುಗಳ ಏರುದಾರಿ. ಎರಡು ಬೃಹತ್ ಪರ್ವತಗಳ ನಡುವಿನ ಕವಲ ನಡುವೆ ಪ್ರಯಾಣ. ಅಲ್ಲಲ್ಲಿ ಹಿಮ ದರ್ಶನ. ಹಿಮವನ್ನು ಎಂದೂ ನೋಡದವರಂತೆ ಮುಟ್ಟಿ, ತಿಂದು ಅಲ್ಲಿ ಜಿಗಿದು ಖುಷಿಪಟ್ಟೆವು.

ಇಲ್ಲಿನ ತುದಿಯ ಎತ್ತರ 13,615 ಅಡಿ. 10.30ರೊಳಗೆ ನಮ್ಮ ತಂಡದ ಐವರು ಬೆಟ್ಟದ ತುದಿಯಲ್ಲಿದ್ದೆವು.

ಮುಂದೆ ನಿಚ್‌ನಾಯ್ ಪಾಸ್ ಕ್ರಾಸ್ ಮಾಡಲು ತಯಾರಾದೆವು. ನಿಚ್‌ನಾಯ್ ಪಾಸ್ ಸಂಪೂರ್ಣ ಹಿಮಭರಿತವಾಗಿತ್ತು. ಈ ಹಿಂದೆ ಹಿಮದಲ್ಲಿ ನಾನು ಬಿದ್ದುದರಿಂದ ಪಾಸ್ ದಾಟಲು ನಮ್ಮ ತಂಡದ ಸತೀಶ್ ಅವರ ಸಹಕಾರ ಪಡೆದು ನಿಧಾನಕ್ಕೆ ದಾಟಿದೆ. ಪಾಸ್ ದಾಟುವಲ್ಲಿ ಅನೇಕ ಮ್ಯೂಲ್ ಮತ್ತು ಕುದುರೆಗಳು ಎಡವುತ್ತಿದ್ದವು. ಬೆಟ್ಟಗಳ ರಕ್ಷಣೆಯಲ್ಲಿ ಸುತ್ತಲೂ ಹಳದಿ, ಬಿಳಿ, ಮತ್ತು ನೀಲಿ ಹೂಗಳು ಅರಳಿನಿಂತಿದ್ದವು.

ನಿಚ್‌ನಾಯ್ ಪಾಸ್‌ನಲ್ಲಿ ಹುಟ್ಟುವ ಝರಿಯೊಂದು ಪೂರ್ವಾಭಿಮುಖವಾಗಿ ಹರಿಯುತ್ತಿತ್ತು. ಅದರ ದಂಡೆಯಲ್ಲೇ ಕೂತು ತಂದ ತಣ್ಣಗಿನ ಬುತ್ತಿ ಬಿಚ್ಚಿ ತಿಂದೆವು. ವಾಹ್ ಆಹ್ಲಾದ. ನನ್ನೊಳಗೆ ಕಣಿವೆ ಸೌಂದರ್ಯವನ್ನು ಇಳಿಸುತ್ತಾ ನಿಧಾನಕ್ಕೆ ಎಲ್ಲರಿಗಿಂತ ಕೊನೆಯವನಾಗಿ ತಲುಪಿದೆ. ಸ್ವಲ್ಪ ಹೊತ್ತು ಕ್ಯಾಂಪ್‌ನಲ್ಲಿ ವಿರಮಿಸಿ ಸಂಜೆ ಹೊತ್ತಿಗೆ ಸ್ನಾನಮಾಡಿ ವಿಷ್ಣು ಸರ್ ಸರೋವರಕ್ಕೆ ಹೋಗಿ ಬಂದೆವು. ಕಾಲು ತೋಯಿಸಿ ಕುಳಿತಾಗ ಲೋಕ ಮರೆತ ಅನುಭವ.

ರಾತ್ರಿ ಹಿಮ ನದಿಗಳಲ್ಲಿ ಕಂಡು ಬರುವ ವಿಶಿಷ್ಟ ಟ್ರೋಟ್ ಮೀನಿನ ಸಮಾರಾಧನೆ ನಡೆದಿತ್ತು.

ಗಡಸರ್ ಸರೋವರದತ್ತ: ಬೆಳಿಗ್ಗೆ 7.15ಕ್ಕೆಲ್ಲ ತಿಂಡಿ ತಿಂದು ಪ್ಯಾಕ್ಡ್ ಲಂಚ್ ಹಿಡಿದು ಶಾಲಾ ಮಕ್ಕಳಂತೆ ಸಾಲಾಗಿ ಪುಳಕದಿಂದ ಹೊರಟು ನಿಂತೆವು. ಇದೊಂದು ಸುದೀರ್ಘ ದಿನವಾಗುತ್ತದೆಂದು ಎಲ್ಲರೂ ಮಾನಸಿಕವಾಗಿ ತಯಾರಾದೆವು. ಅದೆಲ್ಲಕ್ಕಿಂತಲೂ ಮುಖ್ಯವಾಗಿ 14,000 ಅಡಿ ಎತ್ತರದ ಗಡಸರ್ ಪಾಸ್ ದಾಟುತ್ತೇವೆಂಬ ಪುಳಕ!

ಕಿಷನ್ ಸರ್ ಸರೋವರದ ಬಳಿ ಬರುತ್ತಲೇ ಎದೆ ಬಡಿತ ವಿಪರೀತ! ಸರೋವರದ ಸನಿಹವೇ ಇದ್ದ ದುರಂಧರನಂತಹ ಶಿಖರಾಗ್ರ ಕಾಣುತ್ತಲೇ ಮನದಲ್ಲೇಕೋ ಕಸಿವಿಸಿ. ಕಪ್ಪಿರುವೆ ಸಾಲಿನಂತೆ ಚಲಿಸುತ್ತಿರುವ ಶಿಸ್ತಿನ ಚಾರಣಿಗರು. ಸ್ವಲ್ಪ ಅಶಿಸ್ತು ತೋರಿದರೂ ಕಿಶನ್ ಸರ್ ಸರೋವರದ ಪಾಲು. ಈ ಸರೋವರದ ಸೌಂದರ್ಯ ಸವಿಯದಂತೆ ಮಗ್ಗುಲ ಮುಳ್ಳಾಗಿ ನಿಂತಿತು ಗಡಸರ್ ಪಾಸ್. ಎದೆ ಝಲ್ ಎನಿಸುವ ಎತ್ತರ. ಮ್ಯೂಲ್‌ಗಳು ಮಾತ್ರ ಚಲಿಸುವಂತಹ ಓಣಿ ದಾರಿ. ಕೊನೆಯ ಹಂತವಂತೂ ಬಲು ಕಠಿಣ. ಸಣ್ಣ ಕಲ್ಲುಗಳು ಬೂಟುಗಾಲಿಗೆ ಸಿಕ್ಕಿ ಕಾಲು ಜಾರುತ್ತಲಿತ್ತು. ಯಾವನೋ ಪುಣ್ಯಾತ್ಮ ನನ್ನನ್ನು ತುದಿ ತಲುಪಿಸಿದ.

ಹೂವ ಗಂಧ ತೇಲಿ ಬಂತು: ಹಸಿರು ಪಾಚಿ ಕಟ್ಟಿದಂತಹ ಒಂದೊಂದು ಸರೋವರದ ತುಣುಕೂ ಆಕಾಶದಿಂದ ಉದುರಿದ ವಿಶಿಷ್ಟ ತುಣುಕಿನಂತೆ ಗೋಚರಿಸುತ್ತಿತ್ತು. ಪಾಸ್‌ನ ಬಲ ಮಗ್ಗುಲಿಗೆ ಇದ್ದ ಎಲ್ಲಾ ಹಿಮಕರಗಿತ್ತು. ಜೊತೆಗೆ ಬಿಸಿಲು ಬಂದು ನಮ್ಮ ಅದೃಷ್ಟಕ್ಕೆ ನಿರಾಯಾಸವಾಗಿ ಪರ್ವತ ಏರಿದೆವು. ತೀವ್ರ ಇಳಿಜಾರಿನ ಕಣಿವೆ ಇಳಿಯುತ್ತಲೇ ಕಾಶ್ಮೀರದ ಹೂ ಕಣಿವೆ ಎದುರಾಗಿತ್ತು. ನೆತ್ತಿಯ ಮೇಲೆ ಕಂಡ ಕೆಂಡದ ಕೆಂಪು ಕುಸುಮಗಳು ಇಲ್ಲೆಲ್ಲೂ ಕಾಣಲಿಲ್ಲ. ಶ್ವಾಸಕೋಶದೊಳಗೆ ನುಗ್ಗುವ ಪ್ರತಿ ಉಸಿರಿನಲ್ಲೂ ಹೂವಗಂಧ. ಸ್ನೋ ಬಳಿದುಕೊಂಡು ನಿಂತ ಪ್ರತೀ ಶಿಖರದಿಂದ ಸಣ್ಣಗೆ ಝರಿಗಳು ಉದಯಿಸಿದ್ದವು. ಸ್ವಲ್ಪ ದೂರ ಬರುತ್ತಲೇ ಮಿಲಿಟರಿ ತಪಾಸಣೆ ನಡೆದಿತ್ತು.

ಮಧ್ಯಾಹ್ನದ ಹೊತ್ತಿಗೆ ಗಡಸರ್ ಸುಂದರಿ ನಮ್ಮೆದುರು ನಿಂತಿದ್ದಳು! ಮುಡಿಯ ತುಂಬಾ ಸ್ನೋ ಬಳಿದು ಸೊಂಟಕ್ಕೆ ಹೂವ ತಡಿಕೆ ಹೊದ್ದು ಗಿರಿಗಳ ನಡುವೆ ವೈಯಾರ ತೋರಿದಳು. 14,000 ಅಡಿಗಳೇರಿದ ಸಾಹಸಕ್ಕೆ ಕೊಂಬು ಮೂಡಿತು ನಮಗೆ. ಮುಂದಿನ ಮೂರು ಗಂಟೆಗಳ ನಡಿಗೆ ಎಲ್ಲಾ ಕೊಂಬು ಕಹಳೆಯನ್ನು ಕತ್ತರಿಸಿ ಹಾಕಿ ಬಿಟ್ಟಿತ್ತು. ಸವೆಸಿದರೂ ಸವೆಯದ ಹಾದಿ. ಹಾದಿ ಮುಗಿಯಲಿ ಎಂಬ ಪ್ರಾರ್ಥನೆ. ಹೂವ ಹಾಸಿಗೆಯಲಿ ಸೀಳುಮಾಡಿದಂತಹ ದಾರಿಯಲಿ ಮುಗಿಯದ ತಿರುವು ಮುರುವು. ನಾನು ಝರಿಯೊಂದರಲ್ಲಿ ಸ್ನಾನಕ್ಕಿಳಿದೆ. ಬರೋಬ್ಬರಿ 16 ಕಿ.ಮೀ ನಡಿಗೆ ಎಲ್ಲರನ್ನೂ ಹೈರಾಣಾಗಿಸಿತ್ತು. ಆದರೆ, ನಾನಂತೂ ಫ್ರೆಶ್ ಇದ್ದೆ ಎಂಬುದೇ ಆಶ್ಚರ್ಯ!

ಕುರಿ ಮೇಯಿಸಲು ಬಂದ ಕುಟುಂಬವೊಂದು ಹೊಟ್ಟೆ ಬಿರಿಯೆ ಲಸ್ಸಿ ಕೊಟ್ಟು ಹೊಟ್ಟೆ ತಂಪು ಮಾಡಿತು. 200ಕ್ಕೂ ಹೆಚ್ಚು ಕುರಿಗಳ ಕುಟುಂಬವದು. ಒಂದು ಕುರಿ ₹ 20 ಸಾವಿರದಿಂದ ₹ 1 ಲಕ್ಷದ ವರೆಗೆ ಬಿಕರಿ ಆಗುತ್ತೆ ಎಂದ. ಅಕ್ಕಿ, ದಾಲ್ ಎಲ್ಲವನ್ನೂ ಗಂಗ್ ಬಲ್‌ನಿಂದ ತರಬೇಕು ಎಂದು ಆ ಕುಟುಂಬದ ಮಾಲೀಕ ನಮ್ಮನ್ನು ಅಚ್ಚರಿಗೆ ಕೆಡಹಿದ. ನಮ್ಮ ನಾಲ್ಕು ಪಟ್ಟು ಇವರ ನಡಿಗೆ. ಅರ್ಧಲೀಟರ್ ಹಾಲು ಕೊಡುವ ಕುರಿ ಇಲ್ಲಿನ ತಂಪು ಹವೆಗೆ ಒಂದೂವರೆ ಲೀಟರ್ ಹಾಲು ಕೊಡುತ್ತದೆ ಎಂದು ಸಂತಸದಿಂದ ಮತ್ತಿಷ್ಟು ಲಸ್ಸಿ ಸುರಿದ.



ಗಡಸರ್‌ನಿಂದ ಸಾತ್ ಸರ್ ಸರೋವರದವರೆಗೆ ಮುಂದಿನ ಕತೆಯನ್ನು ಸ್ವಲ್ಪ ಫಾಸ್ಟ್ ಫಾರ್ವರ್ಡ್ ಮಾಡುವೆ. ಚುಮು ಚುಮು ಚಳಿಗೆ ಕಾಫಿ ಹೀರಿ ತಿಂಡಿ ಸವಿದು ಜಾರುವ ಹಿಮಗಡ್ಡೆಯನ್ನು ದಾಟಿ ಬೆಟ್ಟದಲ್ಲಿ ಕಾಣುವ ಗೆರೆಗಳಂತಹ ದಾರಿಯಲಿ ಏರು ಪ್ರಯಾಣ. ಸಾವಿರ ಸಾವಿರ ಹೂಗಳ ಸಾತ್. ಜೊತೆಗೊಂದಿಷ್ಟು ವೈಲ್ಡ್ ಸ್ಟ್ರಾಬೆರಿಗಳು. ಸುತ್ತಲಿನ ಆಹ್ಲಾದಕರ ವಾತಾವರಣಕ್ಕೆ ಮನಸೋತಿತ್ತು.

ಏರಿಳಿತದ ದಾರಿಯಲಿ ಸಾಗಿ ಅತಿ ಸುಂದರ ಸಾತ್ ಸರ್ ಸರೋವರವನ್ನು ತಲುಪಿದೆವು.

ಚಳಿಯಲ್ಲಿ ಕುಳಿತು ದಾಲ್ ಚಾವಲ್ ಸವಿದಿದ್ದು ಒಂದು ಅನನ್ಯ ಅನುಭೂತಿ. ಸಹ ಚಾರಣಿಗರು ಶತಮಾನದಿಂದ ನಿದ್ದೆಯೇ ಮಾಡದವರಂತೆ ತಮ್ಮ ತಮ್ಮ ನಿದ್ರಾ ಚೀಲದೊಳಗೆ ಅವಿತರು. ಹೊಟ್ಟೆಯೊಳಗೆ ದಾಲ್ ಪಾಪಡ್, ಹೊರಗಡೆ ಜಡಿ ಮಳೆಯ ಸಹಕಾರ ಬೇರೆ. ಜೋಗುಳಕ್ಕೆ ಗಿರಿಗಳೆಡೆಯಿಂದ ಬೀಸುವ ಕುಳಿರ್ಗಾಳಿಯ ಸಾತ್. ಗೆಳೆಯನೊಬ್ಬ, ನಮ್ಮ ತಂಡದ ಡಾಕ್ಟರ್ ಒಬ್ಬರ ಎಚ್ಚರಿಕೆಯ ನಡುವೆಯೂ ವೈಲ್ಡ್ ಸ್ಟ್ರಾಬೆರಿಯನ್ನು ಮಂಗನಂತೆ ಮುಕ್ಕಿ ಪಾಯಿಖಾನೆ ಸೇರಿದ!

ಗಂಗ್‌ಬಲ್ ಸರೋವರಕ್ಕೆ: ಸಾತ್ ಸರ್ ಗುಡಾರದಿಂದ ಗಂಗ್‌ಬಲ್ ಕಡೆಗೆ ಬೆಳಿಗ್ಗೆ 8ಕ್ಕೆ ಹೊರಟು ನಿಂತೆವು. ಮೊದಲೆರಡು ಗಂಟೆ ಕಲ್ಲುಗಳೊಂದಿಗೆ ಸರಸಕ್ಕೆ ಬಿದ್ದೆವು. ದಾರಿಯುದ್ದಕ್ಕೂ ಬಂಡೆಗಳು. ಅವುಗಳಿಂದ ದಾರಿ ತಪ್ಪಿದ್ದೂ ತಿಳಿಯಲಿಲ್ಲ.

ಸುಮಾರು ಮೂರು ಗಂಟೆ ಮಂಜು ಕವಿದ ದಾರಿಯಲಿ ನಡೆದು ಮೂರನೆಯ ಜಾಜ್ ಪಾಸ್ ತಲುಪಿದೆವು. ತುದಿಯಲ್ಲಿ ಸ್ವಲ್ಪವೇ ಹಿಮ ಕವಿದಿತ್ತು. ತುದಿ ತಲುಪಿ ಹಿಮದಲಿ ಸ್ವಲ್ಪ ಹೊತ್ತು ಆಟ ಆಡಿದೆವು. ಜಾಜ್ ಪಾಸ್ ತುದಿಯಲ್ಲಿ ಕುಳಿತು ಸುಮಧುರ ಹಾಡು ಹಾಡಿದೆವು. ಮುಂದೆ ಸುಮಾರು ಎರಡು ಗಂಟೆಯ ಹೊತ್ತಿಗೆ ಗಂಗ್‌ಬಲ್ ಸರೋವರದ ದಂಡೆಯಲ್ಲಿದ್ದೆವು. ಗಂಗ್‌ಬಲ್‌ನ ಸೌಂದರ್ಯವನ್ನು ಮನಸಾರೆ ಸವಿದು ಹರಮುಖ್ ಶಿಖರವನ್ನು ಕಣ್ಣಲೇ ಧ್ಯಾನಿಸಿ ಅಲ್ಲೇ ಬಿಡಾರ ಹೂಡಿದ್ದ ಮೀನುಗಾರರನ್ನು ಮಾತಾಡಿಸಿದೆವು. ಯಾರೂ ಚಾರಣ ಮಾಡದ ಹರಮುಖ ಶಿಖರದ ಹಿಮದಿಂದಲೇ ತನ್ನೊಡಲನ್ನು ತುಂಬಿಸಿಕೊಳ್ಳುತ್ತಿರುವ ಗಂಗ್‌ಬಲ್ ಸರೋವರ ನೋಡುತ್ತಲೇ ದಂಗಾದೆವು. ವಿಶಾಲ ಆಕಾಶ ಚಪ್ಪರದಡಿ ಒಂದೆಡೆ ಗಂಗ್‌ಬಲ್ ಸ್ಥಿರವಾಗಿ ನಿಂತಿದೆ. ಗಂಗ್‌ಬಲ್ ಸರೋವರದ ಸನಿಹವೇ ನಂದ್ ಕೋಲ್ ಸರೋವರವೂ ಹರಡಿಕೊಂಡಿತ್ತು. ಅದರ ನೋಟವನ್ನು ತುಂಬಿಕೊಂಡು ಗುಡಾರದ ಕಡೆ ನಡೆದೆವು. ನಂದ್ ಕೋಲ್‌ನಿಂದ ಹೊರಟ ಝರಿಯೊಂದು ಕಣಿವೆಗೆ ಇಳಿಯುತ್ತಿತ್ತು. ಪ್ರವಾಹೋಪಾದಿಯಲ್ಲಿ ಹರಿವ ನೀರಿಗೆ ಸಣ್ಣದಾದ ಮರದ ದಿಮ್ಮಿಯನ್ನು ಅಡ್ಡಲಾಗಿ ಇರಿಸಲಾಗಿತ್ತು. ದಾಟುವಾಗ ಭಯಕ್ಕೆ ಹೃದಯ ಬಾಯಿಗೆ ಬಂದಂಥ ಅನುಭವ!

ನಾರಾನಾಗಕ್ಕೆ: ಏಳು ಸರೋವರ ನೋಡಿದ ಖುಷಿ, ಮಳೆ ಹಿಡಿಸಿದ ಕಸಿವಿಸಿಯಿಂದ ಪ್ರಾರಂಭವಾದ ಚಾರಣದ ಕೊನೆಯ ದಿನ ಸುಖವಾದ ಸುಪ್ತಿಗೆಯ ಜೊತೆಗೆ ಹಂಸತೂಲಿಕದ ಯೋಚನೆಗಳಿಂದ ತುಂಬಿತ್ತು. ವಿಪರೀತ ಕಲ್ಲಿನ ರಾಶಿಯನ್ನು ದಾಟಿಕೊಂಡು, ಓಕ್ ಮರಗಳ ದಾರಿಯಲ್ಲಿ ಹನಿಮಳೆಯಲ್ಲಿ ನಡೆಯುತ್ತಾ ನಾರಾನಾಗ್ ಪಟ್ಟಣ ತಲುಪಿ ಅಲ್ಲಿಂದ ಶ್ರೀನಗರಕ್ಕೆ ಬಂದೆವು. ಅತ್ಯಂತ ಕಠಿಣವೂ ಆಹ್ಲಾದಕರವೂ ಆದ ಚಾರಣಕ್ಕೆ ತೆರೆಬಿದ್ದಿತು. ಚಿತ್ರಗಳ ಮೂಲಕ ನೆನಪನ್ನು ಹರವಿ ಕೂತಾಗ ಏನೋ ಖುಷಿ. ಜೀವನದಲ್ಲಿ ಒಮ್ಮೆಯಾದರೂ ಈ ಚಾರಣ ಮಾಡಬೇಕೆಂಬ ಕನಸು ಕೈಗೂಡಿದಕ್ಕೆ ಮಸ್ತ್ ಖುಷಿ.



ಸಣ್ಣ ಝರಿಯ ಜೋಗುಳದ ಬಳಿ ನಕ್ಷತ್ರಗಳ ಹೊದಿಕೆಯಡಿ ನಮ್ಮ ಕ್ಯಾಂಪ್



ಜಾತ್ರೆ ಬಲು ಜೋರ

12ನೇ ಪುಟದಿಂದ...

ಗವಿಮಠ ಪ್ರತಿ ವರ್ಷ ನಾಲ್ಕು ದಿನ ಮಾತ್ರ ಜಾತ್ರಾ ಕಾರ್ಯಕ್ರಮಗಳನ್ನು ಆಯೋಜಿಸಿದರೆ ಭಕ್ತರು ಎರಡು ತಿಂಗಳ ಮೊದಲೇ 'ಮಹಾದಾಸೋಹ'ದ ಸಿದ್ಧತೆ ಆರಂಭಿಸುತ್ತಾರೆ. ಲಕ್ಷಾಂತರ ರೂಪಾಯಿ ಮೌಲ್ಯದ ದವಸ ಧಾನ್ಯಗಳನ್ನು ಸಮರ್ಪಿಸಿ 'ನಮ್ಮ ಹೆಸರು ಎಲ್ಲಿಯೂ ಹೇಳಬೇಡಿ' ಎಂದು ಗವಿಸಿದ್ಧೇಶ್ವರನ ಸನ್ನಿಧಿಗೆ ಕೈ ಮುಗಿದು ಹೋಗುವ ಭಕ್ತರೂ ಇದ್ದಾರೆ. ಎರಡ್ಮೂರು ವಾರ ಜಾತ್ರೆಯ ಸಂಭ್ರಮ ಉಳಿಯುವಂತೆ ಜನ ನೋಡಿಕೊಳ್ಳುತ್ತಾರೆ. ಆದ್ದರಿಂದ ಇದು ಗವಿಮಠದ ಸನ್ನಿಧಿಯಲ್ಲಿ ಜನರೇ ಮಾಡುವ ಜಾತ್ರೆ. ಅವರೇ ಎಳೆಯುವ ತೇರು. ಅಜ್ಜನ ಜಾತ್ರೆ ಕೇವಲ ಧಾರ್ಮಿಕ ಆಚರಣೆಯಲ್ಲ. ಆಡಂಬರಕ್ಕೆ ಸೀಮಿತವಲ್ಲ. ಗವಿಮಠದ ಬಗ್ಗೆ ಅನನ್ಯ ಪ್ರೀತಿ, ನೆಲದ ಸಂಸ್ಕೃತಿಯ ಅನಾವರಣಕ್ಕೂ ಇಲ್ಲುಂಟು ಜಾಗ. ಜನರ ಬದುಕಿನ ಜೊತೆಗೆ ಜಾತ್ರೆ ಸಮ್ಮಿಳಿತಗೊಂಡಿದ್ದರಿಂದ ಅವರ ಬದುಕಿಗೆ ಬೇಕಾದುದೆಲ್ಲವನ್ನೂ ಗವಿ ಮಠ ಕೂಡ ಮೊಗೆದು ಕೊಡುವ ಪ್ರಯತ್ನ ಮಾಡುತ್ತದೆ.

ದಕ್ಷಿಣ ಭಾರತದ ಕುಂಭಮೇಳ ಎಂದೇ ಹೆಸರಾದ ಗವಿಸಿದ್ದೇಶ್ವರ ಮಠದ ಜಾತ್ರೆಗೆ, ಕೋವಿಡ್ ಹಾವಳಿ ಪೂರ್ವದಲ್ಲಿ ಐದಾರು ಲಕ್ಷ ಜನ ಸೇರುತ್ತಿದ್ದರು. ಕೋವಿಡ್ ಕಾರಣದಿಂದ ಹೋದವರ್ಷ 'ಯಾರೂ ಬರಬೇಡಿ' ಎಂದು ಹೇಳಿ ಬೆಳಗಿನ ಜಾವ ಎಳೆದ ತೇರಿಗೆ 50 ಸಾವಿರಕ್ಕೂ ಹೆಚ್ಚು ಜನ ಬಂದಿದ್ದರು. ಈಗ ಯಾವ ಸೋಂಕಿನ ಹಾವಳಿ ವ್ಯಾಪಕವಾಗಿಲ್ಲ. ಈ ಬಾರಿಯ ಜಾತ್ರೆ ಹಿಂದೆಂದಿಗಿಂತಲೂ ಅದ್ದೂರಿಯಾಗಿ ಮಾಡಲಾಗುತ್ತಿದೆ. ವಿದೇಶಗಳಲ್ಲಿ ನೆಲೆಸಿರುವ ಜಿಲ್ಲೆಯ ಜನ ಜಾತ್ರೆಯ ನೆಪದಲ್ಲಿ ಊರಿಗೆ ಮರಳುತ್ತಿದ್ದಾರೆ.

ಈ ಸಲ ನಾಲ್ಕು ಲಕ್ಷ ಶೇಂಗಾ ಹೋಳಿಗೆ, 20 ಲಕ್ಷಕ್ಕೂ ಹೆಚ್ಚು ಜೋಳದ ರೊಟ್ಟಿ, 270 ಕ್ವಿಂಟಲ್ ಸಿಹಿ ಮಾದಲಿ ಸಂಗ್ರಹವಾಗಿದ್ದು, ಈ ಲೆಕ್ಕವೇ ಗವಿಮಠದ ಜಾತ್ರೆಗೆ ಬರುವ ಭಕ್ತರ ಸಂಖ್ಯೆಗೆ ಸಾಕ್ಷಿ ಹೇಳುತ್ತದೆ. ಬಣವೆಯಂತೆ ಒಟ್ಟಿರುವ ಜೋಳದ ರೊಟ್ಟಿ, ಊಟದ ಜಾಗದಲ್ಲಿಯೇ ಬಿಸಿಬಿಸಿಯಾಗಿ ಮಾಡಿಕೊಡುವ ಮಿರ್ಚಿ, ಅನ್ನದ ರಾಶಿ, ಸಾಂಬಾರ್, ಬಾಯಿ ಚಪ್ಪರಿಸುವಂತೆ ಮಾಡುತ್ತವೆ. ಇವುಗಳನ್ನೆಲ್ಲ ತಯಾರಿಸುವ ಕೊಪ್ಪರಿಗೆಗಳನ್ನು ನೋಡುವುದೇ ಮಹಾಸಂಭ್ರಮ.



ಗವಿಮಠದ ದಾಸೋಹಕ್ಕಾಗಿ ಭಕ್ತರು ನೀಡಿದ ಲಕ್ಷಾಂತರ ರೊಟ್ಟಿಗಳು

ಧರ್ಮ, ಜಾತಿ, ಊರು, ವ್ಯಕ್ತಿ ಹಾಗೂ ಹೊಲದ ಭೇದವಿಲ್ಲದೆ ಎಲ್ಲೆಡೆ ಬೆಳೆದ ಧಾನ್ಯಗಳು ಗವಿಮಠದ ಸನ್ನಿಧಿಯಲ್ಲಿ ಒಂದಾಗುತ್ತವೆ. ಇದರಂತೆಯೇ ಜಾತ್ರೆಯ ನೆಪದಲ್ಲಿ ಎಲ್ಲ ಧರ್ಮದವರೂ ಒಂದೆಡೆ ಸೇರುತ್ತಾರೆ. ದಿನಪೂರ್ತಿ ಅಡುಗೆ ಮಾಡುವ ಕೆಲಸವನ್ನು ಸರತಿಯ ಮೇಲೆ ದಿನಕ್ಕೊಂದು ಊರಿನ ಜನ ನೋಡಿಕೊಳ್ಳುತ್ತಾರೆ. ಜಾತ್ರೆ ಪೂರ್ವದಿಂದಲೇ ಖುದ್ದು ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿಯೇ ಎಲ್ಲವನ್ನೂ ಆಸ್ಥೆಯಿಂದ ನೋಡುತ್ತಾರೆ. ಕಟ್ಟಿಗೆ ಹೊತ್ತುಕೊಂಡು ಹೋಗುವವರಿಗೆ ಹೆಗಲಾಗುತ್ತಾರೆ. ಊಟದ ಕೋಣೆ ಸ್ವಚ್ಛಗೊಳಿಸುವ ಸಿಬ್ಬಂದಿಗೆ ನೆರವಾಗುತ್ತಾರೆ.

ಹೆಣ್ಣು ಮಕ್ಕಳಿಗೆ ಅತ್ಯಂತ ಪ್ರಿಯವಾದ ವಿವಿಧ ಬಣ್ಣ, ಆಕಾರದ ಬಳೆಗಳ ಸಾಲು ಸಾಲು ಅಂಗಡಿಗಳು, ರಿಬ್ಬನ್ ಹೇರ್ ಕ್ಲಿಪ್ಪುಗಳು, ಬಟ್ಟೆಗಳ ಸರತಿ ಸಾಲು. ಮಕ್ಕಳ ಆಟಿಕೆಗಳ ಜಗತ್ತು ಬೇರೆ. ಜಾತ್ರೆ ಎಂದಮೇಲೆ ಬೆಂಡು-ಬತ್ತಾಸು, ಚುರುಮುರಿ ಖಾರದ ಅಂಗಡಿಗಳು ಇಲ್ಲದಿದ್ದರೆ ಹೇಗೆ? ಗೆರೆ ಕೊರೆದಂತೆ ಎಲ್ಲದಕ್ಕೂ ಸಾಲು ಸಾಲು ಅಂಗಡಿಗಳು.

ಜಾತ್ರೆಯ ಧಾರ್ಮಿಕ ಆಚರಣೆಗಳು ಕೆಲವಾದರೆ 'ಅಜ್ಜನ ಜಾತ್ರೆ'ಯಲ್ಲಿ ಸಾಮಾಜಿಕ ಹಾಗೂ ವೈಚಾರಿಕ ವಿಚಾರಗಳೇ ಪ್ರಧಾನವಾಗುತ್ತವೆ. ಪ್ರತಿ ಕಾರ್ಯಕ್ರಮಗಳು ಅರ್ಥಪೂರ್ಣ ಸಂದೇಶಗಳನ್ನು ಕೊಡುವಂತೆ ಯೋಜನೆ ರೂಪಿಸಲಾಗುತ್ತದೆ. ಜಾತ್ರೆಯ ನೆಪದಲ್ಲಿ ಗವಿಮಠ, ರಕ್ತದಾನ ಶಿಬಿರ, ಬಾಲ್ಯ ವಿವಾಹ ತಡೆ, ಜಲ ಸಂರಕ್ಷಣೆ, ಸಶಕ್ತಮನ, ಸಂತೃಪ್ತ ಜೀವನ, ಕೃಪಾದೃಷ್ಟಿ, ಲಕ್ಷ ಲಕ್ಷ ವೃಕ್ಷೋತ್ಸವ ಹಾಗೂ ಅಂಗಾಂಗದಾನ ಜಾಗೃತಿ ಜಾಥಾದಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತ ಬಂದಿದೆ.

ಸತತ ಮಳೆಯ ಅಭಾವದಿಂದ ಬರಗಾಲದಿಂದ ಪರಿತಪಿಸುತ್ತಿದ್ದ ರೈತ ಸಮುದಾಯದಲ್ಲಿ ನೀರಿನ ಮಿತವ್ಯಯದ ಅರಿವು ಮೂಡಿಸಲು ಮಳೆನೀರು ಸಂಗ್ರಹ ಜಾಗೃತಿ ಮೂಡಿಸಲಾಗಿದೆ. ಕೊಪ್ಪಳ ಸಮೀಪದ ತುಂಗಭದ್ರಾದ ಉಪನದಿಯಾದ ಹೀರೆಹಳ್ಳದ ಸುಮಾರು 26 ಕಿ.ಮೀ. ಉದ್ದದ ಹಳ್ಳದ ಪುನಶ್ಚೇತನ ಮಾಡಲಾಗಿದೆ. ಕಲ್ಭಾವಿ ಕೆರೆ, ರಾಯನ ಕೆರೆ, ನಿಡಶೇಷಿ ಕೆರೆ, ಇಂದರಗಿ ಕೆರೆ, ಗಂಗಾವತಿಯ ದುರ್ಗಮ್ಮನ ಹಳ್ಳ ಇವೆಲ್ಲವೂ ಗವಿಮಠದ ಸ್ವಾಮೀಜಿ ಅವರ ಮುಂದಾಳತ್ವದಲ್ಲಿ ಸ್ವಚ್ಛಗೊಂಡಿವೆ. ಪ್ರತಿ ವರ್ಷವೂ ಅಭಿವೃದ್ಧಿ ಕಾರ್ಯದ ಸಂಕಲ್ಪದೊಂದಿಗೆ ಜಾತ್ರೆಯ ಯೋಜನೆ ಸಿದ್ಧಗೊಂಡು ಜನರಿಂದ ನಡೆಯುವ ಜನಪರ ಜಾತ್ರೆಯಾಗಿ ಬದಲಾಗಿದೆ.

(ಕೊಪ್ಪಳ ಗವಿಮಠದ ರಥೋತ್ಸವ ಇಂದು ನಡೆಯಲಿದೆ)

ಮುನ್ನೋಟ 08-01-2023 ರಿಂದ 14-01-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಈ ವಾರದ ಆರಂಭದಲ್ಲಿ ಸ್ವಲ್ಪ ವ್ಯಗ್ರ ಸ್ವಭಾವವಿರುತ್ತದೆ. ನಡವಳಿಕೆಯಲ್ಲಿ ಸ್ವಲ್ಪ ಆಲಸ್ಯವನ್ನು ಕಾಣಬಹುದು. ಯಾರೊಂದಿಗೂ ಕಠಿಣ ಮಾತುಗಳು ಬೇಡ. ಕೃಷಿಕರಿಗೆ ಉತ್ತಮ ಬೆಳೆ ಪಡೆಯುವ ಯೋಗವಿದೆ. ವಿದ್ಯಾರ್ಥಿಗಳಿಗೆ ಉತ್ತಮ ಸಾಧನೆ ಮಾಡುವ ಅವಕಾಶ ದೊರೆಯುತ್ತದೆ. ಉಷ್ಣದಿಂದ ರಕ್ತ ಕೆಟ್ಟು ಮೈಮೇಲೆ ಗುಳ್ಳೆಗಳಾಗಬಹುದು. ಸಂಗಾತಿಯ ಸ್ವಾರ್ಥ ಹಾಗೂ ಜಿಗುಟುತನ ಬೇಸರ ತರಿಸುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ನಿಮ್ಮ ನಡವಳಿಕೆಯಲ್ಲಿ ಹೆಚ್ಚು ಕೋಪವನ್ನು ಕಾಣಬಹುದು. ಮಾತಿನಲ್ಲಿ ದ್ವಂದ್ವಾರ್ಥಗಳಿರುತ್ತವೆ. ಚುರುಕಾಗಿ ಕೆಲಸ ಮಾಡಿ ಎಲ್ಲರಿಂದಲೂ ಕೆಲಸವನ್ನು ಮಾಡಿಸುವಿರಿ. ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿ ಕಾಣಬಹುದು. ರಕ್ತ ಪರಿಚಲನೆಯಲ್ಲಿ ವ್ಯತ್ಯಾಸವಿರುವವರು ಚಿಕಿತ್ಸೆ ಪಡೆದುಕೊಳ್ಳುವುದು ಉತ್ತಮ. ಸಂಗಾತಿಯೊಡನೆ ಕಲಹಗಳಾಗಬಹುದು, ಮೌನವಾಗಿರುವುದು ಬಹಳ ಉತ್ತಮ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಸರ್ಕಾರಿ ಹುದ್ದೆಯಲ್ಲಿರುವವರಿಗೆ ಹೆಚ್ಚಿನ ಜವಾಬ್ದಾರಿಗಳು ದೊರೆಯುತ್ತವೆ. ಹಣದ ಒಳಹರಿವು ನಿಮ್ಮ ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ಸರ್ಕಾರಿ ಸಂಸ್ಥೆಗಳ ಸಾಲ ಈಗ ದೊರೆಯುತ್ತದೆ. ನಿಮ್ಮ ತಾಯಿಯಿಂದ ನಿಮಗೆ ಸೂಕ್ತ ಧನಸಹಾಯ ಸಿಗುತ್ತದೆ. ಸಂಗಾತಿಯ ಸಹಕಾರ ನಿಮ್ಮ ಕೆಲಸಕಾರ್ಯಗಳಿಗೆ ಸಿಗುತ್ತದೆ. ಹಣಕಾಸಿನ ವ್ಯವಹಾರಗಳಲ್ಲಿ ಸ್ವಲ್ಪ ಹಿನ್ನಡೆ ಕಾಣಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ವಾರದ ಆರಂಭವು ಆನಂದದಾಯಕವಾಗಿರುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ಸ್ವಲ್ಪ ಹಿನ್ನಡೆ ಕಾಣಬಹುದು. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಖರ್ಚು ಹೆಚ್ಚಾಗುವ ಸಂದರ್ಭವಿದೆ. ಸಂಗಾತಿಯೊಂದಿಗೆ ಇದ್ದ ಮುನಿಸು ಕೊನೆಗೊಳ್ಳುವ ಲಕ್ಷಣವಿದೆ. ಕೆಲವೊಂದು ಬೆಳ್ಳಿ ವ್ಯಾಪಾರಿಗಳಿಗೆ ವ್ಯಾಪಾರದಲ್ಲಿ ಸ್ವಲ್ಪಮಟ್ಟಿನ ವ್ಯತ್ಯಾಸವಾಗಬಹುದು. ಹಿರಿಯರಿಂದ ಧನಸಹಾಯ ನಿಮಗೆ ಹೆಚ್ಚು ಅನುಕೂಲವಾಗುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ನಿಮ್ಮ ಮಾನಸಿಕ ದೃಢತೆ ಹೆಚ್ಚಿರುತ್ತದೆ. ಹಣದ ಒಳಹರಿವು ನಿರೀಕ್ಷೆಯ ಮಟ್ಟಕ್ಕೆ ಇರುತ್ತದೆ. ಕೆಲಸ ಕಾರ್ಯಗಳಲ್ಲಿ ಸಾಕಷ್ಟು ಆಲಸ್ಯ ಕಾಣಬಹುದು. ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ದೊರೆಯುವ ಸಂದರ್ಭ. ಸ್ತ್ರೀರೋಗ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ. ಸಂಗಾತಿಯ ಖರ್ಚುವೆಚ್ಚ ಹೆಚ್ಚಾಗುವ ಸಾಧ್ಯತೆ ಇದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಇದ್ದದರಲ್ಲಿ ತೃಪ್ತಿ ಪಡಬೇಕಾದ ಅವಕಾಶ ನಿಮ್ಮದಾಗಿರುತ್ತದೆ. ಧಾರ್ಮಿಕ ಕಾರ್ಯಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಹೊಂದುವಿರಿ. ಕೃಷಿ ಕೆಲಸಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳುವ ಆಸಕ್ತಿ ಮೂಡುತ್ತದೆ. ಆಸ್ತಿ ವಿಚಾರದಲ್ಲಿ ಸ್ವಲ್ಪ ಮುನ್ನಡೆಯನ್ನು ಸಾಧಿಸಬಹುದು. ಮಕ್ಕಳ ಆರೋಗ್ಯದ ವಿಚಾರದ ಬಗ್ಗೆ ಹೆಚ್ಚಿನ ಚಿಂತೆ ಮೂಡುತ್ತದೆ. ವಾತರೋಗವಿರುವವರು ಹೆಚ್ಚು ಎಚ್ಚರಿಕೆವಹಿಸಿರಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಜೀವನದ ಬಗ್ಗೆ ವೈರಾಗ್ಯ ಮೂಡಬಹುದು, ಇದು ಕೆಲವು ದಿನಗಳ ಮಟ್ಟಿಗೆ ಮಾತ್ರ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಆಸ್ತಿ ಮಾರುವ ವಿಚಾರದಲ್ಲಿ ದ್ವಂದ್ವವಿರುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ ಇರುತ್ತದೆ. ಉದರ ಸಂಬಂಧಿ ಕಾಯಿಲೆ ಕಾಡಬಹುದು. ವಿದೇಶದಲ್ಲಿರುವವರು ತಮ್ಮ ಸಂಗಾತಿಯನ್ನು ಈಗ ತಮ್ಮ ಬಳಿಗೆ ಕರೆಸಿಕೊಳ್ಳಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ನಿಮ್ಮಲ್ಲಿನ ಕಾರ್ಯ ಉತ್ಸಾಹ ಈಗ ಜಾಸ್ತಿ ಇರುತ್ತದೆ. ಧನ ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಬಂಧುಗಳಲ್ಲಿ ಕೆಲವರು ನಿಮ್ಮ ಪರ, ಕೆಲವರು ನಿಮ್ಮ ವಿರುದ್ಧವಿರುತ್ತಾರೆ. ಸ್ಥಿರಾಸ್ತಿಯ ಬಗ್ಗೆ ಈಗ ಆಲೋಚನೆ ಬೇಡ, ಅದು ದುಬಾರಿಯಾಗಿ ಪರಿಣಮಿಸಬಹುದು. ಅನಿರೀಕ್ಷಿತ ಆದಾಯ, ಅದೇ ರೀತಿ ಖರ್ಚುಗಳೂ ಬರುತ್ತವೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಆತ್ಮವಿಶ್ವಾಸ ತುಸು ಹೆಚ್ಚಾಗಿಯೇ ಇರುತ್ತದೆ. ಆದಾಯದಲ್ಲಿ ಸ್ವಲ್ಪ ಕೊರತೆ ಇದ್ದರೂ ತೊಂದರೆ ಇರುವುದಿಲ್ಲ. ನಿಮ್ಮ ವ್ಯಕ್ತಿತ್ವಕ್ಕೆ ತಕ್ಕಂತೆ ಹಿರಿಯರಿಂದ ಸೂಕ್ತ ಮಾರ್ಗದರ್ಶನ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಹಿನ್ನಡೆ ಇರುತ್ತದೆ. ವಿದೇಶಿ ಭಾಷೆಗಳನ್ನು ಕಲಿಯುವವರಿಗೆ ಸಾಕಷ್ಟು ಮುನ್ನಡೆ ಇರುತ್ತದೆ. ಹರಿತವಾದ ಆಯುಧಗಳಿಂದ ದೂರ ಇರುವುದು ಒಳ್ಳೆಯದು. ಪುಣ್ಯಕ್ಷೇತ್ರ ದರ್ಶನದ ಯೋಗವಿದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಸಮಾಜದಿಂದ ಗೌರವ ದೊರೆಯುತ್ತದೆ. ವೃತ್ತಿಯಲ್ಲಿ ಬಹಳ ಶ್ರದ್ಧೆ ತೋರುವಿರಿ. ಕೆಲಸಗಾರರನ್ನು ಒಲಿಸಿಕೊಂಡು ನಿಮ್ಮ ಕಾರ್ಯಸಾಧನೆ ಮಾಡುವಿರಿ. ಬಂಧುಗಳಲ್ಲಿ ಉತ್ತಮ ಬಾಂಧವ್ಯವನ್ನು ಹೊಂದಲು ಪ್ರಯತ್ನಪಡುವಿರಿ. ವಿದೇಶದಲ್ಲಿರುವವರಿಗೆ ಆಸ್ತಿ ಮಾಡುವ ಯೋಗ ಬರುತ್ತದೆ. ಕೃಷಿಯನ್ನು ಅಧ್ಯಯನ ಮಾಡುತ್ತಿರುವವರಿಗೆ ಉತ್ತಮ ಸೌಲಭ್ಯವಿರುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಸರಾಗತೆಯನ್ನು ಕಾಣಬಹುದು. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ಉಪನ್ಯಾಸಕರಿಗೆ ಹಾಗೂ ಭಾಷಣಕಾರರಿಗೆ ಉತ್ತಮ ವೇದಿಕೆ ದೊರೆತು ಸಂತಸವಾಗುತ್ತದೆ. ಕೃಷಿಯಲ್ಲಿ ಹೆಚ್ಚಿನ ಆಸಕ್ತಿಯು ಮೂಡುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರಲಿದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ನಿಮ್ಮ ಮಾತಿನಲ್ಲಿ ಹೆಚ್ಚು ಕಠೋರತೆಯನ್ನು ಕಾಣಬಹುದು. ನಿಮ್ಮ ವೈಯಕ್ತಿಕ ಕೆಲಸಗಳಿಗೆ ಮಾತ್ರ ಹೆಚ್ಚಿನ ಗಮನ ಕೊಡುವಿರಿ. ವಿದ್ಯಾರ್ಥಿಗಳಿಗೆ ಯಶಸ್ಸು ಸಿಗುವ ಕಾಲ. ಆಸ್ತಿ ಕೊಳ್ಳುವಲ್ಲಿ ಕಿರಿಕಿರಿಯುಂಟಾಗುತ್ತದೆ. ಕಣ್ಣಿನ ಸೋಂಕು ಇರುವವರು ಎಚ್ಚರವಹಿಸಿರಿ. ಸಂಗಾತಿಯ ವಶೀಲಿಯಿಂದ ಉದ್ಯೋಗ ದೊರಕುವ ಸಾಧ್ಯತೆ ಇದೆ. ಕೆಲವು ಧಾರ್ಮಿಕ ಆಚರಣೆಗಳಿಗೆ ತೀವ್ರ ವಿರೋಧ ವ್ಯಕ್ತಪಡಿಸುವಿರಿ.

ಪದಬಂಧ 2771



ಮೇಲಿನಿಂದ ಕೆಳಕ್ಕೆ

1. ಸುತ್ತಿನಾಕಾರದ ಆವೃತ್ತ 3
2. ತಿಮಿಂಗಿಲ ಬೆಳಕನ್ನು ನುಂಗಿದಾಗ ಆವರಿಸಿರುವ ಕತ್ತಲು 3
3. ಕಮಲದಂತಹ ಮಿನಿ ಚೆಲುವೆ 3
4. ಬೆಳಕಿನಾಟದಲ್ಲಿ ಸದಾ ನಮ್ಮನ್ನು ಹಿಂಬಾಲಿಸುವ ನಮ್ಮ ಛಾಯೆ 3
5. ಪತ್ರದ ಕೊನೆಯಲ್ಲಿ ತೋರುವ ಔಪಚಾರಿಕ ವಿನಮ್ರತೆ 3
6. ಮಾಡುವ ಒಂದು ರೀತಿ 3
7. ದೀರ್ಘ ಗೆಲುವನ್ನು ಪಡೆದವ 3
8. ತರಬೇತಿ ಮತ್ತು ಕಲಿಕೆಗೆ ಹೂಡುವ ವಾಸ್ತವ್ಯ 3
9. ಮಂಗಳವನ್ನುಂಟುಮಾಡುವವಳ ಹೆಸರಿನಲ್ಲಿ ಲಕ್ಷ್ಮೀ ಸಂಕೇತ ಕೊನೆಯಲ್ಲಿ ಸೇರಿದೆ 3
10. ಕರದಲ್ಲಿ ಬೀರನನ್ನು ಹಿಡಿದ ದೋಹೆಗಳ ಸಂತ 3
12. ಲಲಾಟವನ್ನು ಶೋಭಿಸುವ ನಾಮ 3
14. ಅಲ್ಲಲ್ಲಿ ಮೃಗ ಪಕ್ಷಿಗಳಿಗೆ ಅನ್ನ ಆಹಾರವನ್ನು ಇಟ್ಟಿರುವ ಕಾಡು 3
16. ಸದನದಲ್ಲಿ ನಡೆಯುವ ಮಾತುಕತೆ 3
17. ಕ್ರಿಕೆಟ್ ತಂಡದ ಆಂಗ್ಲ ನಾಯಕ 3
18. ಮೀರಾಳ ಜೊತೆ ಬರುವ ಗಾಳಿರಾಯ 3
20. ಸುಂದರ ಆಕಾರ ಪಡೆದ ತಾಳ 3
21. ಆಂಗ್ಲ ಹಣ ಹರಿಯುವ ನಾಡಿ 3
22. ನೆನಪಿಗೆ ಬರುವ ಹಿಂದಿಯ ಹಳೆಯ ಕಾಲ 3

ಎಡದಿಂದ ಬಲಕ್ಕೆ

1. ಪೂಜೆಯಾದ ಮೇಲೆ ಮುಖಕ್ಕೆ ಎತ್ತುವ ಶುಭಪ್ರದ ಬೆಳಗು 5
3. ಒಂದು ರೀತಿ ನಡವಳಿಕೆಯಲ್ಲಾಗುವ ಬದಲಾವಣೆ 5
5. ಗೋಷ್ಠಿಗಳಲ್ಲಿ ಪರಸ್ಪರ ವಿಷಯವನ್ನು ಕೊಟ್ಟು ತೆಗೆದುಕೊಳ್ಳುವುದು 7
8. ಶಿವ ಪಂಚಾಕ್ಷರಿಯಲ್ಲಿ ಕೊನೆಯ ಮೂರಕ್ಷರ ಈಶ್ವರನ ಹೆಸರಿನಲ್ಲಿ 3
9. ಶುಕದಲ್ಲಿ ಬರುವ ನಾಯಿ 3
11. ಕಚೇರಿಗಳಲ್ಲಿ ಟಪಾಲಿನ ಮೂಲಕ ಪಡೆದದ್ದು 3
13. ದೇವನ ಜೊತೆ ಸೇರಿರುವ ದಾನವ ಹಿಂದು ಮುಂದು 3
15. ಸಿರಿಯನ್ನು ಕೊಡುವ ಲಕ್ಷ್ಮಿ ಹಸ್ತ 3
17. ದೋಷಾರೋಪದಿಂದ ಹಣೆಗೆ ಅಂಟಿಕೊಂಡ ಕೆಟ್ಟ ಹೆಸರು 3
19. ಪ್ರಪಂಚದ ಬೃಹದಾಕಾರವನ್ನು ಬಿಡಿಸಿ ತೋರಿಸಲು ಕೃಷ್ಣನಿಗೆ ಮಾತ್ರ ಸಾಧ್ಯ 7
23. ಮುಗಿಲೆತ್ತರಕ್ಕೇರುವ ಸೀತಾಪತಿಯ ಮಂತ್ರ 5
24. ಚಿರನೂತನವಾಗಿರುವ ದಿನವೂ ಇರುವ ತಾರುಣ್ಯ 5

ಪದಬಂಧ ಉತ್ತರ -2770

ಮೇಲಿಂದ ಕೆಳಕ್ಕೆ

1. ಆಕಾಶಪುರಾಣ 2.ಸುಪ್ರಜ 3.ವಶೀಲಿ 4.ರಮಾನಂದ 3.ಅವಧಿ 7.ಪಿನಾಕಧರ 8.ಕಾಕ 11.ಜನಸಂಕುಲ 13.ಅಲಕನಂದಿನಿ 15.ಕಳಸ 16.ದೇವಾಲಯ 17.ಕುಣಿ 20. ತೆಗಳು 21.ದೇವಿಕಾ

ಎಡದಿಂದ ಬಲಕ್ಕೆ

1. ಆಸುಪಾಸು 3.ವಸಂತವಿಹಾರ 5.ಅಜ 6.ಲಿಪಿ 8.ಕಾನನಂ 9.ನಾನಕ 10.ರಾಜಾಧಿರಾಜ 12.ನರಾಂಧ 14.ರಕ್ಷಕಬಲ 17.ಕುರುಕು 18.ವಾರುಣಿ 19.ಲತೆ 21.ದೇಸ 22.ಯಜ್ಞಪಶುಗಳು 23.ಕಾತ್ಯಾಯಿನಿ

ನೋವು ಮೆಟ್ಟಿ ಬದುಕು ಕಟ್ಟಿ...

ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಭಿಕ್ಷೆ ಬೇಡುವವರು, ರೈಲಿನಲ್ಲಿ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾಗಿ ಚಪ್ಪಾಳೆ ತಟ್ಟಿ ಗಲಿಬಿಲಿ ಮಾಡುವವರು, ಟೋಲ್‌ಗೇಟ್‌ಗಳಲ್ಲಿ ಕೈ ಅಡ್ಡ ಹಾಕಿ ಬರ್ತೀಯಾ ಅನ್ನುವವರು, ಮಂಗಳ ಕಾರ್ಯಗಳಲ್ಲಿ ನರ್ತಿಸುವವರು... ಹೀಗೆ ನಾನಾ ರೀತಿಯಲ್ಲಿ ಗುರ್ತಿಸಿಕೊಂಡಿರುವವರು ಲಿಂಗತ್ವ ಅಲ್ಪಸಂಖ್ಯಾತರು. 'ನಮಗೆ ಯಾರ್ ಕೆಲ್ಸ ಕೊಡ್ತಾರೆ? ಕೊಟ್ಟರೂ ಮನುಷ್ಯರಂತೆ ನಡೆಸಿಕೊಳ್ತಾರಾ? ನಿಮ್ಮಂತೆ ಕಾಣ್ತಾರಾ?' ಅವರು ಕೇಳುವ ಪ್ರಶ್ನೆಗಳಿಗೆ ಸುಲಭವಾಗಿ ಉತ್ತರ ಸಿಗಲಾರದು. ಅದಕ್ಕೆ ಅವರೇ ಉತ್ತರ ಕಂಡುಕೊಳ್ಳುವವರಂತೆ ಲಿಂಗ ಬದಲಾವಣೆಯ ಸತ್ಯವನ್ನು ಒಪ್ಪಿಕೊಂಡೇ, ನೋವನ್ನು ಮೆಟ್ಟಿ ಘನತೆಯ ಬದುಕನ್ನು ಕಟ್ಟಿಕೊಂಡವರು ಅನೇಕರು. 'ಕಾಯಕವೇ ಕೈಲಾಸ' ಎಂದು ನಂಬಿಕೊಂಡ ಇವರು ಹಲವರಿಗೆ ಸ್ಫೂರ್ತಿಯಾದ ಕಥೆಯನ್ನು ಕಟ್ಟಿಕೊಟ್ಟಿದ್ದಾರೆ **ಮಂಜುಶ್ರೀ ಎಂ. ಕಡಕೋಳ**




ಸುಲ್ತಾನ್‌ಪುರಿಯ ಅಚ್ಚರಿ ಬೋಬಿ

ಈಚೆಗಷ್ಟೇ ನಡೆದ ದೆಹಲಿ ಮಹಾನಗರ ಪಾಲಿಕೆ ಚುನಾವಣೆಯ ಫಲಿತಾಂಶದಲ್ಲಿ ಆಮ್ ಆದ್ಮಿ ಪಕ್ಷವು (ಎಎಪಿ) ಬಿಜೆಪಿಯ 15 ವರ್ಷಗಳ ದಾಖಲೆ ಮುರಿದದ್ದು ತಿಳಿದಿರುವಂಥದ್ದೇ. ಆದರೆ, ಅದರ ಜೊತೆಗೆ ಎಎಪಿ ಮತ್ತೊಂದು ಅಚ್ಚರಿಯನ್ನೂ ನೀಡಿದೆ. ಮೊದಲ ಬಾರಿಗೆ ಪಕ್ಷದಿಂದ ಟಿಕೆಟ್ ನೀಡಿದ್ದ ಲಿಂಗತ್ವ ಅಲ್ಪಸಂಖ್ಯಾತೆ ಬೋಬಿ ಕಿನ್ನರ್ ಜಯಗಳಿಸಿದ್ದು, ಆ ಸಮುದಾಯದತ್ತ ಕಣ್ಣರಳಿಸುವಂತೆ ಮಾಡಿದೆ.

ಲಿಂಗತ್ವ ಅಲ್ಪಸಂಖ್ಯಾತಳು ಎನ್ನುವ ಕಾರಣಕ್ಕಾಗಿ 9ನೇ ತರಗತಿಗೇ ಶಾಲೆ ಬಿಟ್ಟಿದ್ದ ಬೋಬಿ, 15ನೇ ವರ್ಷಕ್ಕೆ ಕುಟುಂಬವನ್ನೂ ತೊರೆದವರು. ಮದುವೆ ಸೇರಿದಂತೆ ಇತರ ಶುಭ ಸಮಾರಂಭಗಳಲ್ಲಿ ನರ್ತಿಸುತ್ತಾ ಹೊಟ್ಟೆಪಾಡು ಸಾಗಿಸುತ್ತಿದ್ದ ಅವರು, ಎನ್‌ಜಿಒವೊಂದರ ಸಂಪರ್ಕಕ್ಕೆ ಬಂದರು. ಅಣ್ಣಾ ಹಜಾರೆ ಅವರ ಭ್ರಷ್ಟಾಚಾರ ವಿರೋಧಿ ಚಳವಳಿ ಸೇರಿದ ಬೋಬಿಗೆ ಅಲ್ಲಿ ಅರವಿಂದ ಕೇಜ್ರಿವಾಲ್ ಪರಿಚಯವಾಯಿತು. ಪರಿಚಯ ಎಎಪಿಯೊಂದಿಗೆ ರಾಜಕೀಯ ನಂಟು ಬೆಸೆಯಿತು. ದುಡಿದ ಹಣವನ್ನು ಬಡಮಕ್ಕಳ ಶಿಕ್ಷಣಕ್ಕಾಗಿ ಖರ್ಚು ಮಾಡುತ್ತಿದ್ದ ಬೋಬಿ, 2017ರಲ್ಲೇ ಚುನಾವಣೆಗೆ ಸ್ಪರ್ಧಿಸಿದರಾದರೂ ಮೊದಲ ಅನುಭವ ಕಹಿಯಾಗಿಯೇ ಉಳಿಯಿತು. ಧೃತಿಗೆಡದ ಬೋಬಿ ತಮ್ಮ ಕ್ಷೇತ್ರ ಸುಲ್ತಾನ್‌ಪುರಿಯ ಅಭಿವೃದ್ಧಿಗೆ ಪಣತೊಟ್ಟರು. ಅದರ ಪ್ರತಿಫಲವೇ ಈ ಬಾರಿಯ ದೆಹಲಿ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ದೊರೆತ ಗೆಲುವು. ಬಡಮಕ್ಕಳಷ್ಟೇ ಅಲ್ಲ ತಮ್ಮ ಸಮುದಾಯದ ಸಂಘಟನೆ ಮತ್ತು ಕಲ್ಯಾಣಕ್ಕಾಗಿ ದುಡಿಯುತ್ತಿರುವ ಬೋಬಿ ತಮ್ಮ ಕ್ಷೇತ್ರದ ಜನರ ನೆಚ್ಚಿನ ನಾಯಕಿಯಾಗಿದ್ದಾರೆ.

ಪ್ರಿನ್ಸಿಪಾಲ್ ಮಾನವಿ

ಪಶ್ಚಿಮ ಬಂಗಾಳದವರಾದ ಮಾನವಿ ಬಂಡೋಪಾಧ್ಯಾಯ ಗಂಡಾಗಿ ಹುಟ್ಟಿ, ಬೆಳೆಯುತ್ತಾ ಹೆಣ್ಣಾದವರು. ಲಿಂಗ ಪರಿವರ್ತನೆಯ ಹಾದಿಯಲ್ಲಿ ಅನುಭವಿಸಿದ ನೋವುಗಳು ಒಂದಲ್ಲ, ಎರಡಲ್ಲ. ಬಾಲ್ಯದಲ್ಲೇ ಸೋದರ ಸಂಬಂಧಿಯೊಬ್ಬರಿಂದ ಲೈಂಗಿಕವಾಗಿ ಶೋಷಣೆಗೊಳಗಾದ ಮಾನವಿ, ತಮ್ಮೊಳಗಿನ ತೊಳಲಾಟಗಳಿಗೆ ಓದಿನ ಮೂಲಕ ಪರಿಹಾರ ಕಂಡುಕೊಂಡವರು. ಮನೋ-ದೈಹಿಕ ಬದಲಾವಣೆಗಳ ನಡುವೆಯೇ ಉನ್ನತ ಶಿಕ್ಷಣ ಪಡೆದು ಶಿಕ್ಷಕ ವೃತ್ತಿಗೆ ಸೇರಿದರೂ ಅಲ್ಲಿಯೂ ಬೆಂಬಿಡದ ನೋವು, ಅವಮಾನ, ಕೀಳರಿಮೆ. ಎಂ.ಎ ಪಿಎಚ್‌.ಡಿ ಪದವೀಧರರಾದ ಮಾನವಿ, ಪಶ್ಚಿಮ ಬಂಗಾಳದ ಕೃಷ್ಣಗಢದ ಮಹಿಳಾ ಕಾಲೇಜಿನ ಪ್ರಿನ್ಸಿಪಾಲ್ ಹುದ್ದೆಗೆ ಬಡ್ತಿ ಪಡೆದದ್ದು ಕೂಡಾ ಹೋರಾಟದ ಮೂಲಕವೇ. ದೇಶದ ಮೊದಲ ಟ್ರಾನ್ಸ್‌ಜೆಂಡರ್ ಪ್ರಿನ್ಸಿಪಾಲ್ ಎಂದೇ ಗುರುತಾಗಿರುವ ಮಾನವಿ ಉತ್ತಮ ನೃತ್ಯಗಾರ್ತಿ ಕೂಡಾ. ಲಿಂಗತ್ವ ಅಲ್ಪಸಂಖ್ಯಾತರಿಗಾಗಿ ಕೆಲಕಾಲ 'ಅಪೂರ್ಣ ಮಾನವ' ಎಂಬ ಪತ್ರಿಕೆಯನ್ನೂ ಹೊರತಂದಿರುವ ಅವರು, ಸಮುದಾಯದ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದಾರೆ. 'ಎ ಗಿಫ್ಟ್ ಆಫ್ ಗಾಡೆಸ್ಸೆಸ್ ಲಕ್ಷ್ಮಿ' ಹೆಸರಿನಲ್ಲಿ ಆತ್ಮಕಥನವನ್ನು ಬರೆದಿದ್ದಾರೆ.



ಸರ್ಕಾರಿ ಉದ್ಯೋಗದ ಬೆನ್ನತ್ತಿ....

ಕರ್ನಾಟಕದಲ್ಲಿ ಸರ್ಕಾರಿ ನೌಕರಿ ಪಡೆದ ಮೊದಲ ಲಿಂಗತ್ವ ಅಲ್ಪಸಂಖ್ಯಾತೆಯಾಗಿರುವ ಮೋನಿಷಾ ಅವರ ಬದುಕು ಅನೇಕರಿಗೆ ಸ್ಫೂರ್ತಿ. ಹೆಣ್ಣಾಗುವ ಆಸೆಯನ್ನು ಅದುಮಿಡಲಾಗದೇ ಶಾಲೆಯ ನಾಟಕಗಳಲ್ಲಿ ಸ್ತ್ರೀಪಾತ್ರ ಮಾಡಿದಾಗ ಮನೆಯವರ ತಿರಸ್ಕಾರಕ್ಕೊಳಗಾದರು.



ಇಂದಲ್ಲ ನಾಳೆ ಮಗ ರಾಮು (ಮೂಲಹೆಸರು) ಸರಿಹೋದಾನು ಎಂಬ ಕುಟುಂಬದ ಭರವಸೆ ನಿಜವಾಗಲಿಲ್ಲ. ಎಸ್‌ಎಸ್‌ಎಲ್‌ಸಿಯಲ್ಲಿ ಫೇಲಾದಾಗ ಅಪ್ಪನಿಂದ ಬೆತ್ತದೇಟಿನ ರುಚಿ ಕಂಡು ಮನೆ ಬಿಟ್ಟು ಹೊರಟ ಮೋನಿಷಾ ಸೇರಿದ್ದು ತಮ್ಮದೇ ಸಮುದಾಯದವರಿದ್ದ ಮುಂಬೈಗೆ. ಅಲ್ಲಿ ದುಡಿದು ಲಿಂಗ ಪರಿವರ್ತನೆ ಶಸ್ತ್ರಚಿಕಿತ್ಸೆ ಬಳಿಕ ಬೆಂಗಳೂರಿಗೆ ಹಿಂತಿರುಗಿದಾಗ ಕುಟುಂಬದರಿಂದ ಮತ್ತೆ ತಿರಸ್ಕಾರ. ಉದ್ಯೋಗಕ್ಕಾಗಿ ಜಿಲ್ಲಾಧಿಕಾರಿ ಕಚೇರಿಯಿಂದ ವಿವಿಧೆಡೆ ಅಲೆದಾಟ. ಅಂದಿನ ಜಿಲ್ಲಾಧಿಕಾರಿ ಶಂಕರ್ ಅವರ ಸಹಾಯದಿಂದ ಕೆನರಾ ಬ್ಯಾಂಕಿನಲ್ಲಿ ಸಾಲ ಪಡೆದ ಮೋನಿಷಾ, ತಾವು ಹುಟ್ಟಿಬೆಳೆದ ಇಂದಿರಾನಗರದ ಸಮೀಪದಲ್ಲಿನ ಕೊಳೆಗೇರಿಯಲ್ಲಿ ಬಟ್ಟೆ ವ್ಯಾಪಾರ ಶುರು ಮಾಡಿದರು.

ಲಿಂಗ ಪರಿವರ್ತನೆಯಾಗಿದ್ದರೂ ಶೈಕ್ಷಣಿಕ ದಾಖಲಾತಿಗಳಲ್ಲಿ 'ರಾಮು' ಆಗಿದ್ದ ಮೋನಿಷಾ, ದಾಖಲಾತಿಗಳನ್ನು ಸರಿಪಡಿಸಿಕೊಂಡು ವಿಧಾನಪರಿಷತ್‌ನ ಸಚಿವಾಲಯದಲ್ಲಿ 'ಡಿ' ಗ್ರೂಪ್ ಹುದ್ದೆಗೆ ಹಾಕಿದ ಅರ್ಜಿಯು ಫಲ ನೀಡಲಿಲ್ಲ. ವಕೀಲರೊಬ್ಬರ ಪರಿಚಯದಿಂದ ಕಾನೂನಾತ್ಮಕವಾಗಿ ತಮ್ಮ ಹಕ್ಕು ಪ್ರತಿಪಾದಿಸಬೇಕೆಂಬ ಅರಿವು ಮೂಡಿದ್ದೇ ತಡ, ಲಿಂಗತ್ವ ಅಲ್ಪಸಂಖ್ಯಾತರಿಗೂ ಸರ್ಕಾರಿ ನೌಕರಿಯಲ್ಲಿ ಮೀಸಲು ನೀಡುವ ಬೇಡಿಕೆಯನ್ನು ಪರಿಗಣಿಸಬೇಕು ಎಂದು 2014ರಲ್ಲಿ ಸುಪ್ರೀಂ ಕೋರ್ಟ್ ಆದೇಶ ನೆರವಿಗೆ ಬಂತು. ಅದೇ ಸಮಯಕ್ಕೆ ವಿಧಾನಸಭೆಯಲ್ಲಿ ನಟಿ ತಾರಾ ಅನೂರಾಧ ಅವರ ವಾದವೂ ಮೋನಿಷಾ ಅವರಿಗೆ ಬೆಂಬಲ ನೀಡಿತು. ಹೈಕೋರ್ಟ್ ಆದೇಶಕ್ಕೆ ಮಣಿದ ರಾಜ್ಯ ಸರ್ಕಾರ, ಮೋನಿಷಾ ಅವರಿಗೆ ಗುತ್ತಿಗೆ ಆಧಾರದಲ್ಲಿ ನೌಕರಿ ನೀಡಿತು. ಪ್ರಸ್ತುತ ನೌಕರಿಯನ್ನು ಕಾಯಂಗೊಳಿಸಿಕೊಂಡ ಮೋನಿಷಾ ತಮ್ಮಂತಿರುವ ಇತರರಿಗೆ ಮಾದರಿಯಾಗಿದ್ದಾರೆ.



ಗಣೇಶನಿಂದ 'ಗೌರಿ'ಯವರೆಗೆ

'ತಾಯ್ತನ'ಕ್ಕೆ ಜೈವಿಕ ನೆಲೆಯೊಂದೇ ಕಾರಣವಲ್ಲ ಎಂಬುದನ್ನು ಸಾಬೀತುಪಡಿಸಿದವರು ಮುಂಬೈನ ಗೌರಿ ಸಾವಂತ್. ಗಣೇಶನಾಗಿ ಹುಟ್ಟಿದ ಗೌರಿಗೆ ತಾನು ಅವನಲ್ಲ ಅವಳು ಎಂಬುದು ಅರಿವಿಗೆ ಬಂದದ್ದು ಬಾಲ್ಯದಲ್ಲೇ. ಮಗನಾಗಿ ಹುಟ್ಟಿದ 'ಗೌರಿ'ಯನ್ನು ಹೆತ್ತಪ್ಪ ಒಪ್ಪಿಕೊಳ್ಳಲಿಲ್ಲ. ಕಿಸೆಯಲ್ಲಿ ಕೇವಲ 60 ರೂಪಾಯಿ ಇಟ್ಟುಕೊಂಡು 17ನೇ ವರ್ಷಕ್ಕೆ ಮನೆ ಬಿಟ್ಟ ಗೌರಿ ಸೇರಿದ್ದು ಮುಂಬೈ ಎಂಬ ಮಹಾನಗರಿಯನ್ನು. ಸೀರೆ ಉಡುವ ಕನಸು ನನಸು ಮಾಡಿಕೊಂಡು 'ಹಮ್ ಸಫರ್' ಟ್ರಸ್ಟ್‌ನಲ್ಲೇ ಕೆಲಸ ಮಾಡಿಕೊಂಡು ಮೊದಲ ಸಂಬಳವನ್ನೂ ಪಡೆದರು. ತಮ್ಮಂತೆ ಮನೆ ತೊರೆದು ಬರುವವರಿಗೆ ಸ್ಥೈರ್ಯ ತುಂಬಲಿಕ್ಕಾಗಿಯೇ 'ಸಖಿ ಚಾರ್ ಚೌಘಿ' ಟ್ರಸ್ಟ್ ಸ್ಥಾಪಿಸಿದರು. 'ಗೌರಿ'ಯಾದ ಮೇಲೆ ತಾಯ್ತನದ ತುಡಿತ ಮತ್ತಷ್ಟು ಹೆಚ್ಚಾಯಿತು. ಭಾವ ಹೆಣ್ಣಾದರೂ ದೇಹ ಗಂಡಾದ್ದರಿಂದ ಜೈವಿಕ ತಾಯ್ತನ ಸಾಧ್ಯವಿರಲಿಲ್ಲ. ಮಗು ದತ್ತು ಪಡೆಯಲು ಕಾನೂನಿನ ನಾನಾ ಸಂಕಷ್ಟ. ಸುದೀರ್ಘ ಹೋರಾಟದ ಬಳಿಕ ಗೆಲುವು ಪಡೆದ ಗೌರಿ ಈಗ 'ಗಾಯತ್ರಿ' ಎಂಬ ಮುದ್ದಾದ ಹೆಣ್ಣುಮಗುವಿನ ತಾಯಿ. ಗೌರಿಯ ಹೋರಾಟಕ್ಕೆ ಸರ್ಕಾರದಿಂದಲೂ ಮೆಚ್ಚುಗೆ. ಮಹಾರಾಷ್ಟ್ರ ಚುನಾವಣಾ ಆಯೋಗದ ರಾಯಭಾರಿಯಾಗುವ ಗೌರವ. ತಾಯಿ-ಮಗಳ ಬಾಂಧವ್ಯ ಸಾರುವ 'ವಿಕ್ಸ್' ಜಾಹೀರಾತಿನಲ್ಲೂ ಅವಕಾಶ. ಗೌರಿಯ ಜೀವನಗಾಥೆ ಆಧರಿಸಿ ಬರುತ್ತಿರುವ 'ತಾಲಿ' (ಚಪ್ಪಾಳೆ) ಬಯೋಪಿಕ್‌ನ ವೆಬ್‌ಸಿರೀಸ್‌ನಲ್ಲಿ ಮಾಜಿ ವಿಶ್ವಸುಂದರಿ ಸುಷ್ಮಿತಾ ಸೇನ್ 'ಗೌರಿ'ಯಾಗಿ ಕಿರುತೆರೆಗೆ ಬರುತ್ತಿದ್ದಾರೆ.



ಬಹುರೂಪಿ ಕಲ್ಕಿ

'ಬಾಲ್ಯದಲ್ಲಿ ತುಂಬಾ ನೋವು ಅನುಭವಿಸಿಬಿಟ್ಟೆ. ಆದರೆ, ಅಪ್ಪ-ಅಮ್ಮ ನನ್ನನ್ನು ನಾನಿರುವಂತೆಯೇ ಒಪ್ಪಿಕೊಂಡರು. ನನ್ನ ಸಮುದಾಯದವರನ್ನು ಅವರ ಹೆತ್ತವರು ಹೀಗೆ ಒಪ್ಪಿಕೊಂಡಿದ್ದರೆ ಇಂದು ಅವರು ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಭಿಕ್ಷೆ ಬೇಡುತ್ತಿರಲಿಲ್ಲ' ಎಂದು ಗದ್ಗದಿತವಾಗಿ ನುಡಿಯುತ್ತಾರೆ ಕಲ್ಕಿ ಸುಬ್ರಹ್ಮಣ್ಯ. ಲಿಂಗತ್ವದ ಬದಲಾವಣೆ ಭವಿಷ್ಯಕ್ಕೆ ಮಂಕಾಗಬಾರದು ಎಂಬ ಪ್ರಜ್ಞೆಯಲ್ಲೇ ಬೆಳೆದ ತಮಿಳುನಾಡಿನ ಕಲ್ಕಿ, ಉನ್ನತ ಶಿಕ್ಷಣ ಪಡೆದವರು. ಅಷ್ಟೇ ಅಲ್ಲ, ಉತ್ತಮ ಚಿತ್ರಕಲಾವಿದೆಯೂ ಆದರು. ಲಿಂಗತ್ವ ಅಲ್ಪಸಂಖ್ಯಾತರ ಪರ ಸಂಘಟಿತವಾಗಿ ಕೆಲಸ ಮಾಡುತ್ತಿರುವ ಕಲ್ಕಿ, ತಮಿಳು ಮತ್ತು ಇಂಗ್ಲಿಷಿನಲ್ಲಿ ಕವಿತೆಗಳನ್ನೂ ಬರೆದಿದ್ದಾರೆ. ಇಂಗ್ಲಿಷಿನಲ್ಲಿ ಐದು, ತಮಿಳಿನಲ್ಲಿ ಒಂದು ಕವನ ಸಂಕಲನವನ್ನು ಹೊರತಂದಿದ್ದಾರೆ. ಸಿನಿಮಾಗಳಲ್ಲಿ ತಮ್ಮ ಸಮುದಾಯದವರನ್ನು ತಮಾಷೆಯಾಗಿ ಚಿತ್ರೀಕರಿಸುವ ಬಗ್ಗೆ ಆಕ್ರೋಶ ವ್ಯಕ್ತಪಡಿಸುವ ಕಲ್ಕಿ, 'ನರ್ತಕಿ' ಎನ್ನುವ ಆಫ್‌ಬೀಟ್ ಸಿನಿಮಾದಲ್ಲಿ ನಾಯಕಿಯಾಗಿಯೂ ಕಾಣಿಸಿಕೊಂಡಿದ್ದಾರೆ. ಇದಕ್ಕಾಗಿ ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿ ಪಡೆದಿದ್ದಾರೆ. ಮದ್ರಾಸ್ ಐಐಟಿ, ಜಿಂದಾಲ್ ಗ್ಲೋಬಲ್ ಲಾ ಸ್ಕೂಲ್ ಸೇರಿದಂತೆ ಹಲವು ಪ್ರತಿಷ್ಠಿತ ಸಂಸ್ಥೆಗಳಲ್ಲಿ ಉಪನ್ಯಾಸಗಳನ್ನೂ ನೀಡಿದ್ದಾರೆ. 'ವಿ ಆರ್ ನಾಟ್ ಅದರ್ಸ್' ಕೃತಿ ಈಚೆಗಷ್ಟೇ ಬಿಡುಗಡೆಯಾಗಿದೆ. 'ಸಹೋದರಿ' ಫೌಂಡೇಷನ್ ಸ್ಥಾಪಿಸಿರುವ ಕಲ್ಕಿ ಅದರ ಮೂಲಕ ತಮ್ಮ ಸಮುದಾಯದವರ ಉನ್ನತ ಶಿಕ್ಷಣಕ್ಕೆ ನೆರವಾಗುತ್ತಿದ್ದಾರೆ.

ಗಾಯಗೊಂಡಿದೆ ಇರುಳು, ಮೂಕವಾಗಿದೆ ಕೊರಳು

ರಘುನಾಥ ಚ.ಹ.

ಒಳನೋಟ

ಮೂರು ವರ್ಷಗಳ ಕುದಿಮೌನದ ನಂತರ ಮಗಳೊಂದಿಗೆ ಮಾತನಾಡುವ ಅಪ್ಪ ಹೇಳುವ ಮಾತು – 'ಊಟ ಮಾಡು'. ಅಪ್ಪ ಮುಂದಿಟ್ಟ ತಟ್ಟೆಯಿಂದ ತುತ್ತು ಬಾಯಿಗಿಡಲು ಮಗಳಿಗೆ ಧೈರ್ಯವಿಲ್ಲ. ಅನ್ನದಲ್ಲಿ ಅಪ್ಪ ವಿಷ ಕಲೆಸಿರಬಹುದೆ?

ಈ ರಾತ್ರಿ ಮಗಳನ್ನು ಮುಗಿಸಿಯೇ ಮುಗಿಸುತ್ತೇನೆ ಎಂದು ಅಪ್ಪ ತನ್ನ ಪಂಚೆಯನ್ನು ದಾಟಿ ಆಣೆ ಮಾಡಿ ಊರಿಗೆ ಮಾತು ಕೊಟ್ಟು ಬಂದಿರುವುದು ಮಗಳಿಗೆ ಗೊತ್ತಿದೆ. ಇದಕ್ಕೆ ಮೊದಲು ಕೂಡ ಮಗಳು ಸಾಯಲೆಂದು ವಿಷದ ಬಾಟಲಿ ಹಾಗೂ ಹಗ್ಗವನ್ನು ಅಪ್ಪ ಎದುರಿಗಿಟ್ಟುಹೋದುದು ಅವಳಿಗೆ ನೆನಪಿದೆ. ಈಗ ಊಟದ ತಟ್ಟೆ ಎದುರಿಗಿದೆ.


ಅಪ್ಪ ಮತ್ತೆ ಹೇಳುತ್ತಾನೆ: 'ಅಳಬೇಡ. ತಿನ್ನೋವಾಗ ಕಣ್ಣಲ್ಲಿ ನೀರ್ ಸುರಿಸಬಾರ್ದು... ಈ ಮನೇಲಿ ನಿನಗೆ ಇದೇ ಕೊನೆ ಊಟ. ತಿನ್ನು'.

ಮಗಳು ಊಟ ಮಾಡುತ್ತಾಳೆ; ಅನ್ನದೊಂದಿಗೆ ಕಣ್ಣೀರನ್ನೂ ಬೆರೆಸಿಕೊಂಡು.

ಊಟ ಮುಗಿಯುವ ವೇಳೆಗೆ ಅಪ್ಪ ಮತ್ತು ಮಗಳು ಸತ್ತು ಮತ್ತೆ ಹುಟ್ಟುತ್ತಾರೆ. ಅಪ್ಪನ ಹೆಸರು ಪಳನಿ. ಮಗಳು ಭಾಗ್ಯ.

ಕನಕರಾಜ್ ಆರನಕಟ್ಟೆ ಕನ್ನಡಕ್ಕೆ ತಂದಿರುವ 'ಭಾಗ್ಯಳ ತಂದೆ', 2022ರ 'ಕುವೆಂಪು ರಾಷ್ಟ್ರೀಯ ಪ್ರಶಸ್ತಿ' ಪಡೆದ ತಮಿಳು ಲೇಖಕ ಇಮೈಯಮ್ ಅವರ ಕಥೆ.

ಕಥೆಯಲ್ಲಿರುವ ಮುಖ್ಯ ಪಾತ್ರಗಳು ಐದು.



ಪು: 52
₹65

ಭಾಗ್ಯಳ ತಂದೆ
ತಮಿಳು ಮೂಲ: ಇಮೈಯಮ್
ಕನ್ನಡಕ್ಕೆ: ಕನಕರಾಜ್ ಆರನಕಟ್ಟೆ
ಪ್ರ: ಅಹರ್ನಿಶಿ, ಶಿವಮೊಗ್ಗ
ಸಂ: 9449174662

ಪಳನಿ-ಸಾಮಿಯಮ್ಮಾ ದಂಪತಿ. ಮಕ್ಕಳಾದ ಭಾಗ್ಯ ಹಾಗೂ ಸೆಲ್ವರಾಣಿ. ಪಳನಿಯ ತಾಯಿ ತುಳಸಿ. ಸೆಲ್ವರಾಣಿಗೆ ಕಾಲು ಐಬು. ಊರಿಗೆ ಜಾತಿಯ ಐಬು. ಪ್ರೇಮವನ್ನು ಐಬೆನ್ನಬಹುದೆ?

ಕೇರಿಯ ಹುಡುಗನನ್ನು ಭಾಗ್ಯ ಪ್ರೇಮಿಸುವುದರೊಂದಿಗೆ ಊರಿನಲ್ಲಿ ಉರಿ ಶುರುವಾಗಿದೆ. ಈ ಪ್ರೇಮಪ್ರಕರಣ, ಗಂಡಸರಿಗೆ ಪಂಚೆ ಉಟ್ಟುಕೊಂಡು ಓಡಾಡಲು ಅವಮಾನ ಎನ್ನಿಸಿದೆ. ಹೆಂಗಸರ ಸೆರಗಿನ ಪಾವಿತ್ರ್ಯದ ಬಗ್ಗೆ ಶಂಕೆ ಉಂಟಾಗಿದೆ. ಊರಿಗೆ ಮರ್ಯಾದೆ ಮರಳಬೇಕೆಂದರೆ, ಭಾಗ್ಯ ಸಾಯಬೇಕು. 'ಮಗಳನ್ನು ಸಾಯಿಸಿ ಊರಿನ ಮರ್ಯಾದೆ ಉಳಿಸು. ಇಲ್ಲವೇ, ಕುಟುಂಬದೊಂದಿಗೆ ಬಲಿಯಾಗು'. ಪಳನಿ ಮೊದಲ ಆಯ್ಕೆಯನ್ನೇ ಒಪ್ಪಿಕೊಳ್ಳುತ್ತಾನೆ. ಒಪ್ಪಿಕೊಳ್ಳದೆ ಹೋದರೆ, ಅಕ್ಕಪಕ್ಕದ ಊರುಗಳಲ್ಲಿ ಏನೇನಾಗಿದೆ ಎನ್ನುವ ಉದಾಹರಣೆಗಳು ಅವನಿಗೆ ನೆನಪಿನಲ್ಲಿವೆ.

ಮಗಳನ್ನು ಕೊಲ್ಲುವುದಾಗಿ ಪಂಚಾಯಿತಿಗೆ ಮಾತು ಕೊಟ್ಟು ಬಂದ ಆ ರಾತ್ರಿ, ಪಳನಿಯೊಳಗಿನ ಅಪ್ಪ ಹಾಗೂ ಭಾಗ್ಯಳೊಳಗಿನ ಮಗಳು ಜಾಗೃತಗೊಳ್ಳುತ್ತಾರೆ. ಆದರೆ, ಊರು ಬದಲಾಗುವುದಿಲ್ಲವೆನ್ನುವುದು ಎಲ್ಲರಿಗೂ ಗೊತ್ತು.

ಯಾವ ಪಂಚೆಯ ಮರ್ಯಾದೆಯ ಮೇಲೆ ಪಳನಿ ಆಣೆ ಮಾಡಿದ್ದನೋ, ಅದೇ ಪಂಚೆಯನ್ನು ಮಗಳಿಗೆ ಸುತ್ತಿ, 'ಎಲ್ಲೋ ಬದುಕಿಕೋ ಹೋಗು' ಎಂದು ಕಳಿಸುತ್ತಾನೆ.

ಇದು ಕಥೆ. ಒಂದು ಸುದೀರ್ಘ ಇರುಳಿನ ಕಥೆ. ಕೊನೆಗಾದರೂ ಬೆಳಕು ಹರಿಯುತ್ತದಾ? ಹೌದೆನ್ನುವ ಧೈರ್ಯ ಕಥೆಯನ್ನು ಓದುವ ಯಾರಿಗೂ ಬರುವುದಿಲ್ಲ.

'ಭಾಗ್ಯಳ ತಂದೆ' ಕಥೆ ಏನನ್ನೂ ಹೇಳುವುದಿಲ್ಲ, ಕಾಣಿಸುತ್ತದೆ. ಇದು ಮಾನವೀಯತೆಗೆ ವಿಷವುಣ್ಣಿಸುವ ಕಥೆ. ಹೆಣ್ಣನ್ನು ಗಂಡಿನ ಪಂಚೆಯ ಬಿಳುಪೆಂದು ಭಾವಿಸಿದ ಪುರುಷ ಅಹಂಕಾರ, ಜಾತಿಯ ಠೇಂಕಾರವನ್ನು ಕಥೆ ಕಾಣಿಸುತ್ತದೆ. ನಾವು ಈಗಾಗಲೇ ಹಲವು ಬಾರಿ ಕೇಳಿರುವ ಕಥೆಯನ್ನೇ ಇಮೈಯಮ್‌ರ ಮೂಲಕ ಮತ್ತೆ ಓದುತ್ತಿದ್ದರೂ, ಇದು ಮುಗಿಯದ ಕಥೆ ಎನ್ನಿಸುತ್ತದೆ. ಊರಿನ ಕ್ರೌರ್ಯದ ಕಥೆಯಷ್ಟೇ ಆಗದೆ, ತಂದೆ-ಮಗಳ ಕಳ್ಳುಬಳ್ಳಿಯ ಕಥೆಯಾಗಿರುವುದು, ಕುಟುಂಬದ ಕಥೆಯಾಗಿರುವುದು 'ಭಾಗ್ಯಳ ತಂದೆ'ಯನ್ನು ಹೆಚ್ಚು ಆಪ್ತವಾಗಿಸಿದೆ.

ಕಥೆಯಲ್ಲಿನ ನತದೃಷ್ಟ ಕುಟುಂಬದ ಪ್ರತಿಯೊಬ್ಬರೂ ಪರಸ್ಪರ ಶಾಪ ಹಾಕಿಕೊಳ್ಳುತ್ತಾರೆ. ಅಸಹಾಯಕತೆಯಿಂದ ಶಪಿಸಿಕೊಳ್ಳುತ್ತಲೇ ಪ್ರೇಮವನ್ನು ಅಭಿವ್ಯಕ್ತಿಸುತ್ತಾರೆ. ಮನೆಯವರ ಬದುಕಿಗಾಗಿ ತಮ್ಮನ್ನು ತಾವೇ ಕೊಂದುಕೊಳ್ಳಲು ಬಯಸುತ್ತಾರೆ.

'ಭಾಗ್ಯಳ ತಂದೆ' ಏನನ್ನೂ ಉಪದೇಶಿಸುವುದಿಲ್ಲ. ಒಂದೂರು, ನಮ್ಮದೇ ಆಗಿರಬಹುದಾದ ಊರು, ಹೀಗಿದೆ ನೋಡಿ ಎಂದು ಹೇಳುತ್ತಾ, ಆ ಊರಿನಲ್ಲಿ ನಮ್ಮನ್ನು ಕೈಹಿಡಿದು ನಡೆಸುತ್ತದೆ. ಮಗಳ ಮುಂದೆ ಅಪ್ಪ ಅನ್ನದ ತಣಿಗೆಯಿಟ್ಟ ಮನೆಗೆ ನಮ್ಮನ್ನು ಕರೆದೊಯ್ಯುತ್ತದೆ. ಭಾಗ್ಯಳ ಕುಟುಂಬದ ಕಣ್ಣೀರು ನಮ್ಮ ಕಣ್ಣುಗಳನ್ನೂ ಹನಿಗೂಡಿಸುತ್ತದೆ.

ಆ ಗಾಯಗೊಂಡ ಇರುಳಿನಲ್ಲಿ ಭಾಗ್ಯ ಮತ್ತು ಪಳನಿಯೊಂದಿಗೆ ನಾವೂ ತಡವರಿಸಿ ನಡೆಯದೆ, ಕಳೆದುಹೋಗದೆ ವಿಧಿಯಿಲ್ಲ.


ಮೊದಲ ಓದು

ವೇದ ಕಲಿಕೆಗೊಂದು ದೀವಿಗೆ

ವೇದ, ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗ. ಧಾರ್ಮಿಕ ಆಚರಣೆಗಳ ಆಧಾರವಾಗಿರುವ ಈ ವೇದಗಳ ಕಲಿಕೆಗೆ ಶ್ರೀ ಶಂಕರ ವೇದಪಾಠಶಾಲೆ ಹೊರತಂದಿರುವ ದೀವಿಗೆಯೇ 'ವೇದ ದೀಪಿಕಾ'.

ವೇದಾಧ್ಯಯನ, ನಿತ್ಯದ ಧಾರ್ಮಿಕ ಆಚರಣೆ, ತರ್ಪಣಕ್ರಮ, ಶ್ಲೋಕ, ಜಗದ್ಗುರು ಬಿರುದಾವಳಿ, ಸೂಕ್ತಗಳ ಬಗ್ಗೆ ಹಲವು ಕೃತಿಗಳು, ಕಿರುಹೊತ್ತಿಗೆಗಳು ಈಗಾಗಲೇ ಲಭ್ಯವಿವೆ. ಆದರೆ ಈ ಹೊತ್ತಿಗೆ ನಾಲ್ಕು ವೇದಗಳ ವಿಸ್ತೃತ ಪರಿಚಯ, ವೇದೋಚ್ಚಾರಣೆಯ ಮಹತ್ವ, ಸಂಧ್ಯಾವಂದನೆಯ ಕ್ರಮ ಹಾಗೂ ಅದರ ಹಿಂದಿರುವ ಗೂಢಾರ್ಥದ ಪರಿಚಯವನ್ನು ಚಿತ್ರಗಳ ಸಹಿತ ನೀಡಿದೆ. ಜೊತೆಯಲ್ಲಿ ನಮಸ್ಕಾರ ಕ್ರಿಯೆ, ತರ್ಪಣದ ಹಿನ್ನೆಲೆ ಹಾಗೂ ವಿಧಿ-ವಿಧಾನ, ಪ್ರಾತಃಸ್ಮರಣೆ, ತುಳಸೀಪೂಜೆ, ನಿತ್ಯದೇವತಾರ್ಚನೆ, 26 ಸೂಕ್ತಗಳು, ಉಪನಿಷತ್ತುಗಳು, ಭೋಜನಾ ವಿಧಿ, ಉದಕಶಾಂತಿ, ಸಹಸ್ರನಾಮಾವಳಿ ಹೀಗೆ ಎಲ್ಲ ವಿಷಯಗಳನ್ನು ಒಳಗೊಂಡಿದೆ.


ಹಿಂದಿನ ಕಾಲದಲ್ಲಿ ಗುರುಕುಲಗಳಲ್ಲಿ ಬಾಯಿಯಿಂದ ಬಾಯಿಗೆ ಎಂಬಂತೆ ಅಧ್ಯಯನ-ಅಧ್ಯಾಪನಗಳು ನಡೆಯುತ್ತಿದ್ದವು. ಇಂದು ಇದು ಪುಸ್ತಕ ರೂಪ ಪಡೆದಿದ್ದು, ಆನ್‌ಲೈನ್ ವೇದಿಕೆಗಳ ಮೂಲಕವೂ ಈ ಅಧ್ಯಯನಗಳು ಮುಂದುವರಿದಿವೆ. ಇಂತಹ ಸಂದರ್ಭದಲ್ಲಿ ವೇದಾಧ್ಯಯನ ಆಸಕ್ತರು, ವೇದಪಾಠ ಕಲಿಯುತ್ತಿರುವ ಮಕ್ಕಳು, ಆಸ್ತಿಕರಿಗೆ ಪೂರಕವಾಗಿ ಈ ಕೃತಿಯನ್ನು ರೂಪಿಸಲಾಗಿದೆ ಎಂದು ಪ್ರಕಾಶಕರು ಇದರ ಮಹತ್ವವನ್ನು ಸಾರಿದ್ದಾರೆ.



ಪು: 592
₹500

ವೇದ ದೀಪಿಕಾ
ಪ್ರ: ಶ್ರೀ ಶಂಕರ ವೇದಪಾಠಶಾಲೆ, ಬೆಂಗಳೂರು
ಸಂ: 7019638813

ಮಾಧ್ಯಮ ತಂತ್ರಜ್ಞಾನಕ್ಕೆ ಪ್ರವೇಶಿಕೆ




ಪು: 234
₹250

ಮಾಧ್ಯಮ ತಂತ್ರಜ್ಞಾನ
ಲೇ: ಸಿಬಂತಿ ಪದ್ಮನಾಭ ಕೆ.ವಿ., ಶ್ರೀಶ ಎಂ.ಪುಣಚ
ಪ್ರ: ಅಂಕುರ್ ಮೀಡಿಯಾ ಪಬ್ಲಿಕೇಶನ್ಸ್
ಸಂ: 9449525854

ತಂತ್ರಜ್ಞಾನ; ಇದು ನಿಂತ ನೀರಲ್ಲ. ಕ್ಷಣಕ್ಷಣಕ್ಕೂ ಬದಲಾಗುವ, ನವೀನವಾಗುತ್ತ ಸಾಗುವ ಲೋಕವದು. ಮಾಧ್ಯಮ ಕ್ಷೇತ್ರವೂ ಈ ಓಟದಲ್ಲಿ ತನ್ನನ್ನು ತಾನು ಈ ವೇಗಕ್ಕೆ ಒಗ್ಗಿಸಿಕೊಂಡು ಸಾಗುತ್ತಿದೆ. ಹೀಗಾಗಿಯೇ ಇಂದು ಡೆಸ್ಕ್‌ಟಾಪ್ ಜಾಗಕ್ಕೆ ಟ್ಯಾಬ್‌ಗಳು ಬಂದಿವೆ, ಕ್ಯಾಮೆರಾಮೆನ್ ಜಾಗಕ್ಕೆ 5ಜಿ ವೇಗದ ಸ್ಮಾರ್ಟ್‌ಫೋನ್‌ಗಳು ಲಗ್ಗೆ ಇಟ್ಟು ಲೈವ್ ನೀಡುತ್ತಿವೆ! ಇಂತಹ ಮಾಧ್ಯಮ ತಂತ್ರಜ್ಞಾನಗಳನ್ನು ಪರಿಚಯಿಸುವುದೇ ಈ ಕೃತಿಯ ಉದ್ದೇಶ.

ಪ್ರಸಕ್ತ ಸಂದರ್ಭದಲ್ಲಿ ಉತ್ತಮ ಮಾತುಗಾರಿಕೆ, ಬರವಣಿಗೆ, ಅನುವಾದದ ಸಾಮರ್ಥ್ಯದ ಜೊತೆಗೆ ತಂತ್ರಜ್ಞಾನದ ಅರಿವೂ ಮಾಧ್ಯಮ ಕ್ಷೇತ್ರಕ್ಕೆ ಕಾಲಿಡಲು ಇರುವ ಅರ್ಹತೆಗಳಲ್ಲಿ ಸೇರ್ಪಡೆಯಾಗಿದೆ. ಹೀಗಾಗಿ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ, ಪತ್ರಕರ್ತರಿಗೆ ಇದೊಂದು ಕೈಪಿಡಿ ಅಥವಾ ಪಠ್ಯಪುಸ್ತಕವೆಂದೇ ಹೇಳಬಹುದು. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಗೆ ಪೂರಕವಾಗಿ ಇಲ್ಲಿರುವ ವಿಷಯಗಳನ್ನು ಆಯ್ದುಕೊಳ್ಳಲಾಗಿದೆ. ಈ ಕ್ಷೇತ್ರದಲ್ಲೇ ಪಳಗಿರುವ ಲೇಖಕರು ತಮ್ಮ ಅನುಭವ ಮತ್ತು ಅರಿವಿನ ಮೂಸೆಯಿಂದ ಈ ಕೃತಿ ಸಿದ್ಧಪಡಿಸಿದ್ದಾರೆ. ಆಂಗ್ಲ ಭಾಷೆಯಲ್ಲಿ ಪ್ರಕಟವಾಗಿದ್ದ ಈ ಕೃತಿಯನ್ನು ಇದೀಗ ಕನ್ನಡಕ್ಕೆ ಅನುವಾದಿಸಲಾಗಿದೆ.

ಕಂಪ್ಯೂಟರ್ ಎಂದರೇನು? ಎನ್ನುವ ವಿಷಯದೊಂದಿಗೇ ಈ ಕೃತಿಯನ್ನು ಆರಂಭಿಸಲಾಗಿದ್ದು, ನಂತರ ಈ ಕ್ಷೇತ್ರದಲ್ಲಿನ ಹಲವು ನೂತನ ತಂತ್ರಜ್ಞಾನಗಳ ಮಜಲುಗಳನ್ನು ಪರಿಚಯಿಸಿ, ವಿವರಿಸಲಾಗಿದೆ. ತಂತ್ರಜ್ಞಾನವನ್ನು ಓದಿ ಅರಿಯುವುದಕ್ಕಿಂತಲೂ, ಪ್ರಯೋಗಕ್ಕೆ ಒಡ್ಡಿ ಅನುಭವಿಸಿ ಕಲಿಯುವುದು ಮುಖ್ಯ. ಶಿಕ್ಷಣ ನೀತಿಯ ಅನುಸಾರ ಹೊಸ ಪಠ್ಯಕ್ರಮದಲ್ಲಿ ಬದಲಾವಣೆ ಮಾಡಿದರೂ, ಶಿಕ್ಷಣ ಸಂಸ್ಥೆಗಳು, ಸರ್ಕಾರಿ ಕಾಲೇಜುಗಳು ವಿದ್ಯಾರ್ಥಿಗಳ ಕೈಗಳಿಗೆ ಈ ತಂತ್ರಜ್ಞಾನಗಳನ್ನು ನೀಡದೆ ಯಾವ ಪ್ರಯೋಜನವೂ ಇಲ್ಲ ಎಂಬುವುದನ್ನೂ ಸೂಕ್ಷ್ಮವಾಗಿ ಹೇಳುವಂತಿದೆ ಕೃತಿ.



ಪು: 184
₹180

ಹೊನ್ನ ರಾಗೋಲ
ಲೇ: ಡಾ.ಶ್ರೀಶೈಲ ನಾಗರಾಳ
ಪ್ರ: ಸಪ್ನ ಬುಕ್‌ಹೌಸ್ ಬೆಂಗಳೂರು
ಸಂ: 080 40114455

ಜಾನಪದ ಜಗತ್ತಿನ ಸಿರಿವಂತ ನೋಟ

ಜಾನಪದದಲ್ಲಿ ಏನಿದೆ? ಕಲೆ, ಸಾಹಿತ್ಯ, ನುಡಿ... ಇಷ್ಟೇತಾನೆ ಎಂದು ಯೋಚಿಸುವವರಿಗೆ ಉತ್ತರ ರೂಪದಲ್ಲಿದೆ 'ಹೊನ್ನ ರಾಗೋಲ'. ಇದರಲ್ಲಿ ವಿಶ್ವ ವ್ಯಾಪಕವಾದ ಜ್ಞಾನ ಸಂಪತ್ತು ಇದೆ ಎಂಬುದನ್ನು ಮೊದಲ ಲೇಖನದಲ್ಲೇ ಲೇಖಕರು ಹೇಳಿದ್ದಾರೆ. ಉಳಿದ ಲೇಖನಗಳಲ್ಲಿ ಅದನ್ನು ಸಾಕ್ಷೀಕರಿಸಿ ನಿರೂಪಿಸಿದ್ದಾರೆ. ಲೋಕದೃಷ್ಟಿಯ ಬಗೆಗಿನ ಚರ್ಚೆಯಲ್ಲಿ ಭೂಮಿಯ ಸೃಷ್ಟಿ, ಜೀವಸಂಕುಲದ ಸೃಷ್ಟಿ, ಸಂಸ್ಕೃತಿ, ವಿಜ್ಞಾನ, ವಿಕಾಸ ಎಲ್ಲವನ್ನೂ ಕಥೆ, ಹಾಡು, ನುಡಿಗಟ್ಟುಗಳ ಮೂಲಕ ಕಟ್ಟಿಕೊಟ್ಟವರೇ ಜನಪದರು. ಹಾಗಾಗಿ ಇಲ್ಲಿನ ಕಲಾತ್ಮಕ ಅಭಿವ್ಯಕ್ತಿಗಳು ಲೋಕದೃಷ್ಟಿಯ ವಾಹಕಗಳು ಎಂದು ಅಭಿಪ್ರಾಯಪಟ್ಟಿದ್ದಾರೆ ಲೇಖಕರು.

'ಸಂಸ್ಕೃತಿ'ಯ ವ್ಯಾಖ್ಯಾನವನ್ನು ಜಾನಪದದ ಚೌಕಟ್ಟಿಗೆ ತರುವಾಗ ವಿಸ್ತಾರವಾದ ವಿವರಣೆಯನ್ನೇ ಕೊಟ್ಟಿದ್ದಾರೆ. ಕೊನೆಯಲ್ಲಿ ಜನಪದರದ್ದು ಜೀವಪೋಷಕವಾದ ಶ್ರಮಸಂಸ್ಕೃತಿಯೇ ಪ್ರಧಾನವಾದದ್ದು ಎಂಬುದನ್ನು ಎತ್ತಿ ತೋರಿದ್ದಾರೆ. ಜನಪದರಲ್ಲೂ ಇದ್ದ ತಂತ್ರಜ್ಞಾನವನ್ನು ಆಧುನಿಕ ಯಂತ್ರಗಳು ಹೇಗೆ ನಿಧಾನಕ್ಕೆ ಮೂಲೆಗುಂಪಾಗಿಸಿವೆ ಎಂಬುದರ ಚರ್ಚೆ ಇದೆ. ಭೂತೇರು, ಶಕ್ತಿದೇವತೆಗಳ ಆರಾಧನೆ, ಜನಪದ ಶರಣರು ಇತ್ಯಾದಿ ಹೊಸ ನೋಟಗಳನ್ನು ಈ ಕೃತಿಯಲ್ಲಿ ಕಾಣಬಹುದು.

ಬಾಪು ಸಂಕೀರ್ಣ ವ್ಯಕ್ತಿತ್ವದ ಅನಾವರಣ

ಮೋಹನ್ ಕುಮಾರ್ ಮಿರ್ಲೆ

ಅವಲೋಕನ

ನಟರಾಜ್ ಹುಳಿಯಾರ್ ಅವರು ಸಂಪಾದಿಸಿರುವ 'ಎಲ್ಲರ ಗಾಂಧೀಜಿ' ಇದುವರೆಗೆ ಕನ್ನಡದಲ್ಲಿ ಬಂದಿರುವ ಗಾಂಧೀ ಕುರಿತ ಇತರೆ ಕೃತಿಗಳಿಗಿಂತ ಭಿನ್ನವಾಗಿದ್ದು, ಗಾಂಧೀಜಿಯನ್ನು ಅವರದೇ ಬರವಣಿಗೆಗಳ ಹಲವು ಭಿನ್ನ ಕೋನಗಳಿಂದ ಕಟ್ಟಿಕೊಡುವ ಪ್ರಯತ್ನವಾಗಿದೆ. ಡಿ.ಎಸ್. ನಾಗಭೂಷಣ ಅವರ 'ಗಾಂಧಿ ಕಥನ'ದ ನಂತರ ಬಂದ ಗಾಂಧೀ ಕುರಿತ ಮಹತ್ವದ ಕೃತಿ ಇದಾಗಿದೆ. ಗಾಂಧೀ ದ್ವೇಷದ ಹೊಸ ಚಹರೆಗಳು ಕಾಣುವ ಆತಂಕಕಾರಿ ಬೆಳವಣಿಗೆಯ ಈ ಹೊತ್ತಿನಲ್ಲಿ ಗಾಂಧೀಜಿ ಬಗೆಗಿನ ಹಲವು ಪೂರ್ವಗ್ರಹಗಳಿಗೆ ಉತ್ತರವಾಗಿಯೂ ಈ ಕೃತಿ ಕಾಣುತ್ತದೆ. ಗಾಂಧೀಜಿ ಇಲ್ಲಿ ಅಸ್ಪೃಶ್ಯತೆಯ ವಿರುದ್ಧ ನಿರಂತರ ಹೋರಾಟ ನಡೆಸಿದ ಜಾತ್ಯತೀತ ನಾಯಕನಾಗಿ, ಅಪ್ಪಟ ಸ್ತ್ರೀವಾದಿಯಾಗಿ, ಧಾರ್ಮಿಕ ಸಾಮರಸ್ಯದ ಪ್ರತಿಪಾದಕನಾಗಿ, ಶಿಕ್ಷಣ, ಉದ್ಯೋಗ, ಆರೋಗ್ಯ ಮುಂತಾದ ಹಲವು ಭಿನ್ನ ಕ್ಷೇತ್ರಗಳಲ್ಲಿನ ಪ್ರಯೋಗಗಳಲ್ಲಿ ತೊಡಗಿದ ಸಂಶೋಧಕನಾಗಿ, ಸರಳ ಜೀವನದ ಪ್ರತಿಪಾದಕನಾಗಿ, ಬದುಕನ್ನು ಸಮಗ್ರ ದೃಷ್ಟಿಕೋನದಿಂದ ಧನಾತ್ಮಕವಾಗಿ ನೋಡುವ ಪ್ರಯೋಗಶೀಲನಾಗಿ ವಿಶಿಷ್ಟ ವ್ಯಕ್ತಿತ್ವದ ಸಂತನಾಗಿ ಓದುಗರ ಎದುರು ನಿಲ್ಲುತ್ತಾರೆ.

ಅಹಿಂಸೆಯ ಪರಮ ಪ್ರತಿಪಾದಕ ಗಾಂಧೀಜಿ ಎಂತಹ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಸತ್ಯದ ಹಾದಿಯನ್ನೇ ಆರಿಸಿಕೊಳ್ಳುವ ಬಗೆ ವಿಸ್ಮಯಕಾರಿಯಾಗಿದ್ದು, ಈ ಕೃತಿಯಲ್ಲಿ ಅಂತಹ ಹಲವಾರು ಪ್ರಸಂಗಗಳು ಸ್ಥಾನ ಪಡೆದಿವೆ. ಹಾಗಂತ ಗಾಂಧಿ ಅವರ ಆರಾಧನೆ ಈ ಕೃತಿಯ ಉದ್ದೇಶವಲ್ಲ. ಬದಲಿಗೆ ಗಾಂಧಿ ಕುರಿತ ಚಾಲ್ತಿಯಲ್ಲಿರುವ ಅನೇಕ ವಾದ ವಿವಾದಗಳನ್ನು ವಸ್ತುನಿಷ್ಠವಾಗಿ ಓದುಗರ ಮುಂದೆ ಇಡಲಾಗಿದೆ. ಗಾಂಧೀಜಿ ತಮ್ಮ ಜೀವಿತ ಕಾಲದಲ್ಲಿ ಎದುರಾದ ಹಲವು ಅಪವಾದಗಳಿಗೆ ಗೊಂದಲಗಳಿಲ್ಲದ ಉತ್ತರಗಳನ್ನು ನೀಡಿದ್ದು, ಅಂತಹ ವಿವರಗಳನ್ನೆಲ್ಲ ಸಂಪಾದಕರು ಹಲವು ಮೂಲಗಳಿಂದ ಸಂಗ್ರಹಿಸಿ, ಸೂಕ್ತ ಸಂಯೋಜನೆಯೊಂದಿಗೆ ಒಂದೆಡೆ ಕ್ರೋಢೀಕರಿಸಿ ಕೊಟ್ಟಿರುವುದು ಈ ಕೃತಿಯ ವೈಶಿಷ್ಟ್ಯ.


ಹಿಂದಿ, ಇಂಗ್ಲಿಷ್, ಗುಜರಾತಿ ಭಾಷೆಗಳಲ್ಲಿರುವ ಗಾಂಧೀಜಿಯ ಮಾತು ಮತ್ತು ಬರಹಗಳು ಈ ಕೃತಿಯ ಮೂಲಕ ಕನ್ನಡಿಗರಿಗೆ ಒಂದೆಡೆ ದೊರೆಯುವಂತಾಗಿದೆ. ಇಲ್ಲಿನ ಪ್ರತೀ ಅಧ್ಯಾಯ ಸಂಕ್ಷಿಪ್ತವಾಗಿದ್ದು, ಬಿಡಿಬಿಡಿಯಾಗಿ ಯಾವ ಭಾಗದಿಂದಲಾದರೂ ಓದನ್ನು ಆರಂಭಿಸಬಹುದಾಗಿದೆ.

'ಗಾಂಧಿ' ಕೇವಲ ಒಂದು ವಿಚಾರವಷ್ಟೇ ಅಲ್ಲ ಅಥವಾ ಹೊರಗಿನ ಚಿಂತನೆಯೂ ಅಲ್ಲ. ಅದು ಎಲ್ಲರ ಒಳಗೂ ಸುಪ್ತವಾಗಿರುವ ಮಾನವೀಯ ಮಿಡಿತ. ಇಂತಹ ಗಾಂಧಿಯನ್ನು ಅನಾವರಣ ಮಾಡಿಕೊಳ್ಳಬೇಕಾದುದು ಈ ಹೊತ್ತಿನ ಅಗತ್ಯ ಮತ್ತು ಅನಿವಾರ್ಯ ಆಗಿದೆ. ಈ ಕೃತಿ, ಗಾಂಧಿಯನ್ನು ಕುರಿತ ಈವರೆಗಿನ ಕೃತಿಗಳ ಮರು ಪ್ರಸ್ತುತಿ ಆಗದೆ, ಗಾಂಧಿಯನ್ನು ಈ ಕಾಲಕ್ಕೆ ಹೇಗೆ ಕೊಡಬೇಕು ಹಾಗೆ ಕೊಡುವ ಒಂದು ಪ್ರಯತ್ನವಾಗಿದೆ. ಇಲ್ಲಿ ಸ್ಥಾನ ಪಡೆದಿರುವ ಗಾಂಧೀ ಚಿಂತನೆಗಳು, ಪ್ರಯೋಗಗಳು, ನಿಲುವುಗಳು, ಕಾರ್ಯಕ್ರಮಗಳು ಇಂದಿಗೂ ಪ್ರಸ್ತುತವಾದುವು.

ಗಾಂಧಿ ಸೌಮ್ಯವಾಗಿಯೇ ತೋರುವ 'ನಿರ್ಭಯತೆ', ಏಕಾಂಗಿ ಬುದ್ಧಿಜೀವಿಯಂತೆ ಇಡೀ ಸಮುದಾಯವನ್ನು ಮುನ್ನಡೆಸುವ ರೀತಿ ಮತ್ತು ಅವರು ತೆಗೆದುಕೊಳ್ಳುತ್ತಿದ್ದ ದಿಟ್ಟ ನಿಲುವು ಕೃತಿಯ ಉದ್ದಕ್ಕೂ ತಿಳಿಯುತ್ತಾ ಹೋಗುತ್ತವೆ. ಇಲ್ಲಿ ದಾಖಲಾಗಿರುವ ಗಾಂಧೀಜಿ ಮತ್ತು ಕಸ್ತೂರಬಾ ಅವರ ನಡುವಿನ ಸಂಬಂಧದ ಚಿತ್ರಣವು ಗಂಡು ಹೆಣ್ಣಿನ ಸಂಬಂಧದ ಅಮೂರ್ತ ಹಾಗೂ ಸಂಕೀರ್ಣ ನೆಲೆಗಳನ್ನು ಘನವಾಗಿ ಕಟ್ಟಿಕೊಡುತ್ತದೆ. ಹಾಗೆಯೇ ಪುರುಷ ಪ್ರಧಾನ ಸಮಾಜ ಗಂಡಿಗೆ ಒದಗಿಸಿಕೊಡುವ ಸವಲತ್ತುಗಳನ್ನು ಈ ಕೃತಿ ವ್ಯಂಗ್ಯದಲ್ಲಿ ಧ್ವನಿಸುತ್ತದೆ.

'ನಮ್ಮ ಹಿಂದೆ ಒಂದು ದೊಡ್ಡ ಸಮೂಹ ಇಲ್ಲದಿದ್ದಾಗಲೂ, ನಮಗೆ ಶಸ್ತ್ರಾಸ್ತ್ರಗಳ ಬಲವಿಲ್ಲದಿದ್ದಾಗಲೂ ಪ್ರತಿಯೊಬ್ಬರ ಅಂತರಂಗದಲ್ಲೂ ವ್ಯವಸ್ಥೆಯನ್ನು ಎದುರಿಸುವ ಶಕ್ತಿ ಇದೆ ಎಂಬುದನ್ನು ಗಾಂಧೀಜಿ ತೋರಿಸಿಕೊಟ್ಟರು' ಎಂಬ ಲೋಹಿಯಾ ಅವರ ಮಾತು, ಪುಟ ತಿರುವಿದಂತೆಲ್ಲ ಸ್ಪಷ್ಟವಾಗುತ್ತಾ ಹೋಗುತ್ತದೆ.

ಗಾಂಧೀಜಿ ಕುರಿತ ಈ ಕೃತಿಯಲ್ಲಿ ಅಮೂಲ್ಯ ಮಾನವೀಯ ಸಂದೇಶಗಳಿವೆ. ಬಹಳ ಮುಖ್ಯವಾಗಿ ಪ್ರಸ್ತುತ ಭಾರತದ ಧಾರ್ಮಿಕ ಅಸಹಿಷ್ಣುತೆಗೆ ಮುಲಾಮಿದೆ. ಧರ್ಮ ಕುರಿತ ತರ್ಕಗಳು, ತರ್ಕಾತೀತವಾದ ನಿಲುವುಗಳು ಇಲ್ಲಿನ ಬರಹಗಳಲ್ಲಿವೆ. ಧನಾತ್ಮಕ ಬದಲಾವಣೆಗಳಿಗೆ ತಮ್ಮನ್ನು ಒಡ್ಡಿಕೊಳ್ಳಲು ಬಯಸುವವರಿಗೆ ಈ ಕೃತಿಯಲ್ಲಿ ಸಾಕಷ್ಟು ಪಾಠಗಳಿವೆ.



ಪು: 408
₹300

ಎಲ್ಲರ ಗಾಂಧೀಜಿ
ಸಂಪಾದಕ: ನಟರಾಜ್ ಹುಳಿಯಾರ್
ಪ್ರ: ಪಲ್ಲವ ಪ್ರಕಾಶನ, ಬಳ್ಳಾರಿ
ಸಂ: 8880087235

ಹರಿಕಥೆಗೆ ಹೊಸನೀರು



ತೆರೆಮರೆಗೆ ಸರಿದಿದ್ದ ಹರಿಕಥೆ ದಕ್ಷಿಣ ಬೆಂಗಳೂರಿನ ಸುತ್ತಮುತ್ತ ಯುವ ಕಲಾವಿದರ ಮೂಲಕ ಮರುಚೇತನ ಪಡೆಯುತ್ತಿದೆ. ಹೀಗೆ ತಾಳ ತಂಬೂರಿ ಮತ್ತೆ ಮಿಡಿಯಲು ಸಿಕ್ಕಿದ ಸ್ಫೂರ್ತಿ ಯಾವುದು? ಆ ಕಥೆ ಇಲ್ಲಿದೆ



ರಶ್ಮಿ ವಾಸುದೇವ

ಒಮ್ಮೆ ಚಾಮರಾಜಪೇಟೆಯ ರಾಮೇಶ್ವರ ದೇವಾಲಯದಲ್ಲಿ ಜನರು ಕಿಕ್ಕಿರಿದು ನೆರೆದಿದ್ದರಂತೆ. 'ಅರೆ, ಇಷ್ಟೊಂದು ಜನರು ಏನೋ ಕೇಳುತ್ತ ಕೂತಿದ್ದಾರಲ್ಲ' ಎಂದುಕೊಂಡ ಸರ್ ಎಂ. ವಿಶ್ವೇಶ್ವರಯ್ಯನವರು ಕೂಡ ಹೋಗಿ ಅವರೊಂದಿಗೆ ಕುಳಿತರಂತೆ. ಇದು ಸುಮಾರು 1920ರ ಮಧ್ಯ ಭಾಗದಲ್ಲಿರಬಹುದು. ಆ ಕಾಲಕ್ಕೆ ಬಹಳ ಹೆಸರುವಾಸಿಯಾಗಿದ್ದ ವೆಂಕಣ್ಣ ದಾಸರ ಹರಿಕಥೆಯನ್ನು ಕೇಳುವುದಕ್ಕೆಂದು ಅಷ್ಟು ಜನರು ನೆರೆದಿದ್ದರಂತೆ.

ಹರಿಕಥೆ ಮುಗಿದ ನಂತರ ಹೋಗಿ ವೆಂಕಣ್ಣ ದಾಸರನ್ನು ಮಾತನಾಡಿಸಿದ ಸರ್ ಎಂವಿ ಹೇಳಿದರಂತೆ, 'ಅಲ್ಲಾ ಸ್ವಾಮಿ... ಜನರು ಮೈಯೆಲ್ಲ ಕಿವಿಯಾಗಿಸಿಕೊಂಡು ನಿಮ್ಮ ಮಾತು ಕೇಳ್ತಾ ಕೂತಿರುತ್ತಾರೆ. ಯಾಕೆ ಸುಮ್ಮನೇ ಕಥೆ ಹೇಳಿಕೊಂಡು ಕಾಲಕ್ಷೇಪ ಮಾಡುತ್ತೀರಿ? ಇದೇ ಅವಕಾಶ ಬಳಸಿಕೊಂಡು, ಜನರು ಒಳ್ಳೆಯ ನಾಗರಿಕರಾಗುವಂತೆ, ಅವರಿಗೆ ಶಿಕ್ಷಣ ನೀಡಬಹುದಲ್ಲವೇ?'

ಅದಕ್ಕೆ ದಾಸರು ನಕ್ಕು ಹೇಳಿದರಂತೆ, 'ಜನರು ಒಳ್ಳೆಯ ನಾಗರಿಕರಾಗಬೇಕು ಅಂದರೆ ಅವರ ವ್ಯಕ್ತಿತ್ವವನ್ನು ರೂಪಿಸಬೇಕು, ಬರಿಯ ನೀತಿ ಬೋಧನೆಯಿಂದ ಉಪಯೋಗವಿಲ್ಲ. ಜನರೊಳಗೆ ಕಥೆಗಳ ಮೂಲಕವೇ ಅರಿವು ಮೂಡುತ್ತದೆ. ಕಥೆಗಳು ಬಹುಮುಖ್ಯ. ಕಥೆಗಳು ನಮ್ಮತನವನ್ನು ರೂಪಿಸಿ, ನಮ್ಮನ್ನು ಗಟ್ಟಿಗೊಳಿಸುತ್ತವೆ. ನಮ್ಮೊಳಗೆ ಸಹೃದಯತೆಯನ್ನು ಮೂಡಿಸುತ್ತವೆ.'

ಆಗ 'ಹೌದು, ನೀವು ಹೇಳೋದೂ ನಿಜವೇ' ಎಂದು ಸರ್ ಎಂವಿ ತಲೆದೂಗಿದರಂತೆ.

ಬೆಂಗಳೂರು ಇತಿಹಾಸದ ಕುರಿತು ಅಪಾರವಾಗಿ ಬರೆದಿರುವ ಖ್ಯಾತ ಅಂಕಣಕಾರ ಸುರೇಶ್ ಮೂನ ಈ ಘಟನೆಯನ್ನು ಹೇಳುತ್ತ, 'ಪೌರಾಣಿಕ ಕಥೆ'ಗಳು ಎಂಬ ಮಿತಿಯನ್ನು ಮೀರಿದ ಈ ಕಥೆಗಳೇ ಹರಿಕಥೆಗಳನ್ನು ಕೇಳುವುದಕ್ಕೆ ಜನರು ಮುಗಿಬೀಳುವುದಕ್ಕೆ ಕಾರಣವಾಗಿತ್ತು ಎನ್ನುತ್ತಾರೆ. ಆದರೆ ಇತ್ತೀಚಿನ ದಶಕಗಳಲ್ಲಿ ಈ ಕಲಾ ಪ್ರಕಾರವು ಕ್ರಮೇಣ ಮೂಲೆಗುಂಪಾಗುತ್ತ, ನಗರದ ಗತವೈಭವದ, ಇತಿಹಾಸದ ಭಾಗವಾಗಿದೆ.

ಹದವಾಗಿ ಬೆರೆತ ಕಥೆ, ಕೀರ್ತನೆ, ರಂಜನೆ: ಒಂದು ಕಾಲಕ್ಕೆ ಎಲ್ಲ ವಯೋಮಾನದವರಿಗೆ ರಂಜನೆಯ ಜೊತೆಗೇ ಬೋಧಪ್ರದವೂ ಆಗಿದ್ದ ಈ ಕಲೆ ಕ್ರಮೇಣ ವಯಸ್ಸಾದವರಿಗೆ ಲಾಯಕ್ಕಾದ ಧಾರ್ಮಿಕ ಗೊಡ್ಡುಕಥೆ ಎಂಬ ಕುಚೋದ್ಯಕ್ಕೆ ಈಡಾಯಿತು. ಹೆಚ್ಚಿನ ಕಲಾವಿದರು ಕಾರ್ಯಕ್ರಮದ ಅವಕಾಶಗಳು ಕಡಿಮೆಯಾಗುತ್ತಿದ್ದಂತೆ ಹೊಟ್ಟೆಪಾಡು ಕಷ್ಟವಾಗುತ್ತ, ಹತಾಶೆಗೊಂಡು ಹರಿಕಥೆ ಮಾಡುವುದನ್ನೂ ಕೈಬಿಟ್ಟರು ಅಥವಾ ಬೇರೆ ಕಲಾಪ್ರಕಾರಗಳತ್ತ ಮುಖ ಮಾಡಿದರು. ಸಂಗೀತ, ಅಭಿನಯ, ಪುರಾಣ ಹಾಗೂ ನೀತಿಕಥೆ, ಆಗೀಗ ತಿಳಿ ಹಾಸ್ಯ, ರಂಜನೆ ಇತ್ಯಾದಿಗಳ ಮೂಲಕ ಆದರ್ಶ, ಸನ್ನಡತೆ, ಸುಸಂಸ್ಕೃತಿಯ ಜೀವನಮಾರ್ಗವನ್ನು ರೂಢಿಸಿಕೊಳ್ಳಲು ಪ್ರೇರಣೆ ಒದಗಿಸುತ್ತಿದ್ದ ಈ ಕಲೆ ಕ್ರಮೇಣ ತನ್ನ ನೆಲೆಯನ್ನು ಕಳೆದುಕೊಂಡಿತು.

'ಎಷ್ಟೋ ಜನ ಹರಿಕಥೆ ದಾಸರು ತಮಗೆ ಸಲ್ಲಬೇಕಿದ್ದ ಗೌರವ, ಪ್ರಸಿದ್ಧಿ ಏನನ್ನೂ ಪಡೆಯದೇ ತೆರೆಮರೆಯಲ್ಲೇ ಉಳಿದುಬಿಟ್ಟರು. ಪಾಂಡಿತ್ಯಕ್ಕೆ ಹೆಸರಾಗಿದ್ದ ವೆಂಕಣ್ಣ ದಾಸರು ಮತ್ತು ಅವರ ನಾಲ್ಕು ಜನ ಮಕ್ಕಳು ತಮ್ಮ ಹರಿಕಥೆಯಲ್ಲಿ ನಿತ್ಯಜೀವನದ ಪಡಿಪಾಟಲುಗಳನ್ನು ಸೇರಿಸಿಕೊಂಡು ತಿಳಿಹಾಸ್ಯದಲ್ಲಿ ನಿರೂಪಿಸುತ್ತಿದ್ದರು. ಈ ಅದ್ಭುತ ಕೌಶಲದಿಂದಾಗಿ ಅವರ ಹರಿಕಥೆಗಳು ಪುರಾಣದ ಕಥೆಗಳ ಜೊತೆಗೇ ಸಾಮಾಜಿಕ-ರಾಜಕೀಯ ಸ್ಥಿತಿಗತಿಗಳ ಕನ್ನಡಿಯೂ ಆಗಿರುತ್ತಿತ್ತು. ಹೀಗಾಗಿ ಜನಸಾಮಾನ್ಯರಿಗೂ ತಲುಪಿತು' ಎಂದು ಮೂನ ಹೇಳುತ್ತಾರೆ.

'ಇನ್ನು ಭದ್ರಗಿರಿ ಅಚ್ಯುತದಾಸರು ಹಾಗೂ ಅವರ ಸಹೋದರ ಕೇಶವದಾಸರು ಇಂಗ್ಲಿಷಿನಲ್ಲಿ ಹರಿಕಥೆ ಮಾಡುತ್ತ, ಹಲವಾರು ದೇಶಗಳಲ್ಲಿಯೂ ಕಾರ್ಯಕ್ರಮ ನೀಡಿದ್ದರು. ಗುರುರಾಜುಲು ನಾಯ್ಡು ಬಹಳ ಚಿತ್ತಾಕರ್ಷಕವಾಗಿ ಹರಿಕಥೆ ಮಾಡುತ್ತಿದ್ದರು. ಅವರ ಹೆಣ್ಣುಮಕ್ಕಳು ಕೂಡ ಮಹಿಳಾ ಹರಿಕಥೆ ದಾಸರಲ್ಲಿ ಬಹಳ ಪ್ರಮುಖರಾಗಿದ್ದರು' ಎಂದು ಅವರು ಹರಿಹಥೆಯ ಆ ಸಂಭ್ರಮದ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ.



ದುಷ್ಯಂತ ಶ್ರೀಧರ್



ವಿಶಾಖಾ ಹರಿ

ಈ ಕಲೆ ಉಳಿದುಕೊಳ್ಳಲು ಸಾಧ್ಯವಾಗದೇ ಇದ್ದಿದ್ದಕ್ಕೆ ಇನ್ನೊಂದು ಕಾರಣವೆಂದರೆ ಈ ಕಲಾಪ್ರಕಾರದ ವಿಶಿಷ್ಟ ಲಕ್ಷಣ ಹಾಗೂ ಕಲಾವಿದರು ಬಹುಶ್ರುತರಾಗಿರಬೇಕಾದ ಅಗತ್ಯ. ಹರಿಕಥೆ ದಾಸರಿಗೆ ಕೇವಲ ವಾಗ್ವಿಲಾಸದ ಕಲೆ ಗೊತ್ತಿದ್ದರಷ್ಟೇ ಸಾಲದು, ಅವರಿಗೆ ಸಂಗೀತ, ಅಭಿನಯ, ನೃತ್ಯ, ತತ್ವಶಾಸ್ತ್ರ, ಪೌರಾಣಿಕ ಕಥೆ ಹಾಗೂ ಇತಿಹಾಸದ ಜ್ಞಾನ ಇವೆಲ್ಲವೂ ಗೊತ್ತಿರಬೇಕು. ಅಷ್ಟೇ ಅಲ್ಲ, ಆಯಾ ಕಾಲಘಟ್ಟದ ಸಾಮಾಜಿಕ-ರಾಜಕೀಯ ಒಲವುಗಳನ್ನು ಗ್ರಹಿಸಿ, ಅದನ್ನು ಚುರುಕು ಹಾಸ್ಯದೊಂದಿಗೆ ಬೆರೆಸಿ, ತತ್‌ಕ್ಷಣಕ್ಕೆ ಪ್ರದರ್ಶಿಸುವ ಕಲೆಯೂ ಗೊತ್ತಿರಬೇಕು.

ಚಿಗುರುತ್ತಿರುವ ಆಸಕ್ತಿ: ಕ್ರಮೇಣ ತೆರೆಮರೆಗೆ ಸರಿದಿದ್ದ ಹರಿಕಥೆ ದಕ್ಷಿಣ ಬೆಂಗಳೂರಿನ ಸುತ್ತಮುತ್ತಲಿನಲ್ಲಿ ಇತ್ತೀಚಿನ ದಿನಗಳಲ್ಲಿ ಯುವ ಕಲಾವಿದರ ಮೂಲಕ ಮರುಚೇತನ ಪಡೆದು, ನಿಧಾನಕ್ಕೆ ವ್ಯಾಪ್ತಿ ಹೆಚ್ಚಿಸಿಕೊಳ್ಳುತ್ತಿರುವುದು ಕುತೂಹಲಕಾರಿ ಬೆಳವಣಿಗೆ. ಇದಕ್ಕೆ ಯುಟ್ಯೂಬ್, ಸಾಮಾಜಿಕ ಮಾಧ್ಯಮ ಮತ್ತು ಆನ್‌ಲೈನ್ ವೇದಿಕೆಗಳು ಕಲಾವಿದರಿಗೆ ಹೊಸರೀತಿಯ ಸ್ಥಳಾವಕಾಶ ಒದಗಿಸುತ್ತಿರುವುದೇ ಕಾರಣ. ಹೀಗಾಗಿ ಈಗ ಹರಿಕಥೆಯು ಜಾಗತಿಕ ಮಟ್ಟದಲ್ಲಿ ಪ್ರೇಕ್ಷಕರನ್ನು ತನ್ನತ್ತ ಸೆಳೆಯುತ್ತಿದೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಹರಿಕಥೆಯನ್ನು ಪಠ್ಯಕ್ರಮದಲ್ಲಿ ಸೇರಿಸಬೇಕೆಂದು ಶಿಫಾರಸು ಮಾಡಿರುವುದು ಈ ಸಾಂಪ್ರದಾಯಿಕ ಕಲಾ ಪ್ರಕಾರಕ್ಕೆ ಬಲವಾದ ಪ್ರೋತ್ಸಾಹ ನೀಡಿದಂತಾಗಿದೆ. ಬೆಂಗಳೂರು ವಾಸಿ ಹರಿಕಥಾ ಕಲಾವಿದರಾದ ದುಷ್ಯಂತ ಶ್ರೀಧರ್ ಇದೊಂದು ಸ್ವಾಗತಾರ್ಹ ಕ್ರಮ ಎನ್ನುತ್ತಾರೆ. 'ಮಕ್ಕಳಿಗೆ ನಮ್ಮದೇ ಸಂಸ್ಕೃತಿಯಲ್ಲಿ ಬೇರುಬಿಟ್ಟ ಪರ್ಯಾಯ ಮನರಂಜನೆಗಳನ್ನು ಒದಗಿಸದಿದ್ದರೆ, ಹಿಂಸಾತ್ಮಕ ವಿಡಿಯೊ ಹಾಗೂ ತಿಳಿಗೇಡಿ ಕಾರ್ಟೂನ್‌ಗಳಿಂದ ಅವರು ವಿಮುಖರಾಗಬೇಕೆಂದು ಹೇಗೆ ನಿರೀಕ್ಷಿಸುವುದು' ಎಂದು ಕೇಳುತ್ತಾರೆ.

ಇಂಗ್ಲಿಷ್ ಹಾಗೂ ತಮಿಳಿನಲ್ಲಿ ಮನಸೆಳೆಯುವ ಹರಿಕಥೆ ಪ್ರದರ್ಶನ ನೀಡುವ ದುಷ್ಯಂತರ ಯುಟ್ಯೂಬ್ ಚಾನೆಲ್‌ಗೆ 116000ಕ್ಕೂ ಹೆಚ್ಚು ಜನ ಚಂದಾದಾರರಾಗಿದ್ದಾರೆ. ಅವರು ಮೊದಲು ಕಾರ್ಪೊರೇಟ್ ವಲಯದಲ್ಲಿ ಕೆಲಸ ಮಾಡುತ್ತ, ಇದನ್ನು ಹವ್ಯಾಸವಾಗಿ ಬೆಳೆಸಿಕೊಂಡರು. 'ಇಂಗ್ಲಿಷ್‌ನಲ್ಲಿ ಹರಿಕಥೆ ಮಾಡುವುದಕ್ಕೆ ಬಹಳ ಬೇಡಿಕೆ ಇದೆ, ಆದರೆ ಕೆಲವೇ ಕಲಾವಿದರು ಇಂಗ್ಲಿಷಿನಲ್ಲಿಯೂ ಮಾಡಬಲ್ಲರು' ಎನ್ನುತ್ತಾರೆ ಅವರು.

ಇತ್ತೀಚೆಗೆ ಜನರಲ್ಲಿ ಮತ್ತೆ ಆಸಕ್ತಿ ಕುದುರುತ್ತಿದೆ ಎನ್ನುವ ವೆಂಕಣ್ಣದಾಸರ ಮರಿಮೊಮ್ಮಗ ಶರತ್. ಅವರು ಪ್ರಭಾತ್ ವೇದಿಕೆ ಕಾರ್ಯಕ್ರಮಗಳ ಜೊತೆಗೆ ಆನ್‌ಲೈನ್‌ನಲ್ಲಿಯೂ ಪ್ರದರ್ಶನ ನೀಡುತ್ತಾರೆ. 'ನನ್ನ ಅಜ್ಜಂದಿರಂತೆ ನಾನು ಈಗ ಹರಿಕಥೆ ಮಾಡೋದಕ್ಕೆ ಆಗೋದಿಲ್ಲ. ಅವುಗಳ ಸಾರ ಇಟ್ಟುಕೊಂಡು, ಇಂದಿನ ಅಗತ್ಯಕ್ಕೆ ತಕ್ಕಂತೆ ಮಾರ್ಪಾಡು ಮಾಡಿಕೊಳ್ಳುತ್ತೇನೆ. ನಮ್ಮಜ್ಜ ಸಂಧ್ಯಾವಂದನೆ ಬಗ್ಗೆ ತಿಳಿಹಾಸ್ಯದಲ್ಲಿ ಹೇಳಿದಂತೆ ನಾನು ಹೇಳಕ್ಕೆ ಆಗಲ್ಲ, ನಾನೀಗ ನೋಟು ಅಮಾನ್ಯಗೊಳಿಸಿದ್ದರ ಬಗ್ಗೆ ಹಾಸ್ಯ ಮಾಡ್ತೀನಿ' ಎನ್ನುತ್ತಾರೆ ಶರತ್.

33 ವರ್ಷದ ಈ ಯುವ ಕಲಾವಿದ 'ಪೂರ್ಣ ಸಾಮಾಜಿಕ' ವಿಷಯದ ಬಗ್ಗೆಯೂ ಕೆಲವು ಪ್ರಯೋಗಗಳನ್ನು ಮಾಡಿದ್ದಾರೆ. ಹಿಂದೂ ಮದುವೆ ಸಂಪ್ರದಾಯಗಳ ಅರ್ಥವನ್ನು ವಿಷಯವಾಗಿಟ್ಟುಕೊಂಡು ಮದುವೆ ಹಿಂದಿನ ದಿನದ ಕಾರ್ಯಕ್ರಮದಲ್ಲಿ ಒಂದು ಹರಿಕಥೆಯನ್ನು ಮಾಡಿದ್ದರು. ಆದರೆ ಈ ಬಗೆಯ ನೇರ ಕಾರ್ಯಕ್ರಮಗಳಲ್ಲಿ ಇರುವ ಉಲ್ಲಾಸ, ಹುಮ್ಮಸ್ಸು ಆನ್‌ಲೈನ್ ಕಾರ್ಯಕ್ರಮಗಳಲ್ಲಿ ಇರುವುದಿಲ್ಲ ಎಂದು ಬೇಸರ ವ್ಯಕ್ತಪಡಿಸುವ ಅವರು ಆನ್‌ಲೈನ್‌ನಲ್ಲಿ ಕೆಲವು ಅನುಕೂಲತೆಗಳು ಇವೆ ಎನ್ನುತ್ತಾರೆ.

'ನಾನು ಮಧ್ಯೆಮಧ್ಯೆ ವಿರಾಮ ತೆಗೆದುಕೊಂಡು, ಮತ್ತೆ ವಿಡಿಯೊ ಶೂಟ್ ಮಾಡಬಹುದು. ಜೊತೆಗೆ ವೀಕ್ಷಕರು ಕೂಡ ವಿಡಿಯೊಗಳನ್ನು ಮತ್ತೆಮತ್ತೆ ನೋಡಬಹುದು, ಭಾಷೆ ಅರ್ಥವಾಗದಿದ್ದರೆ, ಸಬ್‌ಟೈಟಲ್ ನೋಡಿಕೊಳ್ಳಬಹುದು' ಎಂದು ಆನ್‌ಲೈನಿನಲ್ಲಿ ಸಕ್ರಿಯವಾಗಿರುವ ಶರತ್ ಹೇಳುತ್ತಾರೆ. ತರಗತಿಗಳನ್ನು ತೆಗೆದುಕೊಂಡು ಕಲಿಸಿ ಎಂದು ಹಲವರು ಕೇಳಿಕೊಳ್ಳುತ್ತಿರುವುದರಿಂದ, ಸದ್ಯದಲ್ಲಿಯೇ ಯುವಜನರಿಗೆ ತರಗತಿ ಶುರು ಮಾಡುವ ಆಶಯವಿದೆ ಅವರಿಗೆ.

ಬುದ್ಧಿ-ಭಾವದ ವಿಕಾಸಕ್ಕೆ...: ಈಗ ಹರಿಕಥೆ ಮಾಡುತ್ತಿರುವವರಲ್ಲಿ ಮನೆಮಾತಾಗಿರುವ ವಿಶಾಖಾ ಹರಿ ಈಗಾಗಲೇ ತಮ್ಮ 'ವಿಜಯಶ್ರೀ ಸ್ಕೂಲ್ ಆಫ್ ಹರಿಕಥಾ' ಮೂಲಕ ಹಲವಾರು ಆಸಕ್ತರಿಗೆ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. 2020ರ ಫೆಬ್ರವರಿಯಲ್ಲಿ ಆರಂಭವಾದ ಈ ಶಾಲೆಗೆ ಯಾವ ವಯಸ್ಸಿನವರಾದರೂ ಸೇರಿಕೊಳ್ಳಬಹುದು. ವಿದ್ಯಾರ್ಥಿಗಳನ್ನು ಪ್ರೌಢತೆಯ ಆಧಾರದಲ್ಲಿ ಗುಂಪು ಮಾಡುತ್ತಾರೆ. 28-30 ವರ್ಷದವರು ಆರಂಭಿಕ ತರಗತಿಗಳಿಗೂ ಹೋಗಬಹುದು, ಹತ್ತು ವರ್ಷದ ಪುಟಾಣಿಗೆ ಯೋಗ್ಯತೆಯಿದ್ದರೆ ಹಿರಿಯರ ತರಗತಿಗೂ ಹೋಗಬಹುದು.

'ಕೋವಿಡ್ ಸಮಯದಲ್ಲಿ ನಾವು ಆನ್‌ಲೈನ್ ತರಗತಿಗಳನ್ನು ಶುರುಮಾಡಿದಾಗ, ಎಲ್ಲೆಲ್ಲೋ ಇದ್ದ 7-8 ವರ್ಷದ ಪುಟಾಣಿಗಳು ಕೂಡ ತರಗತಿಗೆ ಸೇರಿದರು. ಆ ಮಕ್ಕಳ ಗ್ರಹಣ ಶಕ್ತಿ, ಹೊಸತನ ಅರಸುವ ಹುಮ್ಮಸ್ಸು ನಮಗೆ ಅಚ್ಚರಿಯೆನ್ನಿಸಿತು' ಎನ್ನುತ್ತಾರೆ ವಿಶಾಖಾ.

ಇಂದಿನ ಒತ್ತಡದ ದಿನಮಾನದಲ್ಲಿ ಹರಿಕಥೆಗಳಂತಹ ಕಲಾ ಪ್ರಕಾರಗಳು ಮಾನಸಿಕ ಸಮಾಲೋಚನೆಗೆ ಸಮನಾಗಿವೆ ಎಂದು ವಿಶಾಖಾ ಭಾವಿಸುತ್ತಾರೆ. 'ಕಥೆಗಳು ನಮ್ಮ ಚಿಂತನೆಗಳನ್ನು ರೂಪಿಸುತ್ತವೆ, ನಮ್ಮ ಕಲ್ಪನೆಯಲ್ಲಿ ನೆಲೆಯೂರಿ, ನಮಗೆ ಮಾರ್ಗದರ್ಶನ ಮಾಡುತ್ತವೆ. ಹೀಗೆ ಕಥೆಗಳನ್ನು ಹಾಡು, ಅಭಿನಯ, ತಿಳಿಹಾಸ್ಯದೊಂದಿಗೆ ನಿರೂಪಿಸಿದಾಗ, ಕಥೆಗಳೇ ನಾವಾಗುತ್ತೇವೆ' ಎನ್ನುವ ವಿಶಾಖಾ ಮಾತಿನಲ್ಲಿ ಬಹಳ ಹಿಂದೆ ಸರ್ ಎಂವಿಗೆ ವೆಂಕಣ್ಣ ದಾಸರು ಹೇಳಿದ್ದು ಪ್ರತಿಧ್ವನಿಸುತ್ತದೆ.

ಕನ್ನಡಕ್ಕೆ: ಸುಮಂಗಲಾ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಝೆನ್ ಕಥೆಗಳು

[illegible]

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಝೆನ್ ಕಥೆಗಳು ಬಹಳ ಜನಪ್ರಿಯ. ಬೌದ್ಧ ಗುರುಗಳು ತಮ್ಮ ತತ್ವ ಚಿಂತನೆ, ನೀತಿ ಸಾರಿದ ಸರಳ ಪುಟ್ಟ ಕಥೆಗಳಿವು. ಅಂಥ ಕಥನಕಾರರು ಜೆನ್ ಗುರುಗಳೆಂದೇ ಜನಪ್ರಿಯ. ಅಂಥ ಕಥೆಯೊಂದನ್ನು ಇಂದು ಕೇಳೋಣ




ಯುವಕನೊಬ್ಬ ಜೆನ್ ಗುರುವನ್ನು ಪರೀಕ್ಷಿಸಲು ಮುಂದಾದ, ಕೈಯಲ್ಲಿ ಪಾರಿವಾಳವೊಂದನ್ನು ಮುಚ್ಚಿಟ್ಟುಕೊಂಡು ಅದು ಬದುಕಿದೆಯೇ ಅಥವಾ ಸತ್ತಿದೆಯೇ ಎಂದು ಗುರುವಿನಲ್ಲಿ ಕೇಳಲು ಬಂದ.





ಒಂದು ವೇಳೆ ಗುರುವು ಪಾರಿವಾಳ ಸತ್ತಿದೆ ಎಂದರೆ ಅದನ್ನು ಕೈಯಲ್ಲಿ ಬಿಡಿಸಿ ತೋರಿಸುತ್ತಾನೆ. ಬದುಕಿದೆ ಎಂದರೆ ಅದರ ಕತ್ತು ಹಿಚುಕಿ ಸಾಯಿಸುತ್ತಾನೆ. ಒಟ್ಟಿನಲ್ಲಿ ಗುರುವಿನ ಮಾತನ್ನು ಸುಳ್ಳಾಗಿಸಬೇಕು ಎಂಬುದೇ ಅವನ ಪ್ರಯತ್ನವಾಗಿತ್ತು.



ಹಾಗೆಯೇ ಗುರುವಿನ ಬಳಿ ಬಂದು ಪಾರಿವಾಳ ಬದುಕಿದೆಯೇ ಸತ್ತಿದೆಯೇ ಎಂದು ಕೇಳಿದ. ಅದಕ್ಕೆ ಗುರುವು, 'ಅದರ ಭವಿಷ್ಯ ನಿನ್ನ ಕೈಯಲ್ಲೇ ಇದೆ' ಎಂದು ಹೇಳಿ ಸುಮ್ಮನೆ ಮುಂದೆ ಸಾಗಿದ. ಪರೀಕ್ಷಿಸಲು ಬಂದ ಯುವಕ ಪಶ್ಚಾತಾಪದಿಂದ ಪೆಚ್ಚಾಗಿ ನಿಂತ

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಎರಡು ಅಕ್ಷರಗಳಿಗೆ ಸಂಬಂಧಿಸಿದಂತೆ ಪಕ್ಕದಲ್ಲಿ ಕೊಟ್ಟಿರುವ ಸುಳಿವು ಆಧರಿಸಿ ನಾಲ್ಕು ಅಕ್ಷರಗಳ ಹೊಸ ಪದ ರಚಿಸಿ.

1. __ ದರ __ ದರ ಕೇಳಿ ಪಡೆದುಕೊಳ್ಳುವ ಚಪ್ಪಲಿ
2. __ ಮಗು __ ಮಗು ಸಿಟ್ಟಿಗೇಳು
3. __ ನಾದ __ ನಾದದಿಂದ ಉಂಟಾದ ಉದಾಸೀನತೆ
4. __ ಗಣಿ __ ಗಣಿಯಲ್ಲಿ ಸಿಕ್ಕಿದ್ದು ಲೆಕ್ಕವಿಲ್ಲ
5. __ ರಮಾ __ ರಮಾಳ ಆದಾಯ





ಅಕ್ಷರ ಆಟ

ಹಿಂದೆ ಒಂದಕ್ಷರ ತುಂಬಿ ಮೂರು ಅಕ್ಷರಗಳ ಪದ ಮಾಡಿ

1. __ತನ
2. __ತನ
3. __ತನ
4. __ತನ
5. __ತನ
6. __ತನ
7. __ತನ

ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ಮತಗುಟ್ಟು = ____________
2. ವಿಶ್ವಮಾನವ = ____________
3. ಹಾಡಿಗೆಸಿಹಿ = ____________
4. ಅವನಲೋಕ = ____________

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ಆಕರ್ಷ ಹೊರಕೇರಿ
ಹೊಸಪೇಟೆ



ಅಪೂರ್ವ ತಳವಾರ
ಕುಳಗೇರಿ (ಬಾಗಲಕೋಟೆ)



ನಲ್ಮೆ ಎಚ್.ಎನ್.
ಹೊಸದುರ್ಗ

ಕಳೆದ ಸಂಚಿಕೆಯ ಸರಿ ಉತ್ತರಗಳು

ಜಾಣಪದ ಆಟ
1. ಡಕಾಯಿತ, 2. ಅಲಂಕಾರ
3. ಆಮಂತ್ರಣ 4. ಕಸರತ್ತು
5. ಯಜಮಾನ

ಉಳಿದ ಹಕ್ಕಿ ಎಷ್ಟು?
ಎಷ್ಟೂ ಇಲ್ಲ. ಒಂದು ಹಕ್ಕಿ ಸತ್ತರೆ, ಉಳಿದವು ಮರದಿಂದ ಹಾರಿ ಹೋದವು

ಟ್ವೆಂಟಿ 20 ಮ್ಯಾಚ್
1-N, 2-I, 3- K, 4-Q, 5-C, 6-G, 7-O, 8-L, 9-E, 10-F, 11-R, 12-M, 13-T, 14-P, 15-J, 16-H, 17-B, 18-S, 19-D, 20-A

ಅಕ್ಷರ ಆಟ
ಅದರು, ಒದರು, ಕೆದರು, ಗದರು, ನೆದರು, ಪದರು, ಬೆದರು, ಹೆದರು, ಪೊದರು, ಕದರು

ಸರಿ ಉತ್ತರ ಮುಂದಿನ ವಾರ... ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.
ಉತ್ತರ ಕಳುಹಿಸಲು ಇಮೇಲ್ ವಿಳಾಸ: majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಗಣಿತದಲ್ಲಿ ಗರ್ದಿ ಗಮ್ಮತ್ತು

100ಕ್ಕೆ ನೂರು ಸತ್ಯ

ಯಾವುದೇ ಕೆಲಸದಲ್ಲಿ ಶಿಸ್ತು ಇದ್ದರೆ ಆ ಕೆಲಸವನ್ನು 100ಕ್ಕೆ ನೂರರಷ್ಟು ಸಾಧಿಸಬಹುದು. ಶಿಸ್ತಿಗೆ ಇಂಗ್ಲಿಷ್‌ನಲ್ಲಿ DISCIPLINE ಎನ್ನುತ್ತಾರೆ. ಮೋಜೆಂದರೆ ಈ ಪದಕ್ಕೆ ಆಯಾ ಅಕ್ಷರಗಳ ಕ್ರಮಸಂಖ್ಯೆ ಜೋಡಿಸಿದರೆ 100 ಸಂಖ್ಯೆಯೇ ಬರುತ್ತದೆ. ಮಾಡಿ ನೋಡಿ.

A	B	C	D	E	F	G	H	I	J	K	L	M	N	O	P	Q	R	S	T	U	V	W	X	Y	Z
1	2	3	4	5	6	7	8	9	10	11	12	13	14	15	16	17	18	19	20	21	22	23	24	25	26

D	I	S	C	I	P	L	I	N	E	
4	9	19	3	9	16	12	9	14	5	100

100% Success!



ಸೂರ್ಯಕುಮಾರ್ ಯಾದವ್ ಬ್ಯಾಟಿಂಗ್‌ನ ವಿವಿಧ ಭಂಗಿಗಳು

ಟಿ20 ಕ್ರಿಕೆಟ್: ಭಾರತ ತಂಡಕ್ಕೆ 2–1ರಿಂದ ಸರಣಿ ಜಯ

ಸೂರ್ಯ ಪ್ರತಾಪಕ್ಕೆ ಲಂಕಾ ಪತನ

ರಾಜ್‌ಕೋಟ್: ಸೂರ್ಯಕುಮಾರ್ ಯಾದವ್ ಅವರ ಮತ್ತೊಂದು ಅಮೋಘ ಮತ್ತು ವೈಶಿಷ್ಟ್ಯಪೂರ್ಣ ಬ್ಯಾಟಿಂಗ್ ಇಲ್ಲಿಯ ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಅಂಗಳದಲ್ಲಿ ದಾಖಲಾಯಿತು.

ಇದರಿಂದಾಗಿ ಭಾರತ ತಂಡವು ಶನಿವಾರ ನಡೆದ ಶ್ರೀಲಂಕಾ ಎದುರಿನ ಮೂರನೇ ಮತ್ತು ಕೊನೆಯ ಟಿ20 ಪಂದ್ಯದಲ್ಲಿ 91 ರನ್‌ಗಳಿಂದ ಗೆದ್ದಿತು. ಸರಣಿಯನ್ನು 2–1ರಿಂದ ಜಯಿಸಿತು.

ಸೂರ್ಯಕುಮಾರ್ ಬೀಸಾಟಕ್ಕೆ ಚೆಂಡು ಸಿಗದಂತೆ ಎಸೆತಗಳನ್ನು ಹಾಕುವ ಬೌಲರ್‌ಗಳ ಯತ್ನಗಳೆಲ್ಲವೂ ವಿಫಲವಾದವು. ಕ್ರೀಸ್‌ನೊಳಗೆ ಮತ್ತು ಹೊರಗೆ ಎದ್ದು, ಬಿದ್ದು ಮತ್ತು ಹೊರಳಾಡಿ ಬ್ಯಾಟ್ ಮಾಡಿದ 'ಮಿಸ್ಟರ್ 360 ಡಿಗ್ರಿ' ಸೂರ್ಯ ಅಜೇಯ ಶತಕ ದಾಖಲಿಸಿದರು. ಇದು ಅವರಿಗೆ ಟಿ20ಯಲ್ಲಿ ಮೂರನೇ ಶತಕ. 51 ಎಸೆತಗಳಲ್ಲಿ 112 ರನ್ ಗಳಿಸಿದ ಅವರ ಬ್ಯಾಟಿಂಗ್‌ನಿಂದಾಗಿ ಭಾರತ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 228 ರನ್ ಗಳಿಸಿತು. ಇದರಿಂದಾಗಿ ಆತಿಥೇಯ ಬೌಲರ್‌ಗಳು ತುಂಬು ಆತ್ಮವಿಶ್ವಾಸದಿಂದ ಆಡಿದರು. ಶ್ರೀಲಂಕಾ ತಂಡವು 16.4 ಓವರ್‌ಗಳಲ್ಲಿ 137 ರನ್ ಗಳಿಸಲಷ್ಟೇ ಶಕ್ತವಾಯಿತು.


ಟ್ರೋಫಿಯೊಂದಿಗೆ ಭಾರತ ತಂಡದ ನಾಯಕ ಹಾರ್ದಿಕ್ ಪಾಂಡ್ಯ

ಭಾರತದ ಅರ್ಷದೀಪ್ ಸಿಂಗ್ (20ಕ್ಕೆ 3), ಹಾರ್ದಿಕ್ ಪಾಂಡ್ಯ (30ಕ್ಕೆ 2), ಉಮ್ರಾನ್ ಮಲಿಕ್ (31ಕ್ಕೆ 2), ಯಜುವೇಂದ್ರ ಚಾಹಲ್ ಬೌಲಿಂಗ್‌ನಲ್ಲಿ ಮಿಂಚಿದರು.

ಸೂರ್ಯ ಅಬ್ಬರ: ಸೂರ್ಯಕುಮಾರ್ ಮೈದಾನದ ಮೂಲೆಮೂಲೆಗೂ ಚೆಂಡನ್ನು ಅಟ್ಟಿದರು. ಅವರು ಸಿಡಿಸಿದ 9 ಸಿಕ್ಸರ್ ಮತ್ತು 7 ಬೌಂಡರಿಗಳನ್ನು ಕ್ರೀಡಾಂಗಣದಲ್ಲಿ ಸೇರಿದ್ದ 28 ಸಾವಿರ ಜನ ಕಣ್ತುಂಬಿಕೊಂಡರು.

ಟಾಸ್ ಗೆದ್ದ ಭಾರತ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಆದರೆ ಮೊದಲ ಓವರ್‌ನಲ್ಲಿಯೇ ಇಶಾನ್ ಕಿಶನ್ ಕೇವಲ ಒಂದು ರನ್ ಗಳಿಸಿ ದಿಲ್ಶಾನ್ ಮಧುಶಂಕಾ ಎಸೆತದಲ್ಲಿ ಧನಂಜಯಗೆ ಕ್ಯಾಚಿತ್ತು ನಿರ್ಗಮಿಸಿದರು.

ಶುಭಮನ್ ಗಿಲ್ ಜೊತೆಗೂಡಿದ ರಾಹುಲ್ ತ್ರಿಪಾಠಿ ಇನಿಂಗ್ಸ್‌ಗೆ ಚೇತರಿಕೆ ನೀಡಿದರು. 2ನೇ ಟಿ20 ಪಂದ್ಯವಾಡಿದ ತ್ರಿಪಾಠಿ 16 ಎಸೆತಗಳಲ್ಲಿ 35 ರನ್ ಗಳಿಸಿದರು. ಅದರಲ್ಲಿ 5 ಬೌಂಡರಿ ಮತ್ತು 2 ಸಿಕ್ಸರ್ ಇದ್ದವು. ಶುಭಮನ್ (46;36) ಶಾಂತಚಿತ್ತರಾಗಿ ಬ್ಯಾಟಿಂಗ್ ಮಾಡಿದರು. ಇಬ್ಬರೂ ಸೇರಿ ಎರಡನೇ ವಿಕೆಟ್‌ಗೆ 49 ರನ್ ಸೇರಿಸಿದರು. ಆರನೇ ಓವರ್‌ನಲ್ಲಿ ತ್ರಿಪಾಠಿ ಔಟಾದಾಗ ಶ್ರೀಲಂಕಾ ಆಟಗಾರರು ಸಂಭ್ರಮಿಸಿದರು. ಈ ಸಂತಸ ಹೆಚ್ಚು ಹೊತ್ತು ಇರಲಿಲ್ಲ! ಸೂರ್ಯ ಕ್ರೀಸ್‌ಗೆ ಕಾಲಿಟ್ಟ ಮೇಲೆ ಅವರದ್ದೇ ಆಟ. ಇನ್ನೊಂದು ಬದಿಯಲ್ಲಿ ಶುಭಮನ್ ಕೂಡ ಪ್ರೇಕ್ಷಕರಂತೆ ಇದ್ದುಬಿಟ್ಟರು. ಇವರಿಬ್ಬರ ಜೊತೆಯಾಟದಲ್ಲಿ 111 ರನ್ ಸೇರಿದವು. ಅದರಲ್ಲಿ ಶುಭಮನ್ ಕಾಣಿಕೆ 32 ರನ್‌ಗಳು ಮಾತ್ರ. ಉಳಿದದ್ದು ಸೂರ್ಯಪ್ರತಾಪ! 26 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ನಂತರ 19 ಎಸೆತಗಳಲ್ಲಿ ಶತಕದ ಗಡಿ ಮುಟ್ಟಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 5ಕ್ಕೆ 228 (ಶುಭಮನ್ ಗಿಲ್ 46, ರಾಹುಲ್ ತ್ರಿಪಾಠಿ 35, ಸೂರ್ಯಕುಮಾರ್ ಯಾದವ್ ಔಟಾಗದೆ 112, ಅಕ್ಷರ್ ಪಟೇಲ್ ಔಟಾಗದೇ 21, ದಿಲ್ಶಾನ್ ಮಧುಶಂಕಾ 55ಕ್ಕೆ2, ರಜಿತಾ 35ಕ್ಕೆ1, ಚಮಿಕಾ ಕರುಣಾರತ್ನೆ 52ಕ್ಕೆ1, ವಣಿಂದು ಹಸರಂಗಾ 36ಕ್ಕೆ1). ಶ್ರೀಲಂಕಾ: 16.4 ಓವರ್‌ಗಳಲ್ಲಿ 137 (ಕುಸಲ್ ಮೆಂಡಿಸ್ 23, ಧನಂಜಯ್ ಡಿಸಿಲ್ವಾ 22, ದಸುನ್ ಶನಕ 23; ಹಾರ್ದಿಕ್ ಪಾಂಡ್ಯ 30ಕ್ಕೆ 2, ಅರ್ಷದೀಪ್ ಸಿಂಗ್ 20ಕ್ಕೆ 3, ಅಕ್ಷರ್ ಪಟೇಲ್ 19ಕ್ಕೆ 1, ಉಮ್ರಾನ್ ಮಲಿಕ್ 31ಕ್ಕೆ 2, ಯಜುವೇಂದ್ರ ಚಾಹಲ್ 30ಕ್ಕೆ 2.). ಫಲಿತಾಂಶ: ಭಾರತಕ್ಕೆ 91 ರನ್‌ಗಳ ಜಯ

90 ಮೀ. ಸಾಧನೆ ಗುರಿ: ಚೋಪ್ರಾ


ನೀರಜ್ ಚೋಪ್ರಾ

ನವದೆಹಲಿ (ಪಿಟಿಐ): ಜಾವೆಲಿನ್ ಅನ್ನು 90 ಮೀಟರ್ಸ್ ಗೆರೆ ದಾಟಿಸುವುದು ಈ ವರ್ಷದ ನನ್ನ ಗುರಿ ಎಂದು ನೀರಜ್ ಚೋಪ್ರಾ ಹೇಳಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದು ಐತಿಹಾಸಿಕ ಸಾಧನೆ ಮಾಡಿದ್ದ 24 ವರ್ಷದ ಚೋಪ್ರಾ 2022 ರಲ್ಲೂ ನಿರೀಕ್ಷೆಗೆ ತಕ್ಕಂತೆ ಉತ್ತಮ ಪ್ರದರ್ಶನ ನೀಡಿದ್ದರು. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಹಾಗೂ ಡೈಮಂಡ್ ಲೀಗ್ ಫೈನಲ್ಸ್‌ನಲ್ಲಿ ಚಿನ್ನ ಜಯಿಸಿದ್ದರು. ಆದರೆ 90 ಮೀ. ಸಾಧನೆ ಮಾಡಲು ಆಗಿರಲಿಲ್ಲ.

ಡೈಮಂಡ್ ಲೀಗ್‌ನಲ್ಲಿ ಸ್ಟಾಕ್‌ಹೋಂ ಲೆಗ್ ಸ್ಪರ್ಧೆಯಲ್ಲಿ ಅವರು ಜಾವೆಲಿನ್‌ಅನ್ನು 89.94 ಮೀ. ದೂರ ಎಸೆದಿದ್ದರು. 90 ಮೀ. ಸಾಧನೆಯನ್ನು ಕೇವಲ 6 ಸೆಂ.ಮೀ. ಅಂತರದಿಂದ ಕಳೆದುಕೊಂಡಿದ್ದರು.

'ನೀರಜ್ 90 ಮೀ. ಸಾಧನೆ ಮಾಡುವರೇ ಎಂಬ ಪ್ರಶ್ನೆಗೆ ಈ ವರ್ಷ ಅಂತ್ಯಹಾಡುವೆನು ಎಂಬ ವಿಶ್ವಾಸವಿದೆ' ಎಂದು ಮಾಧ್ಯಮವರೊಂದಿಗಿನ ವಿಡಿಯೊ ಸಂವಾದದಲ್ಲಿ ತಿಳಿಸಿದರು.

'ಹೌದು. 90 ಮೀ. ಸಾಧನೆಯನ್ನು ಕೇವಲ ಆರು ಸೆಂ.ಮೀ.ಗಳ ಅಂತರದಿಂದ ತಪ್ಪಿಸಿಕೊಂಡಿದ್ದೆ. ಜಾವೆಲಿನ್ ಎಸೆಯುವ ವೇಳೆ ನನ್ನ ಕಾಲನ್ನು ಅಲ್ಪ ಮುಂದಿಟ್ಟಿದ್ದರೂ, ಆ ಸಾಧನೆ ಮಾಡಬಹುದಿತ್ತು' ಎಂದರು.

ರಾಷ್ಟ್ರೀಯ ಸೈಕ್ಲಿಂಗ್: ನವೀನ್‌ಗೆ ಚಿನ್ನ


ನವೀನ್ ಜಾನ್

ಬೆಂಗಳೂರು: ಕರ್ನಾಟಕದ ನವೀನ್ ಜಾನ್ ಅವರು ರಾಷ್ಟ್ರೀಯ ರಸ್ತೆ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ಚೈತ್ರಾ ಬೋರ್ಜಿ ಕಂಚಿನ ಪದಕ ತಮ್ಮದಾಗಿಸಿಕೊಂಡಿದ್ದಾರೆ.

ಮಹಾರಾಷ್ಟ್ರದ ನಾಸಿಕ್‌ನ ಸಿನ್ನರ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ನವೀನ್ ಅವರು ಪುರುಷರ 40 ಕಿಲೊ ಮೀಟರ್ ವೈಯಕ್ತಿಕ ಟೈಮ್ ಟ್ರಯಲ್ ವಿಭಾಗದಲ್ಲಿ 51 ನಿಮಿಷ 21.14 ಸೆಕೆಂಡುಗಳಲ್ಲಿ ಗುರಿ ತಲುಪಿ ಅಗ್ರಸ್ಥಾನ ಗಳಿಸಿದರು.

ಬೆಂಗಳೂರಿನ ನವೀನ್ ಅವರಿಗೆ ರಾಷ್ಟ್ರೀಯ ಕೂಟಗಳಲ್ಲಿ ಇದು ಒಟ್ಟು 10ನೇ ಚಿನ್ನ.

ಮಹಿಳೆಯರ ವಿಭಾಗದ 30 ಕಿ.ಮೀ. ವೈಯಕ್ತಿಕ ಟೈಮ್ ಟ್ರಯಲ್‌ನಲ್ಲಿ ಜಮಖಂಡಿಯ ಚೈತ್ರಾ ಬೋರ್ಜಿ 47 ನಿಮಿಷ 6.37 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಮೂರನೇ ಸ್ಥಾನ ಗಳಿಸಿದರು.

ಭಾರತ ಕ್ರಿಕೆಟ್ ತಂಡದ ಆಯ್ಕೆ ಸಮಿತಿ

ಚೇತನ್ ಶರ್ಮಾ ಮತ್ತೆ ಮುಖ್ಯಸ್ಥ

ನವದೆಹಲಿ (ಪಿಟಿಐ): ಮಾಜಿ ಕ್ರಿಕೆಟಿಗ ಚೇತನ್ ಶರ್ಮಾ ಅವರನ್ನು ಮತ್ತೆ ಭಾರತ ಕ್ರಿಕೆಟ್ ತಂಡದ ಆಯ್ಕೆ ಸಮಿತಿಗೆ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ.

ಹೋದ ವರ್ಷ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವು ಸೆಮಿಫೈನಲ್‌ನಲ್ಲಿ ಸೋತಿತ್ತು. ಅದರ ನಂತರದ ಬೆಳವಣಿಗೆಯಲ್ಲಿ ಚೇತನ್ ಅವರೇ ಮುಖ್ಯಸ್ಥರಾಗಿದ್ದ ಆಯ್ಕೆ ಸಮಿತಿಯನ್ನು ವಜಾಗೊಳಿಸಲಾಗಿತ್ತು. ಆದರೆ ಈಗ ಮರಳಿ ಅವರನ್ನೇ ನೇಮಕ ಮಾಡಲಾಗಿದೆ. 57 ವರ್ಷದ ಚೇತನ್ ಅವರು ಮರುಆಯ್ಕೆಯಾಗುವ ಕುರಿತು ಈಚೆಗೆ ಸುದ್ದಿಗಳು ಹರಿದಾಡಿದ್ದವು.

ಆದರೆ ಈ ಸಮಿತಿಯ ವಲಯ ಪ್ರತಿನಿಧಿಗಳು ಹಳೆಯ ಸಮಿತಿಯಲ್ಲಿದ್ದವರಲ್ಲಿ ಯಾರೂ ಇಲ್ಲ. ಈ ಮೊದಲು ಇದ್ದ ಹರವಿಂದರ್ ಸಿಂಗ್ ಅವರು ಪುನರಾಯ್ಕೆ ಬಯಸಿ ಅರ್ಜಿ ಹಾಕಿದ್ದರು.


ಚೇತನ್ ಶರ್ಮಾ

ಆದರೆ ಅವರು ಸಂದರ್ಶನದಲ್ಲಿ ತೃಪ್ತಿಕರ ಮಟ್ಟದಲ್ಲಿ ಅಂಕ ಪಡೆಯಲಿಲ್ಲ ಎನ್ನಲಾಗಿದೆ.

ದಕ್ಷಿಣ ವಲಯದಿಂದ ತಮಿಳುನಾಡಿನ ಪ್ರಥಮದರ್ಜೆ ಆಟಗಾರರಾಗಿದ್ದ ಎಸ್. ಶರತ್ ಅವರನ್ನು ಆಯ್ಕೆ ಮಾಡಲಾಗಿದೆ. ರಾಷ್ಟ್ರೀಯ ಜೂನಿಯರ್ ಆಯ್ಕೆ ಸಮಿತಿಯಲ್ಲಿದ್ದ ಅವರಿಗೆ ಬಡ್ತಿ ಲಭಿಸಿದಂತಾಗಿದೆ.

ಪೂರ್ವ ವಲಯದಿಂದ ಸುಬ್ರತೊ ಬ್ಯಾನರ್ಜಿ, ಪಶ್ಚಿಮ ವಲಯದಿಂದ ಸಲೀಲ್ ಅಂಕೋಲಾ ಮತ್ತು ಕೇಂದ್ರ ವಲಯದಿಂದ ಶಿವಸುಂದರ್ ದಾಸ್ ಅವರನ್ನು ಆಯ್ಕೆ ಮಾಡಲಾಗಿದೆ.

'ಐದು ಸ್ಥಾನಗಳಿಗಾಗಿ ಸುಮಾರು 600 ಅರ್ಜಿಗಳು ಸಲ್ಲಿಕೆಯಾಗಿದ್ದವು. 2022ರ ನವೆಂಬರ್ 18ರಂದು ಬಿಸಿಸಿಐ ವೆಬ್‌ಸೈಟ್‌ನಲ್ಲಿ ಅರ್ಜಿ ಅಹ್ವಾನಿಸಲಾಗಿತ್ತು' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

'ಕ್ರಿಕೆಟ್ ಸಲಹಾ ಸಮಿತಿಯು (ಸಿಎಸಿ) ವೈಯಕ್ತಿಕ ಸಂದರ್ಶನಕ್ಕಾಗಿ 11 ಅಭ್ಯರ್ಥಿಗಳನ್ನು ಅಂತಿಮಗೊಳಿಸಿತ್ತು. ಸಂದರ್ಶನದ ನಂತರ ಆಯ್ಕೆಪಟ್ಟಿಯನ್ನು ಸಿಎಸಿಯು ಶಿಫಾರಸು ಮಾಡಿತ್ತು' ಎಂದು ತಿಳಿಸಿದರು.

ಭಾರತ ತಂಡದ ಮಾಜಿ ವೇಗದ ಬೌಲರ್ ಚೇತನ್ 23 ಟೆಸ್ಟ್ ಹಾಗೂ 65 ಏಕದಿನ ಪಂದ್ಯಗಳಲ್ಲಿ ಆಡಿರುವ ಅನುಭವಿಯಾಗಿದ್ದಾರೆ.

ಪಂತ್ ಮೊಣಕಾಲಿಗೆ ಶಸ್ತ್ರಚಿಕಿತ್ಸೆ

ನವದೆಹಲಿ (ಪಿಟಿಐ): ಕಾರು ಅಪಘಾತದಲ್ಲಿ ಗಾಯಗೊಂಡಿರುವ ಭಾರತ ಕ್ರಿಕೆಟ್ ತಂಡದ ವಿಕೆಟ್‌ಕೀಪರ್ ಬ್ಯಾಟರ್ ರಿಷಭ್ ಪಂತ್ ಅವರು ಮುಂಬೈನ ಆಸ್ಪತ್ರೆಯಲ್ಲಿ ಮೊಣಕಾಲಿನ ಶಸ್ತ್ರಚಿಕಿತ್ಸೆಗೆ ಒಳಗಾದರು.

'ರಿಷಭ್ ಮಂಡಿಯ ಲಿಗಮೆಂಟ್ ಶಸ್ತ್ರಚಿಕಿತ್ಸೆ ಶುಕ್ರವಾರ ಯಶಸ್ವಿಯಾಗಿ ನಡೆದಿದ್ದು, ಕೆಲವು ದಿನ ಅವರ ಮೇಲೆ ವೈದ್ಯರು ನಿಗಾ ಇಡಲಿದ್ದಾರೆ. ಮರುಚೈತನ್ಯ ಹಾಗೂ ಮುಂದೆ ವಹಿಸಬೇಕಿರುವ ಆರೋಗ್ಯ ಕಾಳಜಿಯ ಬಗ್ಗೆ ಡಾ.ದಿನ್‌ಶಾ ಪಾರದೀವಾಲಾ ಮತ್ತು ಬಿಸಿಸಿಐ ವೈದ್ಯಕೀಯ ತಂಡದ ಸಲಹೆ ನೀಡಲಿದೆ' ಎಂದು ಮಂಡಳಿಯ ಪ್ರಕಟಣೆ ತಿಳಿಸಿದೆ.

ಕೋಕಿಲಾಬೆನ್ ಧೀರೂಭಾಯಿ ಅಂಬಾನಿ ಆಸ್ಪತ್ರೆಯಲ್ಲಿ ಡಾ.ದಿನ್‌ಶಾ ನೇತೃತ್ವದ ವೈದ್ಯರ ತಂಡ ಶಸ್ತ್ರಚಿಕಿತ್ಸೆ ನಡೆಸಿದೆ.

25 ವರ್ಷದ ಪಂತ್ ಅವರು ದೆಹಲಿ–ಡೆಹ್ರಾಡೂನ್ ಹೆದ್ದಾರಿಯಲ್ಲಿ ಡಿ.30 ರಂದು ಬೆಳಿಗ್ಗೆ ಸಂಭವಿಸಿದ್ದ ಅಪಘಾತದಲ್ಲಿ ಗಾಯಗೊಂಡಿದ್ದರು. ರಸ್ತೆ ವಿಭಜಕಕ್ಕೆ ಅಪ್ಪಳಿಸಿದ್ದ ಕಾರು ಸುಟ್ಟು ಹೋಗಿದ್ದರೂ, ಅವರು ಪವಾಡಸದೃಶ ರೀತಿಯಲ್ಲಿ ಪಾರಾಗಿದ್ದರು.


ರಿಷಭ್ ಪಂತ್

ಟೆಸ್ಟ್: ಆಸ್ಟ್ರೇಲಿಯಾಕ್ಕೆ ಗೆಲುವಿನ ಕನಸು

ಸಿಡ್ನಿ (ಎಎಫ್‌ಪಿ): ನಾಯಕ ಪ್ಯಾಟ್ ಕಮಿನ್ಸ್ ಅವರ ಪ್ರಭಾವಿ ಬೌಲಿಂಗ್ ನೆರವಿನಿಂದ ಆಸ್ಟ್ರೇಲಿಯಾ ತಂಡ, ದಕ್ಷಿಣ ಆಫ್ರಿಕಾ ವಿರುದ್ಧದ ಮೂರನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಮೇಲುಗೈ ಸಾಧಿಸಿದೆ.

ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ನಡೆಯುತ್ತಿರುವ ಪಂದ್ಯದ 4ನೇ ದಿನವಾದ ಶನಿವಾರದ ಆಟದ ಅಂತ್ಯಕ್ಕೆ ದಕ್ಷಿಣ ಆಫ್ರಿಕಾ ಮೊದಲ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗಳಿಗೆ 149 ರನ್ ಗಳಿಸಿದೆ. ಆಸ್ಟ್ರೇಲಿಯಾ 4 ವಿಕೆಟ್‌ಗಳಿಗೆ 475 ರನ್ ಗಳಿಸಿ ಮೊದಲ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತ್ತು.

ಪಂದ್ಯದ ಮೂರನೇ ದಿನದಾಟ ಮಳೆಯಿಂದ ರದ್ದಾಗಿತ್ತು. ನಾಲ್ಕನೇ ದಿನವೂ ಭೋಜನ ವಿರಾಮದವರೆಗೆ ಆಟ ನಡೆಯಲಿಲ್ಲ. ಒಟ್ಟು 59 ಓವರ್‌ಗಳ ಆಟಕ್ಕೆ ಮಳೆ ಅವಕಾಶ ನೀಡಿತು. ಆಸ್ಟ್ರೇಲಿಯಾ ಅದೇ ಮೊತ್ತಕ್ಕೆ ಇನಿಂಗ್ಸ್ ಡಿಕ್ಲೇರ್ ಮಾಡಿದ್ದರಿಂದ ಉಸ್ಮಾನ್ ಖ್ವಾಜಾ (ಔಟಾಗದೆ 195) ದ್ವಿಶತಕ ಗಳಿಸುವ ಅವಕಾಶ ಕಳೆದುಕೊಂಡರು.

ದಕ್ಷಿಣ ಆಫ್ರಿಕಾ ತಂಡದ ಬ್ಯಾಟಿಂಗ್ ವೈಫಲ್ಯ ಈ ಪಂದ್ಯದಲ್ಲೂ ಮುಂದುವರಿಯಿತು. ಕಮಿನ್ಸ್ (29ಕ್ಕೆ 3) ಮತ್ತು ಹ್ಯಾಜಲ್‌ವುಡ್ (29ಕ್ಕೆ 2) ಅವರು ಪ್ರವಾಸಿ ತಂಡಕ್ಕೆ ಆಘಾತ ನೀಡಿದರು. ತೆಂಬಾ ಬವುಮಾ (35) ಹಾಗೂ ಖಾಯಾ ಜೊಂಡೊ (39) ಅಲ್ಪ ಪ್ರತಿರೋಧ ಒಡ್ಡಿದರು.

ಮೊದಲ ಎರಡು ಟೆಸ್ಟ್ ಜಯಿಸಿರುವ ಕಮಿನ್ಸ್ ಬಳಗ ಈ ಪಂದ್ಯವನ್ನೂ ಗೆದ್ದರೆ 'ಕ್ಲೀನ್‌ಸ್ವೀಪ್' ಸಾಧನೆ ಮಾಡಲಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 4 ವಿಕೆಟ್‌ಗಳಿಗೆ 475 ಡಿಕ್ಲೇರ್ಡ್. ದಕ್ಷಿಣ ಆಫ್ರಿಕಾ 59 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 149 (ತೆಂಬಾ ಬವುಮಾ 35, ಖಾಯಾ ಜೊಂಡೊ 39, ಕೈಲ್ ವೆರೆಯ್ನ್ 19, ಪ್ಯಾಟ್ ಕಮಿನ್ಸ್ 29ಕ್ಕೆ 3, ಜೋಶ್ ಹ್ಯಾಜಲ್‌ವುಡ್ 29ಕ್ಕೆ 2)

ಗ್ರೇಟ್ ಬೆಂಗಳೂರು 10ಕೆ ಇಂದು: 7,500ಕ್ಕೂ ಅಧಿಕ ಸ್ಪರ್ಧಿಗಳ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಸ್ಪರ್ಧೆ	ಆರಂಭ (ಬೆಳಿಗ್ಗೆ)
10ಕೆ	6.15
5ಕೆ	7 ಗಂಟೆ
3ಕೆ	7.45

ಬೆಂಗಳೂರು: ಇದೇ ಮೊದಲ ಬಾರಿ ಆಯೋಜನೆಯಾಗಿರುವ ಗ್ರೇಟ್ ಬೆಂಗಳೂರು 10ಕೆ ಸ್ಪರ್ಧೆಗೆ ಭಾನುವಾರ ವೇದಿಕೆ ಸಜ್ಜಾಗಿದ್ದು, 7,500ಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ.

ರಾಜ್ಯ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಮತ್ತು ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಸ್ಪರ್ಧೆ ನಡೆಯಲಿದೆ.

ಕಂಠೀರವ ಕ್ರೀಡಾಂಗಣದಿಂದ ಸ್ಪರ್ಧೆಗಳು ಆರಂಭವಾಗಲಿದ್ದು, ವಿಧಾನಸೌಧ, ಕಬ್ಬನ್ ಪಾರ್ಕ್ ಮತ್ತು ಎಂ.ಜಿ. ರಸ್ತೆಗಳ ಮೂಲಕ ಓಟಗಾರರು ಸಾಗಲಿದ್ದಾರೆ.

10ಕೆ ಸ್ಪರ್ಧೆಯು ಬೆಳಿಗ್ಗೆ 6.15ಕ್ಕೆ ಆರಂಭವಾಗಲಿದ್ದು, ಒಲಿಂಪಿಯನ್ ಅಥ್ಲೀಟ್ ಹಾಗೂ ಸ್ಪರ್ಧೆಯ ಪ್ರಚಾರ ರಾಯಭಾರಿ ಅಂಜು ಬಾಬಿ ಜಾರ್ಜ್ ಮತ್ತು ಕರ್ನಾಟಕ ಒಲಿಂಪಿಕ್ ಸಂಸ್ಥೆಯ (ಕೆಒಎ) ಅಧ್ಯಕ್ಷ ಕೆ.ಗೋವಿಂದರಾಜ್ ಚಾಲನೆ ನೀಡಲಿದ್ದಾರೆ.

ಮೂರು ಮಾದರಿಯ ಸ್ಪರ್ಧೆಗಳು ನಡೆಯಲಿವೆ. ವಿಶೇಷವಾಗಿ ಮಕ್ಕಳ ಸ್ಪರ್ಧೆಯನ್ನು ಪ್ರೋತ್ಸಾಹಿಸಲು 5ಕೆ ಓಟ ಪರಿಚಯಿಸಲಾಗುತ್ತಿದೆ.

ಚೆನ್ನೈಯಿನ್– ಜೆಎಫ್‌ಸಿ ಪಂದ್ಯ ಡ್ರಾ

ಜಮ್ಶೆಡ್‌ಪುರ (ಪಿಟಿಐ): ಚೆನ್ನೈಯಿನ್ ಎಫ್‌ಸಿ ಮತ್ತು ಜಮ್ಶೆಡ್‌ಪುರ ಎಫ್‌ಸಿ (ಜೆಎಫ್‌ಸಿ) ನಡುವಣ ಐಎಸ್‌ಎಲ್ ಫುಟ್‌ಬಾಲ್ ಟೂರ್ನಿಯ ಪಂದ್ಯ 2–2 ಗೋಲುಗಳ ಡ್ರಾದಲ್ಲಿ ಕೊನೆಗೊಂಡಿತು. ಜೆಎಫ್‌ಸಿ ತಂಡದ ಗೋಲುಗಳನ್ನು ಋತ್ವಿಕ್ ದಾಸ್ (17, 57ನೇ ನಿ.) ಗಳಿಸಿದರು. ಚೆನ್ನೈ ಪರ ವಿನ್ಸಿ ಬರೆಟೊ (60ನೇ ನಿ.) ಹಾಗೂ ಪೀಟರ್ ಸ್ಲಸ್ಕೊವಿಚ್ (68ನೇ ನಿ.) ಚೆಂಡು ಗುರಿ ಸೇರಿಸಿದರು.

ಡಬ್ಲ್ಯುಟಿಎಗೆ ತಿಳಿಸಿದ ಟೆನಿಸ್ ಆಟಗಾರ್ತಿ

ಡಬಲ್ಸ್ ಮತ್ತು ಮಿಶ್ರ ಡಬಲ್ಸ್‌ನಲ್ಲಿ ತಲಾ ಮೂರು ಗ್ರ್ಯಾನ್‌ಸ್ಲಾಮ್ ಕಿರೀಟ ಗೆದ್ದಿರುವ ಅವರು, ಮುಂಬರುವ ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲಿ ಆಡಲಿದ್ದಾರೆ.

ದುಬೈ ಟೂರ್ನಿಯ ಬಳಿಕ ನಿವೃತ್ತಿ: ಸಾನಿಯಾ ಮಿರ್ಜಾ

ನವದೆಹಲಿ (ಪಿಟಿಐ): ಮುಂದಿನ ತಿಂಗಳು ನಡೆಯಲಿರುವ ದುಬೈ ಡ್ಯೂಟಿ ಫ್ರೀ ಟೂರ್ನಿಯ ಬಳಿಕ ವೃತ್ತಿಪರ ಟೆನಿಸ್‌ನಿಂದ ನಿವೃತ್ತಿಯಾಗುವುದಾಗಿ ಸಾನಿಯಾ ಮಿರ್ಜಾ ಪ್ರಕಟಿಸಿದ್ದಾರೆ. ತಮ್ಮ ನಿರ್ಧಾರವನ್ನು ಡಬ್ಲ್ಯುಟಿಎಗೆ ತಿಳಿಸಿದ್ದಾರೆ.

ಸಾನಿಯಾ ಕಳೆದ ಋತುವಿನ ಕೊನೆಯಲ್ಲಿ ನಿವೃತ್ತಿಯಾಗಬೇಕಿತ್ತು. ಆದರೆ ಗಾಯದ ಸಮಸ್ಯೆಯಿಂದಾಗಿ ಕೆಲವು ಟೂರ್ನಿಗಳಿಂದ ಹಿಂದೆ ಸರಿದಿದ್ದರಿಂದ, ನಿವೃತ್ತಿ ತೀರ್ಮಾನವನ್ನು ಮುಂದೂಡಿದ್ದರು.



'ಕಳೆದ ಋತುವಿನ ಡಬ್ಲ್ಯುಟಿಎ ಫೈನಲ್ಸ್ ಬಳಿಕ ಟೆನಿಸ್‌ನಿಂದ ವಿರಮಿಸಬೇಕಿತ್ತು. ಆದರೆ ಮೊಣಕೈಗೆ ಆದ ಗಾಯದಿಂದ ಅಮೆರಿಕ ಓಪನ್ ಸೇರಿದಂತೆ ಕೆಲವು ಟೂರ್ನಿಗಳಲ್ಲಿ ಆಡಲು ಸಾಧ್ಯವಾಗಿರಲಿಲ್ಲ' ಎಂದು 36 ವರ್ಷದ ಸಾನಿಯಾ ಡಬ್ಲ್ಯುಟಿಎಟೆನಿಸ್.ಕಾಮ್‌ಗೆ ಹೇಳಿದ್ದಾರೆ.

ಸಾನಿಯಾ 2022ರ ಆಗಸ್ಟ್‌ನಲ್ಲಿ ನಡೆದಿದ್ದ ಸಿನ್ಸಿನಾಟಿ ಓಪನ್ ಟೂರ್ನಿಯ ಬಳಿಕ ಯಾವುದೇ ಟೂರ್ನಿಯಲ್ಲಿ ಆಡಿಲ್ಲ.

'ದುಬೈ ಟೂರ್ನಿಯಲ್ಲಿ ಪಾಲ್ಗೊಂಡು ಟೆನಿಸ್‌ಗೆ ಗುಡ್‌ಬೈ ಹೇಳುವುದು ನನ್ನ ಯೋಜನೆ' ಎಂದು ಅವರು ತಿಳಿಸಿದ್ದಾರೆ. ಈ ಟೂರ್ನಿ ಫೆ.19ರಿಂದ ನಡೆಯಲಿದೆ.

'ಇನ್ನಷ್ಟು ಆಡಬೇಕೆಂಬ ಮನಸ್ಸು ಇದ್ದರೂ ದೇಹ ಒಪ್ಪುತ್ತಿಲ್ಲ. ನಿವೃತ್ತಿಯಾಗಲು ಇದೂ ಪ್ರಮುಖ ಕಾರಣ' ಎಂದು ಸಾನಿಯಾ ಇತ್ತೀಚೆಗೆ ಸಂದರ್ಶನವೊಂದರಲ್ಲಿ ಹೇಳಿದ್ದರು.

ಟೆನಿಸ್: ಫೈನಲ್‌ಗೆ ಜೊಕೊವಿಚ್

ಅಡಿಲೇಡ್ (ಎಪಿ): ಕಾಲು ನೋವಿನ ನಡುವೆಯೂ ಆಡಿದ ನೊವಾಕ್ ಜೊಕೊವಿಚ್ ಅವರು ಇಲ್ಲಿ ನಡೆಯುತ್ತಿರುವ ಅಡಿಲೇಡ್ ಇಂಟರ್‌ನ್ಯಾಷನಲ್ ಟೆನಿಸ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟರು.

ಶನಿವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ನಾಲ್ಕರ ಘಟ್ಟದ ಪಂದ್ಯದಲ್ಲಿ ಸರ್ಬಿಯಾದ ಜೊಕೊವಿಚ್ 6-3, 6-4ರಿಂದ ರಷ್ಯಾದ ಡೇನಿಯಲ್ ಮೆಡ್ವೆಡೆವ್ ಅವರನ್ನು ಸೋಲಿಸಿದರು. ಮೊದಲ ಸೆಟ್‌ನ 7ನೇ ಗೇಮ್‌ನಲ್ಲಿ ಚೆಂಡನ್ನು ಹಿಂತಿರುಗಿಸುವ ವೇಳೆ ಜೊಕೊವಿಚ್ ಜಾರಿದರು. ವೈದ್ಯಕೀಯ ವಿರಾಮ ಪಡೆದ ಅವರು ಕಣಕ್ಕೆ ಮರಳಿದರು. ಭಾನುವಾರ ನಡೆಯುವ ಫೈನಲ್‌ನಲ್ಲಿ ಜೊಕೊವಿಚ್ ಅವರಿಗೆ ಅಮೆರಿಕದ ಸೆಬಾಸ್ಟಿಯನ್ ಕೊರ್ಡಾ ಸವಾಲು ಎದುರಾಗಿದೆ. ಸೆಮಿಫೈನಲ್‌ನ ಮತ್ತೊಂದು ಪಂದ್ಯದಲ್ಲಿ ಕೊರ್ಡಾ ಎದುರು ಸ್ಪರ್ಧಿಸಿದ್ದ ಜಪಾನ್‌ನ ಯೊಶಿಹಿಟೊ ನಿಶಿಯೊಕಾ ಮಧ್ಯದಲ್ಲೇ ಗಾಯದ ಕಾರಣ ಹಿಂದೆ ಸರಿದರು.

ಆಸ್ಟ್ರೇಲಿಯಾ ಓಪನ್‌ಗೆ ಅಲ್ಕರಾಜ್ ಅಲಭ್ಯ: ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ, ಸ್ಪೇನ್ ಆಟಗಾರ ಕಾರ್ಲೊಸ್ ಅಲ್ಕರಾಜ್ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ಬಲಗಾಲಿನ ಗಾಯದ ಹಿನ್ನೆಲೆಯಲ್ಲಿ ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ.

ಟಾಟಾ ಓಪನ್ ಟೆನಿಸ್: ಗ್ರಿಕ್‌ಸ್ಪೂರ್‌ಗೆ ಸಿಂಗಲ್ಸ್ ಕಿರೀಟ

ಜೀವನ್– ಬಾಲಾಜಿ ರನ್ನರ್ಸ್ ಅಪ್

ಪುಣೆ (ಪಿಟಿಐ): ಭಾರತದ ಎನ್. ಶ್ರೀರಾಂ ಬಾಲಾಜಿ ಮತ್ತು ಜೀವನ್ ನೆಡುಂಚೆಳಿಯನ್ ಅವರು ಇಲ್ಲಿ ಕೊನೆಗೊಂಡ ಟಾಟಾ ಓಪನ್ ಮಹಾರಾಷ್ಟ್ರ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಸೋತು ರನ್ನರ್ಸ್ ಅಪ್ ಆದರು.

ಶನಿವಾರ ನಡೆದ ಫೈನಲ್‌ನಲ್ಲಿ ಭಾರತದ ಜೋಡಿಯನ್ನು 6–4, 6–4 ರಿಂದ ಮಣಿಸಿದ ಬೆಲ್ಜಿಯಂನ ಸ್ಯಾಂದರ್ ಜಿಲ್ ಮತ್ತು ಯೋರಾನ್ ವ್ಲೀಗೆನ್ ಅವರು ಕಿರೀಟ ಮುಡಿಗೇರಿಸಿಕೊಂಡರು.

ಇದೇ ಮೊದಲ ಬಾರಿ ಎಟಿಪಿ ಟೂರ್ ಫೈನಲ್‌ನಲ್ಲಿ ಆಡಿದ ಬಾಲಾಜಿ ಅವರು ಉತ್ತಮ ಸರ್ವ್ ಮತ್ತು ಆಕರ್ಷಕ ರಿಟರ್ನ್‌ಗಳ ಮೂಲಕ ಗಮನ ಸೆಳೆದರು. ಆದರೆ ಎದುರಾಳಿ ಜೋಡಿಯನ್ನು ಮಣಿಸಲು ಅದು ಸಾಕಾಗಲಿಲ್ಲ. ಈ ಪಂದ್ಯ ಒಂದು ಗಂಟೆ 10 ನಿಮಿಷ ನಡೆಯಿತು.

ಜಿಲ್ ಮತ್ತು ವ್ಲೀಗೆನ್ ಅವರು ಎಟಿಪಿ ವಿಶ್ವ ಟೂರ್‌ನಲ್ಲಿ ಗೆದ್ದ ಆರನೇ ಪ್ರಶಸ್ತಿ ಇದು. 2021ರ ಸಿಂಗಪುರ ಓಪನ್ ಬಳಿಕ ಅವರು ಗೆದ್ದ ಮೊದಲ ಟ್ರೋಫಿ ಇದಾಗಿದೆ.


ಟಾಟಾ ಓಪನ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಚಾಂಪಿಯನ್ ಆದ ಸ್ಯಾಂದರ್ ಜಿಲ್ – ಯೋರಾನ್ ವ್ಲೀಗೆನ್ ಹಾಗೂ ರನ್ನರ್ಸ್ ಅಪ್ ಆದ ಶ್ರೀರಾಂ ಬಾಲಾಜಿ – ಜೀವನ್ ನೆಡುಂಚೆಳಿಯನ್ ಜೋಡಿ –ಪಿಟಿಐ ಚಿತ್ರ

ಗ್ರಿಕ್‌ಸ್ಪೂರ್‌ಗೆ ಕಿರೀಟ: ನೆದರ್ಲೆಂಡ್ಸ್‌ನ ಟಾಲೊನ್ ಗ್ರಿಕ್‌ಸ್ಪೂರ್, ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆದರು.

ಪ್ರಬಲ ಪೈಪೋಟಿ ನಡೆದ ಫೈನಲ್‌ನಲ್ಲಿ ಅವರು 4-6, 7-5, 6-3 ರಲ್ಲಿ ಫ್ರಾನ್ಸ್‌ನ ಬೆಂಜಮಿನ್ ಬೊನ್ಜಿ ವಿರುದ್ಧ ಗೆದ್ದರು. ಈ ಪಂದ್ಯ ಎರಡು ಗಂಟೆ 16 ನಿಮಿಷ ನಡೆಯಿತು.

ಮೊದಲ ಸೆಟ್ ಸೋತರೂ ಮರು ಹೋರಾಟ ನಡೆಸಿದ ಗ್ರಿಕ್‌ಸ್ಪೂರ್ ತಮ್ಮ ಅಮೋಘ ಆಟದಿಂದ ನೆರೆದ ಪ್ರೇಕ್ಷಕರನ್ನು ರಂಜಿಸಿದರು.

ಸಂಕ್ಷಿಪ್ತ ಸುದ್ದಿ

ವಾಲಿಬಾಲ್: ಸೆಮಿಗೆ ಮಂಗಳೂರು ವಿವಿ

ಉಡುಪಿ: ಮಂಗಳೂರು ವಿವಿ ತಂಡ ಇಲ್ಲಿನ ಪೂರ್ಣಪ್ರಜ್ಞ ಕಾಲೇಜಿನಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಪುರುಷರ ವಾಲಿಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಶನಿವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮಂಗಳೂರು ವಿವಿ ತಂಡ ಮದ್ರಾಸ್ ವಿವಿ ವಿರುದ್ಧ ಗೆದ್ದಿತು.

ಮೊದಲ ಎರಡು ಸೆಟ್‌ಗಳನ್ನು ಗೆದ್ದ ಮಂಗಳೂರು ವಿವಿಗೆ ಮೂರನೇ ಸೆಟ್‌ನಲ್ಲಿ ಮದ್ರಾಸ್ ವಿವಿ ತಿರುಗೇಟು ನೀಡಿತು. ತೀವ್ರ ರೋಚಕತೆಯಿಂದ ಕೂಡಿದ್ದ ನಾಲ್ಕನೇ ಸೆಟ್‌ನಲ್ಲಿ ಎರಡೂ ತಂಡಗಳು ಪೈಪೋಟಿ ನಡೆಸಿದವು. ಅಂತಿಮವಾಗಿ ಮಂಗಳೂರು ವಿವಿ ನಾಲ್ಕನೇ ಸೆಟ್‌ಅನ್ನು 35–33ರಿಂದ ಗೆದ್ದಿತು. ಕುರುಕ್ಷೇತ್ರ ವಿವಿ, ಕೋಲ್ಕತ್ತ ವಿವಿ ಹಾಗೂ ಎಸ್‌ಆರ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ ವಿವಿ ಸೆಮಿಫೈನಲ್ ತಲುಪಿದ್ದು, ಪ್ರಶಸ್ತಿಗಾಗಿ ಸೆಣಸಲಿವೆ.

21ರಿಂದ ವೆಟರನ್ಸ್ ಬ್ಯಾಡ್ಮಿಂಟನ್

ಬೆಂಗಳೂರು: ಬಿಟ್‌ಸ್ಪೋರ್ಟ್ ಕಂಪನಿಯು ಜನವರಿ 21 ಮತ್ತು 22ರಂದು ರಿಪಬ್ಲಿಕ್ ಡೇ ಕಪ್ ವೆಟರನ್ಸ್ ಬ್ಯಾಡ್ಮಿಂಟನ್ ಟೂರ್ನಿಯನ್ನು ಆಯೋಜಿಸಲಿದೆ.

ಲೆವೆಲ್ ಅಪ್ ಅಕಾಡೆಮಿಯಲ್ಲಿ ಎರಡು ದಿನಗಳ ಕಾಲ ಟೂರ್ನಿ ನಡೆಯಲಿದೆ. ಬಿಟ್‌ಸ್ಪೋರ್ಟ್ ಸಿಇಒ ಪ್ರಶಾಂತ್ ರೆಡ್ಡಿ ಈ ವಿಷಯ ತಿಳಿಸಿದ್ದಾರೆ. 40, 45 ಮತ್ತು 50 ವರ್ಷಕ್ಕಿಂತ ಮೇಲಿನ ಪುರುಷ ಮತ್ತು ಮಹಿಳೆಯರಿಗಾಗಿ ಟೂರ್ನಿ ನಡೆಯಲಿದೆ. ಸಿಂಗಲ್ಸ್, ಡಬಲ್ಸ್, ಮಿಶ್ರ ಡಬಲ್ಸ್ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ punit@bitsport.in ಅಥವಾ 9008211465 ಮೊ.ಸಂ. ಯನ್ನು ಸಂಪರ್ಕಿಸಬಹುದು.

ಸಿಜಿಕೆ ಕಪ್ ಕ್ರಿಕೆಟ್ ಟೂರ್ನಿ ಇಂದು

ಬೆಂಗಳೂರು: ರಂಗಚಂದಿರ ತಂಡ ಆಯೋಜಿಸಲಿರುವ ರಂಗಕರ್ಮಿ ಸಿ.ಜಿ.ಕೃಷ್ಣಸ್ವಾಮಿ ಮತ್ತು ಟೆಲಿಕಾಂ ದತ್ತಾತ್ರೇಯ ಅವರ ಸ್ಮರಣಾರ್ಥ ಕ್ರಿಕೆಟ್ ಟೂರ್ನಿಯು ಇಲ್ಲಿಯ ಸರ್ಕಾರಿ ಕಲಾ ಕಾಲೇಜು ಮೈದಾನದಲ್ಲಿ ಭಾನುವಾರ ನಡೆಯಲಿದೆ.

ಟೂರ್ನಿಯನ್ನು ಬೆಳಿಗ್ಗೆ 9 ಗಂಟೆಗೆ ಕೇಂದ್ರ ವಲಯ ಐಜಿಪಿ ಬಿ.ಆರ್. ರವಿಕಾಂತೇಗೌಡ ಉದ್ಘಾಟಿಸಲಿದ್ದಾರೆ. ನಾಟಕಕಾರ ಕೆ.ವೈ. ನಾರಾಯಣಸ್ವಾಮಿ ಸೇರಿದಂತೆ ಹಲವರು ಉಪಸ್ಥಿತರಿರುವರು ಎಂದು ರಂಗಚಂದಿರ ಕಾರ್ಯದರ್ಶಿ ಚಂದ್ರು ತಿಳಿಸಿದ್ದಾರೆ.